- ಓಂ -

- ಶ್ರೀಯೈ ನಮಃ -

ನಾಲಾಯಿರ ದಿವ್ಯ ಪ್ರಬಂಧಮ್

।

ಇರಂಡಾವದಾಯಿರಂ

।

ಪೆರಿಯ ತಿರುಮೊಳಿ

ತಿರುಮಂಗೈ ಆಳ್ವಾರ್

ಒಂಭತ್ತನೆಯ ದಶಕ

।

ಎರಡನೆಯ ಸಾವಿರ

ತಮಿಳು ಮೂಲ ಕನ್ನಡದಲ್ಲಿ ಪ್ರತಿಪದಾರ್ಥ ತಾತ್ಪರ್ಯ

ಮತ್ತು

ವಿವರಣೆಯೊಂದಿಗೆ

ಸಂಪುಟ-7

ಭಾಗ-9

Garani Srinivasan

ವಿಷಯ ಸೂಚಿ

ಸಂ.	ವಿಷಯ		ಪಾಶುರ	ಪುಟ
1.	ಒಂದನೆಯ ತಿರುಮೊಳಿ	ವಣ್ಣಮಾ ಮುನ್ನೀರ್	10	1
2.	ಎರಡನೆಯ "	ಪೊನ್ನಿವರ್ ಮೇನಿ	10	19
3.	ಮೂರನೆಯ "	ಕನ್ನೈ ನನ್ನೈ ವಿಕ್ಕಲೋನ್	10	35
4	ನಾಲ್ಕನೆಯ "	ಕಾವಾರ್ ಮಡಲಾರ್ ಪೆಣ್ಣೈ	10	49
5.	ಐದನೆಯ "	ತವಳ ವಿಳಕ್ಕು ಒತ್ತೈ	10	62
6.	ಆರನೆಯ "	ಅಪ್ಪಮಾ ಪಿಳ್ಳೈಯುನದ್ದಳುಮಾ.	10	83
7	ಏಳನೆಯ "	ಕನ್ನಿತ್ತಿರಾಯ್ ಮಲ್ಕಳ್	10	97
8.	ಎಂಟನೆಯ "	ಮುನ್ನು ಅಪ್ಪಿರೈಕ್ಕೇನ್	10	114
9	ಒಂಬತ್ತನೆಯ "	ಮೂವರಲ್ ಮುನ್	10	133
10	ಹತ್ತನೆಯ "	ಎಣ್ಣಳೆಪ್ಪಲಾತ್ತೈ	10	148 – 162
		ಒಟ್ಟು	100	

— 0 —

22.9.78

— ಶ್ರೀಃ — (1) — ಶ್ರಿಯೈ ನಮಃ —

ಪೆರಿಯ ತಿರುಮೊೞಿ - ಒಂಬತ್ತನೆಯ ಪತ್ತು - ಮೊದಲ ತಿರುಮೊೞಿ.

பெரிய திருமொழி - ஒன்பதாம் பத்து - முதல் திருமொழி.

1. ವಙ್ಗಮಾ ಮುನ್ನೀರ್ - வங்கமா முந்நீர்

1. வங்கமா முந்நீர் வரிநிறப் பெரிய
வாளரவி னணை மேவி,
சங்கமாரங்கைத் தடமலருந்திச்
சாமமா மேனி [illegible] யென் தலைவன்,
அங்கமாறைந்து வேள்வி நால்வேதம்
அருங்கலை பயின்று, எரிமூன்றும்
சங்கையால் வளர்க்கும் துளக்கமில் மனத்தோர
திருக்கண்ணங்குடியுள் நின்றானே.

ವಙ್ಗಮಾ ಮುನ್ನೀರ್ ವರಿನಿಱಪ್ಪೆರಿಯ ವಾಳರವಿನಣೈ ಮೇವಿ,
ಶಙ್ಗಮಾರಙ್ಗೈತ್ತಡ ಮಲರುನ್ದಿ ಚ್ಚಾಮಮಾ ಮೇನಿ ಯೆನ್ ತಲೈವನ್,
ಅಙ್ಗಮಾಱೈನ್ದು ವೇಳ್ವಿ ನಾಲ್ವೇದಮ್ ಅರುಙ್ಗಲೈ ಪಯಿನ್ಱು, ಎರಿಮೂನ್ಱುಮ್
ಶಙ್ಗೈಯಾಲ್ ವಳರ್ಕ್ಕುಮ್ ತುಳಕ್ಕಮಿಲ್ ಮನತ್ತೋರ್ ತಿರುಕ್ಕಣ್ಣಙ್ಗುಡಿಯುಳ್ ನಿನ್ಱಾನೇ.

ವಙ್ಗಮ್ வங்கம் = ಅಲೆಗಳಿರುವ, ಮಾ மா = ಬಲು ದೊಡ್ಡದಾದ, ಮುನ್ನೀರ್ [illegible] முந்நீர் = ಕಡಲಲ್ಲಿ, ವರಿ வரி = ಸುಂದರವಾದ, ನಿಱಮ್ நிறம் = ಹೊಳಪುಳ್ಳ, ಪೆರಿಯ பெரிய = ವಿಶಾಲವಾದ (ದೊಡ್ಡ), ವಾಳ್ வாள் = ತೇಜಸ್ಸಿನ, ಅರವು அரவு = ಸರ್ಪದ, ಅಣೈ அணை = ಹಾಸಿಗೆಯಲ್ಲಿ, ಮೇವಿ மேவி = ಪವಡಿಸಿರುವವನೂ, ಶಙ್ಗಮ್ சங்கம் = ಶಂಖವನ್ನು, ಆರ್ ஆர் = ತುಂಬಿದ, ಅಮ್ அம் = ಅಂದವಾದ, ಕೈ கை = ಕೈಯುಳ್ಳವನೂ, ತಡ தட = ದೊಡ್ಡ, ಮಲರ್ மலர் = (ತಾವರೆ) ಹೂವನ್ನುಳ್ಳ, ಉನ್ದಿ உந்தி = ನಾಭಿಯುಳ್ಳವನೂ, ಶಾಮಮ್ சாமம் = ಶ್ಯಾಮಳ, ಮಾ மா = ಗಂಭೀರವಾದ, ಮೇನಿ மேனி = ಲಾವಣ್ಯದ (ಸೌಂದರ್ಯದ), [illegible] ರೂಪ (ದೇಹಸೌಂದರ್ಯ)ವುಳ್ಳವನೂ, ಆದ, ಎನ್ ತಲೈವನ್ என் தலைவன் = ನನ್ನ ಸ್ವಾಮಿಯು, ಅಙ್ಗಮ್ ಆಱು அங்கம் ஆறு = ಆರು ವೇದಾಂಗಗಳನ್ನು, ಐನ್ದು ವೇಳ್ವಿ ஐந்து வேள்வி = (ಐದು ಯಜ್ಞಗಳನ್ನು), ನಾಲ್ ವೇದಮ್ நால் வேதம் = ನಾಲ್ಕು ವೇದಗಳನ್ನು, ಅರುಙ್ಗಲೈ அருங்கலை = ಅಪರೂಪವಾದ (ದಿವ್ಯವಾದ) ಶಾಸ್ತ್ರಾದಿಗಳನ್ನೂ, ಪಯಿನ್ಱು பயின்று = ಅಭ್ಯಾಸಮಾಡುತ್ತ, ಎರಿ ಮೂನ್ಱುಮ್ எரிமூன்றும் = ಮೂರು ಅಗ್ನಿ (ತ್ರೇತಾಗ್ನಿ)ಗಳನ್ನು, ಶೆಙ್ಗೈಯಾಲ್

Galari Srinivasan

(2)

செம் கையால் = ಕೆಂಪಾದ (ಕೋಮಲವಾದ) ಕೈಗಳಿಂದ, ವಳರ್ಕ್ಕುಮ್
வளர்க்கும் = ಬೆಳೆಸುತ್ತಿರುವ, ತುಳಕ್ಕಮ್ இல் துளக்கம்
இல் = ಚಂಚಲವಿಲ್ಲದ, ಮನತ್ತೋರ್ மனத்தோர் = ಮನವುಳ್ಳವರ,
ತಿರುಕ್ಕಣ್ಣಂಗುಡಿಯುಳ್ திருக்கண்ணங்குடியுள் = ತಿರು
ಕ್ಕಣ್ಣಂಗುಡಿ ಕ್ಷೇತ್ರದಲ್ಲಿ, ನಿನ್ರಾನೇ நின்றானே = ನೆಲಸಿರುವವನೇ.

ಅಲೆಗಳಿಂದ ಕೂಡಿರುವ ಬಲುದೊಡ್ಡದಾದ ಕಡಲಲ್ಲಿ ಸುಂದರವಾದ ಹೊಳೆಯುಳ್ಳ ವಿಶಾಲವಾದ ತೇಜಸ್ವಿಯಾದ ಸರ್ಪದ ಹಾಸಿಗೆಯಲ್ಲಿ ಪವಡಿಸಿರುವವನೂ, ಅಂದವಾದ ಕೈತುಂಬ ಶಂಖವನ್ನು ಹಿಡಿದಿರುವವನೂ, ಅಂದವಾದ ದೊಡ್ಡದಾದ ತಾವರೆ ಹೂವನ್ನು ತನ್ನ ನಾಭಿಯಲ್ಲುಳ್ಳವನೂ, ಶ್ಯಾಮಲ ವರ್ಣದ (ನೀಲಿಬಣ್ಣದ) ಗಂಭೀರವಾದ ದೇಹಸೌಂದರ್ಯವುಳ್ಳವನೂ ಆದ ನನ್ನ ಸ್ವಾಮಿಯು, ಆರು ವೇದಾಂಗಗಳನ್ನೂ, ಐದು ಯಜ್ಞಗಳನ್ನೂ, ನಾಲ್ಕು ವೇದಗಳನ್ನೂ, ಅದರೊಡನೆ ಶಾಸ್ತ್ರ ಇತಿಹಾಸಾದಿಗಳನ್ನೂ ಅಭ್ಯಾಸ ಮಾಡುತ್ತಾ, ಶ್ರೀಶಾಸ್ತ್ರಗಳನ್ನು ತಮ್ಮ ಕೆಂಪಾದ (ಕೋಮಲವಾದ) ಕೈಗಳಿಂದ ಬೆಳೆಸುತ್ತಿರುವ ಚಂಚಲವಿಲ್ಲದ ಮನಸ್ಸಿನವರು ಬಾಳುವ ತಿರುಕ್ಕಣ್ಣಂ (1)
ಗುಡಿ ಕ್ಷೇತ್ರದಲ್ಲಿ ನೆಲಸಿರುವವನೇ.

ಪಾಶುರದ ಪೂರ್ವಾರ್ಧ: ಬಹಳ ವಿಸ್ತಾರವಾದ ಹಾಲ್ಗಡಲು ಅದು. ಅಲೆಗಳಿಂದ ತುಂಬಿದ್ದು. ಅದರಲ್ಲಿ ತೇಜಸ್ಸಿನಿಂದ ಕೂಡಿದ ಸರ್ಪವಿದೆ. ಅದೇ ಶ್ರೀಮನ್ನಾರಾಯಣನಿಗೆ ಹಾಸಿಗೆ. ಅದರ ಮೇಲೆ ಸ್ವಾಮಿಯು ಕೈಗಳಲ್ಲಿ ಶಂಖ ಚಕ್ರಗಳನ್ನು ಹಿಡಿದು, ಯೋಗನಿದ್ರೆಯಲ್ಲಿ ಪವಡಿಸಿದ್ದಾನೆ. ಸ್ವಾಮಿಯ ನಾಭಿಯಲ್ಲಿ ದೊಡ್ಡದಾದ ಅಂದವಾದ ಕಮಲವಿದೆ. ಅದರಲ್ಲಿ ಚತುರ್ಮುಖ ಬ್ರಹ್ಮನು ಜನಿಸಿದ್ದಾನೆ. ಸ್ವಾಮಿಯು ಶ್ಯಾಮಲ ವರ್ಣದ (ನೀಲಿಬಣ್ಣದ) ಗಂಭೀರವಾದ ದೇಹವುಳ್ಳವನು. ಸುಂದರಾಕರ್ಷಕ ದೇಹಸೌಂದರ್ಯವುಳ್ಳವನು.

ಪಾಶುರದ ಉತ್ತರಾರ್ಧ: ತಿರುಕ್ಕಣ್ಣಂಗುಡಿ ಕ್ಷೇತ್ರದಲ್ಲಿ ನಿಷ್ಠರಾದ ವೈದಿಕರು ನೆಲಸಿದ್ದಾರೆ. ಅವರು ನಾಲ್ಕು ವೇದಗಳನ್ನೂ ಚೆನ್ನಾಗಿ ಕಲಿತವರು. ಆರು ವೇದಾಂಗಗಳನ್ನೂ ಸಾಂಗವಾಗಿ ಅಭ್ಯಾಸ ಮಾಡಿರುವವರು. ಪಂಚಮಹಾಯಜ್ಞಗಳಲ್ಲಿ ನಿರತರು. ಸ್ಮೃತಿ, ಇತಿಹಾಸ, ಪುರಾಣಾದಿ ಅಪಾರವಾದ ಕಲೆಗಳೆಲ್ಲಾ ಸಲಿತವರು. ಶ್ರೀಶಾಸ್ತ್ರಗಳನ್ನು ಬೆಳೆಸಿಕೊಂಡು, ನಿಷ್ಠೆಯಿಂದ ಭಗವತ್ಸೇವೆ ಮಾಡುವವರು. ಸ್ವಲ್ಪವೂ ಕದಲದಂತೆ, ಚಂಚಲವಾಗದಂತೆ ಇರುವ ನಿಶ್ಚಲ ಮನಸ್ಸಿನವರು.

ಆಳ್ವಾರರು ಹೇಳುತ್ತಾರೆ: ತಿರುಕ್ಕಣ್ಣಂಗುಡಿ ಕ್ಷೇತ್ರದಲ್ಲಿ ಬಾಳುವ ನಿಷ್ಠರೂ ವಿದ್ವಾಂಸರೂ ಆದ ವೈದಿಕರ ನಡುವೆ, ಅವರಿಗೆ ಆಶ್ರಯನಾಗಿ ನೆಲಸಿರುವ ಸ್ವಾಮಿಯೇ ಹಾಲ್ಗಡಲಲ್ಲಿ ಶೇಷಶಯನನಾಗಿ, ಶಂಖಚಕ್ರಧಾರಿಯಾಗಿ, ತನ್ನ ನಾಭೀಕಮಲದಲ್ಲಿ ಚತುರ್ಮುಖನನ್ನು ಪಡೆದ, ನನ್ನ ಇಷ್ಟದೈವವಾದ ಶ್ರೀಮನ್ನಾರಾಯಣನು.

ಆರು ವೇದಾಂಗಗಳು ಶಿಕ್ಷೆ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ, ಕಲ್ಪ. — ವೇದಗಳನ್ನು ಚೆನ್ನಾಗಿ ಅರಿತುಕೊಳ್ಳಲು ಅಗತ್ಯವಾಗಿರುವುವು.

ಐದು ಯಜ್ಞಗಳು : ಬ್ರಹ್ಮಯಜ್ಞ, ದೇವಯಜ್ಞ, ಪಿತೃಯಜ್ಞ, ಭೂತಯಜ್ಞ, ಮತ್ತು ಮನುಷ್ಯಯಜ್ಞ

ನಾಲ್ಕು ವೇದಗಳು ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣ ವೇದ

ಶ್ರೌತಾಗ್ನಿಗಳು ಆಹವನೀಯಾಗ್ನಿ, ಗಾರ್ಹಪತ್ಯಾಗ್ನಿ, ದಕ್ಷಿಣಾಗ್ನಿ.

2. கவளமாகதத்தகரியுய்யப் பொய்கைக்
கராங்கோளக்கலங்கியுள்நினைந்து
துவள, மேல்வந்து தோன்றி வன்முதலை
துணிபடச் சுடுபடை துரந்தோன்,
குவளைநீர்முளரிக் குமுதமொண் கழுநீர்
கொய்ம்மலர் நெய்தலொண் கழனி,
திவளுமாளிகைசூழ் செழுமணிப்புரிசைத்
திருக்கண்ணங்குடியுள் நின்றானே.

ಕವಳಮಾದಕತ್ತಕರಿಯುಯ್ಯಪ್ಪೊಯ್ಗೈ
ಕ್ಕರಾಙ್ಗೋಳಕ್ಕಲಙ್ಗಿಯುಳ್ ನಿನೈನ್ದು
ತುವಳ, ಮೇಲ್ ವನ್ದು ತೋನ್ರಿ ವನ್ ಮುದಲೈ
ತುಣಿಪಡಚ್ಚುಡುಪಡೈ ತುರನ್ದೋನ್,
ಕುವಳೈ ನೀರ್ ಮುಳರಿಕ್ಕುಮುದಮೊಣ್ ಕಳುನೀರ್
ಕೊಯ್ಮ್ಮಲರ್ ನೆಯ್ದಲೊಣ್ ಕಳನಿ,
ತಿವಳುಮಾಳಿಗೈಶೂೞ್ ಶೆಳುಮಣಿಪ್ಪುರಿಶೈತ್
ತಿರುಕ್ಕಣ್ಣಙ್ಗುಡಿಯುಳ್ ನಿನ್ರಾನೇ.

ಕವಳಮ್ கவளம் = ಕವಳಕ್ಕಾಗಿ, ಮಾದಕತ್ತ மாகதத்த = ಕಡುಕೋಪದ ಗೊಂಡ, ಕರಿ கரி = ಆನೆಯು, ಉಯ್ಯ உய்ய = ಉದ್ಧಾರಗೊಳ್ಳುವಂತೆ, ಕರಾಮ್ கராம் = ಮೊಸಳೆಯು ಪೊಯ್ಗೈ பொய்கை = ಸರೋವರದ, ಕೋಳ್ கோள = ಹಿಡಿದುಕೊಳ್ಳಲು, ಕಲಙ್ಗಿ கலங்கி = ಹೆದರಿ, ನಡುಗುತ್ತ, ಉಳ್ ನಿನೈನ್ದು உள் நினைந்து = ಮನಸ್ಸಿನಲ್ಲಿ ಧ್ಯಾನಿಸುತ್ತಾ, ತುವಳ துவள = ದುಃಖಿಸುತ್ತಿರಲು, ಮೇಲ್ ವನ್ದು மேல் வந்து = ಮೇಲಿನಿಂದ ಬಂದು, ತೋನ್ರಿ தோன்றி = ಕಾಣಿಸಿಕೊಂಡು, ವನ್ ಮುದಲೈ வன்முதலை = ಬಲಿಷ್ಠವಾದ ಮೊಸಳೆಯು, ತುಣಿಪಡ துணிபட = ತುಂಡರಿಸುವಂತೆ, ಶುಡು ಪಡೈ சுடுபடை = ಪ್ರಜ್ವಲಿಸುವ ಚಕ್ರಾಯುಧವನ್ನು, ತುರನ್ದೋನ್ துரந்தோன் = ಪ್ರಯೋಗಿಸಿದ ಸ್ವಾಮಿಯು, ಕುವಳೈ குவளை = ಕನ್ನೈದಿಲೆಯೂ, ನೀರ್ ಮುಳರಿ நீர்முளரி = ದೊಡ್ಡ ತಾವರೆಯೂ, ಕುಮುದಮ್ குமுதம் = ಬಿಳಿ

ದಾವರೆಯೂ, ಒಣ್ ತಾಣ್ = ಸುಂದರವಾದ, ಕಳುನೀರ್ கழுநீர் = ಕೆಂದಾವರೆಯೂ, ಕೊಯ್ ಮಲರ್ கொய் மலர் = ಕೊಯ್ದುಕೊಳ್ಳುವಂಥ ಹೂವಾದ, ನೆಯ್ದಲ್ நெய்தல் = ನೈದಿಲೆಯೂ, ಇವುಗಳಿಂದ, ಒಣ್ ತಾಣ್ = ಶೃಂಗರಿಸಿದ (ಸುಂದರವಾದ), ಕಳನಿ கழனி = ಗದ್ದೆಗಳಿಂದಲೂ, ತಿಗಳುಮ್ திகழும் = ಬೆಳಗುವ, ಮಾಳಿಗೈ மாளிகை = ಮಾಳಿಗೆಮನೆಗಳಿಂದಲೂ, ಶೂಳ್ சூழ் = ಸುತ್ತುವರಿದಿರುವ, ಶೆಳು செழு = ಅಂದವಾದ, ಮಣಿ மணி = ರತ್ನಮಯವಾದ, ಪುರಿಶೈ புரிசை = ಕೋಟೆ ಬುರುಜುಗಳಿಂದಲೂ, ಕೂಡಿರುವ, ತಿರುಕ್ಕಣ್ಣಂಗುಡಿಯುಳ್ திருக்கண்ணங்குடியுள் = ತಿರುಕ್ಕಣ್ಣಂಗುಡಿ ಕ್ಷೇತ್ರದಲ್ಲಿ. ನಿನ್ರಾನೇ நின்றானே = ನೆಲಸಿರುವವನೇ.

ಕವಳಕ್ಕಾಗಿ ಕಡುಕೋಪಗೊಂಡ ಆನೆಯು ಉದ್ಧಾರಗೊಳ್ಳುವಂತೆ, ಸರೋವರದ ಮೊಸಳೆಯು ಹಿಡಿದುಕೊಳ್ಳಲು, ಹೆದರಿ ನಡುಗುತ್ತಾ ಮನದಲ್ಲಿ ಧ್ಯಾನಿಸುತ್ತಾ, ದುಃಖಿಸುತ್ತಿರಲು, ಮೇಲಿನಿಂದ ಬಂದು, ವೈಭವದಿಂ, ಬಲಿಷ್ಠವಾದ ಮೊಸಳೆಯು ಕುಂದರಿಸಿ ಹೋಗುವಂತೆ ಪ್ರಜ್ವಲಿಸುವ ಚಕ್ರಾಯುಧವನ್ನು ಪ್ರಯೋಗಿಸಿದ ಸ್ವಾಮಿಯು, ಕನ್ನೈದಿಲ್, ದೊಡ್ಡತಾವರೆ, ಬಿಳಿದಾವರೆ, ಸುಂದರವಾದ ಕೆಂದಾವರೆ, ಕೊಯ್ದುಕೊಳ್ಳುವಂಥ ನೈದಿಲೆ – ಇವುಗಳಿಂದ ಶೃಂಗರಿಸಿದ (ಸುಂದರವಾದ) ಗದ್ದೆಗಳಿಂದಲೂ, ಬೆಳಗುವ ಮಹಡಿ ಮನೆಗಳಿಂದಲೂ, ಅಂದವಾದ ರತ್ನಮಯವಾದ ಕೋಟೆ ಬುರುಜುಗಳಿಂದಲೂ (2) ಕೂಡಿರುವ ತಿರುಕ್ಕಣ್ಣಂಗುಡಿ ಕ್ಷೇತ್ರದಲ್ಲಿ ನೆಲಸಿರುವವನೇ.

ಕವಳಕ್ಕಾಗಿ, ಹೊಟ್ಟೆಪಾಡಿಗಾಗಿ, ಹೋರಾಡುವ, ಕೋಪಗೊಳ್ಳುವ, ಸ್ವಭಾವವುಳ್ಳದ್ದು ಆನೆ. ಕಾಡಿನ ಸರೋವರದಲ್ಲಿ ಅದು ನೀರಿಗಾಗಿ ಇಳಿಯಿತು. ಅದರೊಳಗೆ ಒಂದು ಮೊಸಳೆ. ಅದು ಆನೆಯ ಕಾಲನ್ನು ಹಿಡಿದು ಸೆಳೆಯಲು ಪ್ರಾರಂಭಿಸಿತು. ಅದರ ಸೆಳೆತದಿಂದ ತಪ್ಪಿಸಿಕೊಳ್ಳುವುದಕ್ಕೆ ಆನೆಗೆ ಸಾಧ್ಯವಾಗಲಿಲ್ಲ. ಸಂಕಟದಿಂದ ನಡುಗುತ್ತಾ, ಮನಸ್ಸಿನಲ್ಲಿ ಭಗವಂತನನ್ನು ಅದು ಚಿಂತಿಸತೊಡಗಿತು. ಭಗವಂತನಿಗೆ ಕರುಣೆ ಬಂತು. ಕೂಡಲೇ ಸ್ವಾಮಿಯು ಗರುಡಾರೂಢನಾಗಿ ಅಲ್ಲಿಗೆ ಧಾವಿಸಿ ಬಂದನು. ತನ್ನ ತೀಕ್ಷ್ಣವಾದ ಚಕ್ರಾಯುಧವನ್ನು ಪ್ರಯೋಗಿಸಿ, ಮೊಸಳೆಯನ್ನು ಸಂಹರಿಸಿ, ಆನೆಯನ್ನು ಉದ್ಧರಿಸಿದನು.

ತಿರುಕ್ಕಣ್ಣಂಗುಡಿ ಕ್ಷೇತ್ರವೆಲ್ಲೆಲ್ಲಿಯೂ ಹಸಿರು ಗದ್ದೆಗಳೂ. ವಿಧವಿಧವಾದ ಕಮಲದ ಹೂಗಳು ಸೊಗಸಾಗಿ ಸೊಂಪಾಗಿ ಬೆಳೆದು ಕಣ್ಮನಗಳನ್ನು ತಣಿಸುತ್ತವೆ. ಮಹಡಿ ಮನೆಗಳು ಎತ್ತರವಾಗಿ ನಿಂತು ಬೆಳಗುತ್ತವೆ. ರತ್ನಮಯವಾದ ಕೋಟೆ ಬುರುಜುಗಳು ~~ಅದಕ್ಕೆ~~ ಅದರ ಅಂದವನ್ನು ಹೆಚ್ಚಿಸುತ್ತವೆ. ಆನೆಯನ್ನು ಕಡುಕಷ್ಟ ಸಂಕಟಗಳಿಂದ ರಕ್ಷಿಸಿದ ಶ್ರೀಮನ್ನಾರಾಯಣನೇ ತಿರುಕಣ್ಣಂಗುಡಿ ಕ್ಷೇತ್ರದಲ್ಲಿ ಈಗ ನೆಲಸಿರುವುದು. ಅವನನ್ನು ಆಶ್ರಯಿಸಿ ಆನೆಯು ಉದ್ಧಾರಗೊಂಡಂತೆ, ಮನುಷ್ಯರಾದ ನಾವೂ ಆಶ್ರಯಿಸೋಣ. ಅವನ ತಿರುವಡಿಗಳಿಗೆ ಎರಗಿ ಪೂಜಿಸೋಣ. ಮತ್ತು ಉಜ್ಜೀವನಗೊಳ್ಳೋಣ – ಎನ್ನುತ್ತಾರೆ ಆಳ್ವಾರರು.

Garani Srinivasan

3. வாதைவந்தடர வானமும் நிலனும்
மலைகளும் அலைகடல் குளிப்ப,
மீதுகொண்டுகளும் மீனுருவாகி
விரிபுனல் வரியகட்டொளித்தோன்,
போதலர் புன்னை மல்லிகை மௌவல்
புதுவிரை மதுமலரணைந்து,
சீதவொண் தென்றல் திசைதொறும் கமழும்
திருக்கண்ணங்குடியுள் நின்றானே.

ವಾದೈವನ್ದಡರ ವಾನಮುಮ್ ನಿಲನುಮ್
ಮಲೈಗಳುಮಲೈಕಡಲ್ ಕುಳಿಪ್ಪ,
ಮೀದುಕೊಣ್ಡುಗಳುಮ್ ಮೀನುರುವಾಗಿ
ವಿರಿಪುನಲ್ ವರಿಯಗಟ್ಟೊಳಿತ್ತೋನ್,
ಪೋದಲರ್ ಪುನ್ನೈ ಮಲ್ಲಿಗೈ ಮೌವಲ್
ಪುದುವಿರೈ ಮದುಮಲರಣೈನ್ದು,
ಶೀದವೊಣ್ ತೆನ್ಱಲ್ ತಿಶೈತೊಱುಮ್ ಕಮಳುಮ್
ತಿರುಕ್ಕಣ್ಣಙ್ಗುಡಿಯುಳ್ ನಿನ್ಱಾನೇ.

ವಾದೈ வாதை = (ನೋವು) ಬಾಧೆಯು (ಕಡುಕಷ್ಟವು), ವನ್ದು வந்து = ಬಂದು, ಅಡರ அடர = ಮೇಲೆ ಬೀಳಲು, ವಾನಮುಮ್ வானமும் = ಆಕಾಶವನ್ನೂ, ನಿಲನುಮ್ நிலனும் = ಭೂಮಿಯನ್ನೂ, ಮಲೈಗಳುಮ್ மலைகளும் = ಬೆಟ್ಟಗಳನ್ನೂ, ಅಲೈ அலை = ಅಲೆಗಳು ತುಂಬಿದ, ಕಡಲ್ கடல் = ಕಡಲುಗಳನ್ನೂ, ಕುಳಿಪ್ಪ குளிப்ப = ಮುಳುಗಿಸಿದಾಗ, ಮೀದು மீது = ಮೇಲಕ್ಕೆ, ಕೊಣ್ಡು கொண்டு = ಎತ್ತಿಕೊಂಡು, ಉಗಳುಮ್ உகளும் = ಹರ್ಷಿಸುವ, ಮೀನ್ ಉರು ಆಗಿ மீன் உரு ஆகி = ಮೀನಿನ ರೂಪವನ್ನು ತಳೆದು, ವಿರಿ விரி = ಹರಡುತ್ತಿರುವ, ಪುನಲ್ புனல் = ಪ್ರವಾಹವನ್ನು, ವರಿ வரி = ಸುಂದರ, ಅಗಡು அகடு = ಹೊಟ್ಟೆಯಲ್ಲಿ, ಒಳಿತ್ತೋನ್ ஒளித்தோன் = ಅಡಗಿಸಿಕೊಂಡವನು (ಸ್ವಾಮಿಯು), ಪೋದು ಅಲರ್ போது அலர் = ಬೆಳಗಿನ ಝಾವದಲ್ಲೇ (ಹೊತ್ತು ಹುಟ್ಟುವಾಗಲೇ) ಅರಳುವ, ಪುನ್ನೈ புன்னை = ಸುರಹೊನ್ನೆ, ಮಲ್ಲಿಗೈ மல்லிகை = ಮಲ್ಲಿಗೆ, ಮೌವಲ್ மௌவல் = ಕಾಡುಮಲ್ಲಿಗೆ, ಪುದು புது = ಹೊಸದಾಗಿ, ವಿರೈ விரை = ಬಿರಿದ, ಮದುಮಲರ್ மதுமலர் = ಮಧುವನ್ನು ಸುರಿಸುವ ಹೂಗಳನ್ನು, ಅಣೈನ್ದು அணைந்து = ಸೇರಿ, ಶೀದಮ್ சீதம் = ತಂಪಾದ, ಒಣ್ ஒண் = ಸೊಗಸಾದ, ತೆನ್ಱಲ್ தென்றல் = ತಂಗಾಳಿಯು, ತಿಶೈತೊಱುಮ್ திசைதொறும் = ಎಲ್ಲಾ ದಿಕ್ಕುಗಳಲ್ಲಿಯೂ, ಕಮಳುಮ್ கமழும் = ಘಮಘಮಿಸುವ, ತಿರುಕ್ಕಣ್ಣಙ್ಗುಡಿಯುಳ್ திருக்கண்ணங்குடியுள் = ತಿರುಕ್ಕಣ್ಣಂಗುಡಿ ಕ್ಷೇತ್ರದಲ್ಲಿ, ನಿನ್ಱಾನೇ நின்றானே = ನೆಲಸಿರುವವನೇ.

ನೀರಿನ ಬಾಧೆಯು ಬಂದು ಮೇಲೆ ಬೀಳಲು, ಆಕಾಶವನ್ನು ಭೂಮಿಯನ್ನು, ಬೆಟ್ಟಗಳನ್ನು, ಅಲೆಗಳು ತುಂಬಿದ ಕಡಲುಗಳನ್ನು ಮುಳುಗಿಸಿ ಬಿಟ್ಟಾಗ, ಅವುಗಳನ್ನೆಲ್ಲಾ ಮೇಲಕ್ಕೆತ್ತಿ ಹರ್ಷಿಸುವ ಮೀನಿನ ರೂಪವನ್ನು ತಳೆದು ಹರಡುತ್ತಿರುವ ಪ್ರವಾಹವನ್ನು ಸುಂದರವಾದ ತನ್ನ ಹೊಟ್ಟೆಯಲ್ಲಿ ಅಡಗಿಸಿಕೊಂಡ ಸ್ವಾಮಿಯು, ಹೊತ್ತು ಹುಟ್ಟುವಾಗಲೇ ಅರಳುವ ಸುರಹೊನ್ನೆ ಮಲ್ಲಿಗೆ, ಕಾಡುಮಲ್ಲಿಗೆ ಮುಂತಾದ ಹೂವಿನಿಂದಾ ಬಂದು ಮಧುವನ್ನು ಸುರಿಸುವ ಹೂಗಳನ್ನು ಸೇರಿ (ಸವರಿಕೊಂಡು) ಕಂಪಾದ, ಸೊಗಸಾದ ತೆಂಕಣ ಗಾಳಿಯು ಎಲ್ಲಾ ದಿಕ್ಕುಗಳಲ್ಲಿಯೂ (ಹರಡಿ) ಪರಿಮಳಿಸುವ ತಿರುಕ್ಕಣ್ಣಂಗುಡಿ ಕ್ಷೇತ್ರದಲ್ಲಿ ನೆಲಸಿರುವವನೇ. (3)

ತಿರುಕ್ಕಣ್ಣಂಗುಡಿ ಕ್ಷೇತ್ರದ ಸುತ್ತಲೂ ಒಳ್ಳೆಯ ಹೂದೋಟಗಳಿವೆ. ಬೆಳಕು ಹರಿಯುತ್ತಿರುವಾಗಲೇ ಅವುಗಳಲ್ಲಿರುವ ಸುರಹೊನ್ನೆ, ಮಲ್ಲಿಗೆ, ಕಾಡುಮಲ್ಲಿಗೆ, ಜಾಜಿ ಮುಂತಾದವು ಅರಳುತ್ತವೆ. ಕಂಪಾದ ಮತ್ತು ಸೊಗಸಾದ ತೆಂಕಣಗಾಳಿಯು ಮಂದಮಂದವಾಗಿ ಅವುಗಳ ಮೇಲೆ ಬೀಸುತ್ತಾ ಅವುಗಳ ಹೂವಿನ ಪರಿಮಳವನ್ನು ತನ್ನಲ್ಲಿ ಬೆರೆಸಿಕೊಂಡು ಎಲ್ಲ ದಿಕ್ಕುಗಳಲ್ಲಿಯೂ ಬಹಳ ಹಿತವಾಗಿ ಹರಡಿ, ಜನರಲ್ಲಿ ಹರ್ಷೋತ್ಸಾಹಗಳನ್ನು ತುಂಬುತ್ತದೆ. ಅಲ್ಲಿ ನೆಲಸಿರುವ ಸ್ವಾಮಿಯು, ಹಿಂದೆ, ಜಲಪ್ರಳಯವೊಂದರಲ್ಲಿ ಮೀನಿನ ರೂಪವನ್ನು ತಳೆದು, ನೀರ್ಮುಳುಗಾಗಿದ್ದ ಆಕಾಶವನ್ನು ಭೂಮಿಯನ್ನು, ಬೆಟ್ಟಗಳನ್ನು ಅಲೆಗಳಿಂದ ತುಂಬಿರುವ ಕಡಲುಗಳನ್ನು, ಮುಂತೆಲ್ಲ ವಸ್ತುಗಳನ್ನು, ನೀರಿನಿಂದ ಮೇಲಕ್ಕೆತ್ತಿ, ಅವುಗಳು ನಾಶವಾಗದಂತೆ ಪವಿತ್ರವೂ ಸುಂದರವೂ ಆದ ತನ್ನ ಹೊಟ್ಟೆಯಲ್ಲಿ ಅಡಗಿಸಿಟ್ಟು ಕಾಪಾಡಿದಂಥ ಮಹದುಪಕಾರಿ. ನಾವು ಆ ಸ್ವಾಮಿಯನ್ನು ಆಶ್ರಯಿಸಿ ಉಜ್ಜೀವಿಸೋಣ - ಎನ್ನುತ್ತಾರೆ ಆಳ್ವಾರರು

4. வென்றி சேர் திண்மை விலங்கல் மா மேனி
வெள்ளெயிற்றொள்ளெரித்தறுகண்,
பன்றியாயன்று பார்மகள் பயலை
தீர்த்தவன் பஞ்சவர் பாகன்,
ஒன்றலாவுருவத் துலப்பில் பல்காலத்து
உயர்கொடி யொளிவளர் மதியம்,
சென்று சேர் சென்னிச் சிகர நன்மாடத்
திருக்கண்ணங்குடியுள் நின்றானே.

ವೆನ್ಱಿ ಶೇರ್ ತಿಣ್ಮೈ ವಿಲಙ್ಗಲ್ ಮಾ ಮೇನಿ
ವೆಳ್ಳೆಯಿಱ್ಱೊಳ್ಳೆರಿತ್ತಱುಗಣ್,
ಪನ್ಱಿಯಾಯನ್ಱು ಪಾರ್ ಮಗಳ್ ಪಯಲೈ
ತೀರ್ತ್ತವನ್ ಪಞ್ಜವರ್ ಪಾಗನ್,
ಒನ್ಱಲಾವುರುವತ್ತುಲಪ್ಪಿಲ್ ಪಲ್ ಕಾಲತ್ತು
ಉಯರ್ ಕೊಡಿಯೊಳಿ ವಳರ್ ಮದಿಯಮ್,
ಶೆನ್ಱು ಶೇರ್ ಶೆನ್ನಿಚ್ಚಿಗರ ನನ್ಮಾಡ
ತಿರುಕ್ಕಣ್ಣಙ್ಗುಡಿಯುಳ್ ನಿನ್ಱಾನೇ.

ವೆನ್ಱಿ ಶೇರ್ வென்றி சேர் = ಜಯದಿಂದ ಕೂಡಿರುವ, ತಿಣ್ಮೈ
திண்மை = ಬಲವುಳ್ಳ, ವಿಲಙ್ಗಲ್ விலங்கல் = ಬೆಟ್ಟದಂತೆ, ಮಾ மா =
ಬಲುದೊಡ್ಡ, ಮೇನಿ மேனி = ದೇಹದ, ವೆಳ್ வெள் = ಬಿಳಿಯ (ಹೊಳೆಯುವ)
ಎಯಿಱು எயிறு = ಕೋರೆದಾಡೆಗಳ, ಒಣ್ ಎರಿ ஒண்ணெரி =
ಅದ್ವಿತೀಯವಾದ ಅಗ್ನಿಯಂತೆ, ತಱುಕಣ್ தறுகண் = ಕ್ರೂರವಾದ ಕೊಲ್ಲುವ
ಸ್ವಭಾವದ, ಪನ್ಱಿ ಆಯ್ பன்றி ஆய் = ಹಂದಿಯಾಗಿ, ಅನ್ಱು
அன்று = ಅಂದು, ಪಾರ್ ಮಗಳ್ பார் மகள் = ಭೂದೇವಿಯ, ಪಯ
ಲೈ பயலை = ಸಂಕಟವನ್ನು, ತೀರ್ತ್ತವನ್ தீர்த்தவன் = ತೀರಿಸಿದವನೂ,
ಪಞ್ಚವರ್ பஞ்சவர் = ಪಾಂಡವರ, ಪಾಗನ್ பாகன் = ಸಾರಥಿಯಾದವನೂ,
ಒನ್ಱು ಅಲಾ ஒன்று அலா = ಒಂದಲ್ಲದ (ಅನೇಕವಾದ), ಉರು
ವತ್ತು உருவத்து = ರೂಪಗಳುಳ್ಳ, ಉಲಪ್ಪು ಇಲ್ உலப்பில் =
ಕೊನೆಯಿಲ್ಲದಂತೆ, ಪಲ್ ಕಾಲತ್ತು பல் காலத்து = ಬಹುಕಾಲದ, (ಪುರಾತನ
ವಾದ), ಉಯರ್ ಕೊಡಿ உயர் கொடி = ಎತ್ತರವಾದ ಧ್ವಜಗಳ, ಒಳಿವರು
ಕಣ್ಣಿ ವಣಾರ್ = ಕಾಂತಿಯನ್ನು ಹೆಚ್ಚಿಸುವ, ಮದಿಯಮ್ மதியம் =
ಚಂದ್ರನನ್ನು, ಶೆನ್ಱು ಶೇರ್ சென்று சேர் = ಹೋಗಿ ಸೇರುವ, ಶೆನ್ನಿ
ಶೆನ್ನಿ ಚಿಗರಮ್ சிகரம் = ತಲೆಯ ಮೇಲಣ ಶಿಖರಗಳುಳ್ಳ, ನಲ್ ಮಾ
ಡಮ್ ನನ್ಮಾಡಮ್ = ಶ್ರೇಷ್ಠವಾದ ಮಹಡಿ ಮನೆಗಳ, ತಿರುಕ್ಕಣ್ಣಙ್ಗುಡಿಯುಳ್
திருக்கண்ணங்குடியுள் = ತಿರುಕ್ಕಣ್ಣಂಗುಡಿಯಲ್ಲಿ, ನಿನ್ಱಾನೇ
நின்றானே = ನೆಲಸಿರುವವನೇ.

ಜಯವೂ ಬಲವೂ ಕೂಡಿಕೊಂಡ ಬೆಟ್ಟದಂತೆ ಬಲುದೊಡ್ಡ ದೇಹದ, ಬಿಳಿಯ ಅದ್ವಿತೀಯವಾದ ಅಗ್ನಿಯಂತೆ ಕ್ರೂರವಾದ ಹೊಳೆಯುವ ಕೋರೆದಾಡೆಗಳ, ಅದ್ವಿತೀಯವಾದ ಅಗ್ನಿಯಂತೆ ಕ್ರೂರವಾದ ಕೊಲ್ಲುವ ಸ್ವಭಾವದ ಹಂದಿಯಾಗಿ, ಅಂದು, ಭೂದೇವಿಯ ಸಂಕಟವನ್ನು ತೀರಿಸಿದವನೂ, ಪಾಂಡವರ ಸಾರಥಿಯಾದವನೂ, ಒಂದಲ್ಲದ (ಅನೇಕ) ರೂಪಗಳುಳ್ಳ ಕೊನೆಯಿಲ್ಲದಂತೆ (ಕಡೆಬಡೆಯಿಲ್ಲದಂತೆ) ಪುರಾತನವಾದ ಎತ್ತರವಾದ ಧ್ವಜಗಳ ಕಾಂತಿಯನ್ನು ಹೆಚ್ಚಿಸುವ ಚಂದ್ರನನ್ನು ಹೋಗಿ ಸೇರುವ ತಲೆಯ ಮೇಲಣ ಶಿಖರಗಳುಳ್ಳ ಬೆಳ್ಳಿಯ ಮಹಡಿ ಮನೆಗಳ ತಿರುಕ್ಕಣ್ಣಂಗುಡಿಯಲ್ಲಿ ನೆಲಸಿರುವವನೇ. (4)

ಆಳ್ವಾರರು ಹೇಳುತ್ತಾರೆ: ತಿರುಕ್ಕಣ್ಣಂಗುಡಿ ಎಂಬುದು ಬಹಳ ಪುರಾತನ ಕ್ಷೇತ್ರ. ಅಲ್ಲಿ ಅನೇಕ ಉಪ್ಪರಿಗೆ ಮನೆಗಳಿವೆ. ಒಂದೊಂದೂ ವಿಶಿಷ್ಟವಾದ ಶಿಲ್ಪಗಳಿಂದ ಕೂಡಿದ್ದು. ಆ ಉಪ್ಪರಿಗೆ ಮನೆಗಳಿಗೆ ಬಹಳ ಎತ್ತರವಾದ ಶಿಲೆ ಶಿಖರವಿದೆ. ಆ ಶಿಖರಗಳ ಮೇಲೆ ಧ್ವಜವು ಹಾರಾಡುತ್ತಿದೆ. ಗಗನದಲ್ಲಿ ಬೆಳಗುವ ಚಂದ್ರನು ಆ ಧ್ವಜಗಳ ಕಾಂತಿಯನ್ನು ಹೆಚ್ಚಿಸುತ್ತಾನೆ. ಆ ಸುಂದರವಾದ ಉಪ್ಪರಿಗೆಗಳ ನಡುವೆ, ಭಗವಂತನು ನೆಲಸಿದ್ದಾನೆ. ಸ್ವಾಮಿಯು ವರಾಹಾವತಾರ. ಹಿಂದೆ, ಭೂದೇವಿಗೆ ಹಿರಣ್ಯಾಕ್ಷನೆಂಬ ರಾಕ್ಷಸನಿಂದ ಕಡುಸಂಕಟ ಪ್ರಾಪ್ತವಾಗಿತ್ತು. ಆಗ, ಭಗವಂತನು ಅದ್ವಿತೀಯವಾದ ಹೊಳೆ

ಯಾವ ಕೋಲಾಹಲಗಳಿಂದ ಕೂಡಿದ ಮಹಾ ಆರಾಧನಾ ಅವಸರವು,
ತನ್ನ ಅಪ್ರತಿಮ ಬಲ ಪರಾಕ್ರಮಗಳಿಂದ ಶರಣ್ಯಾಪ್ತರನ್ನು ಕೊಂಡುದಾರಿ,
ಭೂದೇವಿಯನ್ನು ಸಂಕಟದಿಂದ ಪಾರುಮಾಡಿದನು. ಪಾಂಡವರಿಗೆ
ಬೆಂಬಲನಾಗಿ ನಿಂತು, ಅವರಲ್ಲಿ ಅರ್ಜುನನಿಗೆ ಸಾರಥಿಯಾಗಿ ಮಹಾ
ಭಾರತಯುದ್ಧದಲ್ಲಿ ಅವನಿಗೂ ಪಾಂಡವರಿಗೂ ಜಯಗಳಿಸಿಕೊಟ್ಟನು.
ಸಜ್ಜನ ರಕ್ಷಕನಾದ ಆ ಸ್ವಾಮಿಯೇ ಈಗ ತಿರುಕ್ಕಣ್ಣಂಗುಡಿಯಲ್ಲಿ ನೆಲಸಿದ್ದಾ
ನೆ. ನಾವೂ ಅವನನ್ನು ಆಶ್ರಯಿಸೋಣ. ಉದ್ಧಾರಗೊಳ್ಳೋಣ

5. மன்னவன் பெரிய வேள்வியிற் குறளாய்
மூவடி நீரொடுங் கொண்டு,
பின்னுமேழுலகு மீரடியாகப் பெருந்திசை
யடங்கிட நிமிர்ந்தோன்,
அன்னமென் கமலத் தணிமலர்ப்பீடத்
தலைபுன லிலைக்குடைநீழல்,
சென்னெலொண் கவரியசைய வீற்றிருக்கும்
திருக்கண்ணங்குடியுள் நின்றானே.

ಮನ್ನವನ್ ಪೆರಿಯ ವೇಳ್ವಿಯಿಱ್ ಕುಱಳಾಯ್
ಮೂವಡಿ ನೀರೊಡುಙ್ಗೊಣ್ಡು,
ಪಿನ್ನುಮೇೞುಲಗು ಮೀರಡಿಯಾಗಪ್ಪೆರುನ್ದಿಶೈ
ಯಡಙ್ಗಿಡ ನಿಮಿರ್ನ್ದೋನ್,
ಅನ್ನಮೆನ್ ಕಮಲತ್ತಣಿಮಲರ್ಪ್ಪೀಡ
ತ್ತಲೈಪುನ ಲಿಲೈಕ್ಕುಡೈನೀೞಲ್,
ಶೆನ್ನೆಲೊಣ್ ಕವರಿಯಶೈಯ ವೀಟ್ರಿರುಕ್ಕುಮ್
ತಿರುಕ್ಕಣ್ಣಙ್ಗುಡಿಯುಳ್ ನಿನ್ಱಾನೇ.

ಮನ್ನವನ್ மன்னவன் = ರಾಜನ (ಚಕ್ರವರ್ತಿಯ), ಪೆರಿಯ பெரி
ய = ದೊಡ್ಡ, ವೇಳ್ವಿಯಿಲ್ வேள்வியில் = ಯಾಗಶಾಲೆಯಲ್ಲಿ,
ಕುಱಳ್ ಆಯ್ குறள் ஆய் = ವಾಮನ ಬ್ರಹ್ಮಚಾರಿ
(ಯಾಗದಲ್ಲಿ), ಮೂ ಅಡಿ மூ அடி = ಮೂರು ಹೆಜ್ಜೆ ನೆಲವನ್ನು, ನೀರೊಡುಂ நீ
ரொடு = ನೀರೊಡನೆ (ದಾನವಾಗಿ), ಕೊಣ್ಡು கொண்டு = ಪಡೆದು
ಕೊಂಡು ಪಿನ್ನುಮ್ பின்னும் = ಆಬಳಿಕ, [illegible] ಉಲಗು ஏழ்
உலகு = ಏಳು ಲೋಕಗಳನ್ನು, ಈರ್ ಅಡಿಯಾಗ ஈர் அடியாக
= ಎರಡು ಹೆಜ್ಜೆಗಳಾಗುವಂತೆ, ಪೆರು ದಿಶೈ ಅಡಙ್ಗಿಡ பெருதிசை
அடங்கிட = ವಿಸ್ತಾರವಾದ (ವ್ಯಾಪಿಸಿದ) ದಿಕ್ಕುಗಳೆಲ್ಲವೂ ತನ್ನಲ್ಲಿ

ಅದಾಗಿ ತೋರುವಂತೆ. ನಿಮಿರ್ನ್ದೇನ್ ನಿಮಿರ್ನ್ದೋನ್ = ಬೆಳೆದು ನಿಂತವನು, ಅನ್ನಮುಮ್ ಅಣ್ಣಾಮ್ = ಹಂಸಗಳು, ಮೆಲ್ ಕಮಲತ್ತು ಮೆಲ್ ಕಮಲತ್ತು = ಮೆತ್ತನೆಯ ಕಮಲದ, ಅಣಿ ಅಣ್ಣಿ = ಸುಂದರವಾದ, ಮಲರ್ ಮಲರ್ = ಹೂವಿನ, ಪೀಠತ್ತು ಪೀಡಕತ್ತು = ಪೀಠದಲ್ಲಿ, ಅಲೈ ಪುನಲ್ ಅಲೈ ಪುನಲ್ = ಅಲೆಗಳ ಪ್ರವಾಹದಿಂದಾದ, ಇಲೈ ಕುಡೈ ಇಲೈ ಕುಡೈ = ಎಲೆಗಳ ಕೊಡೆಯ, ನೀಳಲ್ ನಿಳಲ್ = ನೆರಳಲ್ಲಿ, ಶೆಮ್ ನೆಲ್ ಶೆಮ್ ನೆಲ್ = ಕೆಂಬತ್ತದ, ಒಣ್ ತಾಣ್ = ಸುಂದರವಾದ, ಕವರಿ ಕವರಿ = ಚಾಮರವು, ಅಸೈಯ ಅಶೈಯ = ಬೀಸುತ್ತಿರಲು, ವೀಟ್ರಿರುಕ್ಕುಮ್ ವೀಟ್ರಿರುಕ್ಕುಮ್ = ವಾಸಿಸುವ, (ಕುಳಿತಿರುವ) ತಿರುಕ್ಕಣ್ಣಂಗುಡಿಯುಳ್ ತಿರುಕ್ಕಣ್ಣಂಗುಡಿಯುಳ್ = ತಿರುಕ್ಕಣ್ಣಂಗುಡಿಯಲ್ಲಿ, ನಿನ್ರಾನೇ ನಿನ್ರಾನೇ = ನೆಲಸಿರುವವನೇ.

ಚಕ್ರವರ್ತಿಯ ದೊಡ್ಡ ಯಾಗದಲ್ಲಿ ವಾಮನ ಬ್ರಹ್ಮಚಾರಿಯಾಗಿ, ಮೂರು ಹೆಜ್ಜೆಗಳ ನೆಲವನ್ನು ನೀರೆರೆಸಿದನೆ (ದಾನವಾಗಿ) ಪಡೆದುಕೊಂಡು, ಆಬಳಿಕ, ಏಳು ಲೋಕಗಳನ್ನೂ ಎರಡು ಹೆಜ್ಜೆಗಳಾಗುವಂತೆ ವಿಸ್ತಾರವಾದ (ವ್ಯಾಪಿಸಿದ) ದಿಕ್ಕುಗಳೆಲ್ಲವೂ ಕಣ್ಣಲ್ಲಿ ಅದಾಗಿ ತೋರುವಂತೆ ಬೆಳೆದು ನಿಂತವನು (ಭಗವಂತನು), ಹಂಸಗಳು ಮೆತ್ತನೆಯ ಕಮಲದ ಅಲೆಗಳ ಪ್ರವಾಹದಿಂದಾದ ಸುಂದರವಾದ ಹೂವಿನ ಪೀಠದಲ್ಲಿ, ~~[illegible]~~, ಕೆಂಬತ್ತದ ಸುಂದರವಾದ ಎಲೆಯ ಕೊಡೆಗಳ ನೆರಳಲ್ಲಿ ~~[illegible]~~, ಕೆಂಬತ್ತದ ಸುಂದರವಾದ ಚಾಮರವು ಬೀಸುತ್ತಿರಲು, ಕುಳಿತಿರುವ, ತಿರುಕ್ಕಣ್ಣಂಗುಡಿಯಲ್ಲಿ ನೆಲ (5) ಸಿರುವವನೇ.

ಆಳ್ವಾರರು ಹೇಳುತ್ತಾರೆ: ತಿರುಕ್ಕಣ್ಣಂಗುಡಿ ಕ್ಷೇತ್ರದಲ್ಲಿ ಕಮಲದ ಹೂಗಳು ಹೇರಳವಾಗಿ ಬೆಳೆಯುತ್ತವೆ. ನೀರಿನ ಅಲೆಗಳು ಹರಿಯುತ್ತಾ, ತಾವರೆ ಎಲೆಗಳನ್ನು ನೀರಿನಿಂದ ಮೇಲಕ್ಕೆ ಎತ್ತಿ ಹಿಡಿದಿರುತ್ತವೆ. ಅವುಗಳ ನೆರಳಲ್ಲಿ, ಮೆತ್ತನೆಯ ಕಮಲದ ಹೂವಿನಲ್ಲಿ ಹಂಸ ಪಕ್ಷಿಗಳು ಸುಖವಾಗಿ ಕುಳಿತಿರುತ್ತವೆ. ಗದ್ದೆಗಳಲ್ಲಿ ಬೆಳೆಯುವ ಕೆಂಬತ್ತದ ಸುಂದರವಾದ ತೆನೆಗಳು ಚಾಮರಗಳಂತೆ ಬೀಸುತ್ತಿರುತ್ತವೆ. ಇಂಥ ಸುಂದರವಾದ ಪ್ರದೇಶದಲ್ಲಿ ಭಗವಂತನು ನೆಲಸಿದ್ದಾನೆ. ಆ ಸ್ವಾಮಿಯೇ ಹಿಂದೆ, ಬಲಿಚಕ್ರವರ್ತಿಯ ದೊಡ್ಡ ಯಾಗಶಾಲೆಯನ್ನು ಕುಳ್ಳ ಬ್ರಹ್ಮಚಾರಿಯಾಗಿ ಪ್ರವೇಶಿಸಿ, ತನ್ನ ಪುಟ್ಟ ಹೆಜ್ಜೆಗಳಲ್ಲಿ ಮೂರೇ ಮೂರು ಹೆಜ್ಜೆ ನೆಲವನ್ನು ಬೇಡಿ, ದಾನವಾಗಿ ಧಾರೆ ಎರೆಸಿಕೊಂಡನು. ಅದಾದ ಕೂಡಲೇ, ಸ್ವಾಮಿಯು ತ್ರಿವಿಕ್ರಮನಾಗಿ ಬೆಳೆದು ದಶದಿಕ್ಕುಗಳನ್ನೂ ಆವರಿಸಿ, ತನ್ನ ಎರಡೇ ಹೆಜ್ಜೆಗಳಿಂದ ಏಳು ಲೋಕಗಳನ್ನೂ ಅಳೆದುಕೊಂಡು ಬಿಟ್ಟನು. ಆಶ್ಚರ್ಯಕಾರಿಯಾದ ಆ ಸ್ವಾಮಿಯನ್ನು, ತಿರುಕ್ಕಣ್ಣಂಗುಡಿಯಲ್ಲಿ, ಆಶ್ರಯಿಸಿ, ಉದ್ಧಾರಗೊಳ್ಳೋಣ

Garani Srinivasan

6. மழுவினாலவனியரசை மூவெழுகால்
மணிமுடி பொடிபடுத்து, உதிரக்
குழுவுவார் புனலுட் குளித்து
வெங்கோபம் தவிர்ந்தவன், குலைமலி கதலி,
குழுவும் வார் கமுகும் குரவு நற்பலவும்
குளிர்தரு சூதமாதவியும்,
செழுமையார் பொழில்கள் தழுவு நன்மாடத்
திருக்கண்ணங்குடியுள் நின்றானே.

ಮಳುವಿನಾಲವನಿಯರಶೈ ಮೂವೆಳುಕಾಲ್
ಮಣಿಮುಡಿ ಪೊಡಿಪಡುತ್ತು, ಉದಿರ
ಕುಳುವು ವಾರ್ ಪುನಲುಟ್ಕುಳಿತ್ತು
ವೆಙ್ಗೋಪಮ್ ತವಿರ್ನ್ದವನ್, ಕುಲೈಮಲಿ ಕದಲಿ,
ಕುಳುವುಮ್ ವಾರ್ ಕಮುಗುಮ್ ಕುರವು ನಱ್ಪಲವುಮ್
ಕುಳಿರ್ ತರು ಶೂದ ಮಾದವಿಯುಮ್,
ಶೆಳುಮೈಯಾರ್ ಪೊಳಿಲ್ಗಳ್ ತಳುವು ನನ್ಮಾಡ
ತ್ತಿರುಕ್ಕಣ್ಣಙ್ಗುಡಿಯುಳ್ ನಿನ್ಱಾನೇ.

ಮಳುವಿನಾಲ್ மழுவினால் = ಗಂಡುಗೊಡಲಿಯಿಂದ, ಅವನಿ ಅರಶೈ
ಭೂಮಿಯ ಮೇಲಿನ
அவனி அரசை = ರಾಜರುಗಳ, ಮೂ ಎಳು ಕಾಲ್ மூவெழு கால் =
ಮೂರೇಳು ಸಲ, ಮಣಿಮುಡಿ மணிமுடி = ರತ್ನಮಯವಾದ ಕಿರೀಟಗಳನ್ನು,
ಪೊಡಿಪಡುತ್ತು பொடிபடுத்து = ಪುಡಿಮಾಡಿ, ಉದಿರಮ್ உதிரம் =
ರಕ್ತದ, ಕುಳುವು குழுவு = ನೀರುತೆರೆಯಿಂದಾದ, ವಾರ್ ಪುನಲುಳ್ வார்
புனலுள் = ತುಂಬು ಪ್ರವಾಹದಲ್ಲಿ, ಕುಳಿತ್ತು குளித்து = ಸ್ನಾನಮಾ
ಡಿ, ವೆಮ್ ಕೋಪಮ್ வெம் கோபம் = ಕಿಚ್ಚಾದ ಕೋಪವನ್ನು,
ತವಿರ್ನ್ದವನ್ தவிர்ந்தவன் = ಕಳೆದುಕೊಂಡವನು (ಭಾರ್ಗವರಾಮನು),
ಕುಲೈಮಲಿ குலைமலி = ಗೊನೆಗಳಿಂದ ತುಂಬಿರುವ, ಕದಲಿ கதலி =
ಬಾಳೆಯ ಮರಗಳ, ಕುಳುವುಮ್ குழுவும் = ಶೋಲೆಬನಗಳೂ, ವಾರ್
வார் = ಎತ್ತರವಾದ, ಕಮುಗುಮ್ கமுகம் = ಅಡಕೆಯ ಮರಗಳೂ,
ಕುರವು குரவு = ಕುರವ ಮರಗಳೂ, ನಲ್ ಪಲವುಮ್ நற்பலவும்
= ಒಳ್ಳೆಯ ಹಲಸಿನ ಮರಗಳೂ, ಕುಳಿರ್ ತರು குளிர்தரு = ತಂಪನ್ನುಂ
ಟುಮಾಡುವ, ಶೂದಮ್ சூதம் = ಮಾವಿನ ಮರಗಳೂ, ಮಾದವಿಯುಮ್
மாதவியும் = ಮಾಧವೀಲತೆಯೂ, ಶೆಳುಮ್ಮೈ செழுமை = ಐಶ್ವರ್ಯ
ದಿಂದ, ಆರ್ ஆர் = ತುಂಬಿರುವ, ಪೊಳಿಲ್ಗಳ್ பொழில்கள் =
ತೋಟಗಳಿಂದ, ತಳುವು தழுவு = ಸುತ್ತುವರಿದಿರುವ, ನಲ್ ಮಾಡಮ್
நல் மாடம் = ಉತ್ತಮವಾದ ಮಹಡಿಮನೆಗಳ, ತಿರುಕ್ಕಣ್ಣಙ್ಗುಡಿಯುಳ್
திருக்கண்ணங்குடியுள் = ತಿರುಕ್ಕಣ್ಣಂಗುಡಿಯಲ್ಲಿ, ನಿನ್ಱಾನೇ

Garani Srinivasan

நின்றானே = ನೆಲಸಿರುವವನೇ.

ಗಂಡುಗೊಡಲಿಯಿಂದ ಭೂಮಿಯ ಮೇಲಣ ರಾಜರುಗಳ, ಇಪ್ಪತ್ತೊಂದು ಸಲ, ರಕ್ತಮಯವಾದ ಕಿರೀಟಗಳನ್ನು ಪುಡಿಮಾಡಿ, ಅವರೆಲ್ಲರ ರಕ್ತದ ತುಂಬು ಪ್ರವಾಹದಲ್ಲಿ ಸ್ನಾನಮಾಡಿ ತನ್ನ ತೀಕ್ಷ್ಣವಾದ ಕೋಪವನ್ನು ತೀರಿಸಿಕೊಂಡವನು (ಭಗವಂತನು). ಗೊನೆಗಳಿಂದ ತುಂಬಿದ ಬಾಳೆಯ ಮರಗಳ ತೋಟಗಳೂ, ಎತ್ತರವಾದ ಅಡಕೆಯ ಮರಗಳೂ, ಕುರವ ಮರಗಳೂ, ಒಳ್ಳೆಯ ಹಲಸಿನ ಮರಗಳೂ, ತಂಪನ್ನು ತರುವ ಮಾವಿನ ಮರಗಳೂ, ಮಾಧವೀಲತೆಗಳೂ ಸಮೃದ್ಧಿಯಾಗಿ ತುಂಬಿರುವ ತೋಪುಗಳಿಂದ ಸುತ್ತುವರಿದಿರುವ, ಒಳ್ಳೆಯ ಮಹಡಿ ಮನೆಗಳ ತಿರುಕ್ಕಣ್ಣಂಗುಡಿಯಲ್ಲಿ (6) ನೆಲಸಿರುವವನೇ.

ಆಳ್ವಾರರು ಹೇಳುತ್ತಾರೆ: ತಿರುಕ್ಕಣ್ಣಂಗುಡಿ ಕ್ಷೇತ್ರವು ಒಳ್ಳೆಯ ಫಲವತ್ತಾದ ತೋಪುಗಳಿಂದ ಸುತ್ತುವರಿದಿದೆ. ಬಾಳೆಯ ತೋಟಗಳಲ್ಲಿರುವ ಬಾಳೆಯ ಮರಗಳಲ್ಲಿ ದೊಡ್ಡದೊಡ್ಡ ಗೊನೆಗಳು ~~[illegible]~~ ಇವೆ. ಒಳ್ಳೆಯ ಜಾತಿಯ ಹಲಸಿನ ಮರಗಳ ತೋಪುಗಳಿವೆ. ತಂಪಾದ ನೆರಳನ್ನು ಕೊಡುವ ವಿಸ್ತಾರವಾಗಿ ಹರಡಿಕೊಂಡಿರುವ ಮಾವಿನ ಮರಗಳ ತೋಪು, ಕುರವ ಮರಗಳೂ, ಬಗೆಬಗೆಯ ಗಳಿವೆ. ಅಲ್ಲದೆ, ಮಾಧವೀಲತೆಗಳೂ, ಹೂವಿನ ಗಿಡಗಳೂ ತುಂಬಿರುವ ತೋಟಗಳಿವೆ. ಎತ್ತರವಾದ ಮಹಡಿ ಮನೆಗಳಿವೆ. ಇವೆಲ್ಲ ಸೊಬಗಿನ ನಡುವೆಯೇ ಭಗವಂತನು ನೆಲಸಿದ್ದಾನೆ. ಹಿಂದೆ, ಆ ಸ್ವಾಮಿಯೇ, ಪರಶುರಾಮನಾಗಿ ಅವತರಿಸಿದ್ದ. ತನ್ನ ತಂದೆಯಾದ ಜಮದಗ್ನಿ ಮಹರ್ಷಿಯ ಆತಿಥ್ಯವನ್ನು ಸ್ವೀಕರಿಸಿದ ಬಳಿಕ, ಅವರ ಬಳಿಯಿದ್ದ ಹೋಮಧೇನುವನ್ನು ಬಲಾತ್ಕಾರದಿಂದ ಕೊಂಡೊಯ್ದ ಕಾರ್ತವೀರ್ಯಾರ್ಜುನನೆಂಬ ರಾಜನ ಮೇಲೆ ಕಡುಕೋಪಗೊಂಡು ~~ದಂಡೆತ್ತಿ~~ ~~ಹ~~ ಪರಶುರಾಮನು ದಂಡೆತ್ತಿ ಹೋದನು. ಅವನನ್ನು ಅವನ ಮಕ್ಕಳನ್ನೂ ಸಂಹರಿಸಿದನು. ಅಲ್ಲಿಗೇ ಪರಶುರಾಮನ ಕೋಪ ಇಳಿಯಲಿಲ್ಲ. ಮದಾಂಧರಾದ ಕ್ಷತ್ರಿಯರನ್ನೆಲ್ಲಾ ನಿರ್ಮೂಲ ಮಾಡಿಬಿಡುವೆನೆಂದು ಪ್ರತಿಜ್ಞೆ ತೊಟ್ಟನು. ಗಂಡುಗೊಡಲಿಯನ್ನು ತನ್ನ ಹೆಗಲಿಗೆ ಏರಿಸಿ, ಇಪ್ಪತ್ತೊಂದು ಸಲ ಭೂಪ್ರದಕ್ಷಿಣೆ ಮಾಡಿ, ಸಿಕ್ಕ ಸಿಕ್ಕ ರಾಜರನ್ನೆಲ್ಲಾ (ಕ್ಷತ್ರಿಯರನ್ನೆಲ್ಲಾ) ಕಡಿದು ಹಾಕಿದನು. ಅವರೆಲ್ಲರ ರಕ್ತದ ಪ್ರವಾಹದಲ್ಲಿ ಮಿಂದ ಬಳಿಕವೇ ಪರಶುರಾಮನ ಕೋಪ ಶಾಂತವಾದದ್ದು. ತಿರುಕ್ಕಣ್ಣಂಗುಡಿಯಲ್ಲಿ ~~ನೆಲಸಿರುವ~~ ಆ ಸ್ವಾಮಿಯು ಪರಮ ಸೌಮ್ಯ ಮೂರ್ತಿಯಾಗಿ ನೆಲಸಿದ್ದಾನೆ. ನಾವು ಅವನನ್ನು ಆಶ್ರಯಿಸಿ ಉಜ್ಜೀವನಗೊಳ್ಳೋಣ

7. வானுளாரவரை வலிமையால் நலியும்
மறிகடலிலங்கையார் கோன்,
பானுநேர் சரத்தால் பனங்கனி போலப்
பருமுடி யுதிர வில் வளைத்தோன்,

கானுலா மயிலின் கணங்கள் நின்றாடக்
கணமுகில் முரசநின்றதிர,
தேனுலாவரிவண்டின்னிசை முரலும்
திருக்கண்ணங்குடியுள் நின்றானே.

ವಾನುಳ್ಳಾರವರೈ ವಲಿಮೈಯಾಲ್ ನಲಿಯುಮ
ಮರಿಕಡಲಿಲಙ್ಗೈಯಾರ್ ಕೋನೈ,
ಪಾನುನೇರ್ ಶರತ್ತಾಲ್ ಪನಙ್ಗನಿ ಪೋಲ
ಪ್ಪರುಮುಡಿಯುದಿರ ವಿಲ್ ವಳೈತ್ತೋನ್,
ಕಾನುಲಾ ಮಯಿಲಿನ್ ಕಣಙ್ಗಳ್ ನಿನ್ರಾಡ
ಕ್ಕಣಮುಹಿಲ್ ಮುರಶನಿನ್ರದಿರ,
ತೇನುಲಾ ವರಿವಣ್ಡಿನ್ನಿಶೈ ಮುರಲುಮ
ತಿರುಕ್ಕಣ್ಣಙ್ಗುಡಿಯುಳ್ ನಿನ್ರಾನೇ.

ವಾನುಳ್ಳಾರ್ ಅವರೈ வானுளார் அவரை = (ಸ್ವರ್ಗದ) ಮೇಲಣ ಲೋಕಗಳಲ್ಲಿರುವವರನ್ನು, ವಲಿಮೈಯಾಲ್ வலிமையால் = ತನ್ನ ಬಲಪರಾಕ್ರಮಗಳಿಂದ, ನಲಿಯುಮ நலியும் = ಹಿಂಸೆಮಾಡುವ, ಮರಿಕಡಲ್ மறி கடல் = ಅಲೆಗಳಿಂದ ತುಂಬಿದ ಕಡಲಿನಿಂದ ಸುತ್ತುವರಿದಿರುವ, ಇಲಙ್ಗೈಯಾರ್ இலங்கையார் = ಲಂಕೆಯ ಜನರ, ಕೋನೈ கோனை = ರಾಜನನ್ನು, ಪಾನು பானு = ಸೂರ್ಯನಂತೆ, ನೇರ್ நேர் = ನೇರವಾದ, ಶರತ್ತಾಲ್ சரத்தால் = ಬಾಣಗಳಿಂದ, ಪನಮ್ ಕನಿ ಪೋಲ பனம் கனி போல = ತಾಳೆಯಹಣ್ಣಿನ ಹಾಗೆ, ಪರು பரு = ಹರಡಿಕೊಂಡಿರುವ, ಮುಡಿ முடி = ತಲೆಗಳು, ಉದಿರ உதிர = ಉದುರಿ ಹೋಗುವಂತೆ, ವಿಲ್ ವಳೈತ್ತೋನ್ வில் வளைத்தோன் = ಬಿಲ್ಲನ್ನು ಬಗ್ಗಿಸಿದವನು (ಭಗವಂತನು), ಕಾನ್ கான் = ಕಾಡಿನಲ್ಲಿ, ಉಲಾ உலா = ಅಲೆದಾಡುವ, ಮಯಿಲಿನ್ மயிலின் = ನವಿಲಿನ, ಕಣಙ್ಗಳ್ கணங்கள் = ಗುಂಪುಗಳು, ನಿನ್ರು ಆಡ நின்று ஆட = ನಿಂತು ಕುಣಿದಾಡುವಂತೆ, ಕಣಮುಹಿಲ್ கணம் முகில் = ದಟ್ಟವಾದ ಮುಗಿಲು, ನಿನ್ರು நின்று = ನಿಂತು, ಮುರಶು முரசு = ಮುರಜು ವಾದ್ಯದಂತೆ, ಅದಿರ அதிர = ಘರ್ಜಿಸುವ, ತೇನ್ தேன் = ಜೇನಿಗಾಗಿ, ಉಲಾ உலா = ಸಂಚರಿಸುವ (ಅಲೆದಾಡುವ), ವರಿ வரி = ಸುಂದರವಾದ, ವಣ್ಡು வண்டு = ದುಂಬಿಗಳು, ಇನ್ இன் = ಮಧುರವಾದ, ಇಶೈ இசை = ಗಾನವನ್ನು, ಮುರಲುಮ முரலும் = ಹಾಡುವಂತಹ, ತಿರುಕ್ಕಣ್ಣಙ್ಗುಡಿಯುಳ್ திருக்கண்ணங்குடியுள் = ತಿರುಕ್ಕಣ್ಣಂಗುಡಿಯಲ್ಲಿ, ನಿನ್ರಾನೇ நின்றானே = ನೆಲೆಸಿರುವವನೇ.

ಸ್ವರ್ಗಾದಿ ಮೇಲಣ ಲೋಕದಲ್ಲಿರುವವರನ್ನು ಪೀಡಿಸಿ ಹಿಂಸೆಮಾಡುವ ಅಲೆಗಳಿಂದ ತುಂಬಿದ ಕಡಲಿನಿಂದ ಸುತ್ತುವರಿದಿರುವ ಲಂಕೆಯಾ ಜನರ ರಾಜನನ್ನು, ಸೂರ್ಯನಂತೆ ನೇರವಾದ ಬಾಣಗಳಿಂದ ಕೊಳ್ಳಿಯಾ ದಕ್ಷಿನದಾಕೆ ಹರಡಿಕೊಂಡಿರುವ ತಲೆಗಳು ಉದುರಿಹೋಗುವಂತೆ ಬಿಲ್ಲನ್ನು ಬಗ್ಗಿಸಿದವನು (ಭಗವಂತನು), ಕಾಡಿನಲ್ಲಿ ಅಲೆದಾಡುವ ನವಿಲಿನ ಕಂಠಗಳು ನಿಂತು ಕುಣಿಯುತ್ತಿರುವಂಥ ದಟ್ಟವಾದ ಮುಗಿಲು ನಿಂತು ಮುರಜುವಾದ್ಯದಂತೆ ಘರ್ಜಿಸುವಂಥ, ಜೇನಿಗಾಗಿ ಅಲೆದಾಡುವ ಸುಂದರವಾದ ದುಂಬಿಗಳು ಮಧುರವಾಗಿ ಗಾನ ಮಾಡುತ್ತಿರುವಂಥ ತಿರುಕ್ಕಣ್ಣಂಗುಡಿಯಲ್ಲಿ ನೆಲಸಿರುವವನೇ. (7)

ಆಳ್ವಾರರು ಹೇಳುತ್ತಾರೆ: ತಿರುಕ್ಕಣ್ಣಂಗುಡಿ ಕ್ಷೇತ್ರದಲ್ಲಿ ನೆಲಸಿರುವ ಸ್ವಾಮಿಗೆ ಪ್ರಕೃತಿಯು ತನ್ನ ಸೇವೆಯನ್ನು ಸಲ್ಲಿಸುತ್ತದೆ. ಜೇನಿಗಾಗಿ ಮರದಿಂದ ಮರಕ್ಕೆ ಗಿಡದಿಂದ ಗಿಡಕ್ಕೆ ಬಳ್ಳಿಯಿಂದ ಬಳ್ಳಿಗೆ ಅಲೆದಾಡುವ ಸುಂದರವಾದ ದುಂಬಿಗಳು ಅಲ್ಲಿ ಆನಂದದಿಂದ ಇಂಪಾಗಿ ಗಾನ ಮಾಡುತ್ತವೆ. ಕಡಲಿನಿಂದ ಮೇಲೆದ್ದ ಮೋಡಗಳು ದಟ್ಟವಾಗಿ ಕ್ಷೇತ್ರದ ಮೇಲೆ ಸ್ವಲ್ಪ ಕಾಲ ತಂಗಿರುತ್ತವೆ. ದುಂಬಿಯ ಗಾನಕ್ಕೆ ತಾಳವೋ ಎಂಬಂತೆ ಆಗಾಗ ಗುಡುಗುತ್ತದೆ. ಅದು ಮುರಜು ವಾದ್ಯದ ಘೋಷದಂತೆ ಹಿತವಾಗಿ ತೋರುತ್ತದೆ. ಕಾಡಿನಲ್ಲಿ ಅಲೆದಾಡುವ ನವಿಲುಗಳು ತಂಡ ತಂಡವಾಗಿ, ಅಲ್ಲಿ ನಿಂತು, ದುಂಬಿಯ ಗಾನಕ್ಕೂ, ಮುಗಿಲಿನ ಘರ್ಜನೆಗೆ ತಕ್ಕಂತೆ ನೃತ್ಯ ಮರೆತು ಕುಣಿಯುತ್ತವೆ. ಇಂಥ ರಮ್ಯವಾದ ಕ್ಷೇತ್ರ ಅದು. ಹಿಂದೆ, ಲಂಕೆಯ ರಾಜನಾದ ರಾವಣಾಸುರನು ತನ್ನ ಬಲಪರಾಕ್ರಮಗಳಿಂದ ಸ್ವರ್ಗಾದಿ ಮೇಲಣ ಲೋಕಗಳಲ್ಲಿ ನೆಲಸಿರುವ ದೇವತೆಗಳನ್ನು ಪೀಡಿಸಿ, ಹಿಂಸೆ ಮಾಡುತ್ತಿದ್ದನು. ಅವರು ಭಗವಂತನಲ್ಲಿ ಈ ಹಿಂಸೆಯನ್ನು ತಪ್ಪಿಸೆಂದು ಮೊರೆಯಿಟ್ಟರು. ಭಗವಂತನು ಶ್ರೀರಾಮನಾಗಿ ಅವತರಿಸಿದನು. ಅಲೆಗಳಿಂದ ಸುತ್ತುವರಿದಿರುವ ಕಡಲನ್ನು ದಾಟಿ, ಲಂಕೆಯನ್ನು ಪ್ರವೇಶಿಸಿದನು. ಯುದ್ಧರಂಗದಲ್ಲಿ ರಾವಣನನ್ನೆದುರಿಸಿ, ತೀಕ್ಷ್ಣವಾದ ಮತ್ತು ನೇರವಾದ ಸೂರ್ಯನ ಕಿರಣಗಳಂತೆ ತನ್ನ ಕೋದಂಡದಿಂದ ಬಾಣಗಳನ್ನು ಪ್ರಯೋಗಿಸಿ, ಹರಡಿಕೊಂಡಿರುವ ರಾವಣನ ತಲೆಗಳನ್ನು ನೆಲಕ್ಕೆ ಉರುಳಿಸಿದನು. ಆ ಸ್ವಾಮಿಯನ್ನು ನಾವು ಆಶ್ರಯಿಸೋಣ ಮತ್ತು ಉಜ್ಜೀವನಗೊಳ್ಳೋಣ

8 அரவுநீள் கொடியோனவையுளாசனத்தை
அஞ்சிடாதேயிட, அதற்குப்
பெரிய மாமேனியண்டமூடுருவப்
பெருந்திசையடங்கிட நிமிர்ந்தோன்,
வரையின் மாமணியும் மரகதத்திரளும்
வயிரமும் வெதிருதிர் முத்தும்,
திரைகொணர்ந்துந்தி வயல்தொறும் குவிக்கும்
திருக்கண்ணங்குடியுள் நின்றானே.

ಅರವುನೀಳ್ ಕೊಡಿಯೋನವೈಯುಳಾಸನತ್ತೈ
ಅಂಜಿಡಾದೇಯಿಡ, ಅದಱ್ಕು

ಪ್ಪೆರಿಯ ಮಾಮೇನಿ ಯಣ್ಡಮೂಡುರುವ
ಪ್ಪೆರುನ್ದಿಶೈ ಯಡಙ್ಗಿಡ ನಿಮಿರ್ನ್ದೋನ್,
ವರೈಯಿನ್ ಮಾ ಮಣಿಯುಮ್ ಮರಕದತ್ತಿರಳುಮ್
ವಯಿರಮುಮ್ ವೆದಿರುದಿರ್ ಮುತ್ತುಮ್,
ಕರೈಕೊಣರ್ನ್ದುನ್ದಿ ವಯಲ್ ತೊಱುಮ್ ಕುವಿಕ್ಕುಮ್
ತಿರುಕ್ಕಣ್ಣಙ್ಗುಡಿಯುಳ್ ನಿನ್ಱಾನೇ.

ಅರವು அரவு = ಸರ್ಪದ, ನೀಳ್ಕೊಡಿಯೋನ್ நீள் கொடி-யோன் = ಉದ್ದನಾದ ಧ್ವಜವನ್ನುಳ್ಳವನು, ಅವೈಯುಳ್ அவையுள் = ಸಭೆಯಲ್ಲಿ, ಆಸನತ್ತೈ ஆசனத்தை = ಆಸನವನ್ನು, ಅಂಜಿಡಾದೆ அஞ்சிடாதே = ಹೆದರಿಕೆಯನ್ನು ಕೊಳದೆ (ಭಯಪಡದೆ), ಇಡ இட = ಕೊಡಲು, ಅದನಾಲ್ அதனால் = ಅದಕ್ಕಾಗಿ, ಪೆರಿಯ ಮಾಮೇನಿ பெரிய மா மேனி = ಬಲು ದೊಡ್ಡದಾದ ದೇಹವನ್ನು ~~[illegible]~~ = ಬೆಳೆಸಿ, ಅಣ್ಡಮ್ அண்டம் = ಬ್ರಹ್ಮಾಂಡವನ್ನು, ಊಡುರುವ ஊடுருவ = ಭೇದಿಸಿಕೊಳ್ಳುವಂತೆಯೂ, ಪೆರುದಿಶೈ பெருந்திசை = ದೊಡ್ಡ ದಿಕ್ಕುಗಳೆಲ್ಲ, ಅಡಙ್ಗಿಡ அடங்கிட = ತನ್ನಲ್ಲಿ ಅಡಗಿಹೋಗುವಂತೆಯೂ, ನಿಮಿರ್ನ್ದೋನ್ நிமிர்ந்தோன் = ಬೆಳೆದವನು (ಭಗವಂತನು), ವರೈಯಿನ್ வரையின் = ಬೆಟ್ಟದಿಂದ, ಮಾ ಮಣಿಯುಮ್ மா மணியும் = ಮಹಾ ರತ್ನಗಳನ್ನೂ, ಮರಕದತ್ತಿರಳುಮ್ மரகதம் திரளும் = ಮರಕತರತ್ನಗಳ ರಾಶಿಯನ್ನು, ವಯಿರಮುಮ್ வயிரமும் = ವಜ್ರಗಳನ್ನು, ವೆದಿರ್ வெதிர் = ~~[illegible]~~ ಬಿದಿರಿನಿಂದ, ಉದಿರ್ உதிர் = ಉದುರುವ, ಮುತ್ತುಮ್ முத்தும் = ಮುತ್ತುಗಳನ್ನು, ಕರೈ கரை = ಅಲೆಗಳು, ಕೊಣರ್ನ್ದು கொணர்ந்து = ತಂದು, ಉನ್ದಿ உந்தி = ದಡಕ್ಕೆ ತಳ್ಳಿ, ವಯಲ್ ತೊಱುಮ್ வயல்-தொறும் = ಬಯಲು (ಗದ್ದೆ ಬಯಲು) ಗಳಲ್ಲೆಲ್ಲಾ, ಕುವಿಕ್ಕುಮ್ குவிக்கும் = ರಾಶಿಗಳನ್ನು ಮಾಡುವ, ತಿರುಕ್ಕಣ್ಣಙ್ಗುಡಿಯುಳ್ திருக்கண்ணங்குடியுள் = ತಿರುಕ್ಕಣ್ಣಂಗುಡಿಯಲ್ಲಿ, ನಿನ್ಱಾನೇ நின்றானே = ನೆಲಸಿರುವವನೇ.

ಸರ್ಪದ ಉದ್ದನಾದ ಧ್ವಜವನ್ನುಳ್ಳವನು ಸಭೆಯಲ್ಲಿ ಆಸನವನ್ನು ಭಯಪಡದೆ ಕೊಡಲು, ಅದಕ್ಕಾಗಿ ಬಲುದೊಡ್ಡದಾಗಿ ದೇಹವನ್ನು ಬೆಳೆಸಿ, ಬ್ರಹ್ಮಾಂಡವನ್ನು ಭೇದಿಸಿಕೊಳ್ಳುವಂತೆಯೂ, ದೊಡ್ಡ ದಿಕ್ಕುಗಳೆಲ್ಲ ತನ್ನಲ್ಲಿ ಅಡಗಿಹೋಗುವಂತೆಯೂ ಬೆಳೆದವನು (ಭಗವಂತನು), ಬೆಟ್ಟದಿಂದ ಮಹಾರತ್ನಗಳನ್ನೂ ಮರಕತರತ್ನಗಳ ರಾಶಿಯನ್ನೂ, ಬಿದಿರಿನಿಂದ ಉದುರಿದ ಮುತ್ತುಗಳನ್ನೂ, ವಜ್ರಗಳನ್ನೂ ಅಲೆಗಳು ತಂದು ದಡಕ್ಕೆ ತಳ್ಳಿ ಗದ್ದೆ ಬಯಲುಗಳಲ್ಲೆಲ್ಲಾ ರಾಶಿಗಳನ್ನು ಮಾಡುವ ತಿರುಕ್ಕಣ್ಣಂಗುಡಿಯಲ್ಲಿ ನೆಲಸಿರುವವನೇ. (8)

ಆಳ್ವಾರರು ಹೇಳುತ್ತಾರೆ: ತಿರುಕ್ಕಣ್ಣಂಗುಡಿ ಕ್ಷೇತ್ರವು ~~[illegible]~~ ಸಂಪತ್ಸಮೃದ್ಧ

ಪಾದದ್ದು ಸಹ್ಯಾದ್ರಿ ಬೆಟ್ಟಗಳಲ್ಲಿರುವ ಬೆಳ್ಳಿಯ ವಜ್ರಗಳನ್ನೂ ರತ್ನಗಳನ್ನೂ
ಅಲ್ಲಿ ಬೆಳೆದ ಬಿದಿರಿನ ಮೆಳೆಗಳಿಂದ ಒಡೆದು ಚೆಲ್ಲುವ (ಚೆದರುವ) ಮುತ್ತು
ಗಳನ್ನೂ, ಆ ಪ್ರದೇಶದಲ್ಲಿ ಹರಿಯುವ ಕಾವೇರಿ ನದಿಯು ತನ್ನ ಪ್ರವಾಹದ
ಮೂಲಕ ತಳ್ಳಿಕೊಂಡು ಬಂದು, ತಿರುಕಣ್ಣಂಗುಡಿಯ ವಿಸ್ತಾರವಾದ ಗದ್ದೆ
ಬಯಲುಗಳಲ್ಲೆಲ್ಲಾ ರಾಶಿ ಹಾಕುತ್ತದೆ. ಇದೇನು ಅಲ್ಲಿ ನೆಲಸಿರುವ ಭಗ
ವಂತನಿಗೆ ಪ್ರಕೃತಿಯು ಸಲ್ಲಿಸುವ ಸೇವೆಯೋ? ಆ ಸ್ವಾಮಿಯು ಸರ್ವಜ್ಞ
ಮತ್ತು ಸರ್ವಶಕ್ತ. ಹಿಂದೆ, ಅವನೇ ಶ್ರೀಕೃಷ್ಣನಾಗಿ ಅವತರಿಸಿ ಪಾಂಡವರ
ಪರವಾಗಿ ರಾಜದೌತ್ಯ ನಡೆಸಿದನು. ~~ದೌತ್ಯ~~ ದೌತ್ಯಕಾರ್ಯಕ್ಕಾಗಿ ಕೃಷ್ಣ
ನು ಹಸ್ತಿನಾಪುರಕ್ಕೆ ಬರುವನೆಂಬ ವಿಷಯ ದುರ್ಯೋಧನನ ಕಿವಿ ಮುಟ್ಟಿತು.
ಕೂಡಲೇ ಅವನಿಗೆ ಹೊಳೆಯಿತು ಕೃಷ್ಣನನ್ನು ಕೊಂದುಬಿಟ್ಟರೆ ಪಾಂಡವರಿಗೆ
ಸರ್ವನಾಶವಾಗುವುದು ಎಂದು. ದುರ್ಯೋಧನನು ತನ್ನ ಸಭಾಭವನದ
(ಮುಂಬಾಗ) ಕೆಳಗೆ ವಿಸ್ತಾರವಾದ ನೆಲಮಾಳಿಗೆಯನ್ನು ಕಟ್ಟಿಸಿದನು. ಮೇಲುಗಡೆ
ಅಲ್ಲಿ ಅನೇಕ ಮಂದಿ ನುರಿತ ಮಲ್ಲರನ್ನು ಸಜ್ಜುಗೊಳಿಸಿದನು. ಮೇಲುಗಡೆ ಬಳ್ಳಿಯ
ಬಿದಿರಿನ ಚಾಪೆಯಿಂದ ಮುಚ್ಚಿ, ಅದನ್ನು ಅಲಂಕರಿಸಿ, ಅಲ್ಲಿಗೆ ಬಂದ ಕೂಡಲೇ, ಕಪಟ
ಆಸನವನ್ನು ನಿರ್ಮಿಸಿದನು. ಕೃಷ್ಣನು ~~ಅ~~ ಅಲ್ಲಿಗೆ ಬಂದ ಕೂಡಲೇ, ಅವನನ್ನು ಕರೆದೊಯ್ದು,
ಮರ್ಯಾದೆಯನ್ನೂ ಆದರವನ್ನೂ ತೋರಿಸಿ, ಅವನನ್ನು ಕುಳ್ಳಿರಿಸಿ
ಹಾವಭಾವವನ್ನು ಮರೆತು, ಸಿದ್ಧವಾದ ಆಸನದಲ್ಲಿ ಅವನನ್ನು ಕುಳ್ಳಿರಿಸಿ
ದನು. ಒಡನೆಯೇ, ಆಸನದೊಡನೆ ಕೃಷ್ಣನು ನೆಲಮಾಳಿಗೆಯೊಳಕ್ಕೆ
ಕುಸಿದನು. ಅಲ್ಲಿ ಕಾದಿದ್ದ ಜಟ್ಟಿಗಳು ಅವನನ್ನು ಮುತ್ತಿದರು. ಆಗ
ಕೃಷ್ಣನು ವಿಶ್ವರೂಪವನ್ನು ತಳೆದು, ಎಲ್ಲ ಜಟ್ಟಿಗಳನ್ನೂ ಕ್ಷಣಮಾತ್ರದಲ್ಲಿ
ನಾಶಮಾಡಿಬಿಟ್ಟನು. ಇಲ್ಲಿಯ ಕಥೆ ಇದು.

9. பண்ணிய பாரம் பார்மகட்கொழியப்
பாரத மாபெரும் போரில்,
மன்னர்கள் மடிய மணிநெடுந்திண்தேர்
மைத்துனற்குய்த்த மாமாயன்,
துன்னு மாதவியும் சுரபுன்னைப் பொழிலும்
சூழ்ந்தெழு செண்பக மலர்வாய்,
தென்னவென்றளிகள் முரன்றிசை பாடும்
திருக்கண்ணங்குடியுள் நின்றானே.

ಪಣ್ಣಿಯ ಪಾರಮ್ ಪಾರ್ ಮಗಟ್ಕೊೞಿಯ
ಪಾರತ ಮಾ ಪೆರುಮ್ ಪೋರಿಲ್,
ಮನ್ನರ್‌ಗಳ್ ಮಡಿಯ ಮಣಿನೆಡುನ್ದಿಣ್ ದೇರ್
ಮೈತ್ತುನರ್ಕುಯ್‌ತ್ತ ಮಾಮಾಯನ್,
ತುನ್ನು ಮಾದವಿಯುಮ್ ಶುರಪುನ್ನೈಪ್ಪೊೞಿಲುಮ್
ಶೂೞ್ನ್ದೆೞು ಶೆಣ್ಬಗ ಮಲರ್ ವಾಯ್,
ತೆನ್ನವೆನ್ರಳಿಗಳ್ ಮುರನ್ರಿಶೈ ಪಾಡುಮ್
ತಿರುಕ್ಕಣ್ಣಙ್ಗುಡಿಯುಳ್ ನಿನ್ರಾನೇ.

GaraniSrinivasan

ಪನ್ನಿಯ பன்னிய = ಒತ್ತಾಗಿ ಬೆಳೆದು ಬಂದ, ಪಾರಮ್ பாரம் = ಭಾರವನ್ನು, ಪಾರ್ ಮಗಳ್ಕು பார்மகட்கு = ಭೂದೇವಿಗೆ, ಒಳಿಯ ஒழிய = ನೀಗಿಸಲು, ಪಾರದಮ್ பாரதம் = ಭಾರತದ, ಮಾ ಪೆರು மா பெரு = ಬಹುದೊಡ್ಡ, ಪೋರಿಲ್ போரில் = ಯುದ್ಧದಲ್ಲಿ, ಮನ್ನರ್‌ಗಳ್ மன்னர்கள் = ರಾಜರುಗಳು, ಮಡಿಯ மடிய = ಸಾಯುವಂತೆ, ಮಣಿ மணி = ರತ್ನಖಚಿತವಾದ, ನೆಡು நெடு = ದೊಡ್ಡದಾದ, ತಿಣ್ திண் = ಶಕ್ತಿಪೂರ್ಣವಾದ, ತೇರ್ தேர் = ರಥವನ್ನು, ಮೈತ್ತುನನ್ಮಾರ್ಕು மைத்துனன்மார்க்கு = ಮೈದುನನಾದವನಿಗೆ, ಉಯ್‌ತ್ತ உய்த்த = ನಡೆಸಿದವನಾದ, ಮಾ ಮಾಯನ್ மா மாயன் = ಮಹಾ ಆಶ್ಚರ್ಯಕಾರಿಯನ್ನು, ತುನ್ನು துன்னு = ಒತ್ತಾಗಿ ಬೆಳೆದಿರುವ, ಮಾದವಿಯುಮ್ மாதவியும் ಮಾಧವೀಲತೆಯೂ, ಶುರಪುನ್ನೈ சுரபுன்னை = ಸುರಹೊನ್ನೆಯೂ, ಇರುವ, ಪೊಳಿಲುಮ್ பொழிலும் = ತೋಪುಗಳು, ಸೂಳ್ನ್ದು சூழ்ந்து = ಸುತ್ತುವರಿದು, ಎಳು எழு = ಅಭಿವೃದ್ಧಿ ಹೊಂದುತ್ತಿರುವ, ಶೆಣ್ಬಗ ಮಲರ್ ವಾಯ್ செண்பக மலர் வாய் = ಸಂಪಿಗೆಯ ಹೂಗಳಲ್ಲಿ, ತೆನ್ನ ಎನ್ನು தென்ன என்று = ತೆನ್ ತೆನ್ ಎಂದು, ಅಳಿಗಳ್ அளிகள் = ದುಂಬಿಗಳು, ಮುರಲುಮ್ முரலும் = ಶಬ್ದ ಮಾಡುತ್ತಾ, (~~[illegible]~~), ಇಶೈ ಪಾಡುಮ್ இசை பாடும் = ಗಾನ ಮಾಡುವ, ತಿರುಕ್ಕಣ್ಣಂಗುಡಿಯುಳ್ திருக்கண்ணங்குடியுள் = ತಿರುಕ್ಕಣ್ಣಂಗುಡಿಯಲ್ಲಿ, ನಿನ್ರಾನೇ நின்றானே = ನೆಲಸಿರುವವನೇ.

ಒತ್ತಾಗಿ ಬೆಳೆದಿರುವ ಭಾರವನ್ನು ಭೂದೇವಿಗೆ ನೀಗಿಸುವುದಕ್ಕಾಗಿ ಭಾರತದ ಬಲು ದೊಡ್ಡ ಯುದ್ಧದಲ್ಲಿ ರಾಜರುಗಳು ಮಡಿಯುವಂತೆ ರತ್ನಖಚಿತವಾದ ದೊಡ್ಡದಾದ ಶಕ್ತಿಪೂರ್ಣವಾದ ರಥವನ್ನು ಮೈದುನನಾದವನಿಗೆ ನಡೆಸಿದ ಮಹಾ ಆಶ್ಚರ್ಯಕಾರಿಯು, ಒತ್ತಾಗಿ ಬೆಳೆದಿರುವ ಮಾಧವೀಲತೆಯೂ, ಸುರಹೊನ್ನೆಯೂ ಇರುವ ತೋಪುಗಳು ಸುತ್ತುವರಿದು ಅಭಿವೃದ್ಧಿ ಹೊಂದುತ್ತಿರುವ ಸಂಪಿಗೆಯ ಹೂಗಳಲ್ಲಿ ತೆನ್ ತೆನ್ ಎಂದು ಶಬ್ದ ಮಾಡುತ್ತಾ ದುಂಬಿಗಳು ಗಾನ ಮಾಡುವ ತಿರುಕ್ಕಣ್ಣಂಗುಡಿಯಲ್ಲಿ ನೆಲಸಿರುವವನೇ. (9)

ಆಚಾರ್ಯರು ಹೇಳುತ್ತಾರೆ: ತಿರುಕ್ಕಣ್ಣಂಗುಡಿ ಕ್ಷೇತ್ರವು ಸೊಗಸಾಗಿ ಬೆಳೆದು ನಿಂತಿರುವ ಸಂಪಿಗೆ ಮರಗಳೂ, ಸುರಹೊನ್ನೆ ಮರಗಳೂ ಮಾಧವೀ ಲತೆಗಳೂ ತುಂಬಿರುವ ತೋಪುಗಳಿಂದ ಸುತ್ತುವರಿದಿದೆ. ಅವುಗಳ ತುಂಬ ಅರಳಿ ಪರಿಮಳಿಸುವ ಹೂಗಳಲ್ಲಿ ಮಧುವನ್ನು ಹೀರುತ್ತಾ ದುಂಬಿಗಳು ತೆನ್ ತೆನ್ ಎಂದು ಗಾನ ಮಾಡುತ್ತಿರುತ್ತವೆ. ಮಧುರವಾದ ಆ ಕ್ಷೇತ್ರದಲ್ಲಿ ಭಗವಂತನು ನೆಲಸಿದ್ದಾನೆ. ಆ ಸ್ವಾಮಿಯೇ, ಹಿಂದೆ, ಶ್ರೀಕೃಷ್ಣನಾಗಿ ಅವತರಿಸಿದವನು. ಭೂಭಾರವು ಮಿತಿಮೀರಿ ಹೋದ ಕಾಲವದು. ಆಗ ಕೌರವ ಪಾಂಡವರ ನಡುವೆ ಸಂಭವಿಸಿತು. ಮಹಾಭಾರತ ಯುದ್ಧವು ಕೌರವರ, ಅವರ ಅಧೀನರಾದ ಸೈನಿಕರ, ಅವರ ಬೆಂಬಲಿಗರಾದ ಅನೇಕ ರಾಜರ ಬಲವೂ ನಾಶವಾಯಿತು. ಭಗವಂತನು ಪಾಂಡವರಲ್ಲಿ ನಡುವಣವನಾದ ತನ್ನ ಮೈದುನನೂ ಆದ ಅರ್ಜುನನಿಗೆ ಸಾರಥಿಯಾಗಿ, ದಿವ್ಯವಾದ ಅವನ ರಥವನ್ನು ನಡೆಸಿ, ಅರ್ಜುನನಿಗೂ ಪಾಂಡವರಿಗೂ ಜಯವನ್ನು ಗಳಿಸಿಕೊಟ್ಟನು. ಅಲ್ಲದೆ, ಭೂಮಿಯಲ್ಲಿ ಅಪರಿಮಿತವಾಗಿ ಹೆಚ್ಚಿಕೊಂಡಿದ್ದ ಭಾರವನ್ನು ಇಳಿಸಿದನು. ಭಗವಂತನು ಅತ್ಯಾಶ್ಚರ್ಯಕಾರಿ! ಅವನನ್ನು ಆಶ್ರಯಿಸಿ, ನಾವು ಉದ್ಧಾರಗೊಳ್ಳೋಣ.

10. கலையுலாவல்குல் காரிகை திறத்துக்
கடற்பெரும் படையொடுஞ்சென்று,
சிலையினாலிலங்கை தீயெழச்செற்ற
திருக்கண்ணங்குடியுள் நின்றானை,
மலைகுலா மாட மங்கையர் தலைவன்
மானவேல் கலியன் வாயொலிகள்,
உலவுசொல் மாலை யொன்பதோடொன்றும்
வல்லார்க்கில்லை நல்குரவே

ಕಲೈಯುಲಾ ವಲ್ಕುಲ್ ಕಾರಿಗೈ ತಿರತ್ತು
ಕ್ಕಡಲ್ ಪೆರುಮ್ ಪಡೈಯೊಡುಂ ಶೆನ್ರು,
ಶಿಲೈಯಿನಾಲ್ ಇಲಙ್ಗೈ ತೀಯೆೞ ಚ್ಚೆತ್ರ
ತಿರುಕ್ಕಣ್ಣಙ್ಗುಡಿಯುಳ್ ನಿನ್ರಾನೈ,
ಮಲೈ ಕುಲಾ ಮಾಡ ಮಙ್ಗೈಯರ್ ತಲೈವನ್
ಮಾನವೇಲ್ ಕಲಿಯನ್ ವಾಯೊಲಿಗಳ್,
ಉಲವು ಶೊಲ್ ಮಾಲೈ ಯೊನ್ಬದೋಡೊನ್ರುಮ್
ವಲ್ಲಾರ್ಕ್ಕಿಲ್ಲೈ ನಲ್ ಕುರವೇ.

ಕಲೈ கலை = ಶೃಂಗಾರವಾಗಿ, ಉಲಾ உலா = ಅಲುಗುವ, ಅಲ್ಕುಲ್ அல்
குல் = ನಡುವನ್ನುಳ್ಳ, ಕಾರಿಗೈ காரிகை = ಸುಂದರಿಯ, ತಿರತ್ತು தி
றத்து = ಕಾರಣವಾಗಿ, ಕಡಲ್ கடல் = ಸಮುದ್ರದಂತೆ, ಪೆರು பெரு =
ದೊಡ್ಡದಾದ, ಪಡೈಯೊಡು படையொடு = ಸೇನೆಯೊಡನೆ, ಶೆನ್ರು சென
ன்று = ಹೋಗಿ, ಶಿಲೈಯಿನಾಲ್ சிலையினால் = ಬಿಲ್ಲಿನಿಂದ, ಇಲಙ್ಗೈ
இலங்கை = ಲಂಕೆಯು, ತೀ ಎೞ தீ எழ = ಬೆಂಕಿ ಬಿದ್ದು ಉರಿಯುವಂತೆ,
ಶೆತ್ರ செற்ற = ನಾಶಪಡಿಸಿದವನೂ (ಕೊಂದು ಹಾಕಿದವನು), ತಿರುಕ್ಕಣ್ಣ
ಙ್ಗುಡಿಯುಳ್ திருக்கண்ணங்குடியுள் = ತಿರುಕ್ಕಣ್ಣಂಗುಡಿಯಲ್ಲಿ.
ನಿನ್ರಾನೈ நின்றானை = ನೆಲಸಿರುವವನೂ ಆದವನನ್ನು (ಭಗವಂತನನ್ನು)
ಕಳಶ, ಮಲೈ மலை = ಬೆಟ್ಟದಂತೆ, ಕುಲಾ ಮಾಡಮ್ குலா மாடம் = ಉನ್ನತವಾದ
ಉಪ್ಪರಿಗೆ ಮನೆಗಳುಳ್ಳ, ಮಙ್ಗೈಯರ್ மங்கையர் = ತಿರುಮಂಗೈ ಜನ
ರ, ತಲೈವನ್ தலைவன் = ಒಡೆಯನಾದ, ಮಾನಮ್ ವೇಲ್ மானம்
வேல் = ಹೋರಾಟಕ್ಕೆ ಯೋಗ್ಯವಾದಂಥ ವೇಲಾಯುಧವನ್ನುಳ್ಳ, ಕಲಿಯನ್
கலியன் = ಕಲಿಯನ, ವಾಯ್ ಒಲಿಗಳ್ வாய் ஒலிகள் = ಬಾಯಿ
ಮಾತುಗಳು, ಉಲವು உலவு = ಹರಡುತ್ತ, ಶೊಲ್ சொல் = ಹೇಳುವಂಥ,
ಮಾಲೈ ಒನ್ಬದೋಡೊನ್ರುಮ್ மாலை ஒன்பதோடொன்றும் =
ಪಾಶುರಮಾಲೆಯಾದ ಹತ್ತನ್ನೂ, ವಲ್ಲಾರ್ಕ್ಕು வல்லார்க்கு = ಬಲ್ಲವರಿಗೆ,
ಇಲ್ಲೈ ನಲ್ ಕುರವೇ இல்லை நல்குரவே = ಒಳ್ಳೆಯ ಕೊರತೆಗಳಿಲ್ಲ

ಇಲ್ಲಿ:
ಶೃಂಗಾರವಾಗಿ ಅಲುಗುವ ನಡುವನ್ನುಳ್ಳ ಸುಂದರಿಯ ಕಾರಣವಾಗಿ

ಸಮುದ್ರದಂತೆ ದೊಡ್ಡ ಸೇನೆಯೊಡನೆ ಹೋಗಿ ಬಿಲ್ಲಿನಿಂದ ಲಂಕೆಯು ಬೆಂಕಿ
ತಗುಲಿ ಉರಿಯುವಂತೆ ಹಾಳು ಮಾಡಿದವನೂ, ತಿರುಕ್ಕಣ್ಣಂಗುಡಿಯಲ್ಲಿ ನೆಲಸಿ
ರುವವನೂ ಆದವನನ್ನು (ಭಗವಂತನನ್ನು) ಕುರಿತು ಬರೆದಂಥ ಉನ್ನತವಾದ
ಉಪ್ಪರಿಗೆ ಮನೆಗಳುಳ್ಳ ತಿರುಮಂಗೈ ಜನರ ಒಡೆಯನಾದ, ಹೋಲಿಸತಕ್ಕ
ವೇಲಾಯುಧವನ್ನು ಧರಿಸಿದ ಕಲಿಯನ (ತಿರುಮಂಗೈ ಆಳ್ವಾರರ) ಬಾಯಿ
ಯಿಂದ ಹೊರಬಿದ್ದ, ಎಲ್ಲರೂ ಹರಡುವಂಥ ಮಾತುಗಳಾದ ಹತ್ತು
ಪಾಶುರಗಳ ಮಾಲೆಯನ್ನು ಬಲ್ಲವರಿಗೆ ಯಾವ ಒಳ್ಳೆಯ ತೊಂದರೆಗಳೂ (10)
ಇಲ್ಲ.

ಇದು ಈ ತಿರುಮೊಳಿಯ ಕಡೆಯ ಪಾಶುರ. ಭಗವಂತನು ಶ್ರೀರಾಮನಾಗಿ ಅವತರಿಸಿ, ತನ್ನ ಧರ್ಮಪತ್ನಿಯೂ ಪರಮಪಾವನೆಯೂ ~~ಯಾದ ಸೀತಾದೇವಿಯ~~ ಆದ ಸೀತಾದೇವಿಯ ನಿಮಿತ್ತವಾಗಿ, ಸಮುದ್ರದಂತೆ ಬಲು ದೊಡ್ಡ ಸೈನ್ಯದೊಡನೆ ಲಂಕೆಗೆ ದಾಳಿಯಿಟ್ಟು, ತನ್ನ ಕೋದಂಡದಿಂದಲೇ ಲಂಕೆಯನ್ನು ನಿರ್ನಾಮಗೊಳಿಸಿದನು. ಆ ಸ್ವಾಮಿಯೇ ಈಗ ತಿರುಕ್ಕಣ್ಣಂಗುಡಿಯಲ್ಲಿ ನೆಲಸಿದ್ದಾನೆ. ಆ ಸ್ವಾಮಿಯನ್ನು ಕುರಿತು ಈ ಹತ್ತು ಪಾಶುರಗಳನ್ನು ಮಂಗೈನಾಡಿನ ಜನರ ಒಡೆಯನೂ, ಅದ್ಭುತವಾದ ಗುರಿಯಿಂದ ವೇಲಾಯುಧವನ್ನು ಪ್ರಯೋಗಿಸಬಲ್ಲವನೂ ಆದ ಕಲಿಯನು ರಚಿಸಿ ಹಾಡಿದ್ದಾನೆ. ಈ ಹತ್ತನ್ನು ಚೆನ್ನಾಗಿ ಬಲ್ಲವರಿಗೆ ಯಾವ ಬಗೆಯ ತೊಂದರೆಯೂ ಇಲ್ಲದ ಸುಖಸಂತೋಷಗಳಿಂದ ತುಂಬಿದ ಇಹಜೀವನ ನಡೆಯುತ್ತದೆ. ಇದೇ ಈ ತಿರುಮೊಳಿಯ ಫಲಶ್ರುತಿ.

— o —

ಅಡಿಯನಡೆ: அடிவாரம் – ~~ಹಿಂ~~ வஜ்ர வாங்க, கமலமா
கவனம், வாத்ய வாதை, மந்நவர் மன்னவர், மயில
கவனம், பாத்ர வானவாகு, மன்னவர் மன்னவர், மயில்
மடு, பானுகூர் வானுவார், அரவு அரவு, பன்னியப் பண்
ணிய, கத்தி கூல, (ஹோன் ரபாண்)

— o —

30.9.78

ಪೆರಿಯ ತಿರುಮೊಳಿ - ಒಂಬತ್ತನೆಯ ದಶಕ - ಎರಡನೆಯ ತಿರುಮೊಳಿ.

பெரிய திருமொழி - ஒன்பதாம் பத்து - இரண்டாந் திருமொழி.

2. ಪೊನ್ನಿವರ್ ಮೇನಿ - பொன்னிவர் மேனி.

1. பொன்னிவர் மேனி மரதகத்தின்
பொங்கிளஞ் சோதி யகலத்தாரம்
மின், இவர் வாயில்நல் வேதமோதும்
வேதியர் வானவ ராவர் தோழீ,
என்னையும் நோக்கி யென்னல்குலும் நோக்கி
யேந்திளங் கொங்கையும் நோக்குகின்றார்,
அன்னையென் நோக்குமென் றஞ்சுகின்றேன்
அச்சோ வொருவ ரழகியவா.

ಪೊನ್ನಿವರ್ ಮೇನಿ ಮರಕದತ್ತಿನ್
ಪೊಙ್ಗಿಳಂಜೋದಿ ಯಗಲತ್ತಾರಮ್
ಮಿನ್, ಇವರ್ ವಾಯಿಲ್ ನಲ್ ವೇದಮೋದುಮ್
ವೇದಿಯರ್ ವಾನವರಾವರ್ ತೋಳೀ,
ಎನ್ನೈಯುಮ್ ನೋಕ್ಕಿ ಯೆನ್ನಲ್ಗುಲುಮ್ ನೋಕ್ಕಿ
ಯೇನ್ದಿಳಙ್ಕೊಙ್ಗೈಯುಮ್ ನೋಕ್ಕುಗಿನ್ಱಾರ್,
ಅನ್ನೈಯೆನ್ ನೋಕ್ಕುಮೆನ್ಱಞ್ಜುಗಿನ್ಱೇನ್
ಅಚ್ಚೋ ವೊರುವರಳಗಿಯವಾ.

ಪೊನ್ பொன் = ಚಿನ್ನ, ಇವರ್ இவர் = ಇವರ, ಮೇನಿ மேனி = ದೇಹ, ಮರಕದತ್ತಿನ್ மரதகத்தின் = ಮರಕತರತ್ನದ (ಪಚ್ಚೆಯ), ಪೊಙ್ಗು பொங்கு = ಉಕ್ಕಿ ಬರುವ, ಇಳ இள = ಹೊಸದಾದ, ಜೋದಿ சோதி = ಕಾಂತಿಯು, ಅಗಲತ್ತು அகலத்து = ಎದೆಯ, ಆರಮ್ ஆரம் = ಹಾರವು, ಮಿನ್ மின் = ಮಿಂಚಿನ (ಬಗೆ) ಹೊಳಪು, ಇವರ್ இவர் = ಇವರ, ವಾಯಿಲ್ வாயில் = ಬಾಯಿಯಿಂದ, ನಲ್ நல் = ಶ್ರೇಷ್ಠವಾದ, ವೇದಮ್ வேதம் = ವೇದವನ್ನು, ಓದುಮ್ ஓதும் = ಪಠಿಸುವ, ವೇದಿಯರ್ வேதியர் = ವೈದಿಕರು, ವಾನವರ್ ಆವಾರ್ வானவர் ஆவார் = ದೇವತೆಗಳು ಆಗುತ್ತಾರೆ, ತೋಳೀ தோழீ = ಗೆಳತೀ, ಎನ್ನೈಯುಮ್ என்னையும் = ನನ್ನನ್ನು ನೋಕ್ಕಿ நோக்கி = ನೋಡಿ, ಎನ್ என் = ನನ್ನ, ಅಲ್ಗುಲುಮ್ அல்குலும் = ನಿತಂಬಗಳನ್ನು (ಪಿರ್ರೆಗಳನ್ನು), ನೋಕ್ಕಿ நோக்கி = ನೋಡಿ, ಏನ್ದು ஏந்து = ಉಬ್ಬಿರುವ, (), ಇಳ இள = ಹೊಸದಾದ, ಕೊಙ್ಗೈಯುಮ್ கொங்கையும் = ಸ್ತನಗಳನ್ನು, ನೋಕ್ಕುಗಿನ್ಱಾರ್ நோக்குகின்றார் = ನೋಡುತ್ತಿದ್ದಾರೆ, ಅನ್ನೈ அன்னை = (ನನ್ನ) ತಾಯಿ, ಎನ್ என் = ನನ್ನನ್ನು, ನೋಕ್ಕುಮ್ நோக்கும் = ನೋಡುವಳು, ಎನ್ಱು என்று = ಎಂದು, ಅಞ್ಜುಗಿನ್ಱೇನ್ அஞ்சுகின்றேன் = ಹೆದರುತ್ತಿದ್ದೇನೆ, ಅಚ್ಚೋ அச்சோ = ಅಯ್ಯೋ (ವಿಸ್ಮಯಾಶ್ಚರ್ಯ!), ಒರುವರ್

Garani Srinivasan

(ನಾಚಿಕೆಯಿಲ್ಲದವರ),
ತಿರುಮೆಯ್ = ಒಬ್ಬರನ್ನು ಅಲ್ಲೂಮ್ ಆ ಅಪ್ಪುಕ್ಕಿಯ ಶ್ರೀ = ಸೌಂದರ್ಯದ ಪಿಂಚೆಯನ್ನು!

ಆಪ್ತಸಖೀ, ಇವರ ದೇಹ ಚಿನ್ನವೇ. ಮರಕತರತ್ನದಿಂದ ಉಕ್ಕಿ ಬರುವ ಕೋಮಲವಾದ ತೇಜಸ್ಸು. ಎದೆಯ ದಾರ ಮಿಂಚಿನ ಹೊಳಪು. ಇವರ ಬಾಯಿಯಿಂದ ಬಂದ ಶ್ರೇಷ್ಠವಾದ ವೇದವನ್ನು ಪಠಿಸುವ ವೈದಿಕರು ದೇವತೆಗಳಾಗುತ್ತಾರೆ. ಇವರು ನನ್ನನ್ನು, ನನ್ನ ನಿತಂಬ(ಪಿರ್ರೆ)ಗಳನ್ನು, ನೋಡಿ, ಉಬ್ಬಿರುವ ಸೊಗಸಾದ ಸ್ತನಗಳನ್ನ ನೋಡುತ್ತಿದ್ದಾರೆ. ನನ್ನ ತಾಯಿ ನನ್ನನ್ನೆಲ್ಲಿ ನೋಡುವಳೋ ಎಂದು ಅಂಜುತ್ತಿದ್ದೇನೆ. ಅಯ್ಯೋ, ಆ (ನಾಚಿಕೆಯಿಲ್ಲದ) ಒಬ್ಬರ ಸೌಂದರ್ಯದ ಪಿಂಚೆಯೋ! (1)

ಇಲ್ಲಿ ಆಳ್ವಾರರು ನಾಯಕ-ನಾಯಕೀ ಭಾವವನ್ನು ಹೇಳಲು ಎತ್ತಿಕೊಂಡಿದ್ದಾರೆ. ಮುಗ್ಧಳಾದ ನಾಯಕಿಯ, ಶುದ್ಧ ಮನದಲ್ಲಿ ಭಗವಂತನತ್ತ(ಭಕ್ತಿಯ) ಪ್ರೇಮದ ಅಂಕುರವಾಗಿದೆ. ನಾಯಕಿಯಾದವಳೇ ತನ್ನ ಮನಸ್ಸಿನಲ್ಲಿರುವ ಆಶೆಯನ್ನು ತನ್ನ ಸಖಿಯಲ್ಲಿ ಹೇಳಿಕೊಳ್ಳುತ್ತಿದ್ದಾಳೆ ಆಳ್ವಾರರೇ ಆ ನಾಯಕಿ.

ಅವಳು ಉತ್ತಮ ಮನೆತನಕ್ಕೆ ಸೇರಿದವಳು. ಯೌವನ ತುಂಬಿದ, ಮಾಟವಾದ ದೇಹ ಸೌಂದರ್ಯವುಳ್ಳವಳು. ಚಿಕ್ಕದಾದ ನಡುವುಳ್ಳವಳು. ಅವಳಿಗೆ ಒಬ್ಬ ತಾಯಿ. ತಾಯಿಗೆ ಒಳ್ಳೆಯ ಮಗಳಾಗಿ, ತಾನು ಸ್ತ್ರೀ ಮರ್ಯಾದೆಯುವುದನ್ನು ಬದಿಗೊತ್ತದಂತೆ, ಹೇಗೆ ನಡೆದುಕೊಳ್ಳಬೇಕೆಂಬುದು ಅವಳಿಗೆ ಗೊತ್ತು. ತನ್ನ ಪತಿಯಲ್ಲದಿದ್ದರೆ, ಸುಂದರನಾದ ಪುರುಷನು ಯಾರೇ ಆದರೂ, ಅವನು ತನಗೆ ಪರ-ಪುರುಷನೇ. ಅವನ ನೋಟದಿಂದ ತಾನು ಆಕರ್ಷಿತವಾದಾಗಲೂ ಸಹ, ಸಾಧ್ವಿಯಾಗಿರುವ ತಾನು ಅವನನ್ನು ನೋಡಬಹುದೇ? ಅವನ ನೋಟದಿಂದ, ಅವನ ಮನದ ಇಂಗಿತವನ್ನು ಅರಿತುಕೊಳ್ಳಲು ಯತ್ನಿಸಬಹುದೇ? ಅವನ ಸೌಂದರ್ಯಕ್ಕೆ ಮರುಳಾಗಿ ತಾನು ಅವನನ್ನು ನೋಡದೇ ಇರುವುದಾದರೂ ಹೇಗೆ? ಒಂದು ವೇಳೆ, ಒಂದೆರಡು ಕ್ಷಣಕಾಲ ಅವನನ್ನು ತಾನು ನೋಡಲೆತ್ನಿಸಿದರೋ? ತನ್ನ ತಾಯಿ ಆ ಕ್ಷಣದಲ್ಲೇ ತನ್ನನ್ನು ನೋಡಿದರೆ? ಅವಳ ಕಟುವಾದ ತಾಯಿಯ ಮಾತುಗಳಿಗೆ ಒಳಗಾಗಬೇಕಾಗುವುದಲ್ಲ! ಆದರೆ, ಅವನ ಅದ್ವಿತೀಯವಾದ ಸೌಂದರ್ಯದ ಪಿಂಚೆಯೋ? ಅದನ್ನೇನೆನ್ನುವುದು? ಒಂದು ದಿನ, ಸ್ವಲ್ಪ, ನೋಡಿದರಾಯಿತು. ಅದನ್ನ ಮತ್ತೆ ಮರೆಯುವುದಕ್ಕಾಗುತ್ತೇ? ಹೀಗೆಲ್ಲ ಇದೆ ಅವಳ ಮನಸ್ಸಿನಲ್ಲಿ ಯೋಚನೆಗಳ ಪರಂಪರೆ. ಹೊಯ್ದಾಟ - ನೋಡಿದರೆ ಹೇಗೋ, ನೋಡದಿರಲು ಸಾಧ್ಯವಿಲ್ಲವಲ್ಲ - ಎಂಬ ಹೊಯ್ದಾಟ

ಅವಳಿಗೆ ಒಬ್ಬ ಗೆಳತಿ - ಅವಳ ಆಪ್ತಸಖಿ. ಅವಳಲ್ಲಿ ಮಾತ್ರ ಯಾವ ಆತಂಕವೂ ಇಲ್ಲದೆ, ಯಾವ ಮುಚ್ಚುಮರೆಯೂ ಇಲ್ಲದೆ ಮನಬಿಚ್ಚಿ ಮಾತನಾಡಬಲ್ಲಳು. ಆ ಆಪ್ತಸಖಿಗೆ ಅವಳು ಹೇಳುತ್ತಾಳೆ:

ಪ್ರಿಯಸಖಿ, ನಾನೊಬ್ಬ ಅಪೂರ್ವ ಸುಂದರನನ್ನು ಕಂಡೆ! ಅವನ ಎಣೆಯಿಲ್ಲದ ಸೌಂದರ್ಯವನ್ನೇನೆಂದು ವರ್ಣಿಸಲಿ? ಅವನ ದೇಹವೋ ಚಿನ್ನವೇ! ಮರಕತರತ್ನವು ಹೊಮ್ಮುವ ಕೋಮಲಾಕರ್ಷಕವಾದ ದೇಹದ ತೇಜಸ್ಸು. ಅವನ ಎದೆಯ ಮೇಲೆ ದಾರವಿದೆ. ಅದು ಮಿಂಚಿನ ಹೊಳಪುಳ್ಳದ್ದು. ಅವನ

Garani Srinivasan

ಬಾಯಿಂದ ಹೊರಬರುವ ಮಾತುಗಳನ್ನು ಉಚ್ಚರಿಸಿದ ಮಾತ್ರಕ್ಕೇ ದೇವರಿಗೆಲ್ಲಾ
ಗರ್ವ ಬಂದಿದ್ದು. ಅವನನ್ನು ದಿಟ್ಟಿಸಿ, ಕಣ್ತುಂಬ ನೋಡಲು ನನಗೆ ಆಗಲಿಲ್ಲ.
ಹಾಗೆ ನೋಡುತ್ತಿರುವ ನನ್ನನ್ನು ನನ್ನ ತಾಯಿ ಎಲ್ಲಿ ನೋಡಿಬಿಡುತ್ತಾಳೋ
ಎಂಬ ಅಂಜಿಕೆ ನನಗೆ. ನೋಡಬೇಕೆಂಬ ಆಸೆ ನನಗೆ ತುಂಬ. ಆ ದಿವ್ಯ
ಸುಂದರನಾದವನೇ ನನ್ನನ್ನು ಚೆನ್ನಾಗಿ ನೋಡಿದನು. ನನ್ನ ಅವಯವಗಳನ್ನು
ನೋಡಿದನು. ನನ್ನ ನಿತಂಬ ಭಾಗವನ್ನು ನೋಡಿದನು. ~~ನನ್ನ~~ ಉಬ್ಬಿದ ಎದೆ
ಗಡಾದ ನನ್ನ ತೋಳುಗಳನ್ನು ಚೆನ್ನಾಗಿ ನೋಡುತ್ತಲೇ ಇದ್ದನು ಅವನ
ಸೌಂದರ್ಯವನ್ನು ಕುರಿತು ಎಷ್ಟು ಹೇಳಿದರೂ, ಎಷ್ಟು ಹೊಗಳಿದರೂ ತೀರದೆ
ಇದೆಯಲ್ಲ!

ಅನುಪಮ ಸುಂದರನಾದ ಭಗವಂತನ ದಿವ್ಯ ಕಟಾಕ್ಷ ಭಕ್ತನ ಮೇಲೆ
ಲೆ ದಕ್ಷ್ಯತ್ತಾಗಿ ಬಿದ್ದರೆ ಸಾಕು. ಅವನು ಉದ್ಧಾರವಾದಂತೆಯೇ!

2 தோடவிழ் நீலமணங்கொடுக்கும்
சூழ்புனல் சூழ்குடந்தைக்கிடந்த,
சேடர்கொலென்று தெரிக்கமாட்டேன்
செஞ்சுடராழியுஞ் சங்குமேந்தி,
பாடகமெல்லடியார் வணங்கப்
பன்மணி ~~[illegible]~~ முத்தொடிலங்கு சோதி,
ஆடகம்பூண்டொருநான்கு தோளும்
அச்சோவொருவரழகியவா

ತೋಡವಿೞ್ ನೀಲಮಣಙ್ಗೊಡುಕ್ಕುಮ್
ಶೂೞ್ ಪುನಲ್ ಶೂೞ್ ಕುಡನ್ದೈಕ್ಕಿಡನ್ದ,
ಶೇಡರ್ ಕೊಲೆನ್ಱು ತೆರಿಕ್ಕಮಾಟ್ಟೇನ್
ಶೆಂಜುಡರಾೞಿಯುಂ ಶಙ್ಗುಮೇನ್ದಿ,
ಪಾಡಗಮೆಲ್ಲಡಿಯಾರ್ ವಣಙ್ಗ
ಪನ್ಮಣಿ ಮುತ್ತೊಡಿಲಙ್ಗು ಶೋದಿ,
ಆಡಗಮ್ ಪೂಣ್ಡೊರು ನಾನ್ಗು ತೋಳುಮ್
ಅಚ್ಚೋವೊರುವರೞಗಿಯವಾ

ತೋಡು தோடு = ದಳಗಳು, ಅವಿೞ್ அவிழ் = ಬಿರಿದಿರುವ, ನೀಲ நீலம் = ನೀಲೋತ್ಪಲವು, ಮಣಮ್ மணம் = ಪರಿಮಳವನ್ನು, ಕೊಡುಕ್ಕುಮ್ கொடுக்கும் = ಹೊರಡಿಸುವ (ಹರಡುವ), ಶೂೞ್ சூழ் = ಸುತ್ತಲೂ ಹರಡಿರುವ, ಪುನಲ್ புனல் = ಪ್ರವಾಹಗಳಿಂದ ~~[illegible]~~, ಶೂೞ್ சூழ் = ಸುತ್ತುವರಿದಿರುವ, ಕುಡನ್ದೈ குடந்தை = ಕುಂಭಕೋಣ ಕ್ಷೇತ್ರದಲ್ಲಿ, ಕಿಡನ್ದ கிடந்த = ಮಲಗಿರುವ, ಶೇಡರ್ ಕೊಲ್ சேடர்கொல் = ಯೌವನ ಪುರುಷ ~~[illegible]~~ ಇವರು, ಎನ್ಱು என்று = ಎಂದು, ತೆರಿಕ್ಕ ಮಾಟ್ಟೇನ್ தெரிக்கமாட்டேன = ತಿಳಿದುಕೊಳ್ಳಲಾರೆ, ಶೆಮ್ செம் = ಕೆಂಪಾದ, ಶುಡರ್ சுடர் = ಜ್ವಾಲೆಯುಳ್ಳ (ಪ್ರಜ್ವಲಿಸುವ),

Garani Srinivasan

ಆಲಿಯುಮ್ ஆழியும் = ಚಕ್ರಾಯುಧವನ್ನೂ, ಶಙ್ಖುಮ್ சங்கு
ம் = ಶಂಖವನ್ನೂ, ಪಿಡ್ದಿತ್ತ = ಧರಿಸಿ, ಪಾದಕಮ್ பாடகம் =
ಕಾಲ್ಗಡಗಗಳುಳ್ಳ, ಮೆಲ್ ಅಡಿ = ಕೋಮಲವಾದ (ಮೃದುವಾದ),
ಅಡಿಯಾರ್ அடியார் = ಪಾದಗಳುಳ್ಳವರು (ಹೆಂಗಸರು), ವಣಾಙ್ಗ
வணங்க = ಎರಗುವಂಥ, ಪಲ್ ಮಣಿ ಮುತ್ತೊಡು பல் மணி
முத்தோடு = ಹಲವಾರು ರತ್ನ, ಮುತ್ತುಗಳಿಂದ, ಇಲಙ್ಗು இலங்கு =
ಬೆಳಗುವ, ಕೋಲ சோதி = ತೇಜಸ್ಸಿನಿಂದ ಕೂಡಿದ ಆಡಕಮ್
ஆடகம் = ಆಭರಣಗಳನ್ನು, ಪೂಣ್ಡ பூண்ட = ಧರಿಸಿರುವ,
ಒರು ಕಾರು = ಎಣೆಯಿಲ್ಲದ, ನಾನ್ಗು ತೋಳುಮ್ நான்கு தோளும்
= ನಾಲ್ಕು ಬಾಹುಗಳುಳ್ಳವನಾಗಿ, ಅಚ್ಚೋ அச்சோ = ಏನಾಶ್ಚರ್ಯ,
ಒರುವರ್ ಕಾರುವರ್ = ಸಾಟಿಯಿಲ್ಲದವರಾದ (ಇವರ), ಅಳಗಿಯ ಆ
அழகியவா = ಸೌಂದರ್ಯದ ರೀತಿಯೋ!

ದಳಗಳು ಬಿರಿದು, ನೀಲೋತ್ಪಲಗಳು ಪರಿಮಳವನ್ನು ಹೊರಡಿಸುತ್ತ ಇರುವ, ಸುತ್ತಲೂ ಹರಡಿರುವ ಪ್ರವಾಹಗಳಿಂದ ಸುತ್ತುವರಿದಿರುವ ಕುಂಭಕೋಣ ಕ್ಷೇತ್ರದಲ್ಲಿ ನೆಲಸಿರುವ (ನಿತ್ಯ) ಯೌವನಸ್ಥರು ಇವರು ಎಂದು ತಿಳಿದು ಕೊಳ್ಳಲಾರೆ. ಕೆಂಪಗೆ ಬೆಂಕಿಯಂತೆ ಪ್ರಜ್ವಲಿಸುವ ಚಕ್ರಾಯುಧವನ್ನೂ ಶಂಖವನ್ನೂ ಧರಿಸಿರುವವರೂ, ಕಾಲ್ಗಡಗಗಳನ್ನು ಧರಿಸಿರುವ ಮೃದುವಾದ ಪಾದಗಳುಳ್ಳವರು (ಸ್ತ್ರೀಯರು) ಎರಗುವಂಥವರೂ, ಹಲವಾರು ರತ್ನಗಳೂ ಮುತ್ತುಗಳೂ ಕೂಡಿ ಬೆಳಗುವ ತೇಜಸ್ಸಿನಿಂದ ತುಂಬಿದ ಆಭರಣಗಳನ್ನು ಧರಿಸಿರುವ ನಾಲ್ಕು ಬಾಹುಗಳುಳ್ಳವರೂ, ಆದ, ಸಾಟಿಯಿಲ್ಲದ (೨)
ಇವರ ಸೌಂದರ್ಯದ ರೀತಿಯೋ! ಏನಾಶ್ಚರ್ಯ!

ಯುವತಿಯು (ಆಳ್ವಾರರು) ಹೇಳುತ್ತಾಳೆ: ಪ್ರಿಯಸಖಿ ಏನಾಶ್ಚರ್ಯ! ಇವರ ವಿಲಕ್ಷಣ ಸೌಂದರ್ಯವನ್ನು ಏನೆಂದು ವರ್ಣಿಸಲಿ! ತಾವರೆಗಳ ಪರಿಮಳದಿಂದಲೂ, ಪ್ರವಾಹಗಳಿಂದಲೂ ~~[illegible]~~ ಸುತ್ತುವರಿಯುವ ಕುಂಭಕೋಣ ಕ್ಷೇತ್ರದಲ್ಲಿ ನೆಲಸಿರುವ ಭಗವಂತನ ಹಾಗೆಯೇ ಇವರು ಇದ್ದಾರೆಂದು ತೋರುತ್ತದೆ. ಅವರೇ ಇವರು ಎಂದು ನಿಖರವಾಗಿ ನಾನು ತಿಳಿದುಕೊಳ್ಳಲಾರೆನಲ್ಲ! ನಿತ್ಯಯೌವನ ಸುಂದರರಾದ ಇವರಿಗೆ ನಾಲ್ಕು ಬಾಹುಗಳಿವೆ. ಅಪಾರವಾದ ರತ್ನಗಳಿಂದಲೂ ಮುತ್ತುಗಳಿಂದಲೂ ಕೂಡಿ ಹೊಳೆಯುವ ದಿವ್ಯಾಭರಣಗಳನ್ನು ಇವರು ಧರಿಸಿದ್ದಾರೆ. ಒಂದು ಕೈಯಲ್ಲಿ ಜ್ವಲಿಸುವ ಅಗ್ನಿಯಂತೆ ಹೊಳೆಯುವ ಚಕ್ರಾಯುಧವನ್ನೂ ಮತ್ತೊಂದರಲ್ಲಿ ಅಪೂರ್ವವಾದ ಶಂಖವನ್ನೂ ಹಿಡಿದಿದ್ದಾರೆ. ಉತ್ತಮವರ್ಣದವರಾಗಿ, ಸುಂದರಿಯರಾಗಿ, ಕಾಲ್ಗಡಗಗಳನ್ನು ಧರಿಸಿದವರಾಗಿ, ಮೃದುವಾದ ಪಾದಗಳುಳ್ಳವರಾಗಿರುವ ಸ್ತ್ರೀಯರು ಇವರ ತಿರುವಡಿಗಳನ್ನು ಆಶ್ರಯಿಸಿ, ಎರಗುತ್ತಾರಲ್ಲ! ನನಗೂ ಆ ಭಾಗ್ಯ ಲಭಿಸುವುದೇ? ಅದೆಂದಿಗೋ?

Garani Srinivasan

3. வேயிருஞ்சோலை விலங்கல் சூழ்ந்த
மெய்யமணாளர், இவ்வையமெல்லாம்,
தாயின நாயகராவர் தோழீ!
தாமரைக்கண்களிருந்தவாறு,
சேயிருங்குன்றம் திகழ்ந்ததொப்பச்
செய்யவாகி மலர்ந்தசோதி,
ஆயிரந்தோளொடிலங்கு பூணும்
அச்சோவொருவரழகியவா.

ವೇಯಿರುಂಜೋಲೈ ವಿಲಙ್ಗಲ್ ಶೂೞ್‌ನ್ದ
ಮೆಯ್ಯಮಣಾಳರ್, ಇವ್ವೈಯಮೆಲ್ಲಾಮ್,
ತಾಯಿನ ನಾಯಕರಾವರ್ ತೋೞೀ!
ತಾಮರೈಕ್ಕಣ್ಗಳಿರುನ್ದವಾಱು,
ಶೇಯಿರುಙ್ಗುನ್ಱಮ್ ತಿಗೞ್‌ನ್ದದೊಪ್ಪ
ಶೆಯ್ಯವಾಗಿ ಮಲರ್‌ನ್ದ ಶೋದಿ,
ಆಯಿರನ್ದೋಳೊಡಿಲಙ್ಗು ಪೂಣುಮ್
ಅಚ್ಚೋ ಒರುವರೞಗಿಯವಾ.

ವೇಯ್ வேய் = ಬಿದಿರು, ಇರು இரு = ತುಂಬಿರುವ, ಶೋಲೈ சோலை = ತೋಪುಗಳಿಂದಲೂ, ವಿಲಙ್ಗಲ್ விலங்கல் = ಬೆಟ್ಟಗಳಿಂದಲೂ, ಶೂೞ್‌ನ್ದ சூழ்ந்த = ಸುತ್ತುವರಿದಿರುವ, ಮೆಯ್ಯಮ್ மெய்யம் = ತಿರುಮೆಯ್ಯಂ ಎಂಬ ಕ್ಷೇತ್ರದ, ಮಣಾಳರ್ மணாளர் = ಸ್ವಾಮಿಯೂ, ಇವ್ವೈಯಮ್ ಎಲ್ಲಾಮ್ இவ்வையம் எல்லாம் = ಈ (ಬ್ರಹ್ಮಾಂಡ) ಭೂಮಿಯನ್ನೆಲ್ಲಾ, ತಾಯಿನ தாயின = ಅಳೆದುಕೊಂಡ, ನಾಯಕರ್ நாயகர் = ನಾಯಕನನ್ನೇ, ಆವಾರ್ ஆவார் = ಹೋಲುತ್ತಾರೆ, ತೋೞೀ தோழீ = ಸಖೀ, ತಾಮರೈ தாமரை = ತಾವರೆಯಂತೆ, ಕಣ್ಗಳ್ கண்கள் = ಕಣ್ಣುಗಳು, ಇರುನ್ದ ಆಱು இருந்த ஆறு = ಇರುವಂತೆಯೇ ತೋರುತ್ತವೆ, ಶೇಯ್ ಇರು சேய் இரு = ಎತ್ತರವಾಗಿರುವ, ಕುನ್ಱಮ್ குன்றம் = ಬೆಟ್ಟಗಳು, ತಿಗೞ್‌ನ್ದದು திகழ்ந்தது = ಹೊಳೆಯುತ್ತಿರುವ, ಒಪ್ಪ ஒப்ப = ದಂತೆ (ಸಮನಾಗಿ), ಶೆಯ್ಯವಾಗಿ செவ்வியவாகி = ಕೆಂಪಗೆ, ಮಲರ್‌ನ್ದ மலர்ந்த = ಅರಳಿರುವಂಥ, ಶೋದಿ சோதி = ತೇಜಸ್ಸನ್ನುಳ್ಳ, ಆಯಿರಮ್ ஆயிரம் = ಸಾವಿರ, ತೋಳ್‌ಗಳೊಡು தோளொடு = ತೋಳುಗಳೊಡನೆ, ಇಲಙ್ಗು இலங்கு = ಹೊಳೆಯುವ, ಪೂಣುಮ್ பூணும் = ಆಭರಣಗಳೂ, ಅಚ್ಚೋ அச்சோ = ಏನಾಶ್ಚರ್ಯ!, ಒರುವರ್ ஒருவர் = ಎಣೆಯಿಲ್ಲದವರ, ಅೞಗಿಯ அழகிய ஆ = ಸೌಂದರ್ಯದ ರೀತಿಯನ್ನು!

ಬಿದಿರು ಮೆಳೆಗಳಿಂದ ತುಂಬಿರುವ ತೋಪುಗಳಿಂದಲೂ ಬೆಟ್ಟಗಳಿಂದಲೂ ಸುತ್ತುವರಿದಿರುವ ತಿರುಮೆಯ್ಯ ಎಂಬ ಕ್ಷೇತ್ರದ ಸ್ವಾಮಿಯೂ ಈ (ಬ್ರಹ್ಮಾಂಡ) ಭೂಮಿಯನ್ನೆಲ್ಲಾ ಅಳೆದುಕೊಂಡ ನಾಯಕನನ್ನೇ ಹೋಲು

Gayatri Srinivasan

ತ್ತಾರೆ, ಸಖೀ. ತಾವರೆಯಂತೆ ಕಣ್ಣುಗಳಿರುವಂತೆ ತೋರುತ್ತದೆ. ಎತ್ತರವಾಗಿರುವ
ಬೆಟ್ಟಗಳು ಹೊಳೆಯುವ ಹಾಗೆ ಹರಡಿರುವ ತೇಜಸ್ಸಿನಿಂದ ಕೂಡಿ, ಸಾವಿರ
ತೋಳುಗಳಲ್ಲೂ ಹೊಳೆಯುವ ಆಭರಣಗಳು, ಏನಾಶ್ಚರ್ಯ, ಆ ಸೌಂದರ್ಯ (3)
ದ ರಾಶಿ!

ಯುವತಿಯು ಹೇಳುತ್ತಾಳೆ: ಸಖಿ, ತಿರುಮೆಯ್ಯ ಕ್ಷೇತ್ರವು ಬದರು
ಹೊಳೆಗಳಿಂದಲೂ ಬೆಟ್ಟಗಳಿಂದಲೂ ಸುತ್ತುವರಿದಿದೆಯಷ್ಟೆ. ಅದರಲ್ಲಿ ನೆಲಸಿರುವ
ಸ್ವಾಮಿಯ ಹಾಗೆಯೇ ಇವರು ಇದ್ದಾರಲ್ಲ! ಈ ಭೂಮಿಯನ್ನೆಲ್ಲ ಅಳೆದುಕೊಂಡ
ಬ್ರಹ್ಮಾಂಡ ನಾಯಕನನ್ನೇ ಇವರು ಹೋಲುತ್ತಿದ್ದಾರಲ್ಲ! ಇವರ ಕಣ್ಣುಗಳೇ,
ತಾವರೆದಳದಂತೆ ವಿಶಾಲವೂ ಸುಂದರವೂ ಆಕರ್ಷಕವೂ ಆಗಿದೆ. ಉನ್ನತವಾ
ಬಲದಿಂದಲೂ, ತೇಜಸ್ಸಿನಿಂದಲೂ ಕೂಡಿದ ಸಾವಿರ ತೋಳುಗಳುಳ್ಳವರಂತೆ
ಇವರು ತೋರುತ್ತಿದ್ದಾರಲ್ಲ! ಆಹಾ, ಏನಾಶ್ಚರ್ಯ! ಇವರ ಮೈಮೇಲಿರುವ
ಅನುಪಮವಾದ ದಿವ್ಯಾಭರಣಗಳ ಹೊಳಪನ್ನು ಇವರ ಎಣೆಯಿಲ್ಲದ ಸೌಂದ
ರ್ಯವನ್ನು ಏನೆಂದು ವರ್ಣಿಸಲಿ! ಇವರಿಗೆ ನಾನು ಸೋತು ಹೋಗಿದ್ದೇನೆ, ಸಖೀ.

4. வம்பவிழும் துழாய் மாலை தோள்மேல்
கையன ஆழியுஞ் சங்குமேந்தி,
நம்பர் நம்மில்லம் புகுந்து நின்றார்
நாகரிகர் பெரிது மிளையர்,
செம்பவள மிவர் வாயின் வண்ணம்
தேவரிவரதுருவம் சொல்லில்,
அம்பவளத் திரளேயு மொப்பர்
அச்சோ வொருவர ழகியவா.

ವಮ್ಬವಿೞುಮ್ ತುೞಾಯ್ ಮಾಲೈ ತೋಳ್ ಮೇಲ್
ಕೈಯನ ಆೞಿಯುಂ ಶಙ್ಗುಮೇನ್ದಿ,
ನಮ್ಬರ್ ನಮ್ಮಿಲ್ಲಮ್ ಪುಗುನ್ದು ನಿನ್ರಾರ್,
ನಾಗರಿಗರ್ ಪೆರಿದುಮಿಳೈಯರ್,
ಶೆಮ್ಬವಳಮಿವರ್ ವಾಯಿನ್ ವಣ್ಣಮ್
ತೇವರಿವರದುರುವಮ್ ಶೊಲ್ಲಿಲ್,
ಅಮ್ಬವಳತ್ತಿರಳೇಯುಮೊಪ್ಪರ್
ಅಚ್ಚೋ ವೊರುವರೞಗಿಯವಾ.

ವಮ್ಬು வம்பு = ಪರಿಮಳವನ್ನು, ಅವಿೞುಮ್ அவிழும் = ಹರಡುವ,
ತುೞಾಯ್ ಮಾಲೈ துழாய் மாலை = ತುಲಸಿಯ ಹಾರವನ್ನು, ತೋಳ್ ಮೇಲ್
தோள் மேல் = ತೋಳುಗಳ ಮೇಲೆಯೂ, ಕೈಯನ கையன = ಕೈಗಳ
ಲ್ಲಿ, ಆೞಿಯುಂ ಶಙ್ಗುಮ್ ஆழியும் சங்கும் = ಚಕ್ರಾಯುಧವನ್ನೂ
ಶಂಖವನ್ನೂ ಏನ್ದಿ ஏந்தி = ಧರಿಸಿ, ನಮ್ಬರ್ நம்பர் = ಸ್ವಾಮಿಯು,
ನಮ್ நம் = ನಮ್ಮ, ಇಲ್ಲಮ್ இல்லம் = ಮನೆಯನ್ನು, ಪುಗುನ್ದು புகுந்
து = ಪ್ರವೇಶಿಸಿ, ನಿನ್ರಾರ್ நின்றார் = ನೆಲಸಿದ್ದಾರೆ, ನಾಗರಿಗರ್ நாக
ரிகர் = ಬಹಳ ಮರ್ಯಾದೆ (ನಮ್ರತೆ)ಯನ್ನುಳ್ಳವರು, ಪೆರಿದುಮ್ ಇಳೈಯರ್

பெரிதும் இளையர் = ಎಳೆಯ ಯೌವನವುಳ್ಳವರು, ಶೆಮಾ ಪವಳಮಾ செம்பவளம் = ಕೆಂಪನೆಯ ಹವಳದ, ಇವರ್ ವಾಯಿನ್ ವಣ್ಣಮಾ இவர் வாயின் வண்ணம் = ಇವರ ಬಾಯಿಯ (ತುಟಿಗಳ) ಬಣ್ಣ, ತೇವರ್ தேவர் = ದೇವರೆಯೇ. ಇವರೆದು இவரது = ಇವರ, ಉರುವಮಾ உருவம் = ದೇಹ (ರೂಪ) ಸೌಂದರ್ಯ. ಶೊಲ್ಲಲ್ ஒணாசலில் = ಹೇಳಬಹುದಾದರೆ, ಅಮಾ அம் = ಸುಂದರವಾದ, ಪವಳಮಾ ತಿರಳೆಯುಮಾ பவளம் திரளையும் = ಹವಳದ ರಾಶಿಯನ್ನೇ, ಒಪ್ಪಾ ஒப்பா = ಹೋಲುತ್ತದೆ ಅಚ್ಚೋ அச்சோ = ಏನಾಶ್ಚರ್ಯ! ಒರುವರ್ ஒருவர் = ನಾಟಿಯಿಲ್ಲದ ಒಬ್ಬರ, ಅಲ್ಲದಯ ಆ அழகியவா = ಸೌಂದರ್ಯದ ರೀತಿ.

ಕೋಳುಗಳ ಮೇಲೆ ಪದ್ಮಗಳನ್ನು ಧರಿಸುವ ತುಳಸಿಯಮಾಲೆ ಯನ್ನು ಕೈಗಳಲ್ಲಿ ಚಕ್ರಾಯುಧವನ್ನು ಶಂಖವನ್ನು ಧರಿಸಿ, ನಮ್ಮ ದ್ವಾರವನ್ನು ಪ್ರವೇಶಿಸಿ (ಅಲ್ಲಿ) ನೆಲಸಿದ್ದಾರೆ. ಬಹಳ ನಮ್ರತೆ(ಮರ್ಯಾದೆ) ಯನ್ನುಳ್ಳವರು. ಎಳೆಯ ಪ್ರಾಯದವರು. ಇವರ ತುಟಿಗಳ (ಬಾಯಿಯ) ಬಣ್ಣ ಕೆಂಪು ಹವಳದಂತೆ ಇವರ ಸೌಂದರ್ಯವನ್ನು ಹೇಳುವುದೆಂದರೆ, ನಾಟಿಯಿಲ್ಲದ ಒಬ್ಬರ ಸೌಂದರ್ಯ ಹವಳದ ರಾಶಿಯನ್ನೇ ಹೋಲುತ್ತದೆ. ಏನಾಶ್ಚರ್ಯ, ಸೌಂದರ್ಯದ ರೀತಿ! (4)

ಯುವತಿಯು ಹೇಳುತ್ತಾಳೆ: ಸಖೀ, ಇವರ ಭುಜಗಳ ಮೇಲೆ ಪದ್ಮಗಳುಳ್ಳ ತುಳಸಿಯ ಹಾರವಿದೆ. ಕೈಗಳಲ್ಲಿ ಶಂಖ ಚಕ್ರಗಳಿವೆ. ಇವರ ಬಾಯಿ ಕೆಂಪಗೆ ಹವಳದಂತೆ ಸುಂದರ. ಇವರದು ಎಷ್ಟು ನಮ್ರತೆ. ಎಷ್ಟು ಮರ್ಯಾದೆ! ರೂಪದಲ್ಲಿ ಇವರು ದೇವರೆಯೇ! ಹವಳದ ರಾಶಿಯಂತೆ ಕೋಮಲವಾದ ಕೆಂಪು ಬಣ್ಣದಿಂದ ಇವರ ದೇಹ ಬೆಳಗುತ್ತಿದೆ. ಇಂಥವರು ನಮ್ಮ ಮನೆಯನ್ನು ಹೊಕ್ಕು ಅಲ್ಲಿಯೇ ನೆಲಸಿದ್ದಾರಲ್ಲ! ಇವರ ಸೌಂದರ್ಯವನ್ನೇನೆಂದು ಹೊಗಳಲಿ!

5. கோழியுங் கூடலுங் கோயில் கொண்ட
கோவலரே யொப்பர், குன்றமன்ன,
பாழியந் தோளுமோர் நான்குடையர்
பண்டிவர் தம்மையும் கண்டறியோம்,
வாழியரோ இவர் வண்ணமெண்ணில்
மாகடல் போன்றுளர், கையில் வெய்ய,
ஆழியொன் றேந்தி யோர் சங்கு பற்றி
அச்சோ வொருவ ரழகியவா.

ಕೋಳಿಯುಂ ಕೂಡಲುಂ ಕೋಯಿಲ್ ಕೊಂಡ
ಕೋವಲರೇ ಯೊಪ್ಪರ್, ಕುನ್ರಮನ್ನ,
ಪಾೞಿಯಂ ತೋಳುಮೋರ್ ನಾನ್ಗುಡೈಯರ್
ಪಂಡಿವರ್ ತಮ್ಮೈಯುಮ್ ಕಂಡರಿಯೋಮ್,
ವಾೞಿಯರೋ ಇವರ್ ವಣ್ಣಮೆಣ್ಣಿಲ್
ಮಾಕಡಲ್ ಪೋನ್ರುಳರ್, ಕೈಯಿಲ್ ವೆಯ್ಯ,
ಆೞಿಯೊನ್ರೇಂದಿ ಯೋರ್ ಶಙ್ಗು ಪಟ್ರಿ-
ಅಚ್ಚೋ ಒರುವರ ಅೞಗಿಯವಾ.

ಕೋೞಿಯುಮ್ கோழியும் = 'ಕೋೞಿ' ಎಂಬ ಕ್ಷೇತ್ರದಲ್ಲಿಯೂ, ಕೂಡಲುಮ್ கூடலும் = 'ಕೂಡಲು' ಎಂಬ ಕ್ಷೇತ್ರದಲ್ಲಿಯೂ, ಕೋಯಿಲ್ ಕೊಣ್ಡ கோயில் கொண்ட = ತನಗೆ ಇರಲು ಎಡೆ ಮಾಡಿಕೊಂಡ (ನೆಲಸಿರುವ), ಕೋವಲರೇ கோவலரே = 'ಗೋವಳ'ನನ್ನೇ, ಒಪ್ಪರ್ ஒப்பார் = ಹೋಲುತ್ತಾರೆ, ಕುನ್ಱಮ್ ಅನ್ನ குன்றம் அன்ன = ಬೆಟ್ಟದ ಹಾಗೆ, ಪಾೞಿ பாழி = ಬಲಿಷ್ಠವಾದ, ಅಮ್ அம் = ಸುಂದರವಾದ, ತೋಳುಮ್ தோளும் = ತೋಳುಗಳನ್ನು, ಓರ್ ஓர் = ಎಣೆಯಿಲ್ಲದಂಥ, ನಾನ್ಗು நான்கு = ನಾಲ್ಕನ್ನು, ಉಡೈಯರ್ உடையர் = ಹೊಂದಿದ್ದಾರೆ, ಪಣ್ಡು பண்டு = ಹಿಂದೆ, ಇವರ್ ತಮ್ಮೈಯುಮ್ இவர் தம்மையும் = ಇವರನ್ನು, ಕಣ್ಡು கண்டு = ನೋಡಿ (ಕಂಡು ಕೇಳಿದು), ಅಱಿಯೋಮ್ அறியோம் = ನಾವು ಅರಿತವರಲ್ಲ. ವಾೞಿಯವರೋ வாழியவரோ = ಚಿರಕಾಲ ಬಾಳತಕ್ಕವರು, ಇವರ್ ವಣ್ಣಮ್ ಎನಿಲ್ இவர் வண்ணம் எனில் = ಇವರ ಬಣ್ಣ ಎಂದರೆ, ಮಾಕಡಲ್ மாகடல் = ಮಹಾ ಕಡಲನ್ನು, ಪೋನ್ಱು போன்று = ಹೋಲುವಂತೆ, ಉಳರ್ உளர் = ಇದ್ದಾರೆ (ಉಳ್ಳವರಾಗಿದ್ದಾರೆ), ಕೈಯಿಲ್ கையில் = ಕೈಯಲ್ಲಿ, ವೆಯ್ಯ வெய்ய = ತೀಕ್ಷ್ಣವಾದ, ಆೞಿ ಒನ್ಱು ஆழி ஒன்று = ಚಕ್ರವೊಂದನ್ನು, ಏನ್ದಿ ஏந்தி = ಧರಿಸಿ, ಓರ್ ஓர் = ಒಂದು, ಶಙ್ಗು சங்கு = ಶಂಖವನ್ನು, ಪಱ್ಱಿ பற்றி = ಹಿಡಿದು, ಅಚ್ಚೋ அச்சோ = ಏನಾಶ್ಚರ್ಯ, ಒರುವರ್ ஒருவர் = ಎಣೆಯಿಲ್ಲದ ಒಬ್ಬರ, ಅೞಗಿಯವಾ அழகியவா = ಸೌಂದರ್ಯದ ರೀತಿಯೋ!

'ಕೋೞಿ' ಮತ್ತು 'ಕೂಡಲು' ಎಂಬ ಕ್ಷೇತ್ರಗಳಲ್ಲಿ ನೆಲಗೊಂಡಿರುವ ಗೋವಳನನ್ನೇ ಹೋಲುತ್ತಾರೆ. ಬೆಟ್ಟದ ಹಾಗೆ ಬಲಿಷ್ಠವಾದ ಮತ್ತು ಎಣೆಯಿಲ್ಲದ ಸುಂದರವಾದ ನಾಲ್ಕು ತೋಳುಗಳನ್ನು ಹೊಂದಿದ್ದಾರೆ. ಹಿಂದೆ ಇವರನ್ನು ನಾವು ಕಂಡು ಅರಿತವರಲ್ಲ. ಚಿರಕಾಲ ಬಾಳಲಿ ಎನ್ನಿಸಿಕೊಳ್ಳತಕ್ಕವರು. ಇವರ ಬಣ್ಣವೇನೆಂದರೆ ಮಹಾಕಡಲನ್ನು ಹೋಲುವಂತಿದ್ದಾರೆ. ಒಂದು ಕೈಯಲ್ಲಿ ತೀಕ್ಷ್ಣವಾದ ಚಕ್ರಾಯುಧವನ್ನು ಧರಿಸಿ ಒಂದು ಶಂಖವನ್ನು ಹಿಡಿದು, ಅಚ್ಚೋ (ಏನಾಶ್ಚರ್ಯ!) ಎಣೆಯಿಲ್ಲದ ಒಬ್ಬರ ಸೌಂದರ್ಯದ ರೀತಿಯೋ! (5)

'ಕೋೞಿ' ಎಂದರೆ, ತಿರುವುಱೈಯೂರು ಎಂಬ ದಿವ್ಯಕ್ಷೇತ್ರ. 'ಕೂಡಲು' ಎಂದರೆ, ದಕ್ಷಿಣ ಭಾರತದ ಮಧುರೆ.

'ಮಧುರೆ' ಎಂಬುದು ಉತ್ತರ ಭಾರತದಲ್ಲೊಂದು, ದಕ್ಷಿಣ ಭಾರತದಲ್ಲೊಂದು - ಹೀಗೆ, ಎರಡು ಮಧುರೆಗಳು. ಉತ್ತರ ಭಾರತದ ಮಧುರೆ ಯಮುನಾ ತೀರದಲ್ಲಿದೆ. ಶ್ರೀಕೃಷ್ಣನ ಬಾಲಲೀಲೆಗಳ ಸುಪ್ರಸಿದ್ಧವಾದ ಸ್ಥಳ. ಈಗಲೂ ಹಾಗೆಯೇ ಪ್ರಸಿದ್ಧವಾದದ್ದು. ದಕ್ಷಿಣ ಭಾರತದ ಮಧುರೆ 'ಮೀನಾಕ್ಷಿ

Garani Srinivasa

- ಕಲ್ಯಾಣಸುಂದರಂ' ಅವರ ಸುಪ್ರಸಿದ್ಧವಾದ ದೇವಾಲಯವಿದೆ. ಇಲ್ಲಿಯ ಯಾತ್ರಾಸ್ಥಳ.

ಯುವತಿ ಹೇಳುತ್ತಾಳೆ: ಸಖಿ, ಶಿರುಪುತ್ತೂರಿನಲ್ಲಿಯೂ, ದಕ್ಷಿಣ ಮಧುರೆಯಲ್ಲಿಯೂ ನೆಲಸಿರುವ ಗೋವಳನ (ಗೋಪಾಲಕೃಷ್ಣಸ್ವಾಮಿಯ) ಹಾಗೆಯೇ ಇದ್ದಾರೆ ಇವರು. ಇವರಿಗೆ ಸುಂದರವೂ ಬಲಿಷ್ಠವೂ ಆದ ನಾಲ್ಕು ತೋಳುಗಳು.. ಒಂದರಲ್ಲಿ ತೀಕ್ಷ್ಣವಾದ ಚಕ್ರಾಯುಧವನ್ನು ಧರಿಸಿದ್ದಾರೆ. ಇನ್ನೊಂದರಲ್ಲಿ ದಿವ್ಯವಾದ ಶಂಖವನ್ನು ಹಿಡಿದಿದ್ದಾರೆ. ಇವರ ಬಣ್ಣವಾದರೋ (ಬಲುದೊಡ್ಡ ಕಡಲಿನ ಹಾಗೆ ಪ್ರಕಾಶಿಸುತ್ತಿದೆ. 'ಇವರು ಚಿರಕಾಲ ಬಾಳಲಿ' ಎಂದು ಸದಾ ಕೀರ್ತಿಸಲ್ಪಡುವವರು ಇವರು ಕಲ್ಯಾಣಗುಣಗಳನ್ನೂ. ಮುಂದೆಯನ್ನೂ ನಾವು ಹಿಂದೆ ಎಂದೂ ಇವರ ಕಲ್ಯಾಣಗುಣಗಳನ್ನು ಅರಿತಿರಲಿಲ್ಲ. ಇವರ ~~[illegible]~~. ಅಪಾರವಾದ ಎಣೆಯಿಲ್ಲದ ಸೌಂದರ್ಯವನ್ನು ಕಂಡಿರಲಿಲ್ಲ. ಇವರ ಸೌಂದರ್ಯಕ್ಕೆ ಸೋತಿದ್ದೇನೆ, ಸಖಿ.

6 வெஞ்சின வேழம் மருப்பொசித்த
வேந்தர்கொல் ஏந்திழையார் மனத்தை,
தஞ்சுடையாளர் கொல், யானறியேன்
தாமரைக் கண்களிருந்தவாறு,
கஞ்சனையஞ்ச முன் கால்விசைத்த
காளையராவர், கண்டார் வணங்கும்,
அஞ்சன மாமலையேயுமொப்பர்
அச்சோவொருவரழகியவா.

ವೆಂಜಿನ ವೇೞಮ್ ಮರುಪ್ಪೊಶಿತ್ತ
ವೇನ್ದರ್ ಕೊಲ್ ಏನ್ದಿೞೈಯಾರ್ ಮನತ್ತೈ,
ತಂಜುಡೈಯಾಳರ್ ಕೊಲ್, ಯಾನಱಿಯೇನ್
ತಾಮರೈಕ್ಕಣ್ಗಳಿರುನ್ದವಾಱು,
ಕಂಜನೈಯಂಜ ಮುನ್ ಕಾಲ್ ವಿಶೈತ್ತ
ಕಾಳೈಯರಾವರ್, ಕಣ್ಡಾರ್ ವಣಙ್ಗುಮ್,
ಅಂಜನ ಮಾಮಲೈಯೇಯುಮೊಪ್ಪರ್
ಅಚ್ಚೋವೊರುವರೞಹಿಯವಾ.

ವೆಮ್ ಶಿನಮ್ வெம் சினம் = ಕಡುಕೋಪದ, ವೇೞಮ್ வேழம் = ಆನೆಯ, ಮರುಪ್ಪು மருப்பு = ದಂತವನ್ನು, ಒಶಿತ್ತ ஒசித்த = ಮುರಿದ, ವೇನ್ದನ್ ಕೊಲ್ வேந்தன் கொல் = ಪ್ರಭುವೋ, ಏನ್ದು ஏந்து = ಧರಿಸು, ಇೞೈಯಾರ್ இழையார் = ಆಭರಣಗಳಿಂದ ಅಲಂಕೃತರಾಗಿರುವವರ, ಮನತ್ತೈ மனத்தை = ಮನಸ್ಸನ್ನು, ತಂಜು ಉಡೈ தஞ்சு உடை = ಆಶ್ರಯವನ್ನಿತ್ತು, ಆಳರ್ ಕೊಲ್ ஆளர் கொல் = ಆಳುವವರೋ, ಯಾನ್ யான் = ನಾನು, ಅಱಿಯೇನ್ அறியேன் = ಅರಿಯೆನಲ್ಲ, ಕಂಜನೈ கஞ்சனை = ಕಂಸನನ್ನು, ಅಂಜ அஞ்ச = ಅಂಜುವಂತೆ, ಮುನ್ முன் = ಹಿಂದೆ, ಕಾಲ್ கால் = ಕಾಲನ್ನು, ವಿಶೈತ್ತ விசைத்த = ಬೀಸಿ ಬಡಿದ, ಕಾಳೈ ಅವರ್ ಆವಾರ್ காளை அவர் ஆயார் = ವೀರ್ಯ ಅವರಾಗುತ್ತಾರೆ, ಕಣ್ಡಾರ್ கண்டார் = ಕಂಡವರೆಲ್ಲರೂ, ವಣಙ್ಗುಮ್ வணங்கும்

Garani Srinivasan

= ನಮಸ್ಕರಿಸುವಂಥ, ಅಂಜನಮಾ அஞ்சனம் = ಕಾಡಿಗೆಯ. ಮಾ ಮಲೈಯೆಯು
ಮಾ மாமலையையும் = ಬಲು ದೊಡ್ಡ ಬೆಟ್ಟವನ್ನು. ಒಪ್ಪಾರ್ இலாதார் = ಹೋಲು
ತ್ತಾರೆ. ಅಚ್ಚೋ அச்சோ = ಆಶ್ಚರ್ಯ, ಒರುವರ್ இருவர் = ಎಣೆಯಿಲ್ಲದ
ಆ ಒಬ್ಬರ. ಅಲುಂದಯ ಆ அழகிய ஆ = ಸೌಂದರ್ಯದ ರೀತಿ!

ಬಂದ, ಕಡುಕೋಪದ ಆನೆಯ ದಂತವನ್ನು ಮುರಿದ ಪ್ರಭುವೋ, ಆಭರಣಗಳನ್ನು ಧರಿಸಿ ಅಲಂಕೃತರಾದವರ ಮನಸ್ಸನ್ನು ಅರಿತು, ಆಶ್ರಯವನ್ನಿತ್ತು ಆಳುವವರೋ, ನಾನು ಅರಿಯೆನಲ್ಲ. ಕಂಡವರು ಅಂಜುವಂತೆ, ಅವನ ಕಾಲನ್ನು ಬೀಸಿ ಬಿಸುಟ ಪರಾಕ್ರಮಿಯೇ ಅವರಾಗುತ್ತಾರೆ. ಕಂಡವರೆಲ್ಲರೂ ನಮಸ್ಕರಿಸುವಂಥ ಕಾಡಿಗೆಯ ಬಲು ದೊಡ್ಡ ಬೆಟ್ಟವನ್ನು ಇವರು ಹೋಲುತ್ತಾರೆ. ಆಶ್ಚರ್ಯ, (6)
ಎಣೆಯಿಲ್ಲದ ಆ ಒಬ್ಬರ ಸೌಂದರ್ಯದ ರೀತಿಯೋ!

ಶ್ರೀಕೃಷ್ಣಾವತಾರದ ~~ಪ್ರಸಿದ್ಧ~~ ಮುಖ್ಯವಾದ ಸಾಹಸಕಾರ್ಯಗಳನ್ನು ಇಲ್ಲಿ ಹೇಳಲಾಗಿದೆ. ಮೊದಲನೆಯದು ಕುವಲಯಾಪೀಡವೆಂಬ ಕ್ರೂರವಾದ ಮದ್ದಾನೆಯನ್ನು ದಂಡಿಸಿದ್ದು. ಮಧುರೆಯ ದ್ವಾರದಲ್ಲೇ ಅದು ಕೃಷ್ಣನಿಗಾ ಕಾದು ನಿಂತಿತ್ತು. ಬಾಗಿಲಿಗೆ ಬಂದ ಕೂಡಲೇ, ಅದು ಅವನ ಮೇಲೆರಗಿತು. ಕೃಷ್ಣನು ಅದನ್ನು ಎದುರಿಸಿ, ಅದರ ದಂತವನ್ನು ಮುರಿದುಕೊಂಡು ಅದರಿಂದಲೇ ಆ ಆನೆಯನ್ನು ಕೊಂದು ಹಾಕಿದನು. ಎರಡನೆಯದು ಕಡುದುಷ್ಟನಾದ, ಕೃಷ್ಣನ ಕಡುವೈರಿಯಾದ ಕಂಸನನ್ನು ಕೊಂದದ್ದು. ಅವನು ಒಟ್ಟಿದ್ದ ಶಸ್ತ್ರಜಾಲವನ್ನೆಲ್ಲಾ ಛೇದಿಸಿ, ಕಂಸನಿದ್ದ ಸ್ಥಳಕ್ಕೆ ಕೃಷ್ಣನು ಬಂದನು. ಕಟಕ್ಕನೆ ಅವನ ಮೇಲೆರಗಿ, ಸಿಂಹಾಸನದಿಂದ ಅವನನ್ನು ಕೆಳಕ್ಕೆಳೆದು, ಕಾಲನ್ನು ಹಿಡಿದೆಳೆದು, ಮೇಲೆ ಕುಳಿತು, ಗುದ್ದಿ, ಅವನನ್ನು ಕೊಂದುಹಾಕಿದನು.

ಇನ್ನೊಂದು ಶ್ರೀಕೃಷ್ಣನ ಆಶ್ರಿತರಕ್ಷಣಾಗುಣ.. ಅವನ ಅಪಾರವಾದ ಸೌಂದರ್ಯಕ್ಕೂ, ಅವನ ವೇಣುನಾದಕ್ಕೂ ಮನಸೋತು, ತಮ್ಮ ಮನೆ ಮಠಗಳನ್ನು ಮರೆತು, ಅವನಿದ್ದಲ್ಲಿಗೆ ಬಂದ ಯುವತಿಯರಿಗೆ ಪ್ರಾಣಾಶ್ರಯವನ್ನಿತ್ತು ಅವರನ್ನು ರಕ್ಷಿಸಿದನು.

ಯುವತಿಯು ಹೇಳುತ್ತಾಳೆ: ಸಖೀ, ಇವರು ಯಾರಿರಬಹುದೋ, ನನಗೆ ತಿಳಿಯದಲ್ಲ! ಕುವಲಯಾಪೀಡದ ದಂತವನ್ನು ಮುರಿದು ಹಾಕಿದ ಪರಾಕ್ರಮಿಯೋ. ಎಲ್ಲವನ್ನೂ ತ್ಯಜಿಸಿ ಬಂದ ಯುವತಿಯರಿಗೆ ಪ್ರಾಣಾಶ್ರಯವನ್ನಿತ್ತು ರಕ್ಷಿಸಿದ ಸ್ವಾಮಿಯೋ, ಕಂಸನಿಗೆ ನಡುಕವನ್ನುಂಟು ಮಾಡಿ, ಅವನನ್ನು ಆಸನದಿಂದ ಕೆಳಕ್ಕೆಳೆದು ಕೊಂದು ಹಾಕಿದ ಪರಾಕ್ರಮಿಯೋ ಅರಿಯೆನಲ್ಲ! ಯಾರು ಇವರನ್ನು ಕಂಡರೂ, ಅವರಲ್ಲಿ ಇವರನ್ನು ಕುರಿತು ಭಕ್ತಿ ಗೌರವಗಳು ಉಕ್ಕಿ ಹರಿಯುವುದರಿಂದ, ಅವರು ಇವರ ಕಾಲಡಿಗಳಿಗೆರಗುತ್ತಾರೆ. ಸೌಂದರ್ಯದಲ್ಲಿ ಸಾಟಿಯಿಲ್ಲದವರು ಇವರು. ಕಾಡಿಗೆಯ ಬೆಟ್ಟದಂತೆ ಕಪ್ಪಾದರೂ ಇವರ ಸೌಂದರ್ಯದ ರೀತಿಯನ್ನೇನೆನ್ನೋಣ! ಸಖೀ, ಇವರ ಸೌಂದರ್ಯಕ್ಕೆ ನಾನು ಸೋತಿದ್ದೇನೆ.

7. பிணியவிழ் தாமரை மொட்டலர்த்தும்
பொருநாரைகொல் யானறியேன்,

Garani Srinivasan

பணியுமென் நெஞ்சமிதென்கொல் தோழீ,
பண்டிவர் தம்மையும் கண்டறியோம்,
அணிகெழு தாமரையன்ன கண்ணும்
அங்கையும் பங்கயம், மேனிவானத்து,
அணிகெழு மாமுகிலேயு மொப்பார்
அச்சோ ஒருவரழகியவா.

ಪಿಣಿಯವಿೞ್ ತಾಮರೈ ಮೊಟ್ಟಲರ್ತ್ತುಮ್
ಪೇರರುಳಾಳರ್ ಕೊಲ್ ಯಾನಱಿಯೇನ್,
ಪಣಿಯುಮೆನ ನೆಂಜಮಿದೆನ್ ಕೊಲ್ ತೋೞೀ,
ಪಣ್ಡಿವರ್ ತಮ್ಮೈಯುಮ್ ಕಣ್ಡಱಿಯೇನ್,
ಅಣಿಕೆೞು ತಾಮರೈಯನ್ನ ಕಣ್ಣುಮ್
ಅಙ್ಕೈಯುಮ್ ಪಙ್ಕಯಮ್ ಮೇನಿವಾನತ್ತು,
ಅಣಿಕೆೞು ಮಾಮುಗಿಲೇಯುಮ್ ಒಪ್ಪರ್
ಅಚ್ಚೋ ಒರುವರ್ ಅೞಗಿಯವಾ

ಪಿಣಿ பிணி = ಬಂಧನವನ್ನು, ಅವಿೞ್ அவிழ் = ಬಿಡಿಸುವ, ತಾಮರೈ தா
மரை = ಕಮಲದ, ಮೊಟ್ಟು மொட்டு = ಮೊಗ್ಗನ್ನು, ಅಲರ್ತ್ತುಮ್ பேர அரு
அலர்த்தும் = ಅರಳಿಸುವ, ಪೇರರುಳಾಳರ್ ಕೊಲ್
ளாளர் கொல் = ಮಹಾಕೃಪಾಳುವೋ? ಯಾನ್ யான் = ನಾನು,
ಅಱಿಯೇನ್ அறியேன் = ಅರಿಯೆನು, ಪಣಿಯುಮ್ பணியு
ம் = ನಮಸ್ಕರಿಸುತ್ತದೆ, ಎನ ನೆಂಜಮ್ என நெஞ்சம் = ನನ್ನ
ಮನಸ್ಸು, ~~ಇದೆನ್~~ ಇದು ಎನ್ ಕೊಲ್ இது என் கொல் = ಇದು
ಏನು ಕಾರಣವೋ? ತೋೞೀ தோழீ = ಸಖೀ, ಪಣ್ಡು பண்டு =
ಹಿಂದೆ, ಇವರ್ ತಮ್ಮೈಯುಮ್ இவர் தம்மையும் = ಇವರನ್ನು,
ಕಣ್ಡು ಅಱಿಯೇನ್ கண்டு அறியேன் = ಕಂಡು ಅರಿತವನಲ್ಲ.
ಅಣಿ ಕೆೞು அணி கெழு = ಬಲುಸುಂದರವಾದ, ತಾಮರೈ ಅನ್ನ தா
மரை அன்ன = ತಾವರೆಯಂತೆ, ಕಣ್ಣುಮ್ கண்ணும் = ಕಣ್ಣು
ಗಳನ್ನು, ಅಙ್ಕೈಯುಮ್ அம் கையும் = ಸುಂದರವಾದ ಕೈಗಳೂ,
ಪಙ್ಕಯಮ್ பங்கயம் = ಕಮಲದಂತೆ, ಮೇನಿ மேனி = ದೇಹ
ವು, ಅಣಿ ಕೆೞು அணி கெழு = ಸುಂದರವಾದ, ಮಾ ಮುಗಿಲೇಯು
ಮ್ மா முகிலேயும் = ಮಹಾ ಮುಗಿಲನ್ನೇ, ಒಪ್ಪರ್ ஒப்பர் =
ಹೋಲುತ್ತಾರೆ, ಅಚ್ಚೋ அச்சோ = ಏನಾಶ್ಚರ್ಯ! ಒರುವರ್ ஒரு
வர் = ಎಣೆಯಿಲ್ಲದ ಆ ಒಬ್ಬರ, ಅೞಗಿಯ ಆ அழகிய ஆ =
ಸೌಂದರ್ಯದ ...!

ಬಂಧನವನ್ನು ಬಿಡಿಸುವ ಕಮಲದ ಮೊಗ್ಗನ್ನು ಅರಳಿಸುವ ಮಹಾ
ಕೃಪಾಳುವೋ, ನಾನರಿಯೆನು. ನನ್ನ ಮನಸ್ಸು ತಾನೇತಾನಾಗಿ ನಮಸ್ಕರಿಸು
ತ್ತದೆಯಲ್ಲ! ಇದಕ್ಕೇನು ಕಾರಣವೋ, ಸಖೀ! ಹಿಂದೆ, ನಾನು ಇವರನ್ನು

ಕಂಡು ಅರಿತವನಲ್ಲ. ಬಲು ಸುಂದರವಾದ ತಾವರೆಯ ಹಾಗೆ ಕಣ್ಣುಗಳು,
ಕಮಲದ ಹಾಗೆಯೇ ಸೊಬಗಿನ ಕೈಗಳು, ದೇಹವು ಸುಂದರವಾದ ಮಳೆ
ಮುಗಿಲನ್ನೇ ಹೋಲುತ್ತದೆಯಲ್ಲ! ಏನಾಶ್ಚರ್ಯ. ಎಣೆಯಿಲ್ಲದ ಆ ಒಬ್ಬರ
ಸೌಂದರ್ಯದ ಪರಿ!

"ಬಂಧನವನ್ನು ಬಿಡಿಸುವ ... ಕೃಪಾಳುವೋ. "- ಇಲ್ಲಿ ಎರಡು
ರೂಪಕಗಳು ಕೂಡಿಕೊಂಡಿವೆ. ಹೃದಯಕ್ಕೂ ಕಮಲಕ್ಕೂ ಇರುವ ಒಂದು
ರೂಪಕ. ಪರಮಾತ್ಮನಿಗೂ ಸೂರ್ಯನಿಗೂ ಇರುವ ಮತ್ತೊಂದು ರೂಪಕ (ಹೋಲಿಕೆ)
ಎರಡನ್ನು ಜೋಡಿಸಿ ಸುಂದರವಾದ ರೂಪಕವೊಂದನ್ನು ಮಾಡಲಾಗಿದೆ ಎನ್ನಬಹುದು.

ಕಮಲವು ಮೊಗ್ಗಾಗಿರುವಾಗ ಅದರ ಸೌಂದರ್ಯವು ಅಷ್ಟು ಚೆನ್ನಾಗಿ ತಿಳಿ
ಯುವುದಿಲ್ಲ. ಸೂರ್ಯನ ಕಿರಣಗಳು ಅದರ ಮೇಲೆ ಬಿದ್ದ ಕೂಡಲೇ, ಅದು
ಅರಳುತ್ತದೆ. ಅದರ ದಳಗಳ ಚೆಲುವೂ, ಹೊರಹೊಮ್ಮುವ ಪರಿಮಳದ ಸುವಾಸನೆಯೂ
ಕಣ್ಮನಗಳನ್ನು ಆಹ್ಲಾದಿಸುವುವು. ಕಮಲವು ಹಾಗೆ ಅರಳುವುದಕ್ಕೆ,
ತನ್ನ ಚೆಲುವನ್ನು ತೋರ್ಪಡಿಸುವುದಕ್ಕೆ ಸೂರ್ಯನ ಕಿರಣಗಳೇ ಕಾರಣ
ವಲ್ಲವೇ? ಹಾಗೆಯೇ ಮನುಷ್ಯನ ಹೃದಯವೂ. ಅದು ಮೊಗ್ಗಾಗಿದ್ದು,
ಅದರ ಬಗೆಬಗೆಯ ಆಸೆಗಳೂ ಭಾವನೆಗಳೂ, ಅಲ್ಲಿಯೇ ಅಡಗಿಕೊಂಡಿದ್ದು,
ಸಂಕುಚಿತವಾದ, ಪಾಪಭೂಯಿಷ್ಠವಾದ, ಪ್ರಾಪಂಚಿಕ ಭಾವನೆಗಳಿಗೆ ಎಡೆಕೊಡು
ತ್ತದೆ. ಪರಮಕೃಪಾಳುವಾದ ಭಗವಂತನ ಕೃಪಾಕಟಾಕ್ಷ ಮನುಷ್ಯನ ಮೇ
ಲೆ ಬಿದ್ದ ಕೂಡಲೇ, ಅವನ ಹೃದಯವು ಅರಳುತ್ತದೆ. ~~[illegible]~~ ಪ್ರಾಪಂ
ಚಿಕ ಮಟ್ಟದಿಂದ ಮೇಲಕ್ಕೇರುತ್ತದೆ. ಅಲ್ಲಿಯೇ ಬಿದ್ದುಕೊಳ್ಳುತ್ತಾ, ಪುನ
ರ್ಜನ್ಮದ ಸಂಕಟವನ್ನು ಅನುಭವಿಸುವುದರ ಬದಲಾಗಿ, ಭಗವಂತನ ತಿರು
ವಡಿಗಳಲ್ಲಿ ಮನಸ್ಸು ನೆಲೆಗೊಳ್ಳುವಂತಾಗುತ್ತದೆ. ಹೀಗಾಗಿ, ಮನುಷ್ಯನು
ಉದ್ಧಾರಗೊಳ್ಳುತ್ತಾನೆ.

ರೂಪಕವನ್ನು ಬಿಡಿಸಿ ಹೇಳಬಹುದಾದರೆ, ಮೊಗ್ಗಾಗಿರುವ ಕಮಲವನ್ನು
ಸೂರ್ಯನು ತನ್ನ ಕಿರಣಗಳ ಪ್ರಭಾವದಿಂದ
ಅರಳಿಸಿ, ಅದರ ಚೆಲುವನ್ನೂ ಪರಿಮಳವನ್ನೂ ಹರಡಿ ಆನಂದವನ್ನು ತುಂಬು
ವಹಾಗೆ, ಮನುಷ್ಯನ (ಚೇತನನ) ಹೃದಯವನ್ನು ಭಗವಂತನು ತನ್ನ
ಕೃಪಾಕಟಾಕ್ಷದ ಪ್ರಭಾವದಿಂದ ಅರಳಿಸಿ, ಸಂಕುಚಿತವಾದ ಪ್ರಾಪಂಚಿಕ ಭಾ
ವನೆಗಳ ನಡುವಿನಿಂದ, ಶುದ್ಧವಾದ (ವಿಕಸಿತವಾದ) ಪರಮಪದದ
ನಿತ್ಯಾನಂದದತ್ತ ಒಯ್ಯುತ್ತದೆ.

"ನನ್ನ ಮನಸ್ಸು ... ಕಾರಣವೋ. " ಭಗವತ್ಕೃಪೆ
ಯಿಂದ, ಉಜ್ಜೀವನಗೊಂಡದ್ದು ಚೇತನನ ಮನಸ್ಸು (ಹೃದಯ) - ದೇಹ
ವಲ್ಲ. ಆದ್ದರಿಂದ, ಭಗವಂತನ ತಿರುವಡಿಗಳಿಗೆ, ಅದು, ಬೇರೆಯಾವುದೂ
ಪ್ರಭಾವ ಪ್ರೇರಣೆಗೆ ಒಳಪಡದಂತೆ, ತಾನೇತಾನಾಗಿ, ಶರಣಾಗು
ತ್ತದೆ. ಕೃತಜ್ಞತೆಯ ಪ್ರಣಾಮಗಳನ್ನು ಸಲ್ಲಿಸುತ್ತದೆ.

(ಆಳ್ವಾರರು [illegible] ಹೇಳುತ್ತಾಳೆ: ಸಖೀ, ಇವರ ಸೌಂದರ್ಯ

ವನ್ನು ಹೇಗೆ ಹೇಗೆ ವರ್ಣಿಸಿದರೂ ಸಾಲದೆನಿಸುತ್ತದೆಯಲ್ಲ! ಇದುವರೆಗೂ ನಾನು ಇವರನ್ನು ಕಂಡವಳಲ್ಲ. ಆದರೆ, ಇವರಿಗೆ ನನ್ನ ಮನಸ್ಸು ಸೋತೇ ಸೋತಿತು ಆ ಏಕಾತ್ಮದೆಯಲ್ಲ. ಅದೇಕೆ ಹೀಗೆ ಎಂಬುದೇ ತಿಳಿಯುವುದಿಲ್ಲವಲ್ಲ! ಇವರ ಕಣ್ಣುಗಳು ಬಲು ಸುಂದರವಾದ ತಾವರೆಯ ದಳದಂತಿವೆ. ಇವರ ಕೈಗಳು ತಾವರೆ ಹೂವಿನಂತಿವೆ. ಇವರ ದೇಹವಂತೂ ಆಕರ್ಷಕ ರಮ್ಯವಾದ ಮಹಾ ಮುಗಿಲಿನಂತಿದೆ. ಇವರ ಕೃಪೆಯೇ, ನನ್ನ ಸಂಕುಚಿತ ಹೃದಯವನ್ನೇ ಅರಳಿಸಿಬಿಟ್ಟಿದೆಯಲ್ಲ. ಶಾಂತಿಯೇ ಇಲ್ಲದ ಈ ಸೌಂದರ್ಯನಿಧಿಗೆ ನಾನು ಸೋತುಹೋದೆ, ಸಖೀ.

8. மஞ்சுயர் மாமதி தீண்ட நீண்ட
மாலிருஞ்சோலை மணாளர் வந்து, என்
நெஞ்சுள்ளும் கண்ணுள்ளும் நின்று
நீங்கார் நீர்மலையார் கொல்? நினைக்கமாட்டேன்,
மஞ்சுயர் பொன்மலை மேலெழுந்த
மாமுகில் போன்றுளார் வந்து காணீர்,
அஞ்சிறைப் புள்ளும் ஒன்றேறி வந்தார்
அச்சோ ஒருவரழகியவா.

ಮಂಜುಯರ್ ಮಾಮದಿ ತೀಣ್ಡ ತೀಣ್ಡ
ಮಾಲಿರುಂಜೋಲೈ ಮಣಾಳರ್ ವನ್ದು, ಎನ್
ನೆಂಜುಳ್ಳುಮ್ ಕಣ್ಣುಳ್ಳುಮ್ ನಿನ್ರು
ನೀಙ್ಗಾರ್ ನೀರ್ಮಲೈಯಾರ್ ಕೊಲ್? ನಿನೈಕ್ಕಮಾಟ್ಟೇನ್,
ಮಂಜುಯರ್ ಪೊನ್ಮಲೈ ಮೇಲೆಳುನ್ದ
ಮಾಮುಗಿಲ್ ಪೋನ್ರುಳರ್ ವನ್ದು ಕಾಣೀರ್,
ಅಂಜಿರೈಪ್ಪುಳ್ಳುಮ್ ಒನ್ರೇರಿ ವನ್ದಾರ್
ಅಚ್ಚೋ ಒರುವರಳಗಿಯವಾ.

ಮಂಜು மஞ்சு = ಮೋಡಗಳು, ಉಯರ್ உயர் = (ಮುಟ್ಟುವಷ್ಟು) ಎತ್ತರದ, ಮಾಮದಿ மாமதி = ಪೂರ್ಣಚಂದ್ರನು, ತೀಣ್ಡ ತೀಣ್ಡ தீண்ட தீண்ட = ಮುಟ್ಟುತ್ತಾ ಮುಟ್ಟುತ್ತಾ ಇರುವ, ಮಾಲಿರುಂಜೋಲೈ மாலிருஞ்சோலை = ತಿರುಮಾಲಿರುಂಜೋಲೈಯಲ್ಲಿ ನೆಲೆಸಿರುವ, ಮಣಾಳರ್ மணாளர் = ಸ್ವಾಮಿಯು, ವನ್ದು வந்து = ಬಂದು, ಎನ್ என் = ನನ್ನ, ನೆಂಜುಳ್ಳುಮ್ நெஞ்சுள்ளும் = ಅಂತರಂಗದಲ್ಲಿಯೂ, ಕಣ್ಣುಳ್ಳುಮ್ கண்ணுள்ளும் = ಕಣ್ಣಿನ ಒಳಗೂ, ನಿನ್ರು நின்று = ನೆಲಸಿ, ನೀಙ್ಗಾರ್ நீங்கார் = ಅಲ್ಲಿಂದ ಹೊರಕ್ಕೆ ಹೋಗಲೊಲ್ಲರು, ನೀರ್ಮಲೈಯಾರ್ ಕೊಲ್ நீர்மலையார் கொல் = ತಿರುನೀರ್ಮಲೈಯ ಸ್ವಾಮಿಯಂತೆಯೇ?, ನಿನೈಕ್ಕಮಾಟ್ಟೇನ್ நினைக்கமாட்டேன் = ಚಿಂತಿಸಲಾರೆನಲ್ಲ, ಮಂಜುಉಯರ್ மஞ்சுஉயர் = ಮೋಡಗಳ ಎತ್ತರದ, ಪೊನ್ಮಲೈ ಮೇಲ್ பொன் மலை மேல் = ಚಿನ್ನದ ಬೆಟ್ಟದ ಮೇಲೆ, ಎಳುನ್ದ எழுந்த=

Garani Srinivasan

ನೆಲಸಿರುವ, ಮಾ ಮದಿಳ್ ಮಾಮುಕಿಲ್ = ಬಲುದೊಡ್ಡ ಮೋಡದ, ಪೋನ್ಱು
ಪೋಣ್ಱು = ಹಾಗೆಯೇ, ಉಳರ್ ಉಣಾರ್ = ಇದ್ದಾರೆ, ವನ್ದು ಕಾಣೀರ್ ವನ್ದು
ಕಾಣಾರ್ = ಬಂದು ನೋಡಿರಿ. ಅಮ್ ಶಿಱೈ ಅಂ ಶಿಱೈಯ = ಸುಂದರವಾದ
ರೆಕ್ಕೆಗಳುಳ್ಳ, ಪುಳ್ಳುಮ್ ಒನ್ಱು ಪುಣರ್ನ್ದುಮ್ ಕಾಣ್ಱು = ಪಕ್ಷಿಯೊಂ
ದನ್ನು, ಏಱಿ = ಹತ್ತಿ, ವನ್ದಾರ್ ವನ್ದಾರ್ = ಬಂದಿದ್ದಾರೆ, ಅಚ್ಚೋ
ಅಚ್ಚೋ = ಏನಾಶ್ಚರ್ಯ, ಒರುವರ್ ಇರುವರ್ = ಸಾಟಿಯಿಲ್ಲದ ಆ ಒಬ್ಬ
ರ, ಅಳಗಿಯ ಆ ಅಳಗಿಯವಾ = ಸೌಂದರ್ಯದ ಪರಿ!

ಮೋಡಗಳ ಎತ್ತರದಲ್ಲಿ, ಪೂರ್ಣ ಚಂದ್ರನು ಮುಟ್ಟುತ್ತಾ ಮುಟ್ಟುತ್ತಾ ಇರುವ, ತಿರುಮಾಲಿರುಂಜೋಲೈ ಬೆಟ್ಟದ ಮೇಲೆ ನೆಲಸಿರುವ ಸ್ವಾಮಿಯು ಬಂದು ನನ್ನ ಅಂತರಂಗದಲ್ಲಿಯೂ ನನ್ನ ಕಣ್ಣುಗಳಲ್ಲಿಯೂ ನೆಲಸಿದ್ದಾರೆ. ತಿರುನೀರ್ಮಲೈಯಲ್ಲಿರುವ ಸ್ವಾಮಿ ಅಲ್ಲಿಂದ ದೂರಕ್ಕೆ ಹೋಗಲಾರರು. ಮೋಡಗಳ ಎತ್ತರದ ಚಿನ್ನದ ಬೆಟ್ಟಯೋ ಇವರು? ಚಿಂತಿಸಲಾರೆನಲ್ಲ! ಮೋಡಗಳ ಎತ್ತರದ ಚಿನ್ನದ ಬೆಟ್ಟದ ಮೇಲೆ ನೆಲಸಿರುವ ಬಲುದೊಡ್ಡ ಮೋಡದಂತೆಯೇ (ಇವರು) ಇದ್ದಾರೆ. ಇವರು ಸುಂದರವಾದ ರೆಕ್ಕೆಗಳ ಪಕ್ಷಿಯೊಂದನ್ನು ಏರಿ ಬಂದಿದ್ದಾರೆ. ಬಂದು ನೋಡಿರಿ! ಏನಾಶ್ಚರ್ಯ! ಸಾಟಿಯಿಲ್ಲದ ಆ ಒಬ್ಬರ ಸೌಂದರ್ಯದ ಪರಿ! (8)

ಇದುವರೆಗೆ ಯುವತಿಯಾಗಿ ತನ್ನ ಪತಿಯಲ್ಲಿ ತನ್ನ ಅಂತರಂಗದ ಗುಟ್ಟನ್ನು ಹೇಳಿಕೊಳ್ಳುತ್ತಿದ್ದ ಆಳ್ವಾರರು, ಇಲ್ಲಿ ಇದ್ದಕ್ಕಿದ್ದಂತೆ ಅದನ್ನೆಲ್ಲಾ ಮರೆತು, ಇತರ ಭಕ್ತರಿಗೆ ತಮ್ಮ ಆನಂದದ ಪರಿಯನ್ನು ವಿವರಿಸುತ್ತಾ ಅದಕ್ಕೆ ಕಾರಣವಾದ ಭಗವಂತನನ್ನು ಕಣ್ಣು ಮುಂದೆಯೇ ದರ್ಶನ ಮಾಡಿ ಆನಂದಿಸಬೇಕೆಂದು ಕರೆಕೊಡುತ್ತಿದ್ದಾರೆ.

ಯುವತಿಯು (ಆಳ್ವಾರರು) ಹೇಳುತ್ತಾಳೆ: ಮೇಘ ಮಂಡಲವನ್ನು ಮುಟ್ಟುವಷ್ಟು ಎತ್ತರದ, ಪೂರ್ಣ ಚಂದ್ರನು ಪವಡಿಸಿಕೊಂಡು ಹೋಗುವಂತಹ ತಿರುಮಾಲಿರುಂಜೋಲೈ ಮಲೈ ಕ್ಷೇತ್ರದಲ್ಲಿ ನೆಲಸಿರುವ ಸ್ವಾಮಿಯು ನನ್ನ ಮೇಲೆ ಕೃಪೆದೋರಿ, ಬಂದು, ನನ್ನ ಕಣ್ಣುಗಳಲ್ಲಿಯೂ, ಆಮೂಲಕ ನನ್ನ ಅಂತರಂಗದಲ್ಲಿಯೂ ಶಾಶ್ವತವಾಗಿ ನೆಲಸಿದ್ದಾರಲ್ಲ! ಈ ಸ್ವಾಮಿಯು ತಿರುನೀರ್ಮಲೈಯಲ್ಲಿರುವವರೋ ಯೋ? ನನಗೆ ತಿಳಿಯದೆ ಇದೆಯಲ್ಲ. ಇವರು ಇರುವ ಪರಿಯಂತೂ! ಬಹಳ ಎತ್ತರವಾದ ಚಿನ್ನದ ಬೆಟ್ಟದ ಮೇಲೆ ನಿಂತಿರುವ ಕಾರ್ಮುಗಿಲನ ಹಾಗೆ, ಅಪರೂಪ ತೇಜಸ್ಸಿನಿಂದ ಕೂಡಿದ್ದಾರೆ. ಶ್ರೀಮನ್ನಾರಾಯಣನೇ ಗರುಡಾರೂಢರಾಗಿ ಇಲ್ಲಿಗೆ ಬಂದಿದ್ದಾರೆ. ಬಂದು ನೋಡಿ, ಇವರ ಸೌಂದರ್ಯದ ಪರಿಯನ್ನು.

ತಿರುಮಾಲಿರುಂಜೋಲೈ ಮಲೈ, ತಿರುನೀರ್ಮಲೈ - ಎಂಬುವು ದಿವ್ಯ ಕ್ಷೇತ್ರಗಳು. ಆಳ್ವಾರರು ಅವುಗಳಲ್ಲಿ ಭಗವಂತನನ್ನು ದರ್ಶಿಸಿ, ಹಾಡಿಕೊಂಡಿದ್ದಾರೆ.

ಶ್ರೀಮನ್ನಾರಾಯಣನಿಗೆ ಗರುಡಪಕ್ಷಿಯೇ ವಾಹನ.

Garani Srinivasan

ಭಗವಂತನ ದಿವ್ಯಶರೀರವನ್ನು, ದೇಹದ ಬಣ್ಣವನ್ನು ನೋಡುವುದಕ್ಕೆ ಬಳಸುವ ಉಪಮಾನ ಬಹಳ ರಮ್ಯವಾಗಿದೆ. ಬೆಟ್ಟ ಚಿಕ್ಕದಾದರೆ, ಅದು ಎಂಥ ಸುಂದರವಾದ ಹೂಗಳನ್ನು ತನ್ನದು ಧರಿಸುತ್ತದೆ! ಕಾರ್ಮುಗಿಲು ಅದರ ಮೇಲೆ ಬಂದು ನಿಂತರೆ, ಅದರ ಅಪೂರ್ವ ಶೋಭೆ ನೋಡಿದರೆ, ಬೆಟ್ಟದಂತೆ ಹೂವು ಮತ್ತು ಹೂವು ಸೇರಿಕೊಂಡು ಬಹಳ ಅಪಾರವಾದ ಶೋಭಾಸ್ಪದ ಆಕರ್ಷಕವಾಗಿ ಕಂಡುಬರುತ್ತದೆಯಷ್ಟೆ! ಹಾಗೆಯೇ ಭಗವಂತನ ದಿವ್ಯ ಶರೀರವೂ, ಎಲ್ಲೆಯಿಲ್ಲದ್ದಾಗಿ, ಆಕರ್ಷಕವಾಗಿರುತ್ತದೆ, ಎನ್ನುತ್ತಾರೆ ಆಳ್ವಾರರು.

9. எண்டிசையுமெறிநீர்க்கடலும்
ஏழுலகுமுடனே விழுங்கி,
மண்டியோராலிலைப்பள்ளிகொள்ளும்
மாயர்கொல்? மாயமறியமாட்டேன்,
கொண்டல்நன்மால்வரையேயுமொப்பார்
கொங்கலர்தாமரைக்கண்ணும்வாயும்,
அண்டத்தமரர் பணியநின்றார்
அச்சோவொருவரழகியவா.

ಎಣ್ಡಿಶೈಯುಮೆಱಿನೀರ್ಕ್ಕಡಲುಮ್
ಏೞುಲಗುಮುಡನೇ ವಿೞುಙ್ಗಿ,
ಮಣ್ಡಿಯೋರಾಲಿಲೈಪ್ಪಳ್ಳಿಕೊಳ್ಳುಮ್
ಮಾಯರ್ಕೊಲ್? ಮಾಯಮಱಿಯಮಾಟ್ಟೇನ್,
ಕೊಣ್ಡಲ್ ನನ್ಮಾಲ್ವರೈಯೇಯುಮೊಪ್ಪಾರ್
ಕೊಙ್ಗಲರ್ ತಾಮರೈಕ್ಕಣ್ಣುಮ್ ವಾಯುಮ್,
ಅಣ್ಡತ್ತಮರರ್ ಪಣಿಯನಿನ್ಱಾರ್
ಅಚ್ಚೋ ಒರುವರೞಗಿಯವಾ. (ಎಂಟುದಿಕ್ಕುಗಳನ್ನೂ)

ಎಣ್ ತಿಶೈಯುಮ್ எண் திசையும் = ಎಂಟು ದಿಕ್ಕುಗಳಲ್ಲೂ/ಎಂಟು, ಕಡಲುಮ್ கடலும் = ಕಡಲು ನೀರ್ எறிநீர் = ಅಲೆಗಳಿಂದ(ಕೂಡಿದ) ನೀರಾದ, ಕಡಲುಮ್ கடலும் = ಕಡಲುಗಳನ್ನೂ, ಏೞುಲಗುಮ್ ஏழு உலகும் = ಏಳುಲೋಕಗಳನ್ನೂ, ಉಡನೇ உடனே = ಒಟ್ಟಿಗೆ, ವಿೞುಙ್ಗಿ விழுங்கி = ನುಂಗಿ, ಮಣ್ಡಿ மண்டி = ದಾಯಾಗಿ, ಓರ್ ஓர் = ಅಪೂರ್ವವಾದ, ಆಲ್ ಇಲೈ ஆல் இலை = ಆಲದ ಎಲೆಯ ಮೇಲೆ, ಪಳ್ಳಿಕೊಳ್ಳುಮ್ பள்ளி கொள்ளும் = ಮಲಗಿರುವ, ಮಾಯರ್ ಕೊಲ್ மாயர் கொல் = ಆಶ್ಚರ್ಯಕರರೋ? ಮಾಯಮ್ மாயம் = (ಇವರ) ವಿಸ್ಮಯಕಾರ್ಯವನ್ನು, ಅಱಿಯಮಾಟ್ಟೇನ್ அறியமாட்டேன் = ಅರಿಯಲಾರೆ, ಕೊಣ್ಡಲ್ கொண்டல் = ಕಾರ್ಮುಗಿಲು, ನಲ್ நல் = ಒಳ್ಳೆಯ, ಮಾಲ್ ವರೈಯೇಯುಮ್ மால் வரையேயும் = ಬಲುದೊಡ್ಡ ಬೆಟ್ಟದಂತೆಯೇ, ಒಪ್ಪಾರ್ ஒப்பார் = ಹೋಲುತ್ತಾರೆ. ಕೊಙ್ಗು ಅಲರ್ கொங்கு அலர் =

ಪರಿಮಳವನ್ನು ಹರಡುವ, ಕಾಮರ್ த்தாமரை = ತಾವರೆಯಂತೆ, ಕಣ್ಣುಮ್
கண்ணும் = ಕಣ್ಣುಗಳನ್ನು, ವಾಯುಮ್ வாயும் = ಬಾಯನ್ನು,
ಉಳ್ಳವರಾಗಿ, ಅಣ್ಡತ್ತು ಅಮರರ್ அண்டத்து அமரர் = ಬ್ರಹ್ಮಾಂ
ಡದಲ್ಲಿರುವ ಅಮರರು, ಪಣಿಯ பணிய = ಸೇವೆ ಮಾಡುವಂತೆ,
ನಿನ್ಱಾರ್ நின்றார் = ನಿಲ್ಲಿದ್ದಾರೆ, ಅಚ್ಚೋ அச்சோ = ಏನಾಶ್ಚ
ರ್ಯ, ಒರುವರ್ ஒருவர் = ಎಣೆಯಿಲ್ಲದ ಒಬ್ಬರ, ಅಳಗಿಯ ಆ
அழகியா = ಸೌಂದರ್ಯದ ಪರಿಯೋ!

ಎಂಟು ದಿಕ್ಕುಗಳನ್ನು, ಅವುಗಳಲ್ಲಿ ಅಲೆಗಳಿಂದ ಕೂಡಿದ ಕಡಲುಗಳನ್ನು, ಏಳು ಲೋಕಗಳನ್ನು ಒಟ್ಟಿಗೆ ನುಂಗಿ, ಹಾಯಾಗಿ ಅಪಾರವಾದ ಆಲದೆಲೆಯ ಮೇಲೆ ಪವಡಿಸುವ ಆಶ್ಚರ್ಯಕಾರಿಯೋ? (ಇವರ) ಆಶ್ಚರ್ಯಕರವಾದ ಕಾರ್ಯವನ್ನು ಅರಿತುಕೊಳ್ಳಲಾರೆನಲ್ಲ. ಕಾರ್ಮುಗಿಲನ್ನು, ಕಾರ್ಮುಗಿಲು ಆಶ್ರಯಿಸುವ ಬಲುದೊಡ್ಡ ಬೆಟ್ಟವನ್ನು ಇವರು ಹೋಲುತ್ತಾರೆ. ಪರಿಮಳವನ್ನು ಹರಡುವ ತಾವರೆಯಂತೆ ಇವರು ಕಣ್ಣುಗಳನ್ನು ಬಾಯನ್ನು ಉಳ್ಳವರಾಗಿ, ಬ್ರಹ್ಮಾಂಡದಲ್ಲಿರುವ ಅಮರರು ಬಂದು ಸೇವೆ ಮಾಡುವಂತೆ ನಿಲ್ಲಿದ್ದಾರೆ. ಎಣೆಯಿಲ್ಲದ ಒಬ್ಬರ ಸೌಂದರ್ಯದ ಪರಿಯೇನಾಶ್ಚರ್ಯ! (9)

ಯುವತಿಯು (ಆಳ್ವಾರರು) ಹೇಳುತ್ತಾಳೆ: ಸಖೀ, ಇವರು ಮಾಡಿದ ಅದ್ಭುತಾಶ್ಚರ್ಯಕಾರ್ಯವೋ! ಪ್ರಳಯಕಾಲ ಬಂದಾಗ, ಇವರು ಸ್ವಯವಾಗಿ ಇಲ್ಲಿರುವ ಎಲ್ಲಾ ವಸ್ತುಗಳನ್ನು ಒಂದೇ ಬಾರಿಗೆ ನುಂಗಿ ಬಿಡುತ್ತಾರೆ. ಅನಂತರ, ಬಹು ದೀರ್ಘಕಾಲ, ಏನೂ ಅರಿಯದ ಶಿಶುವಾಗಿ ~~ಆಲದೆಲೆಯ~~ ವಿಸ್ತಾರವಾದ ಕಡಲಲ್ಲಿ ಆಲದೆಲೆಯ ಮೇಲೆ ಹಾಯಾಗಿ ಮಲಗಿರುತ್ತಾರೆ. ಇವರ ಮಾಯೆಯನ್ನು, ಇವರ ಆಶ್ಚರ್ಯಕಾರಕ ಕಾರ್ಯವನ್ನು ನಾನು ಅರಿತುಕೊಳ್ಳಲಾರೆನಲ್ಲ! ಇವರ ರೂಪವನ್ನು ಕಾರ್ಮುಗಿಲಿಗೆ ಹೋಲಿಸಲೇ? ಅಥವಾ, ಆ ಕಾರ್ಮುಗಿಲು ಆಶ್ರಯಿಸುವಂಥ ಬಲುದೊಡ್ಡ ಬೆಟ್ಟದಂತೆ ಇವರು ದಿವ್ಯಸುಂದರವನ್ನುಳ್ಳವರೇ? ಇವರ ಕಣ್ಣುಗಳು ಸುಂದರವಾದ ಕಮಲದ ದಳದಂತೆ ವಿಶಾಲವೂ, ಆಕರ್ಷಕವೂ. ಇವರ ಬಾಯಿಯಂತು ಅರಳಿದ ಕಮಲದಂತೆ ಸುಂದರವಾಗಿ ಪರಿಮಳಪೂರ್ಣವಾದದ್ದು. ಬ್ರಹ್ಮಾಂಡದ ಎಲ್ಲಾ ದೇವರುಗಳೂ ಇವರ ಬಳಿಗೆ ಬಂದು, ಇವರ ಪಾದಗಳಿಗೆರಗುತ್ತಾರೆ. ಇವರ ಎಣೆಯಿಲ್ಲದ ಸೌಂದರ್ಯದ ಪರಿಯನ್ನೇನೆಂದು ಹೇಳಲಿ! ಅದಕ್ಕೆ ನಾನು ಬೆರಗಾಗಿ ಹೋದೆ, ಸಖಿ.

10. அன்னமுங் கேழலு மீனுமாய
ஆதியை நாகையழகியாரை,
கன்னிநன் மாமதிள் மங்கைவேந்தன்
காமருசீர்க் கலிகன்றி, குன்றா
வின்னிசையால் சொன்ன செஞ்சொல்மாலை
யேழுமிரண்டுமோ ரொன்றும் வல்லார்,

மன்னவராயுலகாண்டு மீண்டும்
வானவராய் மகிழ்வெய்துவரே

ಅನ್ನಮುಂ ಕೇೞಲುಮ್ ಮೀನುಮಾಯ
ಆದಿಯೈ ನಾಗೈಯೞಗಿಯಾರೈ,
ಕನ್ನಿನನ್ ಮಾಮದಿಳ್ ಮಙ್ಗೈವೇನ್ದನ್
ಕಾಮರುಶೀರ್ ಕ್ಕಲಿಕನ್ರಿ, ಕುನ್ರಾ
ಇನ್ನಿಶೈಯಾಲ್ ಶೊನ್ನ ಶೆಂಜೊಲ್ ಮಾಲೈ
ಏೞುಮಿರಣ್ಡುಮೋರೊನ್ರುಮ್ ವಲ್ಲಾರ್,
ಮನ್ನವರಾಯುಲಗಾಣ್ಡು ಮೀಣ್ಡುಮ್
ವಾನವರಾಯ್ ಮಗಿೞ್ವೆಯ್ದುವರೇ

ಅನ್ನಮುಮ್ அன்னமும் = ಹಂಸವಾಗಿಯೂ, ಕೇೞಲುಮ್ கேழலும் = ವರಾಹನಾಗಿಯೂ, ಮೀನುಮ್ மீனும் = ಮೀನಾಗಿಯೂ ಆಯ ஆய = ಆದ, ಆದಿಯೈ ஆதியை = ಆದಿಕಾರಣನನ್ನು, ನಾಗೈ நாகை = ತಿರುನಾಗೈ ಕ್ಷೇತ್ರದಲ್ಲಿರುವವನೂ, ಅೞಗಿಯಾರೈ அழகியாரை = ದಿವ್ಯಸುಂದರನೂ ಆದವನನ್ನು (ಭಗವಂತನನ್ನು),, ಕನ್ನಿ கன்னி = ಶಾಶ್ವತವಾದ, ನಲ್ ಮಾ ಮದಿಳ್ நல் மா மதிள் = ಒಳ್ಳೆಯ ದೊಡ್ಡ ಕೋಟೆಯುಳ್ಳ, ಮಙ್ಗೈ மங்கை = ತಿರುಮಂಗೈನಾಡಿನ, ವೇನ್ದನ್ வேந்தன் = ಒಡೆಯನೂ, ಕಾಮರು ಶೀರ್ காமரு சீர் = ಆಶೆಪಡುವಂಥ ಸದ್ಗುಣಾದಿಂ ತುಂಬಿರುವವನೂ, ಕಲಿಕನ್ರಿ கலிகன்றி = ಕಲಿಧ್ವಂಸಿಯೂ ಆದವನು, (ತಿರುಮಂಗೈ ಆೞ್ವಾರರು), ಕುನ್ರಾ குன்றா = ಕುಂದದ [struck out] ಇಲ್ಲದ, ಇನ್ இன் = ಇನಿದಾದ, ಇಶೈಯಾಲ್ இசையால் = ಹಾಡಿನ ಮೂಲಕ, ಶೊನ್ನ சொன்ன = ಹೇಳಿದ, ಶೆಮ್ ಶೊಲ್ ಮಾಲೈ செம் சொல் மாலை = ಸೊಗಸಾದ ಪಾಶುರಮಾಲೆಯಾದ, ಏೞುಮ್ ಇರಣ್ಡುಮ್ ಓರ್ ಒನ್ರುಮ್ ஏழும் இரண்டும் ஓர் ஒன்றும் = ಏಳು ಎರಡು ಮತ್ತು ಒಂದನ್ನು (ಹತ್ತನ್ನು), ವಲ್ಲಾರ್ வல்லார் = ಬಲ್ಲವರು, ಮನ್ನವರಾಯ್ மன்னவராய் = ಚಕ್ರವರ್ತಿಗಳಾಗಿ, ಉಲಗು ಆಣ್ಡು உலகு ஆண்டு = ಈ ಲೋಕವನ್ನಾಳಿ, ಮೀಣ್ಡುಮ್ மீண்டும் = ಆ ಬಳಿಕ, ವಾನವರ್ ಆಯ್ வானவர் ஆய் = ನಿತ್ಯಸೂರಿಗಳಾಗಿ (ಅಮರರಾಗಿ), ಮಗಿೞ್ವು ಎಯ್ದುವರೇ மகிழ்வு எய்துவரே = ನಿತ್ಯಾನಂದವನ್ನು ಅನುಭವಿಸುತ್ತಾರೆ.

ಹಂಸ, ವರಾಹ, ಮೀನು ಆದ ಆದಿಕಾರಣನನ್ನು, ತಿರುನಾಗೈ ಕ್ಷೇತ್ರದಲ್ಲಿ ನೆಲಸಿರುವವನನ್ನು, ದಿವ್ಯಸುಂದರನನ್ನು ಕುರಿತು ಶಾಶ್ವತವಾದ ಒಳ್ಳೆಯ ದೊಡ್ಡ ಕೋಟೆಯುಳ್ಳ ತಿರುಮಂಗೈನಾಡಿನ ಒಡೆಯನೂ, ಆಶಿಸುವಂಥ ಸದ್ಗುಣಸಂಪನ್ನನೂ, ಕಲಿಧ್ವಂಸಿಯೂ ಆದವನು (ತಿರುಮಂಗೈ ಆೞ್ವಾರರು), ಕೊರತೆಯಿಲ್ಲದ ಇನಿದಾದ ಹಾಡಿನ ಮೂಲಕ ಹೇಳಿದ ಸೊಗಸಾದ ಈ ಹತ್ತು ಪಾಶುರಗಳ

ಮಾಲೆಯನ್ನು ಬಲ್ಲವರು ಚಕ್ರವರ್ತಿಗಳಂತೆ ಈ ಲೋಕವನ್ನಾಳಿ, ಆಬಳಿಕ ಅಮರರಾಗಿ ನಿತ್ಯಾನಂದವನ್ನು ಅನುಭವಿಸುವವರಾಗುತ್ತಾರೆ.

ಎಲ್ಲಕ್ಕೂ ಆದಿಯೂ ಕಾರಣನೂ ಆಗಿರುವವನೂ, ತಿರುನಾಡ್ತೆ ಮುಂತಾದ ಪವಿತ್ರ ಕ್ಷೇತ್ರಗಳಲ್ಲಿ ನೆಲಸಿರುವವನೂ, ದಿವ್ಯಸುಂದರನೂ ಆದ ಭಗವಂತನ ಸೌಶೀಲ್ಯ, ವಾತ್ಸಲ್ಯ, ಕಾರುಣ್ಯಾದಿ ಸಕಲ ಕಲ್ಯಾಣ ಗುಣಗಳನ್ನು ಕುರಿತು ಈ ತಿರುಮಾಲೆಯ ಪಾಶುರಗಳು ಹೇಳುತ್ತವೆ. ಭಗವಂತನ ಅನುಪಮಸೌಂದರ್ಯಕ್ಕೆ ಮನಸೋತ ಭಕ್ತನಿಗೆ ಸ್ವಾಮಿಯ ಸೌಂದರ್ಯವನ್ನು ಚಿಂತಿಸಿ ಚಿಂತಿಸಿ ಆನಂದಿಸುವುದೇ ಮುಖ್ಯವಾದ ಕೆಲಸ! ಎಣೆಯಿಲ್ಲದ ಆ ಸೌಂದರ್ಯವನ್ನು ಎಂದಿಗೆ ಕಣ್ತುಂಬ ನೋಡುವೆನೋ. ಆ ಸ್ವಾಮಿಯ ದಿವ್ಯ ತಿರುವಡಿಗಳನ್ನೆಂದಿಗೆ ಸೇವಿಸುವೆನೋ ಎಂದು ಹಂಬಲಿಸುವುದೇ ವಿಷಯ! ಈ ತಿರುಮಾಲೆಯ ಪಾಶುರಗಳು ತಿಳಿಸುವುದು ಇದನ್ನೇ.

ತಿರುಮಂಗೈ ನಾಡಿಗೆ ಒಡೆಯನಾಗಿ, ಅನೇಕರು ಆಶಿಸಿ ಅನುಕರಿಸದ ಬದ್ರವಾದ ಸದ್ಗುಣಗಳನ್ನುಳ್ಳವನಾಗಿ, 'ಕಲಿಧ್ವಂಸಿ' ಎಂಬ ಬಿರುದನ್ನು ಹೊತ್ತವನಾಗಿ, ಭಗವದ್ಭಕ್ತನಾಗಿ, ಸ್ವಾಮಿಯ ಕೃಪಾಕಟಾಕ್ಷಕ್ಕೆ ಪಾತ್ರನಾಗಿರುವ ತಿರುಮಂಗೈ ಆಳ್ವಾರರು, ತಾವು ಕಣ್ಣಾರೆ ಕಂಡು, ಮನಸಾರೆ ಅನುಭವಿಸಿ ಹರ್ಷಿಸಿರುವ ಹಾಗೆಯೇ ~~ಹಾಡಿದ~~ ಹಾಡುತ್ತಾ ಈ ತಿರುಮಾಲೆಯನ್ನು ರಚಿಸಿದ್ದಾರೆ. ಅವರ ರಚನೆ ಸುಲಭವೂ ಸರಳವೂ ಆದ ತಮಿಳು ಭಾಷೆಯಲ್ಲಿ. ಪದಗಳ ಸೌಲಭ್ಯದಲ್ಲಾಗಲಿ, ಲಾಲಿತ್ಯದಲ್ಲಾಗಲಿ, ಸಾಹಿತ್ಯದಲ್ಲಾಗಲಿ, ಭಕ್ತಿರಸದ ಪ್ರತಿಪಾದನೆಯಲ್ಲಾಗಲಿ ಈ ಪಾಶುರಗಳಲ್ಲಿ ಯಾವ ಬಗೆಯ ಕೊರತೆಯೂ ಇಲ್ಲವೆನ್ನುತ್ತಾರೆ

ಈ ತಿರುಮಾಲೆಯ ಪಾಶುರಗಳನ್ನು ಬಹಳ ಸ್ವಾರಸ್ಯವಾಗಿ, ಹಲವು ರಾಗಗಳನ್ನು ಜೋಡಿಸಿ, ಹೃದಯಂಗಮವಾಗಿ ಹಾಡಬಹುದಾಗಿದೆ. ಇವುಗಳನ್ನು ಯಾರು ಚೆನ್ನಾಗಿ ಕಲಿತು ಹಾಡಬಲ್ಲರೋ ಅವರು ಸುಖ ಶಾಂತಿಗಳನ್ನು ಹೊಂದುತ್ತಾ ಚಕ್ರವರ್ತಿಗಳಂತೆ ಈ ಲೋಕದ ಜೀವನವನ್ನು ಸಾಗಿಸುತ್ತಾರೆ. ಅನಂತರ, ಅವರು ಅಮರರಾಗಿ, ಪರಮಪದವಾಸಿಗಳಾಗಿ ನಿತ್ಯಾನಂದಸುಖವನ್ನನುಭವಿಸುತ್ತಾರೆ. ಹೀಗಿದೆ, ಈ ತಿರುಮಾಲೆಯ ಫಲಶ್ರುತಿ.

———o———

ಅಡಿವರವು: அடிவரவு — ಪೊನ್ பொன், ಕೋಡು கோடு, ವೇಯ್ வேய், ವಮ್ಬು வம்பு, ಕೋಳಿ கோழி, ವೆಂಜಿನಮ್ வெஞ்சினம், ಪಿಣಿ பிணி, ಮಂಜುಯರ್ மஞ்சுயர், ಎಣ್ಣಿಲ [illegible], ಅನ್ನಮಾ அன்னமாம், (ಕನ್ನಿ கன்னி)

———o———

18.10.78

— ಶ್ರೀಃ —　(35)　— ಶ್ರಿಯೈನಮಃ —

ಪೆರಿಯ ತಿರುಮೊೞಿ - ಒಂಬತ್ತನೆಯ ದಶಕ - ಮೂರನೆಯ ತಿರುಮೊೞಿ

பெரிய திருமொழி - ஒன்பதாம் பத்து - மூன்றாந்திருமொழி

3. ತನ್ನೈ ನೈವಿಕ್ಕಿಲೇನ್ - தன்னை நைவிக்கிலேன்.

1. தன்னை நைவிக்கிலேன் வல்வினையேன் தொழுதெழு,
பொன்னை நைவிக்கும் அப்பூஞ்செருந்தி மணநீழல்வாய்,
என்னை நைவித்து எழில் கொண்டகன்ற பெருமானிடம்,
புன்னை முத்தம் பொழில் சூழ்ந்த அழகாய புல்லாணியே.

ತನ್ನೈ ನೈವಿಕ್ಕಿಲೇನ್ ವಲ್ ವಿನೈಯೇನ್ ತೊೞುದು ಎೞು,
ಪೊನ್ನೈ ನೈವಿಕ್ಕುಮ್ ಅಪ್ಪೂಂಜೆರುನ್ದಿ ಮಣನೀೞಲ್ ವಾಯ್,
ಎನ್ನೈ ನೈವಿತ್ತು ಎೞಿಲ್ ಕೊಣ್ಡಗನ್ಱ ಪೆರುಮಾನಿಡಮ್
ಪುನ್ನೈ ಮುತ್ತಮ್ ಪೊೞಿಲ್ ಶೂೞ್ನ್ದ ಅೞಗಾಯ ಪುಲ್ಲಾಣಿಯೇ.

ತನ್ನೈ தன்னை = ನನ್ನನ್ನು, ನೈವಿಕ್ಕಿಲ್ நைவிக்கில் = ಬಾಧೆಗೆ ಒಳಗು ಮಾಡುವುದರಿಂದ, ಏನ் ஏன் = ಏನು ಫಲ? ವಲ್ ವಿನೈಯೇನ್ வல்வினையே ன் = ಕಡುಪಾಪಿಗಳನ್ನು (ನಾನು) ಮಾಡಿದವನು, ತೊೞುದುಮ் தொழுதும் = ಪೂಜಿಸಿ, ಎೞು எழு = ಅಭ್ಯುದಯ ಹೊಂದುವುದಕ್ಕೆ, ಪೊನ್ನೈ பொன்னை = ಚಿನ್ನವನ್ನು, ನೈವಿಕ್ಕುಮ್ நைவிக்கும் = ನಿವಾರಿಸುವಂತ, ಅ-ಪೂ ಶೆರುನ್ದಿ அ-பூ-செருந்தி = ಆ ಹೂವಾದ ಸುರಹೊನ್ನೆಯ, ಮಣಮ್ மணம் = ಪರಿಮಳದ, ನೀೞಲ್ ವಾಯ್ நீழல்வாய் = ನೆಳಲಿನಲ್ಲಿ, ಎನ್ನೈ என்னை = ನನ್ನನ್ನು, ನೈವಿತ್ತು நைவித்து = ~~ಬಾಧಿಸಿ~~, ಎೞಿಲ್ ಕೊಣ್ಡು எழில் = ಸೌಂದರ್ಯವನ್ನು ಸೂರೆಗೊಂಡು, ಅಗನ್ಱ அகன்ற = கொண்டு = ... ಅಗಲಿಹೋದ, ಪೆರುಮಾನ್ பெருமான் = (ಭಕ್ತವಂಶನ) ಪರಮಪುರುಷನ, ಇಡಮ್ இடம் = ಸ್ಥಳವಾದ, ಪುನ್ನೈ புன்னை = ಸುರಹೊನ್ನೆಯ, ಮುತ್ತಮ್ முத்தும் = ಮುತ್ತಿನಂತ ಮೊಗ್ಗುಗಳುಳ್ಳ, ಪೊೞಿಲ್ பொழில் = ತೋಪುಗಳಿಂದ, ಶೂೞ್ನ್ದ சூழ்ந்த = ಸುತ್ತುವರಿದ, ಅೞಗಾಯ அழகாய = ಸುಂದರವಾದ, (ಸೊಗಬಿನ), ಪುಲ್ಲಾಣಿಯೇ புல்லாணி யே = ತಿರುಪ್ಪುಲ್ಲಾಣಿ ಕ್ಷೇತ್ರವೇ.

ನನ್ನನ್ನು ಬಾಧೆಗೆ ಒಳಗು ಮಾಡುವುದರಿಂದ ಏನು ಫಲ? ನಾನು ಕಡುಪಾಪಿ, ಪೂಜಿಸಿ ಅಭ್ಯುದಯ ಹೊಂದುವುದಕ್ಕೆ. ಚಿನ್ನವನ್ನು ನಿವಾರಿಸುವಂತ (ಸೂರೆಗೊಳ್ಳುವಂತ) ಆ ಹೂವಾದ ಸುರಹೊನ್ನೆಯ ಪರಿಮಳದ ನೆರಳಲ್ಲಿ ನನ್ನನ್ನು ದಣಿಸಿ (ಬಿಟ್ಟುಹೋಗಿ), ನನ್ನ ಸೌಂದರ್ಯವನ್ನು ಸೂರೆಗೊಂಡು ಅಗಲಿಹೋದ ಪರಮಪುರುಷನು ನೆಲಸಿರುವ ಸ್ಥಳವೆಂದರೆ, ಮುತ್ತಿನಂತ ಸುರಹೊನ್ನೆಯ ಮೊಗ್ಗುಗಳುಳ್ಳ ತೋಪುಗಳಿಂದ ಸುತ್ತುವರಿದ ಸೊಗಬಿನ ತಿರುಪ್ಪುಲ್ಲಾಣಿ ಕ್ಷೇತ್ರವೇ. (1)

ಒಂದಿನ ತಿರುಮೊೞಿಗಳಲ್ಲಿ ಆೞ್ವಾರರು ತಮ್ಮನ್ನು ಪರಮಪುರುಷ ನಾದ ಭಕ್ತವಂಶನಲ್ಲಿ ಅನುರಕ್ತಳಾಗಿರುವ ನವಯೌವನ ಸುಂದರಿಯೆಂದು ಭಾವಿಸಿಕೊಂಡು, ತನ್ನ ತಾಯಿಯು ತನ್ನ ಮನದ ಇಂಗಿತವನ್ನು ಅರಿತಿದೆ ಹೇಳುವನೋ ಎಂದು ಹಂಬಲಿಸಿ ಹಾಡಿದರಷ್ಟೆ. ತಾಯಿಯು ಅವರನ್ನು

Garani Srinivasan

ಬೆರಗುಗೊಳ್ಳಿಸಿ, ಅವರೊಡನೆ ಕೂಡಿಕೊಂಡು ಅವರ ಸೇವೆಯನ್ನು ಕೈಗೊಳ್ಳು ದಂತೆ, ಅವರಿಂದ ಅಗಲಿಹೋಗದವನು ಆದ್ದರಿಂದ, ಅವನನ್ನು ಹುಡುಕುತ್ತಾ ಅವನು ನೆಲಸಿರುವ [crossed out] ದಿವ್ಯಕ್ಷೇತ್ರಕ್ಕೆ ಶಾಪೇ ಹೋಗ ಬಿದ್ದಾಳೆ.

ಯುವತಿಯು (ಆಳ್ವಾರರು) ಹೇಳುತ್ತಾಳೆ: ನನ್ನ ಪ್ರಿಯತಮನು ನನ್ನ ಬಳಿಗೆ ಬರುತ್ತಾನೆಂದು ಅವನಿಗಾಗಿ ಎದುರುನೋಡುತ್ತಾ, ನಾನೇ ನನ್ನನ್ನು ಬಂಧಿಸಿಕೊಳ್ಳುವುದರಿಂದ ಏನು ಫಲ? ಸ್ವಾಮಿಯು ತನ್ನ ದಿವ್ಯಸೌಂದರ್ಯವನ್ನು ನನಗೆ ತೋರಿಸಿ, ಬೆರಗುಗೊಳ್ಳಿಸಿ, ನನ್ನ ಮನಸ್ಸನ್ನು ಸೂರೆಗೊಂಡು, ನನ್ನನ್ನು ದಣ್ಣುಮಾಡಿ, ನನ್ನನ್ನಗಲಿ ಹೊರಟುಹೋದನಲ್ಲ! ಮುತ್ತನಂತಿರುವ ನೀರಹೊನ್ನೆಯ ಮೊಗ್ಗುಗಳು ಜಗಿಯುತ್ತಿರುವ ತೋಟಗಳಿಂದ ಸುತ್ತುವರಿದಿರುವ, ಜೇನುಬಗೆಯಿಂದ ತುಂಬಿರುವ ತಿರುಪ್ಪುಲ್ಲಾಣಿ ಕ್ಷೇತ್ರದಲ್ಲಿ ನನ್ನ ಸ್ವಾಮಿಯು ನೆಲಸಿದ್ದಾನಾದ್ದರಿಂದ, ನಾನು ಅಲ್ಲಿಗೇ ಹೋಗಿ ಅವನೊಡನೆ ಸೇರಿಕೊಳ್ಳುವೆನು

2. உருகி நெஞ்சே நினைந்திங்கிருந்தென் தொழுதுமெழு,
முருகு வண்டுண் மலர்க்கைதையின் நீழலில் முன்னொருநாள்
பெருகு காதன்மை யென்னுள்ள மெய்தப் பிரிந்தானிடம்,
பொருது முன்னீர்க்கரைக்கே மணியுந்து புல்லாணியே

ಉರುಗಿ ನೆಂಜೇ ನಿನೈನ್ದಿಙ್ಗಿರುನ್ದೆನ್ ತೊೞುದುಮೆೞು,
ಮುರುಗು ವಣ್ಡುಣ್ ಮಲರ್ಕ್ಕೈದೈಯಿನ್ ನೀೞಲಿಲ್ ಮುನ್ನೊರುನಾಳ್,
ಪೆರುಗು ಕಾದನ್ಮೈಯೆನ್ನುಳ್ಳ ಮೆಯ್ದಪ್ಪಿರಿನ್ದಾನಿಡಮ್,
ಪೊರುದು ಮುನ್ನೀರ್ಕ್ಕರೈಕ್ಕೇ ಮಣಿಯುನ್ದು ಪುಲ್ಲಾಣಿಯೇ.

ಉರುಗಿ உருகி = ಕರಗಿದ, ನೆಂಜೇ நெஞ்சே = ಮನಸ್ಸೇ, ನಿನೈನ್ದು நினைந்து = ನೆನೆನೆನೆದು, ಇಙ್ಗು இங்கு = ಇಲ್ಲಿಯೇ, ಇರುನ್ದು இருந்து = ಇರುವುದರಿಂದ, ಎನ್ என் = ಏನು ಫಲ? ತೊೞುದುಮ್ ಎೞು தொழுதும் எழு = ಸೇವೆಮಾಡುವುದಕ್ಕೆ ಏಳು (ಹೊರಡು), ಮುರುಗು முருகு = ಜೇನನ್ನು, ವಣ್ಡು வண்டு = ದುಂಬಿಗಳು, ಉಣ್ உண் = ಉಣ್ಣುವಂಥ, ಮಲರ್ மலர் = ಹೂವಾದ, ಕೈದೈಯಿನ್ கைதையின் = ಕೇದಗೆಯ ಮರಗಳ, ನೀೞಲಿಲ್ நீழலில் = ನೆರಳಲ್ಲಿ, ಮುನ್ ಒರು ನಾಳ್ முன் ஒரு நாள் = ಹಿಂದೆ ಒಂದು ದಿನ, ಪೆರುಗು பெருகு = ಉಕ್ಕಿ ಬರುತ್ತಿರುವ (ಹರಿಯುತ್ತಿರುವ), ಕಾದನ್ಮೈ காதன்மை = ಪ್ರೇಮವನ್ನು, ಎನ್ ಉಳ್ಳಮ್ ಎಯ್ದ என் உள்ளம் எய்த = ನನ್ನ ಅಂತರಂಗವು ಪಡೆಯುವಂತೆ (ಮಾಡಿ), ಪಿರಿನ್ದಾನ್ பிரிந்தான் = ಅಗಲಿಹೋದವನ, ಇಡಮ್ இடம் = ಸ್ಥಳವೆಂಬುದು,

Calani Srinivasan

ಪೊರುದು பொருது = ಅಲೆಗಳನ್ನು ಬಡಿದು, ಮುನ್ನೀರ್ முந்நீர் = ಕಡಲು, ಕರೈಕ್ಕೇ கரைக்கே = ದಡಕ್ಕೇ, ಮಣಿ மணி = ರತ್ನಗಳನ್ನು, ಉನ್ದು உந்து = ತಳ್ಳುವಂಥ, ಪುಲ್ಲಾಣಿಯೇ புல்லாணியே = ತಿರುಪ್ಪುಲ್ಲಾಣಿ ಕ್ಷೇತ್ರವೇ.

ಕರಗಿದ ಮನಸ್ಸೇ, ನೆನೆನೆನೆದು ಇಲ್ಲಿಯೇ ಇರುವುದರಿಂದ ಫಲವೇನು? ಸೇವೆ ಮಾಡುವುದಕ್ಕೆ ಏಳು (ಹೊರಡು). ದುಂಬಿಗಳು ಜೇನನ್ನುಣ್ಣುವಂಥ ಕೇದಗೆ (ತಾಳೆ) ಹೂಗಳು ತುಂಬಿರುವ ಮರಗಳ ನೆರಳಲ್ಲಿ, ಒಂದೆ ಒಂದು ದಿನ, ನನ್ನ ಅಂತರಂಗವು ಉಕ್ಕಿ ಹರಿಯುವಂತೆ ಪ್ರೇಮವನ್ನು ಪಡೆಯುವಂತೆ ಮಾಡಿ, ಅಗಲಿ ಹೋದವನ ಸ್ಥಳವೆಂಬುದು ಕಡಲು ತನ್ನ ಅಲೆಗಳಿಂದ ದಡಕ್ಕೆ ರತ್ನಗಳನ್ನು ಎರಚಿ ತಳ್ಳುವಂಥ (2) ತಿರುಪ್ಪುಲ್ಲಾಣಿ ಕ್ಷೇತ್ರವೇ.

ಯುವತಿಯು (ಆಳ್ವಾರರು) ಹೇಳುತ್ತಾಳೆ: ನೊಂದು, ಕರಗಿಹೋಗಿರುವ ನನ್ನ ಮನಸ್ಸೇ, ಹಿಂದೆ ನಡೆದದ್ದನ್ನು ನೆನೆನೆನೆದು ಇಲ್ಲಿಯೇ ಇರುವುದರಿಂದ ಬರುವ ಲಾಭವೇನು? ಹೀಗೆ ಮಾಡುವುದರಿಂದ ನನ್ನ ಪ್ರಿಯತಮನು ನನ್ನ ಬಳಿಗೆ ಬರುವನೇ? ಹಿಂದೆ, ಒಂದು ದಿನ, ಪರಿಮಳದಿಂದ ತುಂಬಿ ಜೇನು ಸುರಿಯುತ್ತಿರುವ ಕೇದಗೆಯ ವನದಲ್ಲಿ, ಮರದ ನೆರಳಲ್ಲಿ ಸ್ವಾಮಿಯು ನನಗೆ ಕಾಣಿಸಿಕೊಂಡನು. ನನ್ನನ್ನು ಸಮೀಪಿಸಿದನು. ಅವನಲ್ಲಿ ನನಗೆ ಪ್ರೇಮವುಂಟಾಗುವಂತೆಯೂ, ನನ್ನ ಅಂತರಂಗದಿಂದ ಪ್ರೇಮವು ಉಕ್ಕಿ ಹರಿಯುವಂತೆಯೂ ಮಾಡಿದನು. ಆ ಕೂಡಲೇ ನನ್ನನ್ನಗಲಿ ಹೋದನಲ್ಲ! ಈಗ ಆ ಪ್ರಿಯತಮನು ನೆಲಸಿರುವ ಸ್ಥಳವೆಂದರೆ, ಕಡಲ ತೆರೆಯಲ್ಲಿರುವ ಕಡಲಿನ ಅಲೆಗಳು ನವರತ್ನಗಳನ್ನು ದಡಕ್ಕೆ ಎರಚಿ ತಳ್ಳುತ್ತಿರುವಂಥ ತಿರುಪ್ಪುಲ್ಲಾಣಿ ಕ್ಷೇತ್ರವೇ. ಮನಸ್ಸೇ, ಅಲ್ಲಿಗೆ ಹೋಗೋಣ ನಡೆ. ನನ್ನ ಪ್ರಿಯತಮನನ್ನು ಸಂದರ್ಶಿಸೋಣ. ಅವನ ಸೇವೆಯಲ್ಲಿ ತೊಡಗಿ ಉದ್ಧಾರ ಹೊಂದೋಣ.

3 ஏதுசெய்தால் மறக்கேன் மனமே, தொழுதுமெழு,
தாதுமல்கு தடஞ்சூழ் பொழில் தாழ்வர் தொடர்ந்து, பின்
பேதைநின்னைப் பிரியேனினி யென்றகன்றநிடம்,
போதுநாளுங் கமழும் பொழில்சூழ்ந்த புல்லாணியே.

ಏದು ಶೆಯ್ದಾಲ್ ಮಱಕ್ಕೇನ್ ಮನಮೇ, ತೊೞುದು ಮೆೞು,
ತಾದು ಮಲ್ಗು ತಡಂಜೂೞ್ ಪೊೞಿಲ್ ತಾೞ್ವರ್ ತೊಡರ್ನ್ದು, ಪಿನ್
ಪೇದೈ ನಿನ್ನೈಪ್ಪಿರಿಯೇನಿನಿ ಯೆನ್ಱಗನ್ಱನಿಡಮ್,
ಪೋದು ನಾಳುಙ್ಗಮೞುಮ್ ಪೊೞಿಲ್ ಶೂೞ್ನ್ದ ಪ್ಪುಲ್ಲಾಣಿಯೇ.

ಏದು ಶೆಯ್ದಾಲ್ ஏது செய்தால் = ಏನು ಮಾಡಿದರೆ, ಮಱಕ್ಕೇನ್ மறக்கேன் = (ನಾನು) ಮರೆಯಬಲ್ಲೆ (ಮರೆಯುವುದಕ್ಕೆ ಸಾಧ್ಯ?), ಮನಮೇ மனமே = ಮನಸ್ಸೇ, ತೊೞುದುಮ್ தொழுதும் = ಸೇವೆ ಮಾಡುವುದಕ್ಕೆ, ಎೞು எழு = ಎದ್ದೇಳು, ತಾದು தாது = ಹೂವಿನ ಪರಾಗಗಳು, ಮಲ್ಗು மல்கு = ತುಂಬಿಕೊಂಡಿರುವ, ತಡಮ್ தடம் = ತಟಾಕಗಳಿಂದ, ಶೂೞ್ சூழ் = ಸುತ್ತುವರಿದಿರುವ, ಪೊೞಿಲ್ பொழில் = ತೋಪಿನ, ತಾೞ್ವರ್ தாழ்வர் = ಎಲ್ಲೆಯನ್ನು, ತೊಡರ್ನ್ದು தொடர்ந்து = ಸೇರಿ, ಪಿನ್ பின் =

ಆಮೇಲೆ, ಪೇದೈ பேதாய் = ಏನೂ ಅರಿಯದವಳೇ, ನಿನ್ನೈ நின்னை = ನಿನ್ನನ್ನು, ಪಿರಿಯೇನ್ ಇನಿ பிரியேன் இனி = ಇನ್ನು ಅಗಲುವುದಿಲ್ಲ. ಎನ್ಱು என்று = ಎಂದು ಹೇಳಿ, ಅಗನ್ಱಾನ್ ಇಡಮ್ அகன்றான் இடம் = ಅಗಲಿದವನ ಸ್ಥಳವೆಂದರೆ, ಪೋದು போது = ಅರಳುವ ಮೊಗ್ಗು, ನಾಳುಮ್ நாளும் = ಯಾವಾಗಲೂ, ಕಮಳುಮ್ கமழும் = ಘಮಘಮಿಸುವ, ಪೊಳಿಲ್ பொழில் = ತೋಟಗಳಿಂದ, ಶೂಳ್ಂದ சூழ்ந்த = ಸುತ್ತುವರಿದ, ಪುಲ್ಲಾಣಿಯೇ புல்லாணியே = ತಿರುಪ್ಪುಲ್ಲಾಣಿ ಕ್ಷೇತ್ರವೇ.

ಏನು ಮಾಡಿದರೆ ತಾನೇ ನಾನು ಮರೆಯುವುದಕ್ಕಾದೀತು? ಮನಸ್ಸೇ, ಸೇವೆ ಮಾಡುವುದಕ್ಕೆ ಎದ್ದೇಳು. ಹೂವಿನ ಪರಾಗಗಳು ತುಂಬಿಕೊಂಡಿರುವ ತೋಟಗಳಿಂದ ಸುತ್ತುವರಿದಿರುವ ತೋಪಿನ ಎಲ್ಲೆಯನ್ನು ಸೇರಿ, ಆ ಬಳಿಕ, 'ಏನೂ ಅರಿಯದವಳೇ, ಇನ್ನು ನಿನ್ನನ್ನು ಅಗಲುವುದಿಲ್ಲ' ಎಂದು ಹೇಳಿ, ಅಗಲಿದವನ ಸ್ಥಳವೆಂದರೆ, ಅರಳುವ ಮೊಗ್ಗು ಯಾವಾಗಲೂ ಘಮಘಮಿಸುವ ತೋಪುಗಳಿಂದ ಸುತ್ತುವರಿದಿರುವ ತಿರುಪ್ಪುಲ್ಲಾಣಿಯೇ. (3)

"ಏನು ಮಾಡಿದರೆ ಮರೆಯುವುದಕ್ಕಾದೀತು?" — ಪ್ರೇಮಿಗಳು ಅಗಲಿದರೆ, ಜೊತೆಗಾಗಿದ್ದರೆ, ದೂರವಿದ್ದರೆ, ಹತ್ತಿರವಾದರೆ — ಪರಸ್ಪರ ಮರೆಯಲು ಸಾಧ್ಯ ಎಂಬುದು ಸಾಮಾನ್ಯವಾದ ಅಭಿಪ್ರಾಯ. ಆದರೆ, ಪ್ರೇಮವು ದೃಢವಾದಲ್ಲಿ ಈ ಯಾವ ಬಗೆಯ ಉಪಾಯವೂ ಫಲಕಾರಿಯಾಗುವುದಿಲ್ಲ. ಭಕ್ತನಿಗೆ ಭಗವಂತನಲ್ಲಿ ದೃಢವಾದ ಭಕ್ತಿ ಮೂಡಿದ್ದರೆ, ಭಕ್ತನನ್ನು ಭಗವಂತನಿಂದ ಏನೇ ಮಾಡಿದರೂ, ಭಕ್ತನ ಮನಸ್ಸಿನಿಂದ ಭಗವಂತನನ್ನು ತೊಡೆದುಹಾಕುವುದಕ್ಕೆ ಸಾಧ್ಯವಾಗುವುದಿಲ್ಲ.

"ಏನೂ ಅರಿಯದವಳೇ, ಇನ್ನು ನಿನ್ನಿಂದ ಅಗಲುವುದಿಲ್ಲ" — ಪ್ರಿಯತಮನು ತನ್ನ ಪ್ರಿಯಳನ್ನು ಏಕಾಂತ ಸ್ಥಳಕ್ಕೆ ಕರೆದೊಯ್ದು, ಅವಳನ್ನು ನಂಬಿಸಿ, ತನಗೆ ಅವಳಲ್ಲಿ ಅಚಲವಾದ ಪ್ರೇಮವಿದೆಯೆಂದು ಹೇಳುವ ಮಾತುಗಳಿವು. ಪ್ರವಂಚಕರಾದ ಕೃತ್ರಿಮ ಪ್ರೇಮಿಗಳ ಜಾಡನ್ನರಿಯದ ಪರಿಶುದ್ಧವಾದ ಮನಸ್ಸಿನಿಂದ ಪ್ರೇಮಿಸುವ ಪ್ರಿಯಳೇ "ಏನೂ ಅರಿಯದವಳು" — ಮುಗ್ಧಪ್ರೇಮಿ. ತನ್ನ ಪ್ರಿಯನಲ್ಲಿ ಅವಳಿಗಿರುವ ಶುದ್ಧವಾದ ಪ್ರೇಮವೇ ಅವನ ಮಾತನ್ನು ನಂಬುವಂತೆ ಮಾಡುತ್ತದೆ. ಒಂದು ವೇಳೆ, ಪ್ರಿಯನು ತನ್ನ ಮಾತನ್ನು ಮುರಿದರೇ? ಅವಳಿಗೆ ಬಲು ದುಃಖವಾಗುವುದು, ಸತ್ಯವೇ. ಅವನನ್ನು ಹುಡುಕಿಕೊಂಡು ಹೋಗಿ, ಅವನನ್ನು ಒಲಿಸಿಕೊಂಡು ತನ್ನವನನ್ನಾಗಿ ಮಾಡಿಕೊಳ್ಳುವುದೇ ಆ ಮುಗ್ಧಪ್ರೇಮಿಯ ಕೆಲಸ.

ಹಾಗೆಯೇ, ಭಗವಂತನನ್ನು ಶುದ್ಧ ಮನದಿಂದ ಪ್ರೇಮಿಸುವ ಭಕ್ತನಿಗೆ ಭಗವಂತನ ಆಶ್ವಾಸನೆಯಲ್ಲಿ ಪೂರ್ಣನಂಬಿಕೆ. ಒಂದು ವೇಳೆ ಸ್ವಾಮಿಯು ಭಕ್ತನ ಅಂತರಂಗದಿಂದ ಜಾರಿಹೋದನೆಂದರೆ, ಆ ಅಗಲಿಕೆಯನ್ನು ತಾಳಲಾರದೆ, ಭಕ್ತನು ತನ್ನ ಪ್ರಿಯತಮನನ್ನು ಹುಡುಕಿಕೊಂಡು ಹೋಗಿ ಮತ್ತೆ ಅವನನ್ನು ತನ್ನ ಅಂತರಂಗದಲ್ಲಿ ಸೇರಿಸಿಕೊಳ್ಳುವವರೆಗೂ ಬಿಡ.

ಯುವತಿಯು (ಆಳ್ವಾರರು) ಹೇಳುತ್ತಾಳೆ: ಮನಸ್ಸೇ, ನನ್ನ ಪ್ರಿಯ ತಮನನ್ನು ನಾನು ಏನು ಮಾಡಿದರೂ ಮರೆಯುವುದಕ್ಕಾಗುವುದಿಲ್ಲ. ಹಿಂದೆ, ಅವನು ನನ್ನನ್ನು ಬಲು ಸುಂದರವಾದ ಏಕಾಂತ ಸ್ಥಳಕ್ಕೆ ಕರೆದೊಯ್ದ. ಹೂ ವಿಂದ ತುಂಬಿಕೊಂಡು, ಅವುಗಳ ಪರಾಗವನ್ನು ನಿವ್ಯಧಿಯಾಗಿ ಚೆಲ್ಲಿ, ಅದರ ಕಂಪನ್ನು ಎಲ್ಲೆಲ್ಲಿಯೂ ಹರಡಿರುವಂಥ ತೋಟಕ್ಕೆ ~~ನಲ್ಲುಹ~~ ಕೊಂಡು ಗಳನ್ನು ಸುತ್ತು ಪಡೆದೆ. ಆಕಾಶದ ಎಲ್ಲೆಗೆ ನನ್ನನ್ನು ನನ್ನ ಪ್ರಿಯ ತಮನು ಕರೆದೊಯ್ದನು. ಅಲ್ಲಿ ಒಂಟಿಯಾಗಿರುವ ನನಗೆ ಗುಟ್ಟಿನ ನಂಬಿಕೆಯ ಮಾತನ್ನು ಹೇಳಿದ. "ಇನ್ನು ನಾನು ನಿನ್ನನ್ನು ಅಗಲಿ ಹೋಗುವುದೇ ಇಲ್ಲ" ಎಂದ. ಆದರೇನು? ಅವನು ನನ್ನನ್ನು ಅಗಲಿ ಹೋದನಲ್ಲ! ಆಗಿನ ದಿವ್ಯ ವೇಷವನ್ನು, ಅವನ ದಿವ್ಯ ಪ್ರೇಮವನ್ನು ನಾನು ಹೇಗೆ ಮರೆತೇನು? ಮನಸ್ಸೇ ನಡೆ. ಅವನೀಗ ತಿರುಪ್ಪುಲ್ಲಾಣಿಯಲ್ಲಿ, ಯಾವಾಗಲೂ ಘಮ ಘಮಿಸುವ ಹೂದೋಟಗಳ ನಡುವೆ ನೆಲಸಿದ್ದಾನೆ. ನಾವು ಅಲ್ಲಿಗೆ ಹೋಗೋಣ ಅವನ ಸೇವೆಯಲ್ಲಿ ತೊಡಗಿ, ಅವನನ್ನು ಒಲಿಸಿಕೊಳ್ಳೋಣ

4. கொங்குண் வண்டே கரியாக வந்தான் கொடியேற்கு, முன்
நங்களீசன் நமக்கே பணித்த மொழி செய்திலன்,
மங்கை நல்லாய் தொழுதுமெழு போயவன் மன்னு மூர்,
பொங்கு முந்நீர்க் கரைக்கே மணியுந்து புல்லாணியே.

ಕೊಙ್ಗುಣ್ ವಣ್ಡೇ ಕರಿಯಾಗ ವನ್ದಾನ್ ಕೊಡಿಯೇಱ್ಕು, ಮುನ್
ನಙ್ಗಳೀಶನ್ ನಮಕ್ಕೇ ಪಣಿತ್ತ ಮೊಳಿ ಶೆಯ್ದಿಲನ್,
ಮಙ್ಗೈ ನಲ್ಲಾಯ್ ತೊಳುದು ಮೆಳು ಪೋಯವನ್ ಮನ್ನು ಮೂರ್,
ಪೊಙ್ಗು ಮುನ್ನೀರ್ ಕ್ಕರೈಕ್ಕೇ ಮಣಿಯುನ್ದು ಪುಲ್ಲಾಣಿಯೇ.

ಕೊಙ್ಗು கொங்கு = ಮಧುವನ್ನು, ಉಣ್ உண் = ಉಣ್ಣುವ, ವಣ್ಡೇ வண்டே = ದುಂಬಿಗಳೇ, ಕರಿ ಆಗ கரி ஆக = ಸಾಕ್ಷಿಯಾಗಿ, ವನ್ದಾನ್ வந்தான் = ಬಂದನು, ಕೊಡಿಯೇಱ್ಕು கொடியேற்கு = ಪಾಪಿಯ ಹತ್ತಿರಕ್ಕೆ, ಮುನ್ முன் = ಹಿಂದೆ ಒಂದು ಸಲ, ನಙ್ಗಳ್ ಈಶನ್ நங்கள் ஈசன் = ನಮ್ಮ (ನನ್ನ) ಸ್ವಾಮಿಯು, ನಮಕ್ಕೇ நமக்கே = ನಮಗೇಯೇ (ನನಗೇಯೇ), ಪಣಿತ್ತ பணித்த = ಆಡಿದ (ಹೇಳಿದ), ಮೊಳಿ மொழி = ಮಾತನ್ನು, ಶೆಯ್ದಿಲನ್ செய்திலன் = ಮಾಡಲಿಲ್ಲ, ಮಙ್ಗೈ ನಲ್ಲಾಯ್ மங்கை நல்லாய் = ಒಳ್ಳೆಯ ಹೆಣ್ಣೇ, ತೊಳುದುಮ್ தொழுதும் = ಸೇವೆ ಮಾಡುವುದಕ್ಕೆ, ಎಳು எழு = ಎದ್ದೇಳು, ಪೋಯ್ போய் = ಹೋಗಿ, ಅವನ್ அவன் = ಅವನು (ಪ್ರಿಯತಮನು), ಮನ್ನುಮ್ மன்னும் = ನೆಲಸಿರುವ, ಊರ್ ஊர்

= ಊರು ಎಂದರೆ, ಪೊೞ್ದು பொங்கு = ಅಲೆಗಳು ಉಕ್ಕಿ ಏಳುವ, ಮುನ್ನೀ
ರ್ முந்நீர் = ಕಡಲು, ಕರೈಕ್ಕೇ கரைக்கே = ದಡಕ್ಕೆ, ಮಣಿ மணி
= ರತ್ನಗಳನ್ನು, ಉನ್ದು உந்து = ತಳ್ಳಿ ಎರಚುವ, ಪುಲ್ಲಾಣಿಯೇ புல்லா
ணியே = ಕಿರುಪುಲ್ಲಾಣಿ ಕ್ಷೇತ್ರವೇ.

ಬಳ್ಳಿಯ ಹೆಣ್ಣೇ, ಮಧುವನ್ನುಣ್ಣುವ ದುಂಬಿಗಳ ಸಾಕ್ಷಿಯಾಗಿ ನನ್ನ ಸ್ವಾಮಿಯು ಪಾಪಿಯಾದ ನನ್ನ ಬಳಿಗೆ ಬಂದನು. ಬಂದ, ಅವನು ನನ್ನಲ್ಲಿ ಆಡಿದ ಮಾತಿನಂತೆ ಮಾಡಲಿಲ್ಲ! ಅವನೀಗ ನೆಲಸಿರುವುದು ಅಲೆಗಳು ಉಕ್ಕಿ ಏಳುವ ಕಡಲು ರತ್ನಗಳನ್ನು ದಡಕ್ಕೆ ತಳ್ಳಿ ಎರಚುವ ಕಿರುಪುಲ್ಲಾಣಿಯಲ್ಲೇ. ಎದ್ದೇಳು, ನಾವು ಅಲ್ಲಿಗೆ ಹೋಗಿ ಅವನ ಸೇವೆಯಲ್ಲಿ ತೊಡಗೋಣ. (4)

ಯುವತಿಯು ಈಗ ತನ್ನ ಆಪ್ತೆಗಳಿಗೆ (ತನ್ನ ಮನಸ್ಸಿಗೇ?) ಹೀಗೆ ಹೇಳುತ್ತಿದ್ದಾಳೆ: ಬಳ್ಳಿಯ ಹೆಣ್ಣೇ, ನಿನ್ನೊಡನೆ ನಾನು ನಿಜವನ್ನೇ ಹೇಳುತ್ತಿದ್ದೇನೆ ನನ್ನ ಪ್ರಿಯತಮನು ನನ್ನ ಬಳಿಗೆ ಬಂದದ್ದು ನಿಜವೇ. ಯಾವ ಮರಗಳ ನೆರಳಲ್ಲಿ ಅವನು ನನ್ನನ್ನು ಸಂಧಿಸಿದನೋ, ಆ ಮರದ ಹೂಗಳಲ್ಲಿ ಮಧುವನ್ನುಂಡು ನಲಿಯುತ್ತಿದ್ದ ದುಂಬಿಗಳೇ ಅದಕ್ಕೆ ಸಾಕ್ಷಿ. ಅಲ್ಲಿ 'ನಾನು ಇನ್ನು ಮೇಲೆ ನಿನ್ನನ್ನು ಅಗಲಿಹೋಗುವುದಿಲ್ಲ' ಎಂದು ಅವನು ನನಗೆ ಆತ್ಮೀಯವಾಗಿ ಹೇಳಿದನು. ಅವನಾಡಿದಂತೆ ನಡೆದುಕೊಳ್ಳಲಿಲ್ಲ. ನನ್ನನ್ನು ಒಂಟಿಗಳನ್ನಾಗಿ ಮಾಡಿ ಅಗಲಿಹೋದನು. ಅವನೀಗ ಕಡಲತೀರದ ಕಿರುಪುಲ್ಲಾಣಿಯಲ್ಲಿ ನೆಲಸಿದ್ದಾನೆ. ಕಡಲು ಆತನಿಗೆ ತನ್ನ ಅಲೆಗಳಿಂದ ರತ್ನಗಳನ್ನೇ ತಳ್ಳಿ ತಂದುಕೊಡುತ್ತದೆ. ಆ ಕ್ಷೇತ್ರಕ್ಕೆ ಹೋಗೋಣ ನಡೆ. ಅಲ್ಲಿ ಅವನನ್ನು ಸಂಧಿಸೋಣ, ಅವನ್ನು ಒಲಿಸಿಕೊಳ್ಳೋಣ ಅವನ ಸೇವೆಯಲ್ಲಿ ತೊಡಗೋಣ.

5. உணரிலுள்ளம் சுடுமால் வினையேன் தொழுதுமெழு,
துணரினாழல் நறும்போது நங்கூழ் குழல் பெய்து, பின்
தணரிலாவி தளருமென அன்பு தந்தானிடம்,
புணரியோதம் பணிலம் மணியுந்து புல்லாணியே.

ಉಣರಿಲುಳ್ಳಂ ಜುಡುಮಾಲ್ ವಿನೈಯೇನ್ ತೊೞುದುಮೆೞು,
ತುಣರಿನಾೞಲ್ ನಱುಮ್ ಪೋದು ನಮ್ ಕೂೞ್ ಕುೞಲ್ ಪೆಯ್ದು, ಪಿನ್
ತಣರಿಲಾವಿ ತಳರುಮೆನ ಅನ್ಬು ತನ್ದಾನಿಡಮ್,
ಪುಣರಿಯೋದಮ್ ಪಣಿಲಮ್ ಮಣಿಯುನ್ದು ಪುಲ್ಲಾಣಿಯೇ.

ಉಣರಿಲ್ உணரில் = ನೆನೆಸಿಕೊಂಡರೆ, ಉಳ್ಳಮ್ உள்ளம் = ಮನಸ್ಸು, ಸುಡುಮ್ சுடும் = ಸುಡುತ್ತದೆ (ಬೇಯುತ್ತದೆ), ಆಲ್ ஆல் = ಅಯ್ಯೋ, ವಿನೈಯೇನ್ வினையேன் = ಪಾಪಿಷ್ಠಳೇ ನಾನು, ತೊೞುದುಮ್ தொழுதும் = ಸೇವೆ ಮಾಡುವುದಕ್ಕೆ, ಎೞು எழு = ಎದ್ದೇಳು, ತುಣರ್ ಇನ್ ನಾೞಲ್ துணர் இன் நாழல் = ಸುಂದರವಾದ ಮಲ್ಲಿಗೆಯ ಬಳ್ಳಿಯ, ನಱುಮ್ நறும் = ಸುವಾಸನೆಯ, ಪೋದು போது = ಹೂಗಳನ್ನು,

Ganji Srinivasan

ನಮ ಶೂಟೂ நம் சூழ் = ನಮ್ಮನ್ನು ಸುತ್ತು ವರಿದಿರುವ, ಕುಲಿಲ್ குழல் = ಕೇಶಗಾದಲಿಗೆ, ಪೆಯ್ದು பெய்து = ಮುಡಿಸಿ, ಪಿನ್ பின் = ಅನಂತರ, ಕಣಾರಿಲ್ கணாரில் = ಅಗಲಿಕೆಯಿಂದ, ಆವಿ ஆவி = ಉಸಿರು (ಪ್ರಾಣವು), ತಳರುಮ್ தளரும் = ಹೊಯ್ದಾಡುವುದು (ಸಂಕಟಪಡುವುದು), ಎನ எனா = ಎಂಬಂತೆ. ಅನ್ಬು ತನ್ದಾನ್ அன்பு தந்தான் = ಪ್ರೇಮವನ್ನುಂಟುಮಾಡಿದವನ, ಇಡಮ್ இடம் = ಸ್ಥಳವೆಂದರೆ, ಓದಮ್ ஓதம் = ಕಡಲು, ಪುಣರಿ புணரி = (ಅಲೆಗಳು) ಒಟ್ಟುಗೂಡಿ, ಮಣಿ மணி = ರತ್ನಗಳನ್ನು, ಪಣಿಲಮ್ பணிலம் = ಶಂಖಗಳನ್ನು, ಉನ್ದು ಉந்து = ದಡಕ್ಕೆ ತಳ್ಳುವ, ಪುಲ್ಲಾಣಿಯೇ புல்லாணியே = ತಿರುಪ್ಪುಲ್ಲಾಣಿ ಕ್ಷೇತ್ರವೇ.

ಅಯ್ಯೋ, ನೆನೆಸಿಕೊಂಡರೆ ಮನಸ್ಸು ಕುದಿಯುತ್ತದೆ (ಬೇಯುತ್ತದೆ). ನಾನು ಪಾಪಿಷ್ಠಳೇ! ಮನಸ್ಸೇ, ಎದ್ದೇಳು, ಸೇವೆ ಮಾಡುವುದಕ್ಕೆ ನಡೆ. ಸುಂದರವಾದ ಮಲ್ಲಿಗೆಯ ಬೆಳ್ಳಿಯ ಸುವಾಸನೆಯ ಹೂಗಳನ್ನು ನನ್ನನ್ನು ಸುತ್ತು ವರಿದಿರುವ ಕೇಶಗಾದಲಿಗೆ ಮುಡಿಸಿ, ಅನಂತರ ಅಗಲಿದರೆ ಪ್ರಾಣವು ಸಂಕಟಪಡುವುದು ಎಂಬಂತೆ ಪ್ರೀತಿಯನ್ನು ತೋರಿದವನ ಸ್ಥಳವೆಂದರೆ, ಕಡಲಿನ ಅಲೆಗಳು ಒಟ್ಟುಗೂಡಿ ಶಂಖಗಳನ್ನು ರತ್ನಗಳನ್ನು ದಡಕ್ಕೆ ತಳ್ಳುವಂಥ ತಿರುಪ್ಪುಲ್ಲಾಣಿಯೇ. (5)

ಯುವತಿಯು (ಆಳ್ವಾರರು) ಆಪ್ತ ಸಖಿಯೊಂದಿಗೆ ಹೇಳುತ್ತಾಳೆ: ಸಖೀ, ನಾನು ಕಡು ಪಾಪಿ. ಹಿಂದೆ ನಡೆದ ವಿಷಯವನ್ನು ನಾನು ನೆನೆಸಿಕೊಂಡರೆ, ನನ್ನ ಮನಸ್ಸು ಬೆಂದು ಹೋಗುತ್ತದೆ. ನನಗೆ ಬಹಳ ಸಂಕಟವಾಗುತ್ತದೆ. ಆಗ, ಅವನು ನನ್ನೊಡನಿದ್ದು, ನೀಳವಾದ ನನ್ನ ಕೇಶಗಾದಲಿಗೆ ಘಮಘಮಿಸುವ ಮಲ್ಲಿಗೆ ಹೂಗಳನ್ನು ಮುಡಿಸಿದನು. ಆವೇಳೆ, ನಾವಿಬ್ಬರೂ ಅಗಲಿಹೋದವರಾದರೆ ನಮ್ಮ ಪ್ರಾಣಗಳೇ ಸಂಕಟದಿಂದ ಹಾರಿಹೋಗುವವು ಎಂಬಂತೆ ಅವನು ನನ್ನಲ್ಲಿ ಪ್ರೀತಿಯನ್ನು ತೋರಿದನು. ನನ್ನನ್ನು ಬೆರಗುಗೊಳಿಸಿದನು. ಆಬಳಿಕ ನನ್ನನ್ನಗಲಿ ಹೊರಟುಹೋದನಲ್ಲ! ಅವನೀಗ, ಕಡಲಿನಿಂದ ಅಲೆಗಳು ಒಟ್ಟೊಟ್ಟಾಗಿ ನುಗ್ಗಿ ಬರುತ್ತಾ ~~ತಳ್ಳಿ~~ ಬೆಳ್ಳಿಯ ಶಂಖಗಳನ್ನು ರತ್ನಗಳನ್ನು ತಟಕ್ಕೆ ತಳ್ಳಿ ಎರಚುವಂಥ ಕಡಲತೀರದಲ್ಲಿರುವ ತಿರುಪ್ಪುಲ್ಲಾಣಿ ಕ್ಷೇತ್ರದಲ್ಲಿ ನೆಲಸಿದ್ದಾನೆ. ಸಖೀ, ನಡೆ, ನಾವು ಅಲ್ಲಿಗೆ ಹೋಗೋಣ. ಅವನ ಸೇವೆಯಲ್ಲಿ ತೊಡಗೋಣ. ಅವನನ್ನು ಒಲಿಸಿಕೊಳ್ಳೋಣ

6. எள்கி நெஞ்சே. நினைந்திங்கிருந்தேன் தொழுது மழ,
வள்ளல் மாயன் மணிவண்ணனெம்மான் மருவுமிடம்,

கள்ளவிழும் மலர்க் காவியும் தூமடற்கைதையும்,
புள்ளுமள்ளற்பழனங்களும் சூழ்ந்த புல்லாணியே.

ಎಳ್ಕಿ ನೆಂಜೇ, ನಿನ್ನೈನ್ದಿಙ್ಗಿರುನ್ದೆನ್ ತೊಳುದುಮ ಎಳು,
ವಳ್ಳಲ್ ಮಾಯನ್ ಮಣಿವಣ್ಣನೆಮ್ಮಾನ್ ಮರುವುಮಿಡಮ್,
ಕಳ್ಳವಿಳುಮ ಮಲರ್ಕ್ಕಾವಿಯುಮ ತೂಮಡಱ್ಕೈದೈಯುಮ,
ಪುಳ್ಳುಮಳ್ಳಱ ಪಳನಙ್ಗಳುಮ ಶೂಳ್ನ್ದ ಪುಲ್ಲಾಣಿಯೇ.

ಎಳ್ಕಿ எள்கி = ವ್ಯಥೆಪಟ್ಟುಕೊಂಡು (ಸಂಕಟಪಡುವ), ನೆಂಜೇ நெஞ்சே = ಮನಸ್ಸೇ, ನಿನ್ನೈನ್ದು நினைந்து = ಚಿಂತಿಸುತ್ತಾ ಇಙ್ಗು இங்கு = ಇಲ್ಲಿಯೇ, ಇರುನ್ದು இருந்து = ಇರುವುದರಿಂದ, ಎನ್ என் = ಏನು ಫಲ? ತೊಳುದುಮ தொழுதும் = ಸೇವೆಮಾಡುವುದಕ್ಕೆ, ಎಳು எழு = ಎದ್ದೇಳು, ವಳ್ಳಲ್ வள்ளல் = ಉದಾರಿಯೂ, ಮಾಯನ್ மாயன் = ಆಶ್ಚರ್ಯಕಾರಿಯೂ, ಮಣಿವಣ್ಣನ್ மணிவண்ணன் = ನೀಲಮಣಿಯಂತೆ ದೇಹಕಾಂತಿಯುಳ್ಳವನೂ, ಎಮ್ಮಾನ್ எம்மான் = ನಮ್ಮ ಸ್ವಾಮಿಯೂ, ಮರುವುಮ மருவும் = ನೆಲಸಿರುವ, ಇಡಮ இடம் = ಸ್ಥಳವೆಂದರೆ, ಕಳ್ கள் = ಮಧುವನ್ನು, ಅವಿಳುಮ அவிழும் = ಸುರಿಸುವ, ಮಲರ್ மலர் = ಹೂಗಳು, ಕಾವಿಯುಮ காவியும் = ಕನ್ನೈದಿಲೆಯಿಂದಲೂ, ತೂ ಮಡಲ್ தூமடல் = ಶುದ್ಧವಾದ (ಬಿಳಿಯ) ಎಸಳುಗಳುಳ್ಳ, ಕೈದೈಯುಮ கைதையும் = ಕೇದಗೆ ಹೂಗಳಿಂದಲೂ, ಪುಳ್ಳುಮ புள்ளும் = ಪಕ್ಷಿಗಳಿಂದಲೂ, ಅಳ್ಳಲ್ அள்ளல் = ಕೆಸರಿನ, ಪಳನಙ್ಗಳುಮ பழனங்களும் = ಗದ್ದೆಗಳಿಂದಲೂ, ಶೂಳ್ನ್ದ சூழ்ந்த = ಸುತ್ತುವರಿದ, ಪುಲ್ಲಾಣಿಯೇ புல்லாணியே = ತಿರುಪ್ಪುಲ್ಲಾಣಿ ಕ್ಷೇತ್ರವೇ.

ಮನಸ್ಸೇ, ವ್ಯಥೆಪಟ್ಟುಕೊಂಡು ಕಳೆದುಹೋದದ್ದನ್ನು ಚಿಂತಿಸುತ್ತಾ ಇಲ್ಲಿಯೇ ಇರುವುದರಿಂದ ಏನು ಫಲ? ಸೇವೆಮಾಡುವುದಕ್ಕೆ ಎದ್ದೇಳು. ಪರಮ ಉದಾರಿಯೂ ಆಶ್ಚರ್ಯಕಾರಿಯೂ ನೀಲಮಣಿಯ ದೇಹಕಾಂತಿಯುಳ್ಳವನೂ ನಮ್ಮ ಸ್ವಾಮಿಯೂ ನೆಲಸಿರುವ ಸ್ಥಳವೆಂದರೆ, ಅರಳಿ ಮಧುವನ್ನು ಸುರಿಸುವ ಕನ್ನೈದಿಲೆ ಹೂಗಳಿಂದಲೂ, ಶುದ್ಧವಾದ ಎಸಳುಗಳುಳ್ಳ ಕೇದಗೆ ಹೂಗಳಿಂದಲೂ, ಪಕ್ಷಿಗಳಿಂದಲೂ, ಕೆಸರಿನ ಗದ್ದೆಗಳಿಂದಲೂ ಸುತ್ತುವರಿದಿರುವ ತಿರುಪ್ಪುಲ್ಲಾಣಿ ಕ್ಷೇತ್ರವೇ. (6)

ಯುವತಿಯು (ಆಳ್ವಾರರು) ಹೇಳುತ್ತಾಳೆ: ಮನಸ್ಸೇ, ಹಿಂದೆ ನಡೆದದ್ದನ್ನೆಲ್ಲಾ ನೆನೆನೆನೆದು ಚಿಂತಿಸುತ್ತಾ ಸಂಕಟಪಡುತ್ತಿರುವುದರಿಂದ ಬರುವ ಲಾಭವೇನು? ನನ್ನ ಪ್ರಿಯತಮನು ಪರಮ ಉದಾರಿ. ನನ್ನ ವಿಷಯದಲ್ಲಿ ಅವನಿಗೆಷ್ಟು ಪ್ರೇಮ! ಎಷ್ಟು ಸಲಿಗೆ! ನನ್ನ ಬಳಿಗೇ ಅವನು ಬಂದನಲ್ಲಾ! ಏಕಾಂತವಾದ ಸ್ಥಳಕ್ಕೆ ನನ್ನನ್ನು ಕರೆದೊಯ್ದನಲ್ಲಾ! ನನ್ನ ತಲೆಗೆ ಪರಿಮಳವನ್ನು ಬೀರುವ ಮಲ್ಲಿಗೆ ಹೂವನ್ನು ಮುಡಿಸಿದನಲ್ಲಾ! ನನ್ನೊಡನೆ ಕಲೆತಿದ್ದು, ತನ್ನ ದಿವ್ಯವಾದ ದೇಹಕಾಂತಿಯಿಂದಲೂ, ಅತಿಶಯವಾದ ಪ್ರೇಮದಿಂದಲೂ ನಾನು ನನ್ನನ್ನೆ ಮರೆಯುವಂತೆ

ಮಾಡಿದನಲ್ಲ! ನನ್ನ ಕಿವಿಯಲ್ಲಿ ಪಿಸುಮಾತಿನಿಂದ ಇನ್ನು ಮುಂದೆ ನಿನ್ನನ್ನು ಬಿಟ್ಟು ಅಗಲುವುದೇ ಇಲ್ಲ ಎಂದು ಮಾತುಕೊಟ್ಟನಲ್ಲ! ಅಯ್ಯೋ, ನಾನೇನು ಮಾಡಲಿ! ಆ ಬಳಿಕ ನನ್ನನ್ನಗಲಿ ಅವನು ಹೊರಟುಹೋದನು! ಈಗ ಅವನು ಮಧುವನ್ನು ಉಕ್ಕಿಸುವ ಕನ್ನೈದಿಲೆ ಹೂಗಳಿಂದಲೂ, ಶುದ್ಧವಾದ ಎಸಳುಗಳುಳ್ಳ ಕೆಂದಾವರೆ ಹೂಗಳಿಂದಲೂ, ಬಗೆಬಗೆಯ ಪಕ್ಷಿಗಳಿಂದಲೂ, ಕೆಸರುಗದ್ದೆಗಳಿಂದಲೂ ಸುತ್ತುವರಿದಿರುವ ತಿರುಪ್ಪುಲ್ಲಾಣಿಯಲ್ಲಿ ನೆಲಸಿದ್ದಾನೆ. ಮನಸ್ಸೇ, ಎದ್ದೇಳು ಅಲ್ಲಿಗೆ ಹೋಗೋಣ ಅವನ ಸೇವೆಯಲ್ಲಿ ತೊಡಗೋಣ. ಅವನ ಬಲವನ್ನು ಪಡೆಯೋಣ

7\. பரவிநெஞ்சே தொழுதுமெழு போயவன் பாலமாய்,
இரவுநாளும் இனிக் கண்துயிலாதிருந்தென் பயன்?,
விரவிமுத்தம் நெடுவெண் மணல்மேற்கொண்டு, வெண்திரை
புரவியென்னப்புதஞ்செய்து வந்துந்துப்புல்லாணியே

ಪರವಿನೆಂಜೇ ತೊಳುದುಮೆಳು ಪೋಯವನ್ ಪಾಲಮಾಯ್,
ಇರವುನಾಳುಮಿನಿಕ್ಕಣ್ ತುಯಿಲಾದಿರುನ್ದೆನ್ ಪಯನ್?,
ವಿರವಿ ಮುತ್ತಮ್ ನೆಡುವೆಣ್ ಮಣಲ್ ಮೇಲ್ ಕೊಣ್ಡು, ವೆಣ್ ತಿರೈ
ಪುರವಿಯೆನ್ನಪ್ಪುದಂಜೆಯ್ದು ವನ್ದುನ್ದು ಪ್ಪುಲ್ಲಾಣಿಯೇ.

ಪರವಿ பரவி = ಸ್ತೋತ್ರಮಾಡಿ, ನೆಂಜೇ நெஞ்சே = ಮನಸ್ಸೇ, ತೊಳುದುಮ್ தொழுதும் = ಸೇವೆಮಾಡುವುದಕ್ಕೆ, ಎಳು எழு = ಎದ್ದೇಳು, ಪೋಯ್ போய் = ಹೋಗಿ, ಅವನ್ அவன் = ಅವನ, ಪಾಲಮ್ பாலம் = ಕಡೆಯವರು, ಆಯ್ ஆய் = ಆಗಿ, ಇರವುಮ್ இரவும் = ರಾತ್ರಿಯೂ, ನಾಳುಮ್ நாளும் = ಹಗಲೂ, ಇನಿ இனி = ಇನ್ನು, ಕಣ್ ತುಯಿಲಾದು கண் துயிலாது = ನಿದ್ರಿಸದಂತೆ, ಇರುನ್ದು இருந்து = ಇರುವುದರಿಂದ, ಎನ್ ಪಯನ್ என் பயன் = ಏನು ಪ್ರಯೋಜನ? ವಿರವಿ விரவி = ಸಮ್ಮಿಳಿಸುತ್ತಾ, ಮುತ್ತಮ್ முத்தம் = ಮುತ್ತುಗಳನ್ನು, ನೆಡು நெடு = ವಿಶಾಲವಾದ (ಉದ್ದವಾದ), ವೆಣ್ ಮಣಲ್ ಮೇಲ್ வெண் மணல் மேல் = ಬಿಳಿಯ ಮರಳಿನ ಮೇಲಕ್ಕೆ, ಕೊಣ್ಡು கொண்டு = ತೆಗೆದುಕೊಂಡು ಹೋಗಿ, ವೆಣ್ ತಿರೈ வெண் திரை = ಬಿಳಿಯ ಅಲೆಗಳು, ಪುರವಿ ಎನ್ನ புரவி என்ன = ಕುದುರೆಯಂತೆ, ಅಪ್ಪುದಮ್ ಶೆಯ್ದು அப்புதம் செய்து = ಅಂಟಿಕೊಂಡು, ವನ್ದು வந்து = ಬಂದು, ಉನ್ದು உந்து = (ದಡಕ್ಕೆ) ತಳ್ಳುವ, ಪ್ಪುಲ್ಲಾಣಿಯೇ புல்லாணியே = ತಿರುಪ್ಪುಲ್ಲಾಣಿ ಕ್ಷೇತ್ರವೇ

ಮನಸ್ಸೇ, ಇನ್ನು ರಾತ್ರಿಯೂ ಹಗಲೂ ನಿದ್ರಿಸದಂತೆ ಇರುವುದರಿಂದ ಏನು ಪ್ರಯೋಜನ? ಹೋಗಿ, ಅವನ ಕಡೆಯವರಾಗಿ, ಅವನನ್ನು ಸ್ತುತಿಸಿ, ಪೂಜಿಸಿ, ಸೇವೆಮಾಡುವುದಕ್ಕೆ ಎದ್ದೇಳು. ಬಿಳಿಯ ಅಲೆಗಳು (ದಡವನ್ನು) ಸಮ್ಮಿಳಿಸುತ್ತಾ, ಕುದುರೆಯಂತೆ (ನೆಲಕ್ಕೆ) ಅಂಟಿಕೊಂಡು ಬಂದು ಮುತ್ತು

Garani Srinivasan

ಮುತ್ತುಗಳನ್ನು ವಿಶಾಲವಾದ (ಉದ್ದವಾದ) ಬಿಳಿಯ ಮರಳಿನ ಮೇಲಕ್ಕೆ (7)
ತಂದು (ದಡಕ್ಕೆ) ತಳ್ಳುವಂಥ ತಿರುಪ್ಪುಲ್ಲಾಣಿ ಕ್ಷೇತ್ರವೇ.

ಯುವತಿಯು (ಆಳ್ವಾರರು) ಹೇಳುತ್ತಾಳೆ: ಮನಸ್ಸೇ, ನನ್ನ ಪ್ರಿಯತಮನು ನನ್ನನ್ನು ವಂಚಿಸಿ, ಅಗಲಿ, ದೂರಹೋದ ಮೇಲೆಯೂ ನಾವು ಇಲ್ಲಿಯೇ ಇದ್ದು, ಹಗಲು ರಾತ್ರಿ ಎನ್ನದೆ, ಅವನಿಗಾಗಿ ಕಾತರದಿಂದ ~~ಕಾದುಕೊಂಡಿರು~~ ಕಣ್ಣಿಗೆ ನಿದ್ದೆಯುಲ್ಲದಂತೆ ಕಾದುಕೊಂಡಿರುವುದರಿಂದ ಏನು ಪ್ರಯೋಜನ? ನಮಗೆ ಕಾತರವಾಗಲಿ, ದುಃಖವಾಗಲಿ ತಪ್ಪುವುದೇ? ಅವನೇನು ನಮ್ಮ ಬಳಿಗೆ ಬರುವನೇ? ಈಗ ಅವನು ತಿರುಪ್ಪುಲ್ಲಾಣಿ ಕ್ಷೇತ್ರದಲ್ಲಿದ್ದಾನೆ. ಅದು ಕಡಲ ತೀರದಲ್ಲಿದೆ. ಹೊಳೆಯುವ ಬಿಳಿಯ ಅಲೆಗಳು ದಡವನ್ನು ಸಮೀಪಿಸುತ್ತಾ, ವೇಗವಾಗಿ ಓಡುವ ಕುದುರೆಯ ಹಾಗೆ ನೆಲಕ್ಕೆ ಅಂಟಿಕೊಂಡು ಬರುತ್ತಾ ಕಡಲಿನಿಂದ ಮುತ್ತುಗಳನ್ನು ವಿಶಾಲವಾದ (ಉದ್ದವಾದ) ಬಿಳಿಯ ಮರಳಿನ ಮೇಲಕ್ಕೆ ತಳ್ಳಿ ಎರಚುತ್ತವೆ. ಮನಸ್ಸೇ, ಪ್ರಿಯತಮನಿರುವಲ್ಲಿಗೇ ಹೋಗೋಣ ನಡೆ. ಅಲ್ಲಿ ಅವನನ್ನು ಸ್ತುತಿಸೋಣ, ಪೂಜಿಸೋಣ. ಅವನ ಸೇವೆಮಾಡಿ ಅವನನ್ನು ಒಲಿಸಿಕೊಳ್ಳೋಣ. ಅವನ ಸಮೀಪವರ್ತಿಗಳಾಗೋಣ.

8. அலமுமாழிப்படையுமுடையார் நமக்கன்பராய்,
சலமதாகித் தகவொன்றிலர் நாம் தொழுதுமெழு,
உலவுகாற்கழியோங்கு தண்பைம்பொழிலூடு, இசை
புலவுகானல் களிவண்டினம் பாடு புல்லாணியே.

ಅಲಮುಮಾಳಿಪ್ಪಡೈಯುಮುಡೈಯಾರ್ ನಮಕ್ಕನ್ಬರಾಯ್,
ಶಲಮದಾಗಿತ್ತಗವೊನ್ರಿಲರ್ ನಾಮ್ ತೊಳುದುಮೆಳು,
ಉಲವುಕಾನಲ್ ಕಳಿಯೋಙ್ಗು ತಣ್ ಪೈಮ್ಪೊಳಿಲೂಡು, ಇಶೈ
ಪುಲವುಕಾನಲ್ ಕಳಿವಣ್ಡಿನಮ್ ಪಾಡು ಪುಲ್ಲಾಣಿಯೇ.

ಅಲಮುಮ್ அலமும் = ಹಲಾಯುಧವನ್ನೂ, ಆಳಿ ಪಡೈಯುಮ್ ஆழி படையும் = ಚಕ್ರಾಯುಧವನ್ನೂ, ಉಡೈಯಾರ್ உடையார் = ಉಳ್ಳವರು, ನಮಕ್ಕು நமக்கு = ನಮಗೆ, ಅನ್ಬರ್ ಆಯ್ அன்பர் ஆய் = ಪ್ರಿಯರಾಗಿ, ಶಲಮ್ ಅದು ಆಗಿ சலம் அது ஆகி = ಛಲವೇ ಮುಂತಾದ, ತಗವು தகவு = ಗುಣಗಳು, ಒನ್ರು ಇಲರ್ ஒன்று இலர் = ಒಂದನ್ನೂ ಇಲ್ಲದವರಾಗಿದ್ದಾರೆ, ನಾಮ್ நாம் = ನಾವು, ತೊಳುದುಮ್ தொழுதும் = ಸೇವೆ ಮಾಡುವುದಕ್ಕೆ, ಎಳು எழு = ಎದ್ದೇಳು, ಉಲವು உலவு = ಅಲೆದಾಡುತ್ತಿರುವ, ಕಾಲ್ கால் = ಮಂದಮಾರುತವು, ನಲ್ நல = ಒಳ್ಳೆಯ, ಕಳಿ கழி = ಸಮುದ್ರದ ತೀರದಲ್ಲಿ (ಸಮುದ್ರದ ಬಳಿ), ಓಙ್ಗು ஓங்கு = ಎತ್ತರವಾಗಿ ಬೆಳೆದಿರುವ, ತಣ್ தண் = ತಂಪಾದ, ಪೈ பை = ಹರಡಿಕೊಂಡಿರುವ, ಪೊಳಿಲ್ பொழில் = ತೋಟಗಳ, ಊಡು ஊடு = ನಡುವೆ, ಇಶೈ இசை = ಒಪ್ಪುವಂಥ, ಪುಲವು புலவு =

Garani Srinivasan

ಮುಂಜಾನೆಗೆ, ಕಾನಲ್ ಹಾಣಾಯ್ = ಬಿಳಿಮಳಲಿನ, ಕಳವಣ್ಡು ಹಣಿಯ
ಣ್ಡು = ಸೊಬಗಿನ ದುಂಬಿಗಳ, ಇನಮಾ இணம் = ಗುಂಪುಗಳು,
ಪಾಡು ಪாடு = ಹಾಡುತ್ತಿರುವಂಥ, ಪುಲ್ಲಾಣಿಯೇ புல்லாணியே =
ತಿರುಪ್ಪುಲ್ಲಾಣಿ ಕ್ಷೇತ್ರವೇ.

ಹಲಾಯುಧವನ್ನೂ ಚಕ್ರಾಯುಧವನ್ನು ಉಳ್ಳವರು ನಮಗೆ ಪ್ರಿಯ ರಾ, ಬಾಲವೇ ಮುಂತಾದ ಗುಣಗಳು ಒಂದೂ ಇಲ್ಲದವರಾಗಿದ್ದಾರೆ. ನಾವು ಸೇವೆ ಮಾಡುವುದಕ್ಕೆ ಎದ್ದೇಳು. ಸುಳಿದಾಡುತ್ತಿರುವ ಮಂದಮಾರುತವು ಬಳ್ಳಿಯುದಾಗ (ಸಮುದ್ರದ ತೀರದಲ್ಲಿ) ಸಮೃದ್ಧಿಯಾಗಿ ಎತ್ತರವಾಗಿ ಬೆಳೆದಿ ರುವ ತಂಪಾದ ಹರಡಿಕೊಂಡಿರುವ ತೋಪುಗಳ ನಡುವೆ ಬಿಳಿಮಳಲಿನ ಮುಂಜಾನೆಗೆ ಒಪ್ಪುವಂಥ ಸೊಬಗಿನ ದುಂಬಿಗಳ ಹಿಂಡುಗಳು ಹಾಡುತ್ತಿರು (8)
ವಂಥ ತಿರುಪ್ಪುಲ್ಲಾಣಿಯಲ್ಲಿ.

ಹಲಾಯುಧ ಬಲರಾಮನದು. ಚಕ್ರಾಯುಧ ಶ್ರೀಕೃಷ್ಣನದು. ಬಲರಾಮನೂ ಕೃಷ್ಣನೂ ಭಗವಂತನ ದಶಾವತಾರಗಳಲ್ಲಿ ಸೇರಿದವು.

ಯುವತಿಯು (ಆಳ್ವಾರರು) ಹೇಳುತ್ತಾಳೆ: ಮನಸ್ಸೇ, ಬಲರಾಮನಾಗಿಯೂ ಶ್ರೀಕೃಷ್ಣನಾಗಿಯೂ ಅವತರಿಸಿದ್ದ(ವನು) ನನ್ನ ಪ್ರಿಯತಮನೇ ಅಲ್ಲವೇ? ಅವನೇ ನನೆ ಬಂದು, ನನ್ನ ಬಳಿಯಿದ್ದು, ನನ್ನನ್ನು ಮರುಳು ಗೊಳಿಸಿ, ಹೊರಟೇ ಹೋದನು. ಅವನಲ್ಲಿ ನಾವು ಬಾಲ, ಶೀಲ ಮುಂತಾದ ಗುಣಗಳನ್ನು ಅಪೇಕ್ಷಿಸಲಾದೀತೇ? ಅವನೀಗ ತಿರುಪ್ಪುಲ್ಲಾಣಿ ಕ್ಷೇತ್ರದಲ್ಲಿ ನೆಲಸಿದ್ದಾನೆ. ಅದು ಬಲು ಸುಂದರ ಕ್ಷೇತ್ರ. ಕಡಲ ತೀರದಲ್ಲಿ ಸೊಗಸಾದ ಎತ್ತರವಾದ ತಂಪಾದ ಬಿಳಿಮಳಲಿನ ತೋಪುಗಳಿವೆ. ಮಂದಮಾ ರುತವು ಅವುಗಳ ನಡುವೆ ಸುಳಿದಾಡುತ್ತಾ ಬಿಳಿಮಳಲನ್ನು ಎಲ್ಲೆಲ್ಲೂ ಹರಡುತ್ತದೆ. ಅದಕ್ಕೆ ಒಪ್ಪುವಂಥ ಸೊಬಗಿನಿಂದ ಮುಂಜಾನೆ ಬರುತ್ತದೆ. ಅಂದವಾದ ದುಂಬಿಗಳ ಹಿಂಡುಗಳು ಅದಕ್ಕೆ ತಕ್ಕಂತೆ ಇನಿದಾಗಿ ಹಾಡು ತ್ತವೆ. ಮನಸ್ಸೇ, ಎದ್ದೇಳು ನಾವು ಅಲ್ಲಿಗೆ ಹೋಗೋಣ. ನಮ್ಮ ಪ್ರಿಯ ನನ್ನು ಸಂಧಿಸೋಣ. ಅವನ ಸೇವೆಯಲ್ಲಿ ತೊಡಗೋಣ. ಅವನನ್ನು ಒಲಿಸಿಕೊಳ್ಳೋಣ.

9. ஓதிநாமங்குளித்துச்சிந்தனுள் ஒளிமாமலர்,
பாதநாளும்பணிவோம் நமக்கேநலமாதலில்,
ஆதுதாராநெனினுந்தரும் அன்றியுமன்பராய்,
போதுமாதே, தொழுதும் அவன் மன்னுபுல்லாணியே

ಓದಿನಾಮಙ್ಗುಳಿತ್ತುಚ್ಚಿನ್ದನುಳ್ ಒಳಿಮಾಮಲರ್,
ಪಾದನಾಳುಮ್ ಪಣಿವೋಮ್ ನಮಕ್ಕೇ ನಲಮಾದಲಿಲ್
ಆದು ತಾರಾನೆನಿನುನ್ದರುಮ್ ಅನ್ರಿಯುಮನ್ಬರಾಯ್,
ಪೋದುಮಾದೇ, ತೊಳುದುಮ್ ಅವನ್ ಮನ್ನು ಪುಲ್ಲಾಣಿಯೇ.

Garani Srinivasan

ಓದಿ ನಾಮಮ್ ತ್ತಿ திருநாமம் = ದಿವ್ಯ ನಾಮಗಳನ್ನು ಪಠಿಸಿ, ಕುಳಿತ್ತು
குளித்து = ಮಿಂದು. ಉಚ್ಚಿ ತನ್ನಾಲ್ உச்சி தன்றால் = ನೆತ್ತಿಯಲ್ಲಿ,
ಒಳಿ ತಾಣಿ = ಬೆಳಗುವ, ಮಾ மா = ಶ್ರೇಷ್ಠವಾದ, ಮಲರ್ ಪಾದಮ್
மலர் பாதம் = ಪೂವಿನಂಥ ಪಾದವನ್ನು, ನಾಳುಮ್ நாளும் = ಯಾ
ವಾಗಲೂ, ತೊಳ್ವೋಮ್ பணிவோம் = ಸೇವಿಸೋಣ, ನಮಸ್ಕ
நமக்கே = ನಮಗೇಯೇ, ನಲಮ್ நலம் = ಶ್ರೇಯಸ್ಸು (ಒಳ್ಳೆಯದು),
ಆದಲಾಲ್ அதனால் = ಆದ್ದರಿಂದ, ಆದು ತಾರಾನ್ ಎನಿಲುಮ್ அது
தாரான் எனினும் = ಯಾವುದನ್ನು (ಅವನು) ಕೊಡುವುದಿಲ್ಲ
ವೆಂದರೂ ಸಹ, ತರುಮ್ தரும் = ಕೊಡುತ್ತಾನೆ, ಅನ್ಱಿಯುಮ್
அன்றியும் = ಅಲ್ಲದೆಯೂ, ಅನ್ಬರಾಯ್ அன்பராய் = ಪ್ರಿಯ
ರಾಗ (ಭಕ್ತರಾಗ), ಪೋದುಮ್ போதும் = ಸಾಕು, ಮಾಡೇ மாதே
= ತಾಯೇ (ಪ್ರಿಯಳೇ), ಶೇಲುದುಮ್ எத்தாது = ಸೇವಿಸೋ
ಣ, ಅವನ್ ಮನ್ನು அவன் மண்ணு = ಅವನು ನೆಲಸಿರುವ,
ಪ್ಪಾವೈಯೇ பாவாய் = ಶಿರುಪ್ಪಾವೈಯನ್ನೇ.

ತಾಯೇ (ಪ್ರಿಯಳೇ), ನಾವು ಮಿಂದು, ಅವನ ದಿವ್ಯನಾಮಗಳನ್ನು ಪಠಿಸಿ, ಬೆಳಗುವ ಶ್ರೇಷ್ಠವಾದ ಪೂವಿನಂಥ (ಕೋಮಲ) ಪಾದಗಳನ್ನು ನೆತ್ತಿಯ ಮೇಲೆ ಧರಿಸಿ, ಅವುಗಳನ್ನು ಯಾವಾಗಲೂ ಸೇವಿಸೋಣ. ಅದರಿಂದ ನಮಗೇ ಶ್ರೇಯಸ್ಸು. ಆದ್ದರಿಂದ, ಅವನು ಯಾವುದನ್ನು ನಮಗೆ ಕೊಡುವುದಿಲ್ಲವೆಂದರೂ ಸಹ ಕೊಟ್ಟೇ ಕೊಡುತ್ತಾನೆ. ಅಲ್ಲದೆ, ಅವನ ಪ್ರಿಯರಾಗ (ಭಕ್ತರಾಗ)ರುವುದೇ ಸಾಕು. ಅವನು ನೆಲಸಿರುವ ಶಿರುಪ್ಪಾವೈಯನ್ನೇ ಸೇವಿಸೋಣ, ಸಖಿ. (9)

ಇದುವರೆಗೆ ಪಾಶುರದ ಯುವತಿಯು ~~...~~ ತನ್ನ ಪ್ರಿಯತಮನಿಂದ ತನಗೆ ಒದಗಿ ಬಂದ ಆನಂದಾನುಭವಗಳನ್ನು, ಅವುಗಳ ಫಲವಾದ ದೃಢವಾದ ಪ್ರೇಮವನ್ನು ತಾನು ಹೇಳಿಕೊಂಡಳು. ತಮ್ಮಿಬ್ಬರ ಪ್ರೇಮಕ್ಕೆ ಯಾವ ಬಗೆಯ ~~...~~ ಅಡಚಣೆಯೂ ಉಂಟಾಗದೆಂದು ಬಯಸಿದ್ದಳು. ಅವನ ಪ್ರೇಮಾನುಭವದಲ್ಲಿಯೇ ಮೈಮರೆತಿದ್ದರು. ಆದರೆ, ಇದ್ದಕ್ಕಿದ್ದಂತೆ ಪ್ರಿಯತಮನು ತಾತ್ಕಾಲಿಕವಾಗಿ ಅವಳನ್ನಗಲಿ ಹೋದನು. ಅದರಿಂದ ಅವಳಿಗೆ ಉಂಟಾದ ಸಂಕಟವನ್ನು ಅವಳನ್ನಗಲಿ ಹೋದನು. ಮತ್ತೆ ತನ್ನ ನಲ್ಲನ ಒಲವನ್ನು ತಾನು ಪಡೆಯಬೇಕು. ಅದಕ್ಕೆ ಏನು ಅಷ್ಟುಮಾಡಬೇಕು? ತನ್ನ ಆ ಉಪಾಯಕ್ಕೆ ಮನಸ್ಸನ್ನು ಒಲಿಸಿಕೊಳ್ಳಬೇಕಷ್ಟೆ. ~~...~~ ಆ ಕಾರ್ಯವನ್ನು ಮಾಡುತ್ತಾ, ಮನಸ್ಸನ್ನು ಹೂಡುಂಬಡಲಾಯಿತು ~~...~~ ಪಾಶುರದಲ್ಲಿ ಅಂಥ ಉಪಾಯವೇನು ಎಂಬುದನ್ನು ವಿವರಿಸಲಾಗಿದೆ.

ಯುವತಿ (ಆಳ್ವಾರರು) ಹೇಳುತ್ತಾಳೆ: ತಾಯೇ, ಪ್ರಿಯಸಖೀ, (ತನ್ನ ಮನಸ್ಸನ್ನೆ ಉದ್ದೇಶಿಸಿ ಹೇಳುತ್ತಾಳೋ?), ನಾವು ಪ್ರಿಯತಮನ ದಿವ್ಯನಾಮಗಳನ್ನು ಉಚ್ಚರಿಸುತ್ತಾ ನಮ್ಮ ಅಂತರಂಗವನ್ನು ಶುದ್ಧಮಾಡಿ

ಕೊಳ್ಳೋಣ. ಚೆನ್ನಾಗಿ ಮಿಂದು ನಮ್ಮ ದೇಹವನ್ನು ಶುದ್ಧಿ ಮಾಡಿಕೊಳ್ಳೋಣ. ಅನಂತರ, ಪ್ರಿಯನ ಕೋಮಲವಾದ ಪಾದಕಮಲಗಳ ಮೇಲೆ ನಮ್ಮ ನಿಶ್ಚಯವನ್ನಿರಿಸೋಣ. ಅವುಗಳನ್ನೇ ದೃಢವಾಗಿ ಆಶ್ರಯಿಸೋಣ. ಅವನ ಸೇವೆಯಲ್ಲಿ ತೊಡಗೋಣ. ಬಿಡದಂತೆ ಯಾವಾಗಲೂ ಸೇವೆ ಮಾಡುತ್ತಲೇ ಇರೋಣ. ಸೇವೆ ಮಾಡುವುದರಿಂದ ನಾವು ಅವನ ಆಶ್ರಿತರಾಗುತ್ತೇವೆ. ಅವನ ಪ್ರೀತಿಗೆ ಪಾತ್ರರಾಗುತ್ತೇವೆ. ಅಷ್ಟೇ ಸಾಲದೇ? ಅನನ್ಯವಾದ ನಮ್ಮ ಸೇವೆಗೆ ಅವನು ಬದಲಾಗಿ ಯಾವ ಪ್ರತಿಫಲವನ್ನೂ ಕೊಡಬದ್ಧನಾದ, ನಮ್ಮ ಸೇವೆಯನ್ನು ಮೆಚ್ಚಿಕೊಂಡು, ತನ್ನ ಫಲವನ್ನು ಕೊಟ್ಟೇ ಕೊಡುತ್ತಾನೆ. ಆದ್ದರಿಂದ, ಅವನು ನೆಲೆಸಿರುವ ತಿರುಪ್ಪುಲ್ಲಾಣಿ ಕ್ಷೇತ್ರಕ್ಕೆ ಹೋಗೋಣ, ನಡೆ.

10. இலங்கு முத்தும் பவளக்கொழுந்தும் எழில் தாமரை,
புலங்கள் முற்றும் பொழில் சூழ்ந்து அழகாய புல்லாணி மேல்,
கலங்கலில்லாப் புகழான் கலியன் ஒலிமாலை,
வலங்கொள் தொண்டர்க்கிடமாவது பாடில் வைகுந்தமே.

ಇಲಙ್ಗುಮುತ್ತುಮ್ ಪವಳಕ್ಕೊೞುನ್ದುಮ್ ಎೞಿಲ್ ತಾಮರೈ,
ಪುಲಙ್ಗಳ್ ಮುಟ್ರುಮ್ ಪೊೞಿಲ್ ಶೂೞ್ನ್ದು ಅೞಗಾಯ ಪುಲ್ಲಾಣಿ ಮೇಲ್,
ಕಲಙ್ಗಲಿಲ್ಲಾಪ್ಪುಗೞಾನ್ ಕಲಿಯನ್ ಒಲಿಮಾಲೈ,
ವಲಙ್ಗೊಳ್ ತೊಣ್ಡರ್ಕ್ಕಿಡಮಾವದು ಪಾಡಿಲ್ ವೈಗುನ್ದಮೇ.

ಇಲಙ್ಗು இலங்கு = ಹೊಳೆಯುವ, ಮುತ್ತುಮ್ முத்தும் = ಮುತ್ತುಗಳನ್ನೂ, ಪವಳಮ್ பவளம் = ಹವಳದ, ಕೊೞುನ್ದುಮ್ கொழுந்தும் = ಎಳೆಯ ಬಳ್ಳಿಗಳನ್ನೂ, ಎೞಿಲ್ எழில் = ಸುಂದರವಾದ, ತಾಮರೈ தாமரை = ತಾವರೆಗಳುಳ್ಳ, ಪುಲಙ್ಗಳ್ புலங்கள் = ಬಯಲುಗಳನ್ನೂ, ಮುಟ್ರುಮ್ முற்றும் = ಪೂರ್ತಿಯಾಗಿ, ಪೊೞಿಲ್ பொழில் = ತೋಪುಗಳು, ಶೂೞ್ನ್ದು சூழ்ந்து = ಸುತ್ತುವರಿದು, ಅೞಗಾಯ அழகாய = ಶೋಭೆಯಿಂದ ಕೂಡಿದ, ಪುಲ್ಲಾಣಿ ಮೇಲ್ புல்லாணி மேல் = ತಿರುಪ್ಪುಲ್ಲಾಣಿ ಕ್ಷೇತ್ರವನ್ನು ಕುರಿತು, ಕಲಙ್ಗಲ್ ಇಲ್ಲಾ கலங்கள் இல்லா = ಚಪಲತೆಯಿಲ್ಲದ, (ಚಂಚಲವಿಲ್ಲದ), ಪುಗೞಾನ್ புகழான் = ಕೀರ್ತಿಯುಳ್ಳವನಾದ, ಕಲಿಯನ್ கலியன் = ಕಲಿಯನ, ಒಲಿಮಾಲೈ ஒலிமாலை = ಹಾಡಿನ ಮಾಲೆಯನ್ನು, ವಲಙ್ಗೊಳ್ வலங்கொள் = ಅಭ್ಯಾಸ ಮಾಡತಕ್ಕ, ~~[illegible]~~ ತೊಣ್ಡರ್ಕ್ಕು தொண்டர்க்கு = ಭಕ್ತರಿಗೆ, ಇಡಮ್ ಆವದು இடம் ஆவது = ಸ್ಥಳವಾಗುವುದು, ಪಾಡು ಇಲ್ பாடு இல் = ದುಃಖ ಸಂಕಟಗಳಿಲ್ಲದ, ವೈಗುನ್ದಮೇ

ಪಾಶುರಕ್ರಮ = ಶ್ರೀವೈಕುಂಠವೇ.

ಹೊಳೆಯುವ ಮುತ್ತುಗಳನ್ನು ಹವಳದ ಎಲೆಯ ಕೊಂಬೆಗಳನ್ನೂ, ಸುಂದರವಾದ ತಾವರೆಗಳುಳ್ಳ ಬಯಲುಗಳನ್ನೂ ಪ್ರಾಕಾರಯಾಗ ತೀರದ ಗಳಿಂದ ಸುತ್ತುವರಿದಿರುವ ಸಿಂಗಾರದ ತಿರುಪ್ಪುಲ್ಲಾಣಿ ಕ್ಷೇತ್ರವನ್ನು ಕುರಿತು ಚಂಚಲವಲ್ಲದ ಶಾಶ್ವತವಂತನಾದ ಕಲಿಯನ ಪಾಡಿದ ಮಾಲೆ ಯನ್ನು ಅಭ್ಯಾಸ ಮಾಡತಕ್ಕ ಭಕ್ತರಿಗೆ ದುಃಖ ಸಂಕಟಗಳಿಲ್ಲದ (10)
ಶ್ರೀವೈಕುಂಠವೇ ನಿಶ್ಚಯವಾದುದು

ಈ ತಿರುಮೊಳಿಯಲ್ಲಿ ಕಲಿಯನು (ತಿರುಮಂಗೈ ಆಳ್ವಾರರು) ತಿರುಪ್ಪುಲ್ಲಾಣಿ ಯ ಪ್ರತಿಷ್ಠೆಯನ್ನು ಕುರಿತು ಹೇಳಿದ್ದಾರೆ. ಇಲ್ಲಿ ಹೇಳಿರುವುದಾದರೂ ಏನನ್ನು? ಪ್ರೇಮಿಗಳು ಅಗಲಿಹೋದ ..., ಅವರ ದೃಢವಾದ ಪ್ರೇಮವೇ. ಎಂದೆಂದಿಗೂ ಅಗಲ ದಂತೆ ಅವರನ್ನು ಬಂಧಿಸಿರುವುದು ಅವರ ಸುಖ ಶಾಂತಿಗಳನ್ನು ತುಂಬು ದಂತೆ, ಇಬ್ಬರೂ ಒಟ್ಟಾಗಿ ಇರುವುದು. ನಾಯಕಿಯು ತನ್ನ ಪ್ರಿಯತಮನೊಬ್ಬ ಅವನು ತನ್ನ ವರನಾಗಿ ಬಾಳಬೇಕು. ನಾಯಕಿಯ ಹೃದಯವನ್ನು ಸೂರೆಗೊಂಡು, ಅವಳನ್ನು ಅತಿಶಯವಾದ ಪ್ರೇಮದಿಂದ ಅವಳ ಅಂತರಂಗವನ್ನು ಸೂರೆಗೊಂಡು, ಅಗಲಿ ಹೊರಟುಹೋದವನು ನಂಬಿಸಿ, ಕಡೆಗೆ, ಅವಳನ್ನು ಒಂಟಿಯಾಗಿ ಮಾಡಿ, ಅಗಲಿ ಹೊರಟುಹೋದವನು ಅವನು ತಿರುಪ್ಪುಲ್ಲಾಣಿಯಲ್ಲಿದ್ದಾನೆಂದು ಅವಳಿಗೆ ತಿಳಿಯಿತು. ತಾನಿದ್ದಲ್ಲಿ ಬಂದ ತನ್ನ ಪ್ರಿಯತಮನ ಸಂಗದಿಂದ ನಡೆದ ವಿಷಯಗಳನ್ನೆಲ್ಲಾ ನೆನೆನೆನೆದು ದುಃಖ ಸುವ್ಯಕ್ತಂತಲೂ, ಅವನಿರುವಲ್ಲಿಗೇ ಹೋಗಿ, ಅವನ ಪಾದಗಳಲ್ಲಿಯಲ್ಲಿ ಸೇರಿ ಅವನನ್ನು ಮತ್ತೆ ಒಲಿಸಿಕೊಳ್ಳುವುದು ಲೇಸು ಎಂದು ಅವಳಿಗೆ ತೋರಿಬಂತು. ಅಲ್ಲಿ ಅವಳು ಪರಿಶುದ್ಧವಾದ ರೀತಿಯಲ್ಲಿದ್ದ ಅವನಿಗೆ ತನ್ನ ಮನಸ್ಸನ್ನು ಒಪ್ಪಿಸಿದಳು. ಅಲ್ಲಿ ಅವನ ಕಲ್ಯಾಣ ಗುಣಗಳನ್ನು, ತನ್ನ ಪ್ರಿಯತಮನ ದಿವ್ಯನಾಮಗಳನ್ನು ಹೇಳುತ್ತಾ, ಅವನ ಕೋಮಲವಾದ ಅವನ ಪಾದಕಮಲ ಗುಣಗಳನ್ನು ಹೊಗಳಿ ಹಾಡುತ್ತಾ, ಮತ್ತೆ ಅವನನ್ನು ತಾನು ಒಲಿಸಿಕೊ ಗಳನ್ನು ತ್ರಯಿಸಿ, ಅವುಗಳನ್ನೇ ಮಾಡುತ್ತಾ ಮತ್ತೆ ಅವನನ್ನು ತಾನು ಒಲಿಸಿಕೊ ಳ್ಳಬಹುದೆಂದು ನಿರ್ಧರಿಸಿ, ಹಾಗೆಯೇ ಮಾಡತೊಡಗಿದಳು. ನಾಯಕಿಗಳ ವಾ ಲಕ್ಷ್ಯ ಹೊರಬರುವ ವಿಷಯವಿದು.

ಕಲಿಯನು, ನಾಯಕಿಯ ಮತ್ತಿಯಾಗಿ, ತನಗೆ ಭಗವಂತನಲ್ಲಿ ರುವ ಅಚಲ ಪ್ರೇಮವನ್ನು ವಿವರಿಸುತ್ತಾರೆ. ಭಗವಂತನ ಪಾದಗಳಲ್ಲಿ ಸೇರಿ, ಅವನನ್ನು ಶಾಶ್ವತವಾಗಿ ಒಲಿಸಿಕೊಳ್ಳಬೇಕೆಂದು ವಿವರಿಸಿ ಹೇಳುವುದು ಈ ತಿರುಮೊಳಿಯ ಒಳವಿಷಯ

ಕಲಿಯನು ಈ ತಿರುಮೊಳಿಯಲ್ಲಿ ಹೇಳಿರುವುದನ್ನೆಲ್ಲಾ ಚೆನ್ನಾಗಿ ಅರಿತು ಅಭ್ಯಾಸ ಮಾಡುವವರಿಗೆ ಭಗವಂತನ ಪ್ರಾಣಕ್ಷ ಶ್ರಾಯ ಪ್ರಾಪ್ತಿಯಾಗುವುದರಿಂದ, ಅವರ ಮರಣಾನಂತರ, ಅವರಿಗೆ ಜನನ ಮರಣಾದಿ ದುಃಖ ಸಂಕಟಗಳಿಲ್ಲದ ಪರಮಪದವೇ ಪ್ರಾಪ್ತಿಯಾಗುವುದು. ಇದೇ ಈ ತಿರುಮೊಳಿಯ ಮಹತ್ವ ಮತ್ತು ಫಲಶ್ರುತಿ.

ಅಡಿಯನಡಿ: அடியாரை — ತನ್ನತ್ತ ಕುಂಡಿಂ, ಮರುಮ ಮುರುಕ್ಕಿ, ಪಿದುಂಗ ಕ್ಕು, ಕೋಟ್ಟು கொங்கு, ಉಡಲುಳ್ ಉಣರಿಲ್, ಎಟ್ಟುಂ ಮಾಣಕ್ಕಿ, ಪೆರಮಿಪರಾಯ್, ಅಲಮಾಅಲಂ, ಕಡಿ ಉತ್ತಿ, ಇಲಜ್ಜು இலங்குத, (ಕಾಪಿರ್ ಕಾವಾರ್)

3.11.78

ಪೆರಿಯ ತಿರುಮೊಳಿ – ಒಂಬತ್ತನೆಯ ದಶಕ – ನಾಲ್ಕನೆಯ ತಿರುಮೊಳಿ

பெரிய திருமொழி – ஒன்பதாம் பத்து – நான்காந் திருமொழி

4. ಕಾವಾರ್ ಮಡಲ್ ಪೆಣ್ಣೈ – காவார்மடற்பெண்ணை

1. காவார்மடற்பெண்ணை அன்றிலரிகுரலும்,
ஏவாயினூடியங்கும் எஃகிற்கொடிதாலோ,
பூவார்மணங்கமழும் புல்லாணிகைதொழுதேன்,
பாவாயிதுநமக்கோர் பான்மையேயாகாதே.

ಕಾವಾರ್ ಮಡಲ್ ಪೆಣ್ಣೈ ಅನ್ರಿಲರಿಕುರಲುಮ್,
ಏವಾಯಿನೂಡಿಯಙ್ಗುಮ್ ಎಃಕಿಱ್ಕೊಡಿದಾಲೋ,
ಪೂವಾರ್ ಮಣಙ್ಗಮೞುಮ್ ಪುಲ್ಲಾಣಿ ಕೈತೊೞುದೇನ್,
ಪಾವಾಯಿದುನಮಕ್ಕೋರ್ ಪಾನ್ಮೈಯೇಯಾಗಾದೇ.

ಕಾ கா = ಕೊಂಪಿನಲ್ಲಿ, ಆರ್ ஆர் = ತುಂಬಿರುವ, ಮಡಲ್ ಪೆಣ್ಣೈ மட ல் பெண்ணை = ವಿಸ್ತಾರವಾದ ದಾಳೆಗಳುಳ್ಳ ತಾಳೆಯ ಮರಗಳಲ್ಲಿ, ಅರಿ ಕುರಲುಮ್ அரி ಅನ್ರಿಲ್ அன்றில் = ಕ್ರೌಂಚಪಕ್ಷಿಗಳ, ಏವಾಯಿನ್ ஏவாயின் = ಬಾಣದ குரலும் = ಕ್ರೂರವಾದ ಧ್ವನಿಯೂ, ಇಯಙ್ಗುಮ್ ಬಾಯಿ(ಅಲಗಿನ), ಊಡು ஊடு = ಮಧ್ಯದಲ್ಲಿ, ಎಃಕಿನ್ எஃகின் = (ಮೊನಚಾದ) ಆಯು இயங்கும் = ಸಂಚರಿಸುವ, ಅಲ್ಲ. ಆಯು ಧಕ್ಕಿಂತಲೂ, ಕೊಡಿದು கொடிது = ಕ್ರೂರವಾದದ್ದು, ಪೂ ಆರ್ பூ ஆர் = ಹೂಗಳಿಂದ ತುಂಬಿರುವ, ಮಣಮ್ ಮಣ ಅಯ್ಯೋ, ಕಮೞುಮ್ கமழும் = ಘಮಘಮಿಸುವ, ಪುಲ್ಲಾಣಿ புல்லாணி = ತಿರುಪ್ಪುಲ್ಲಾಣಿ ಕ್ಷೇತ್ರವನ್ನು, ಕೈ ತೊೞುದೇನ್ கை தொழுதேன் = ಕೈ ಮುಗಿದೆನು, (ಕೈಮುಗಿದಿದ್ದೇನೆ; ಕೈಮುಗಿಯುತ್ತೇನೆ), ಪಾವಾಯ್ பாவாய் = ಹೆಣ್ಣೇ (ಕನ್ನಿಕೆಯೇ), ಇದು இது = ನಮ್ಮನ್ನು, ನಮಕ್ಕು நமக்கு = ನಮಗೆ, ಓರ್ ஓர் = ನಾಟಿಯಿಲ್ಲದ, ಹೊಸಲದವು, ಪಾನ್ಮೈಯೇ பான்மையே = ಸಹಜಸ್ವಭಾವವೇ, ಆಗಾದೇ ஆகா தே = ಆಗಬಾರದೇ?

ಕೊಂಪಿನಲ್ಲಿ ತುಂಬಿರುವ ವಿಸ್ತಾರವಾದ ದಾಳೆ(ಗರಿ)ಗಳುಳ್ಳ ತಾಳೆಯ ಮರಗಳಲ್ಲಿ ಕ್ರೌಂಚಪಕ್ಷಿಗಳ ಕ್ರೂರವಾದ ಧ್ವನಿಯೂ, ಬಾಣದ ಅಲಗಿನ ಮಧ್ಯದಲ್ಲಿ ಸಂಚರಿಸುವ ಮೊನಚಾದ ಆಯುಧಕ್ಕಿಂತಲೂ ಕ್ರೂರವಾದದ್ದು. ಅಯ್ಯೋ! ಹೂಗಳಿಂದ ತುಂಬಿರುವ ಪರಿಮಳವು ಘಮಘಮಿಸುವ ತಿರುಪ್ಪುಲ್ಲಾಣಿ ಕ್ಷೇತ್ರವನ್ನು ಕೈಮುಗಿಯುತ್ತೇನೆ. ಹೆಣ್ಣೇ (ಕನ್ನಿಕೆಯೇ), ಇದು ನಮಗೆ ಸಹಜಸ್ವಭಾವವೇ ಆಗಬಾರದೇ? (1)

ಒಂದನೆ ತಿರುಮೊಳಿಯಲ್ಲಿ ನಾಯಕಿಯು ತನ್ನ ಪ್ರಿಯ

ತಮನು ನೆಲಸಿರುವ ತಿರುಪ್ಪುಲ್ಲಾಣಿ ಕ್ಷೇತ್ರಕ್ಕೆ ಹೋಗುವುದೆಂದು ತನ್ನ ಮನಸ್ಸನ್ನು ಸಿದ್ಧಗೊಳಿಸಿದಳು. ತಿರುಪ್ಪುಲ್ಲಾಣಿಗೆ ಹೋಗಲು ಅವಳಿಗೆ ಆಗಲಿಲ್ಲವಾದೀತು. ಅಲ್ಲಿಗೆ ಹೋಗುವುದಕ್ಕೆಂದು ಹೊರಟವಳು ತನ್ನ ಊರಿನ ತಾಳೆಯ ವನವನ್ನು ಪ್ರವೇಶಿಸಿದಳು. ಅಲ್ಲಿಯೂ ಅವಳ ವಿರಹ ವೇದನೆಯನ್ನು ಹೆಚ್ಚಿಸಲು ಕ್ರೌಂಚ ದಂಪತಿಗಳ ಪ್ರೇಮಾಲಾಪ ಇರಬೇಕೇ! ಕೂಡಲೇ ಅವಳು ತಿರುಪ್ಪುಲ್ಲಾಣಿಯನ್ನು ಅದನ್ನು ಸುತ್ತುವರಿದ ದಿವ್ಯ ಪರಿಮಳ ಪುಷ್ಪಗಳ ಘಮಘಮಿಸುವ ವಾತಾವರಣವನ್ನು ನೆನಪಿಸಿಕೊಂಡು, ಅಲ್ಲಿಂದಲೇ ಕೈಯೆತ್ತಿ ಮುಗಿಯುತ್ತಾಳೆ! ಯಾವುದೊಂದು ಪ್ರಾಪಂಚಿಕ ಅನುಭವವುಂಟಾದಾಗಲೂ ಭಗವಂತನ ಸ್ಮೃತಿ ಮನಸ್ಸಿಗೆ ಬರುವಂಥ, ಭಗವಂತನನ್ನು ಮನಸಾ ವಂದಿಸುವಂಥ ಸಹಜ ಸ್ವಭಾವ ಉಂಟಾದರೆ ಒಳ್ಳೆಯದಲ್ಲವೇ?

ಯುವತಿಯು ಹೇಳುತ್ತಾಳೆ. ಕಳ್ಳಿಕೆ (ಕನ್ನಿಕೆಯೇ), ಈ ತಾಳೆಯ ವನದಲ್ಲಿ ಶಾಂತಿಯನ್ನು ಪಡೆಯಲು ಬಂದರೆ, ಕ್ರೌಂಚ ದಂಪತಿಗಳ ಪ್ರೇಮಾಲಾಪವು ನನಗೆ ಕಾಮಬಾಣದ ಅಲಗಿನಿಂದಾದ ಹುಣ್ಣಿಗಿಂತಲೂ ತೀಕ್ಷ್ಣವಾದ ಯಾತನೆಯನ್ನುಂಟುಮಾಡುವುದಲ್ಲ! ನನ್ನ ವಿರಹ ವೇದನೆಯನ್ನು ಹೆಚ್ಚಿಸುತ್ತಿದೆಯಲ್ಲ! ಅಯ್ಯೋ! ಇಲ್ಲಿಂದಲೇ ತಿರುಪ್ಪುಲ್ಲಾಣಿಗೆ ಕೈ ಎತ್ತಿ ಮುಗಿಯುತ್ತೇನೆ. ನನ್ನ ಪ್ರಿಯತಮನನ್ನು ಸ್ಮರಿಸುತ್ತಾ ಇಲ್ಲಿಂದಲೇ ಸದಾ ನಮಸ್ಕರಿಸುವಂಥ ಸ್ವಭಾವವು ನನಗೆ ಸಹಜವಾಗಿಯೇ ಉಂಟಾಗಬಾರದೇ? ಆಗ, ನನಗೆ ಅವನ ಅಗಲಿಕೆಯೆಂಬುದೇ ತೋರುವುದಿಲ್ಲವಲ್ಲ! ಅವನು ನನ್ನ ಮನದಿಂದ ಬೇರ್ಪಡುವುದೇ ಇಲ್ಲವಲ್ಲ!

2. முன்னம் குறளுருவாய் மூவடி மண் கொண்டளந்த,
மன்னன் சரிதைக்கே மாலாகிய பொன் பயந்தேன்,
பொன்னங்கழிக் கானல் புள்ளினங்காள் புல்லாணி,
அன்னமாய் நூல் பயந்தார்க்கு இங்கிதனைச் செப்புமினே.

ಮುನ್ನಮ್ ಕುಱಳುರುವಾಯ್ ಮೂವಡಿ ಮಣ್ ಕೊಣ್ಡಳನ್ದ.
ಮನ್ನನ್ ಶರಿದೈಕ್ಕೇ ಮಾಲಾಹಿಯ ಪೊನ್ ಪಯನ್ದೇನ್,
ಪೊನ್ನಙ್ಗಳಿಕ್ಕಾನಲ್ ಪುಳ್ಳಿನಙ್ಗಾಳ್ ಪುಲ್ಲಾಣಿ,
ಅನ್ನಮಾಯ್ ನೂಲ್ ಪಯನ್ದಾರ್ಕ್ಕು ಇಙ್ಗಿದನೈಚ್ ಚೆಪ್ಪುಮಿನೇ.

ಮುನ್ನಮ್ முன்னம் = ಹಿಂದೆ ಒಂದು ಕಾಲದಲ್ಲಿ, ಕುಱಳ್ ಉರುವಾಯ್ குறள் உருவாய் = ವಾಮನವಟುವಿನ ರೂಪಗೊಂಡು, ಮೂ ಅಡಿ ಮಣ್ ಕೊಣ್ಡು மூ அடி மண் கொண்டு = ಮೂರು ಹೆಜ್ಜೆ ನೆಲವನ್ನು ದಾನವಾಗಿ ಸ್ವೀಕರಿಸಿ, ಅಳನ್ದ அளந்த = (ಅದನ್ನು) ಅಳೆದುಕೊಂಡ, ಮನ್ನನ್ மன்னன் = ದೇವಾಧಿದೇವನ, ಶರಿದೈಕ್ಕೇ சரிதைக்கே = ಅಪಾರವಾದ ಚರಿತ್ರೆಗೇಯೇ, ಮಾಲ್ ಆಹಿ மால் ஆகி = ವ್ಯಾಮೋಹಗೊಂಡು, ಪೊನ್ பொன் = ಮಾಂಗಲ್ಯವನ್ನು, (ಮಂಗಳ ಸೂತ್ರವನ್ನು), ಪಯನ್ದೇನ್ பயந்தேன் = ಆಶಿಸಿದ್ದೇನೆ, ಪೊನ್ನಙ್ಗಳಿಕ್ಕಾನಲ್ பொன்னங்கழி கானல் = ಪೊನ್ನಙ್ಗಳ ಕ್ಷೇತ್ರದ ತಟದ

ಪುಳ್ ಇನಙ್ಗಳ್ புணர் திணங்குகாள் = ಪಕ್ಷಿಗಳೊಡನೇ, ಪುಲ್ಲಾಣಿ புல லாணி = ತಿರುಪ್ಪುಲ್ಲಾಣಿಯಲ್ಲಿ, ನೆಲಸಿರುವ, ಅನ್ನಮಾಯ್ அன்னம் ஆய் = ಹಂಸವಾಗಿ, ನೂಲ್ நூல் = ವೇದಗಳನ್ನು, ಪಯನ್ದಾಱ್ಕು பயந்தாற்கு = ಕರುಣಿಸಿದವನಿಗೆ, ಆಙ್ಗು ஆங்கு = ಅಲ್ಲಿಗೆ ಹೋಗಿ ಇದನ್ನೈ இதனை = ಈ ವಿಷಯವನ್ನು, ಶೆಪ್ಪುಮಿನೇ செப்புமினே = ಹೇಳಿರಿ

ಪೊನ್ನಙ್ಗಳ ಕ್ಷೇತ್ರದ ಕಾಡಿನಲ್ಲಿ ವಾಸಿಸುವ ಪಕ್ಷಿಗಳೊಡನೇ, ತಿರುಪ್ಪುಲ್ಲಾಣಿ ಕ್ಷೇತ್ರದಲ್ಲಿ ನೆಲಸಿರುವ ಸ್ವಾಮಿಯು ಒಂದೆ ಒಂದು ಕಾಲದಲ್ಲಿ ವಾಮನವಟುವಾಗಿ ಮೂರು ಹೆಜ್ಜೆಗಳ ನೆಲವನ್ನು ದಾನವಾಗಿ ಪಡೆದು, ಅದನ್ನು ಅಳೆದುಕೊಂಡ ಅದ್ಭುತ ಚರಿತ್ರೆ ಕೇಳಿಯೇ ನಾನು ಅವನಲ್ಲಿ ವ್ಯಾಮೋಹಗೊಂಡೆನೆಂದೂ ಅವನೊಡನೆ ಮಾಂಗಲ್ಯವನ್ನು ಆಶಿಸಿದೆನೆಂದೂ, ಹಂಸರೂಪಿಯಾಗಿ ವೇದಗಳನ್ನು ಕರುಣಿಸಿದ ಉಪಕಾರಿಗೆ, ನೀವು ಹೋಗಿ, ಈ ನನ್ನ ವಿಷಯವನ್ನು ತಿಳಿಸಿರಿ. (2)

ಈ ಪಾಶುರದಲ್ಲಿ, ಭಗವಂತನಲ್ಲಿ ವ್ಯಾಮೋಹಗೊಂಡ ಯುವತಿಯು ತಾನಿರುವ ಪರಿಸ್ಥಿತಿಯನ್ನು ತನ್ನ ಪ್ರಿಯತಮನಿಗೆ ತಿಳಿಸಬೇಕೆಂದು ಕಾಡಿನ ಪಕ್ಷಿಗಳ ಗುಂಪನ್ನೇ ಬೇಡಿಕೊಳ್ಳುತ್ತಿದ್ದಾಳೆ:

ಯುವತಿಯು ಹೇಳುತ್ತಾಳೆ: ಪಕ್ಷಿಗಳೇ, ನೀವು ಇಲ್ಲಿಂದ ಹಾರಿ ಹೋಗುವಾಗ ತಿರುಪ್ಪುಲ್ಲಾಣಿಯನ್ನು ಸಂದರ್ಶಿಸಿ. ಅಲ್ಲಿ ನನ್ನ ಪ್ರಿಯತಮನು ನೆಲಸಿದ್ದಾನೆ. ಒಂದೆ, ಒಂದು ಕಾಲದಲ್ಲಿ ಅವನು ಅದಿತಿಯ ಪಾದ ಕುಳ್ಳ ಬ್ರಹ್ಮಚಾರಿಯಾದನಂತೆ. ಬಲಿ ಚಕ್ರವರ್ತಿಯ ಯಾಗಶಾಲೆಯನ್ನು ಪ್ರವೇಶಿಸಿದನಂತೆ. ತನ್ನ ಪುಟ್ಟ ಹೆಜ್ಜೆಗಳಲ್ಲಿ ಮೂರೇ ಮೂರು ಹೆಜ್ಜೆಗಳ ನೆಲವನ್ನು ಬೇಡಿದನಂತೆ. ನೆಲವನ್ನು ದಾನವಾಗಿ ಪಡೆದ ಕೂಡಲೇ, ಸ್ವಾಮಿಯು ಅಂತೆಯಿಲ್ಲದಂತೆ ಬೆಳೆದು ತ್ರಿವಿಕ್ರಮನಾದನಂತೆ. ತನ್ನ ಒಂದು ಹೆಜ್ಜೆಯಿಂದ ಇಡಿಯ ಭೂಮಂಡಲವನ್ನೂ, ಇನ್ನೊಂದು ಹೆಜ್ಜೆಯಿಂದ ಮೇಲಣ ಮೇಲುಲೋಕಗಳನ್ನೂ ಅಳೆದುಬಿಟ್ಟನಂತೆ. ಎಂಥ ಅದ್ಭುತವಾದ ಚರಿತ್ರೆಯದು! ಮತ್ತೊಂದು ಸಲ, ಹಂಸಪಕ್ಷಿಯ ರೂಪವನ್ನು ತಳೆದು, ನಾರದ ಮಹರ್ಷಿಗೆ ವೇದಗಳನ್ನು ದಾನವಾಗಿ ಉಪದೇಶ ಮಾಡಿದನಂತೆ. ನನ್ನ ಸ್ವಾಮಿಯ ದಿವ್ಯಾದ್ಭುತ ಚರಿತ್ರೆಯನ್ನು ಕೇಳಿಯೇ ನಾನು ಆಸಕ್ತನಾದ ವಿಸ್ಮಯಕಾರಿಯಲ್ಲಿ ವ್ಯಾಮೋಹಗೊಂಡಿದ್ದೇನೆ ಅವನ ಮಾಂಗಲ್ಯವನ್ನು ಅಪೇಕ್ಷಿಸುತ್ತಾ, ಅವನಿಗಾಗಿ ಸೊರಗಿ ಹೋಗಿದ್ದೇನೆ. ಪಕ್ಷಿಗಳೇ, ನೀವು ಹೋಗಿ, ಆ ನನ್ನ ಸ್ವಾಮಿಗೆ ನನ್ನ ಈಗಿನ ಪರಿಸ್ಥಿತಿಯನ್ನು ವಿವರಿಸಿರಿ. ಪರೋಪಕಾರಿಯಾದ ಅವನು ನನ್ನನ್ನು ಕರುಣಿಸಿ, ನನ್ನ ಕೈಹಿಡಿಯಬೇಕೆಂಬ ನನ್ನ ನಮ್ರ ಬೇಡಿಕೆಯನ್ನು ಅವನಲ್ಲಿ ಅರಿಕೆ ಮಾಡಿಕೊಳ್ಳಿ.

3. வவ்வித்துழாயதன் மேல் சென்ற தனிநெஞ்சம்,
செவ்வியறியாது நிற்குங்கொல்?, நித்திலங்கள்
பவ்வத்திரையுலவு புல்லாணி கைதொழுதேன்,
தெய்வச்சிலையார்க்கு என்சிந்தை நோய் செப்புமினே

ವವ್ವಿತ್ತುೞಾಯದನ್ ಮೇಲ್ ಶೆನ್ಱ ತನಿನೆಂಜಮ್,
ಶೆವ್ವಿಯಱಿಯಾದು ನಿಱ್ಕುಙ್ಗೊಲ್? ನಿತ್ತಿಲಙ್ಗಳ್

ಪವಳತ್ತಿರೈಯುಲವು ಪುಲ್ಲಾಣಿ ಕೈತೊಳುದೇನ್,
ತೆಯ್ವಚ್ಚಿಲೈಯಾರ್ಕು ಎನ್ ಶಿನ್ದೈನೋಯೈ ಶೆಪ್ಪುಮಿನೇ

ವಚ್ಚ வைச்ச = ಭದ್ರವಾಗಿ ಹಿಡಿದು, ತುಳಾಯ್ துழாய் = ತುಲಸಿಯ ದಂಡೆಯನ್ನು, ಅದನ್ ಮೇಲ್ அதன் மேல் = ಅದರ ಮೇಲೆಯೇ, ಶೆನ್ಱ சென்ற = ಹೊರಟುಹೋದ, ತನಿ தனி = (ನನ್ನಿಂದ ಬೇರ್ಪಟ್ಟ) ಒಂಟಿಯಾದ (ಪೂರ್ಣವಾದ), ನೆಂಜಮ್ நெஞ்சம் = ಮನಸ್ಸು, ಶೆಱಿವು செறிவு = ಪರಿಪಕ್ವತೆಯನ್ನು, ಅಱಿಯಾದು அறியாது = ಅರಿಯದು, ನಿಱ್ಕುಮೋ ಕೊಲ್ நிற்கும் கொல் = ಸ್ಥಿರವಾಗಿ ನಿಲ್ಲುವುದು ಸಾಧ್ಯವೇ? ನಿತ್ತಿಲಙ್ಗಳ್ நித்திலங்கள் = ಮುತ್ತುಗಳನ್ನು, ಪವಳಮ್ ತಿರೈ பவளம் திரை = ಕಡಲಿನ ಅಲೆಗಳು, ಉಲವು உலவு = ತಳ್ಳುವ, ಪುಲ್ಲಾಣಿ புல்லாணி = ತಿರುಪ್ಪುಲ್ಲಾಣಿ ಕ್ಷೇತ್ರವನ್ನು, ಕೈತೊಳುದೇನ್ கைதொழுதேன் = ಕೈಜೋಡಿಸಿ ಮುಗಿದಿದ್ದೇನೆ, ದೆಯ್ವಮ್ தெய்வம் = ದಿವ್ಯವಾದ, ಶಿಲೈಯಾರ್ಕು சிலையார்க்கு = ಬಿಲ್ಲನ್ನು ಹಿಡಿದವನಿಗೆ, ಎನ್ என் = ನನ್ನ, ಶಿನ್ದೈನೋಯ್ சிந்தைநோய் = ಮನೋವ್ಯಾಕುಲತೆಯನ್ನು, ಶೆಪ್ಪುಮಿನೇ செப்புமினே = ಹೇಳಿರಿ.

ತುಲಸಿಯ ಮಾಲೆ(ದಂಡೆ)ಯನ್ನು ಭದ್ರವಾಗಿ ಹಿಡಿದು, ಅದರ ಮೇಲೆಯೇ ಹೊರಟುಹೋದ ನನ್ನ ಒಂಟಿಯಾದ ಮನಸ್ಸು ಪರಿಪಕ್ವತೆಯನ್ನು ಅರಿಯದು. ಅದು ಸ್ಥಿರವಾಗಿ ನಿಲ್ಲಲು ಸಾಧ್ಯವೇ? ಕಡಲಿನ ಅಲೆಗಳು ಮುತ್ತುಗಳನ್ನು ತಳ್ಳುವಂಥ ತಿರುಪ್ಪುಲ್ಲಾಣಿ ಕ್ಷೇತ್ರವನ್ನು ಕೈಜೋಡಿಸಿ ಮುಗಿಯುತ್ತೇನೆ. ದಿವ್ಯವಾದ ಧನುಸ್ಸನ್ನು ಹಿಡಿದವನಿಗೆ ನನ್ನ ಮನೋವ್ಯಾಕುಲತೆಯನ್ನು ಹೇಳಿರಿ (3)

ಯುವತಿಯು ಹೇಳುತ್ತಾಳೆ: ಸಖಿಗಳೇ, ನನ್ನ ಪ್ರಿಯತಮನಾದ ಸ್ವಾಮಿಯು ಧರಿಸಿದ್ದ ಪರಿಮಳ ತುಂಬಿದ ತುಲಸಿಯ ಮಾಲೆಯು ನನ್ನ ಮನಸ್ಸನ್ನು ಆಕರ್ಷಿಸಿತು. ನನ್ನ ಸ್ವಾಮಿಯು ನನ್ನನ್ನಗಲಿ ಹೋದನು, ಆ ತುಲಸಿಯ ಮಾಲೆಯನ್ನೇ ಭದ್ರವಾಗಿ ಹಿಡಿದು, ಅದರ ಮೇಲೆಯೇ ಅವನೊಡನೆ ಹೊರಟು ಹೋಯಿತು. ನಾನು ಒಂಟಿಗಳಾದೆ. ಮನಸ್ಸನ್ನು ಸಂಪೂರ್ಣವಾಗಿ ಕಳೆದು ಕೊಂಡು ನಿಸ್ಸಕ್ತಳಾಗಿದ್ದೇನೆ. ಆ ನನ್ನ ಮನಸ್ಸಾದರೂ ನನ್ನ ಪ್ರಿಯತಮನಲ್ಲಿಯೇ ದೃಢವಾಗಿ ನೆಲೆನಿಲ್ಲುವುದೇ? ನಿಲ್ಲಬಲ್ಲದೇ? ಅದು ಇನ್ನೂ ಪರಿಪಕ್ವತೆಯನ್ನು ಅರಿಯದು. ನನ್ನ ಸ್ವಾಮಿಯು ನನ್ನಿಂದ ದೂರವಾಗಿ ಈಗ ತಿರುಪ್ಪುಲ್ಲಾಣಿ ಕ್ಷೇತ್ರದಲ್ಲಿ ನೆಲಸಿದ್ದಾನೆ. ನಾನು ಅವನನ್ನೂ ಅವನಿರುವ ಕ್ಷೇತ್ರವನ್ನೂ ಧ್ಯಾನಿಸುತ್ತ ಅಕ್ಕರೆಯಿಂದ ಕೈಜೋಡಿಸಿ ನಮಸ್ಕರಿಸುತ್ತೇನೆ. ಸಖಿಗಳೇ, ನನ್ನ ಈ ಪರಿಸ್ಥಿತಿಯನ್ನು, ನನ್ನ ಮನೋವ್ಯಾಕುಲತೆಯನ್ನು ತಪ್ಪದೆ ನನ್ನ ಸ್ವಾಮಿಗೆ ಹೇಳಿರಿ. ಅವನು ಸತ್ಯಪರಾಕ್ರಮಿ, ಶರಣಾಗತವತ್ಸಲ, ದಿವ್ಯಧನುರ್ಧಾರಿ. ಅವನು ನನ್ನಲ್ಲಿಯೂ ಕೃಪೆದೋರುವಂತೆ ಮಾಡುವಿರಾ?

4. பரிய விரணியனதாகம் அணியுகிரால்,
அரியுருவாய்க் கீண்டான் அருள் தந்தவா நமக்கு,
பொருதிரைகள் போந்துலவு புல்லாணி கைதொழுதேன்,
அரிமலர்க் கண்ணீர் ததும்ப அந்துகிலும் நில்லாவே

ಪರಿಯ ವಿರಣಿಯನದಾಗಮ್ ಅಣಿಯುಗಿರಾಲ್,
ಅರಿಯುರುವಾಯ್ ಕ್ಕೀಣ್ಡಾನ್ ಅರುಳ್ ತನ್ದವಾ ನಮಕ್ಕು,
ಪೊರುತಿರೈಗಳ್ ಪೋನ್ದುಲವು ಪುಲ್ಲಾಣಿ ಕ್ಕೈತೊಳುದೇನ್,
ಅರಿಮಲರ್ ಕ್ಕಣ್ಣೀರ್ ತದುಮ್ಬ ಅನ್ದುಗಿಲುಮ್ ನಿಲ್ಲಾವೇ

ಪರಿಯ பரிய = ವಿಸ್ತಾರವಾದ (ಉನ್ನತವಾದ), ಇರಣಿಯನದು இரணி யனது = ಹಿರಣ್ಯಕಶಿಪುವಿನ, ಆಗಮ್ ஆகம் = ಎದೆಯನ್ನು, ಅಣಿ அணி = ಸುಂದರವಾದ (ಸಿದ್ಧವಾದ), ಉಗಿರಾಲ್ உகிரால் = ಉಗುರುಗಳಿಂದ, ಅರಿ ಉರು ಆಯ್ அரி உரு ஆய் = ನರಸಿಂಹ ರೂಪವನ್ನು ತಳೆದು, ಕೀಣ್ಡಾನ್ கீண்டான் = ಸೀಳಿದವನು, ಅರುಳ್ ತನ್ದವಾ அருள் தந்தவா = ಕೃಪೆಮಾಡಿದ ರೀತಿಯೋ! ನಮಕ್ಕು நமக்கு = ನಮಗೆ, ಪೊರು பொரு = ಮೇಲಿಂದ ಮೇಲೆ ಬರುವ, ತಿರೈಗಳ್ திரைகள் = ಅಲೆಗಳು, ಪೋನ್ದು போந்து = ಬಂದು, ಉಲವು உலவு = ಅಲೆದಾಡುವ, ಪುಲ್ಲಾಣಿ புல்லாணி = ತಿರುಪ್ಪುಲ್ಲಾಣಿಯನ್ನು, ಕೈತೊಳುದೇನ್ கைதொழுதேன் = ಕೈ ಎತ್ತಿ ಮುಗಿಯುತ್ತೇನೆ, ಅರಿಮಲರ್ அரிமலர் = ದುಂಬಿಗಳು ಮುತ್ತುವಂಥ (ಸುಂದರವಾದ) ಹೂವಿನಂಥ, ಕಣ್ கண் = ಕಣ್ಣುಗಳಲ್ಲಿ, ನೀರ್ ತದುಮ್ಬ நீர் ததும்ப = ನೀರು ತುಂಬಿಕೊಂಡರೆ, ಅಮ್ ತುಗಿಲುಮ್ அம் துகிலும் = ಸೊಗಸಾದ ಉಡುಗೆಯೂ, ನಿಲ್ಲಾವೇ நில்லாவே = ನಿಲ್ಲುವುದಿಲ್ಲವಲ್ಲ!

ಹಿರಣ್ಯಕಶಿಪುವಿನ ಉನ್ನತವಾದ ಎದೆಯನ್ನು ಸಿದ್ಧವಾದ (ಸುಂದರವಾದ) ಉಗುರುಗಳಿಂದ, ನರಸಿಂಹರೂಪವನ್ನು ತಳೆದು ಸೀಳಿದವನು ನಮಗೆ ಕೃಪೆಮಾಡಿದ ಬಗೆಯೋ! ಮೇಲಿಂದ ಮೇಲೆ ಬರುವ ಅಲೆಗಳು ಬಂದು ಅಲೆದಾಡುವಂಥ ತಿರುಪ್ಪುಲ್ಲಾಣಿ ಕ್ಷೇತ್ರವನ್ನು ಕೈ ಎತ್ತಿ ಮುಗಿಯುತ್ತೇನೆ. ದುಂಬಿಗಳು ಮುತ್ತುವಂಥ ಸೊಬಗಿನ ಹೂವಿನಂಥ (ನನ್ನ) ಕಣ್ಣುಗಳಲ್ಲಿ ನೀರು ತುಂಬುತ್ತದೆ. ನನ್ನ ಮೈ ಮೇಲೆ ಸೊಗಸಾದ ಉಡುಗೆಯೂ ನಿಲ್ಲುವುದಿಲ್ಲವಲ್ಲ! (4)

ಯುವತಿಯು ಹೇಳುತ್ತಾಳೆ: ಸಖಿಗಳೇ, ನನ್ನ ಪ್ರಿಯತಮನು ಸಾಮಾನ್ಯನಲ್ಲ; ಪರಮಸಮರ್ಥನು. ಹಿಂದೆ, ಮಹಾಬಲಿಷ್ಠನಾದ ಹಿರಣ್ಯಕಶಿಪುವಿನ ಸೊಕ್ಕನ್ನು ಮುರಿಯುವುದಕ್ಕಾಗಿ ಅವನು ನರಸಿಂಹರೂಪವನ್ನು ತಳೆದು ಆ ದುಷ್ಟರಾಕ್ಷಸನ ಎದೆಯನ್ನು ತನ್ನ ಚೂಪಾದ ಕೈ ಉಗುರುಗಳಿಂದಲೇ ಸೀಳಿಹಾಕಿದನು. ನನ್ನ ವಿಷಯದಲ್ಲಿ ಅವನು ನಡೆದುಕೊಂಡ ರೀತಿಯನ್ನು ಚಿಂತಿಸಿದರೆ, ಅವನಿಗೆ ನನ್ನ ಮೇಲೆ ಎಷ್ಟು ಕನಿಕರ, ಎಷ್ಟು ಮಮತೆ ಎನಿಸುತ್ತದೆ. ಅವನೇ ನೆಲಸಿರುವ ತಿರುಪ್ಪುಲ್ಲಾಣಿಗೂ ಅವನಿಗೂ ನಾನು ಇಲ್ಲಿಂದಲೇ ಕೈ ಎತ್ತಿ ಮುಗಿಯುತ್ತೇನೆ. ನನ್ನನ್ನಗಲಿ ಹೋದ ಅವನನ್ನು

ನೆನೆಸಿಕೊಂಡರೆ, ತುಂಬ ಸಂಕಟವಾಗಿ, ಕಮಲದ ಹೂವಿನಂತೆ ಸೊಬಗಿನ ನನ್ನ ಕಣ್ಣುಗಳಲ್ಲಿ ನೀರು ತುಂಬುತ್ತದೆ. ಮನೋವೇದನೆಯಿಂದ ನನ್ನ ಮೈಯ್ಯಿ ಬಡವಾಗಿ ಹೋಗಿದೆ. ಎಷ್ಟು ಅಂದವಾದ ಉಡುಗೆಯನ್ನು ಧರಿಸಿ ಅಲಂಕರಿಸಿಕೊಳ್ಳ ಹೋದರೂ, ನನ್ನ ಮೈಮೇಲೆ ಬಟ್ಟೆಯೇ ನಿಲ್ಲದಂತೆ ಜಾರಿ ಜಾರಿ ಹೋಗುವುದಲ್ಲ!. ಸಖಿಗಳೇ, ನೀನು ಹೋಗಿ ನನ್ನ ಸ್ವಾಮಿಗೆ ನನ್ನ ಸಂಕಟವನ್ನು ತಿಳಿಸು. ಅವನು ನನ್ನ ಮೇಲೆ ಮತ್ತೆ ಕನಿಕರಿಸುವಂತೆ ಮಾಡಿರಿ.

5. வில்லாலிலங்கை மலங்கச் சரந்துரந்த,
வல்லாளன் பின்போன நெஞ்சம் வருமளவும்,
எல்லாருமென்றன்னை யேசிலும் பேசிடினும்,
புல்லாணியெம்பெருமான் பொய் கேட்டிருந்தேனே.

ವಿಲ್ಲಾಲಿಲಙ್ಗೈ ಮಲಙ್ಗಚ್ಚರನ್ದುರನ್ದ,
ವಲ್ಲಾಳನ್ ಪಿನ್ ಪೋನ ನೆಂಜಮ್ ವರುಮಳವುಮ್,
ಎಲ್ಲಾರುಮೆನ್ಱನ್ನೈ ಯೇಶಿಲುಮ್ ಪೇಶಿಡಿನುಮ್,
ಪುಲ್ಲಾಣಿಯೆಮ್ಬೆರುಮಾನ್ ಪೊಯ್ ಕೇಟ್ಟಿರುನ್ದೇನೇ.

ವಿಲ್ಲಾಲ್ வில்லால் = ಬಿಲ್ಲಿನ ಮೂಲಕ, ಇಲಙ್ಗೈ இலங்கை = ಲಂಕಾ ಪಟ್ಟಣವು, ಮಲಙ್ಗ மலங்க = ನಡುಗಿಹೋಗುವಂತೆ, ಶರಮ್ சரம் = ಬಾಣಗಳನ್ನು, ತುರನ್ದ துரந்த = ಪ್ರಯೋಗಿಸಿದ, ವಲ್ಲಾಳನ್ வல்லாளன் = ಪರಾಕ್ರಮಶಾಲಿಯ, ಪಿನ್ பின் = ಹಿಂದೆಯೇ, ಪೋನ போன = ಹೋದಂಥ, ನೆಂಜಮ್ நெஞ்சம் = ಮನಸ್ಸು, ವರುಮ್ வரும் = ಹಿಂತಿರುಗಿ ಬರುವ, ಅಳವುಮ್ அளவும் = ವರೆಗೂ, ಎಲ್ಲಾರುಮ್ எல்லாரும் = ನನ್ನ ಬಂಧು ಬಳಗದವರೆಲ್ಲರೂ, ಎನ್ಱನ್ನೈ என்றன்னை = ನನ್ನನ್ನು, ಏಶಿಲುಮ್ ஏசிலும் = ಅಪಹಾಸ್ಯ ಮಾಡಿದರೂ, ಪೇಶಿಡಿನುಮ್ பேசிடினும் = ಕಟುವಾಗಿ ಮಾತನಾಡಿದರೂ, ಪುಲ್ಲಾಣಿ ಎಮ್ಬೆರುಮಾನ್ புல்லாணி எம்பெருமான் = ತಿರುಪ್ಪುಲ್ಲಾಣಿಯ ಸ್ವಾಮಿಯ, ಪೊಯ್ பொய் = ಸುಳ್ಳು ಮಾತನ್ನು, ಕೇಟ್ಟು கேட்டு = ಕೇಳಿಕೊಂಡು (ಕೇಳಿ ಅದನ್ನೇ ನಂಬಿಕೊಂಡು), ಇರುನ್ದೇನೇ இருந்தேனே = ಇರುವೆನಲ್ಲ!

ಲಂಕಾ ಪಟ್ಟಣವು ನಡುಗಿ ಹೋಗುವಂತೆ ತನ್ನ ಬಿಲ್ಲಿನ ಮೂಲಕ ಬಾಣಗಳನ್ನು ಪ್ರಯೋಗಿಸಿದ ಪರಾಕ್ರಮಶಾಲಿಯ ಹಿಂದೆಯೇ ಹೋದ ನನ್ನ ಮನಸ್ಸು ಹಿಂತಿರುಗಿ ಬರುವ ವರೆಗೂ ನನ್ನ ಬಂಧು ಬಳಗದವರೆಲ್ಲರೂ ನನ್ನನ್ನು ಅಪಹಾಸ್ಯ ಮಾಡಿದರೂ ಕಠಿಣವಾಗಿ (ಕಟುವಾಗಿ) ಮಾತನಾಡಿದರೂ, ನಾನು ಪುಲ್ಲಾಣಿಯಲ್ಲಿ ನೆಲಸಿರುವ ಸ್ವಾಮಿಯ ಸುಳ್ಳು ಮಾತನ್ನು ಕೇಳಿ ಅದನ್ನೇ ನಂಬಿಕೊಂಡು ಇರುತ್ತೇನಲ್ಲ!

ಯುವತಿಯು ಹೇಳುತ್ತಾಳೆ: ಪಕ್ಷಿಗಳೇ, ನನ್ನ ಪ್ರಿಯತಮನ ಅಮಿತ ಪರಾಕ್ರಮಿ. ತನ್ನ ಬಿಲ್ಲಿನ ಮೂಲಕವೇ ಬಾಣಗಳನ್ನು ಪ್ರಯೋಗಿಸಿ, ಅಜೇಯವೆನಿಸಿದ್ದ ಲಂಕಾಪಟ್ಟಣವನ್ನು ನಡುಗಿಸಿದವನು. ಆದರೆ ಮಾತಿಗೆ ತಪ್ಪಿದವನಲ್ಲವೆಂದೂ, ಸತ್ಯಪರಾಕ್ರಮಿಯೆಂದೂ ಹೆಸರು ಪಡೆದವನು. ಅವನು ನನ್ನ ಬಳಿಗೆ ಬಂದನು. ನನ್ನಲ್ಲಿ ಅಪಾರವಾದ ಗಾಢವಾದ ಪ್ರೇಮವನ್ನು ತೋರಿದನು. ನನ್ನನ್ನು ಬಿಟ್ಟು ಹೋಗುವುದೇ ಇಲ್ಲವೆಂದು ನನಗೆ ಮಾತು ಕೊಟ್ಟನು. ನನ್ನ ಮನಸ್ಸನ್ನು ಪೂರ್ತಿಯಾಗಿ ಒಲಿಸಿಕೊಂಡನು. ಇದ್ದಕ್ಕಿದ್ದಂತೆ, ಅವನು ನನ್ನನ್ನು ಬಿಟ್ಟು ಹೊರಟೇ ಹೋದನು. ನನ್ನ ಮನಸ್ಸೂ ಅವನ ಹಿಂದೆ ಹೋಯಿತು. ನಾನು ಒಂಟಿಯಾದೆ. ನನ್ನ ಬಂಧು ಬಳಗದವರು, ನನ್ನ ಗೆಳತಿಯರು, ನನ್ನ ಹಿತೈಷಿಗಳು – ಎಲ್ಲರೂ ಹೇಳಿದರು ಅವನನ್ನು ಅವನ ಮಾತುಗಳನ್ನು ನಂಬಬಾರದು ಎಂದು. ಅವನನ್ನು ಕಠಿಣವಾಗಿ ಬೈದು ಏನೇನೋ ಆಡಿದರು. ನನ್ನನ್ನು ಕಠಿಣವಾದ ಮಾತುಗಳಿಂದ ದೂಷಿಸಿದರು. ಆದರೂ ಇದೂ, ನಾನು ನನ್ನ ಸ್ವಾಮಿಯ ಮಾತಿಯಾಗಿ ದಾಸ್ಯ ಮಾ ದೂಷಿಸಿ ... ತಪ್ಪಿತಸ್ಥನೆಂದು ನನಗೆ ತಿಳಿದಿಲ್ಲ; ನನ್ನನ್ನು ನಂಬುತ್ತೇನೆ. ಅವನು ತಪ್ಪಿತಸ್ಥನೆಂದು ನನಗೆ ತಿಳಿದಿಲ್ಲ; ನನ್ನನ್ನು ಬಿಟ್ಟು ಹೋದ ಮನಸ್ಸು ಹಿಂದಿರುಗಲಿ. ನನ್ನ ಸ್ವಾಮಿಯನ್ನು ಕುರಿತು ನಿಜಸ್ಥಿತಿಯನ್ನು ಬೈಲು ಮಾಡಲಿ. ಅಲ್ಲಿಯ ತನಕ ನಾನು ಯಾರ ಮಾತಿಗೂ ಬೆಲೆ ಕೊಡುವುದಿಲ್ಲ; ಅವನ 'ಸುಳ್ಳು' ಮಾತುಗಳನ್ನೇ ನಿಜವೆನ್ನುತ್ತೇನೆ. ಪಕ್ಷಿಗಳೇ, ಈ ನನ್ನ ~~[struck]~~ ಇಂಗಿತವನ್ನು, ನನ್ನ ದೃಢ ನಂಬಿಕೆಯನ್ನು ನನ್ನ ಸ್ವಾಮಿಗೆ ತಿಳಿಸಿ. ಅವನು ನನ್ನಲ್ಲಿ ಕನಿಕರವುಂಟು ಮಾಡಲಿ.

6. சுழன்றிலங்கு வெங்கதிரோன் தேரோடும் போய் மறைந்தான்,
அழன்று கொடிதாகி அஞ்சுடரோன் தானடுமால்,
செழுந்தடம் பூஞ்சோலைசூழ் புல்லாணி கைதொழுதேன்,
இழந்திருந்தேன் என்றனெழில் நிறமும் சங்குமே.

ಶುಟನ್ಱಿಲಙ್ಗು ವೆಙ್ಗದಿರೋನ್ ತೇರೋಡುಮ್ ಪೋಯ್ ಮಱೈನ್ದಾನ್,
ಅಟನ್ಱು ಕೊಡಿದಾಗಿ ಅಞ್ಜುಡರೋನ್ ತಾನಡುಮಾಲ್,
ಶೆಟುನ್ದಡಮ್ ಪೂಞ್ಜೋಲೈಶೂಟ್ ಪುಲ್ಲಾಣಿ ಕೈತೊಟುದೇನ್,
ಇಟನ್ದಿರುನ್ದೇನ್ ಎನ್ಱನೆಟಿಲ್ ನಿಱಮುಮ್ ಶಙ್ಗುಮೇ.

ಶುಟನ್ಱು சுழன்று = ಸುತ್ತಿ ಬಂದು, ಇಲಙ್ಗು இலங்கு = ಬೆಳಗುವ, ವೆಂಗದಿರೋನ್ வெங்கதிரோன் = ಬಿಸಿಕಿರಣಗಳವನು (ಸೂರ್ಯನು), ತೇರೋಡುಮ್ தேரோடும் = ತನ್ನ ರಥದೊಡನೆ, ಪೋಯ್ போய் = ಹೋಗಿ, ಮಱೈನ್ದಾನ್ மறைந்தான் = ಮರೆಯಾದನು, ಅಟನ್ಱು அழன்று = ಅಳತೆ ಮೀರಿ, ಕೊಡಿದು ಆಗಿ கொடிது ஆகி = ಕ್ರೂರವಾಗಿ, ಅಮ್ ಶುಡರೋನ್ அம் சுடரோன் = ಅಂದವಾದ ಕಿರಣಗಳವನು, ತಾನ್ தான் = ತಾನು, ಅಡುಮ್ ಆಲ್ அடும் ஆல் = ಸುಡುತ್ತಿರುವನಲ್ಲ!

Garani Srinivasan

ತೆಳಿ தெளி = ಸ್ವಚ್ಛವಾದ, ತಡಮ್ தடம் = ತಟಾಕಗಳಿಂದಲೂ,
ಪೂ பூ = ಹೂವಿನ, ಶೋಲೈ சோலை = ತೋಪುಗಳಿಂದಲೂ, ಶೂಳ್
சூழ் = ಸುತ್ತುವರಿದಿರುವ, ಪುಲ್ಲಾಣಿ புல்லாணி = ತಿರುಪ್ಪುಲ್ಲಾಣಿಯನ್ನು,
ಕೈ ತೊಳುದೇನ್ கைதொழுதேன் = ಕೈ ಎತ್ತಿ ನಮಸ್ಕರಿಸುತ್ತೇನೆ,
ಎನ್ ತನ್ எந்தன் = ನನ್ನ, ಎಳಿಲ್ எழில் = ಸೊಗಸಾದ, ನಿಱಮುಮ್
நிறமும் = ಮೈಬಣ್ಣವೂ, ಶಙ್ಗುಮೇ சங்குமே = ಕೈಬಳೆಗಳೂ, ಇಳ
ನ್ದು ಇರುನ್ದೇನ್ இழந்து இருந்தேன் = ಕಳೆದುಕೊಂಡು ಬಿಟ್ಟಿದ್ದೇನೆ.

ಸುತ್ತಿ ಬಂದು, ಬೆಳಗುವ, ಬಿಸಿ ಕಿರಣಗಳುಳ್ಳವನು (ಸೂರ್ಯನು), ತನ್ನ ರಥದೊಡನೆ ಹೋಗಿ ಮರೆಯಾದನು. ಅಂದವಾದ ಕಿರಣಗಳುಳ್ಳವನು (ಚಂದ್ರನು) ಅಲೆಗಳ ಮೇಲೆ ಶೃಂಗಾರವಾಗಿ ಸುಡುತ್ತಿರುವನಲ್ಲ! ಸ್ವಚ್ಛವಾದ ತಟಾಕಗಳಿಂದಲೂ ಹೂದೋಟಗಳಿಂದಲೂ ಸುತ್ತುವರಿದಿರುವ ತಿರುಪ್ಪುಲ್ಲಾಣಿಯನ್ನು
ಕೈಎತ್ತಿ ನಮಸ್ಕರಿಸುತ್ತೇನೆ. ನನ್ನ ಸೊಗಸಾದ ಮೈಬಣ್ಣವೂ ಕೈಬಳೆಗಳೂ (6)
ಕಳೆದುಕೊಂಡುಬಿಟ್ಟೆನಲ್ಲ!

ಯುವತಿಯು ಹೇಳುತ್ತಾಳೆ: ಪಕ್ಷಿಗಳೇ, ಸ್ವರ್ಗಾದಿ ಮೇಲಣ ಲೋಕಗಳನ್ನೆಲ್ಲಾ ಸುತ್ತಿ ಬೆಳಗಿಸಿದ ಬಿಸಿಯ ಕಿರಣಗಳ ಸೂರ್ಯನು, ಭೂಲೋಕವನ್ನು ಬೆಳಗಿಸಿದ್ದಾಯಿತು. ಈಗ ಅವನು ಕಣ್ಮರೆಯಾದನು. ತಂಪಾದ ಕಿರಣಗಳನ್ನು ಹೊಂದುವ ಚಂದ್ರನಾದರೋ ತನ್ನ ಕಿರಣಗಳಿಂದ ಮಿತಿಮೀರಿ, ಬಹು ಕ್ರೂರಿಯಾಗಿ, ಸುಡುತ್ತಿದ್ದಾನಲ್ಲ! ನನ್ನ ಅಂದವಾದ ಮೈಬಣ್ಣವು ಕರಗಿಹೋಯಿತು. ನನ್ನ ಮೈ ಬಡವಾಯಿತು. ನನ್ನ ಕೈ ಬಳೆಗಳು ಸಡಿಲವಾಗಿ, ಕೈಯಿಂದ ಕಳಚಿಕೊಂಡವು. ನನ್ನ ಪ್ರಿಯತಮನು ನನ್ನನ್ನು ಅಗಲಿಹೋಗಿರುವುದರ ಫಲವೇ ಇದು. ಅವನೀಗ ತಿರುಪ್ಪುಲ್ಲಾಣಿ ಕ್ಷೇತ್ರದಲ್ಲಿದ್ದಾನೆ. ಆ ಕ್ಷೇತ್ರದಲ್ಲಿ ಸ್ವಚ್ಛವಾದ ತಟಾಕಗಳಿವೆ. ಅಂದವಾದ ಘಂಮಳಿಸುವ ಹೂದೋಟಗಳಿಂದ ಸುತ್ತುವರಿದಿದೆ. ಪಕ್ಷಿಗಳೇ, ನೀವು ನನ್ನ ಪ್ರಿಯತಮನಲ್ಲಿಗೆ ಹೋಗಿ. ಅವನಿಗೆ ನನ್ನ ವಿರಹದ ದುಸ್ಥಿತಿಯನ್ನು ವಿವರಿಸಿ, ನನ್ನಲ್ಲಿ ಅವನು ಕನಿಕರಿಸುವಂತೆ ಹೇಳಿ.

7. கனையாரிடி குரலின் கார்மணியின் நாவாடல்,
தினையேனும் நில்லாது தீயிற் கொடிதாலோ,
புனையார் மணிமாடப்புல்லாணி கைதொழுதேன்,
வினையேன் மேல் வேலையும் வெந்தழலே வீசுமே.

ಕನೈಯಾರಿಡಿ ಕುರಲಿನ್ ಕಾರ್ ಮಣಿಯಿನ್ ನಾವಾಡಲ್,
ತಿನೈಯೇನುಮ್ ನಿಲ್ಲಾದು ತೀಯಿಱ್ ಕೊಡಿದಾಲೋ,
ಪುನೈಯಾರ್ ಮಣಿ ಮಾಡಪ್ಪುಲ್ಲಾಣಿ ಕೈ ತೊಳುದೇನ್,
ವಿನೈಯೇನ್ ಮೇಲ್ ವೇಲೈಯುಮ್ ವೆನ್ದಳಲೇ ವೀಶುಮೇ.

ಕನೈ ಆರ್ ಇಡಿ கனை ஆர் இடி = ಒಟ್ಟಾಗಿ ತುಂಬಿಕೊಂಡಿರುವ ಸಿಡಿಲಿನ ಹಾಗೆ, ಇರುವ, ಕುರಲಿನ್ குரலின் = ಧ್ವನಿಯಿಂದ, ಕಾರ್ கார் = ಕಪ್ಪಾದ (ಕಂಚು), ಮಣಿಯಿನ್ மணியின் = ಗಂಟೆಗಳ, ನಾ நா = ನಾಲಗೆಯ, ಆಡಲ್ ஆடல் = ಆಡುವಿಕೆಯು, ತಿನೈಯೇನುಮ್ தினையேனும் =

Garani Srinivasan

ಷಣಾ ಕಾಲವೂ (ಅತ್ಯಲ್ಪ ಕಾಲವೂ), ನಿಲ್ಲಾದು நில்லாது = ನಿಲ್ಲುವುದಿಲ್ಲ,
ಶಿಲಂಬಿನ್ ತ್ತೊಯಿಣ್ = ಬೆಂಕಿಯು, ಕೊಡಿ கொடி = ಬಳ್ಳಿಯು, ಕಾಲೋ
தாலோ = ಜೋಲಾಡುತ್ತವೋ, ಪುನೈ புனை = ಅಲಂಕಾರದ ಬೊಂಬೆಗಳಿಂದ,
ಆರ್ ஆர் = ತುಂಬಿರುವ, ಮಣಿ ಮಾಡಮ್ மணி மாடம் = ರತ್ನಮಯ
ವಾದ ಮಹಡಿ ಮನೆಗಳ, ಪುಲ್ಲಾಣಿ புல்லாணி = ತಿರುಪ್ಪುಲ್ಲಾಣಿಯನ್ನು,
ಕೈತೊಳುದೇನ್ கைதொழுதேன் = ಕೈ ಎತ್ತಿ ಮುಗಿಯುತ್ತೇನೆ,
ವಿನ್ನೈಯೋನ್ ಮೇಲ್ வினையேன் மேல் = ಕಡುಪಾಪಿಯ ಮೇಲೆ,
ವೆಲ್ತ್ರಿಯುಮ್ வெறியும் = ಕಡುಕೋಪದ, ವೆಮ್ ಕಣಲೇ வெம்
தழலே = ಸುಡುವ ಬೆಂಕಿಯನ್ನೇ, ವೀಶುಮೇ வீசுமே =
ಬೀರುವುದಲ್ಲ!

ಒಟ್ಟಾಗಿ ತುಂಬಿಕೊಂಡಿರುವ ಸಿಡಿಲಿನದಂತೆ ಇರುವ ಧ್ವನಿಯಿಂದ
ಕರೆಯು ಗಂಟೆಗಳ ನಾಲಗೆಯು ಆಡುತಿರುವುದು ಷಣಾ ಕಾಲವೂ ನಿಲ್ಲುವುದಿ
ಲ್ಲವಲ್ಲ! ಬೆಂಕಿಯು ಬಳ್ಳಿಯು ಜೋಲಾಡುತ್ತವೋ? ಅಲಂಕಾರದ ಬೊಂಬೆಗಳಿಂ
ದ ತುಂಬಿರುವ ರತ್ನಮಯವಾದ ಮಹಡಿ ಮನೆಗಳ ತಿರುಪ್ಪುಲ್ಲಾಣಿಯನ್ನು
ಕೈ ಎತ್ತಿ ಮುಗಿಯುತ್ತೇನೆ. ಕಡುಪಾಪಿಯ ಮೇಲೆ ಕಡುಕೋಪದ ಸುಡುವ (7)
ಬೆಂಕಿಯನ್ನೇ ಬೀರುವುದಲ್ಲ!

ಯುವತಿಯು ಹೇಳುತ್ತಾಳೆ: ಸಖಿಗಳೇ, ನನ್ನ ಕಿವಿಗೆ ಸಂಜೆಯ
ಶಬ್ದಗಳೆಲ್ಲವೂ ಯಾತನೆಯನ್ನುಂಟು ಮಾಡುತ್ತವೆ. ಮನೆಗಳಿಗೆ ಹಿಂತಿ
ರುಗುತ್ತಿರುವ ದನಗಳ ಕತ್ತಿನ ಗಂಟೆಗಳು ಮಾಡುವ ಧ್ವನಿಯು ಒಟ್ಟಾಗಿ
ಸಿಡಿಲಿನಂತೆ ಕರ್ಕಶವಾಗಿದೆ. ಬೆಂಕಿಯು ನಾಲಗೆಯಿಂದ ಹೊರ ಬೀಳುವ
ಜೋಲಾಡುತ್ತವೋ ಇದು ಎಂಬಂತೆ ಕಠೋರವಾಗಿದೆ. ನಾನು ಕಡುಪಾಪಿ.
ಕಡುಕೋಪದ ನನ್ನ ಮೇಲೆ ಸುಡುವ ಬೆಂಕಿಯನ್ನೇ ಬೀರುತ್ತಿರುವುದಲ್ಲ!
ಆದರೂ, ರತ್ನಗಳಿಂದ ಅಲಂಕೃತವಾದ ಬೊಂಬೆಗಳ ಮಹಡಿ ಮನೆಗಳ
ತಿರುಪ್ಪುಲ್ಲಾಣಿಯನ್ನು ಸ್ಮರಿಸುತ್ತಾ ನಾನು ಕೈ ಮುಗಿಯುತ್ತೇನೆ. ಸಖಿಗಳೇ
ನನ್ನ ಸಂಕಷ್ಟವನ್ನು ನನ್ನ ಪ್ರಿಯತಮನಿಗೆ, ತಿರುಪ್ಪುಲ್ಲಾಣಿಯಲ್ಲಿ, ತಿಳಿಸಿ
ನನ್ನನ್ನು ಕನಿಕರಿಸುವಂತೆ ಮಾಡಿರಿ.

8. தாம்புடைக்கை வேழம் வெருவ மருப்பொசித்த,
பாம்பணையான் அருள் தந்தவா நமக்கு,
பூஞ்செருந்தி பொன் சொரியும் புல்லாணி கைதொழுதேன்,
தேம்பலிளம் பிறையும் என்றனக்கோர் வெந்தழலே.

ತಾಮ್ಪುಡೈಕ್ಕೈ ವೇಳಮ್ ವೆರುವ ಮರುಪ್ಪೊಶಿತ್ತ,
ಪಾಮ್ಬಣೈಯಾನ್ ಅರುಳ್‌ತನ್ದವಾ ನಮಕ್ಕು,
ಪೂಞ್ಜೆರುನ್ದಿ ಪೊನ್ ಶೊರಿಯುಮ್ ಪುಲ್ಲಾಣಿ ಕೈತೊಳುದೇನ್,
ತೇಮ್ಬಲಿಳಮ್ಪಿಱೈಯುಮ್ ಎನ್ದನಕ್ಕೋರ್ ವೆನ್ದಳಲೇ.

ತಾಮ್ಪು ಉಡೈ தாம்பு உடை = ದಂಡವಿರುವ, ಕೈ கை = ಕೈಯ
ನ್ನುಳ್ಳ, ವೇಳಮ್ வேழம் = ಆನೆಯು, ವೆರುವ வெருவ = ಹೆದರುವಂತೆ,
ಮರುಪ್ಪು மருப்பு = ದಂತವನ್ನು, ಒಶಿತ್ತ ஒசித்த = ಮುರಿದು ಹಾಕಿದ, ಪಾಮ್ಬಿನ್
பாம்பின் = ಹಾವಿನ, ಅಣೈಯಾನ್ அணையான் = ಹಾಸಿಗೆಯುಳ್ಳವನು,

ಅರುಳ್ ತನ್ದ ಆ அருள் தந்த ஆ = ಕೃಪೆ ಮಾಡಿದ ರೀತಿಯೇ! ನಮಕ್ಕು
நமக்கு = ನಮಗೆ, ಪೂ பூ = ಸುಂದರವಾದ, ಶೆರುನ್ದಿ செருந்தி = ಸುರಹೊ
ನ್ನೆಯು, ಪೊನ್ பொன் = ಚಿನ್ನದಂಥ ಹೂಗಳನ್ನು, ಶೊರಿಯುಮ್ சொரி
யும் = ಉದುರಿಸುವ, ಪುಲ್ಲಾಣಿ புல்லாணி = ತಿರುಪ್ಪುಲ್ಲಾಣಿ ಕ್ಷೇತ್ರವನ್ನು,
ಕೈತೊಳುದೇನ್ கைதொழுதேன் = ಕೈಮುಗಿಯುತ್ತೇನೆ, ತೇಮ್ಬಲಿಲ್
தேம்பலில் (தேம்பு இல்) = ಕ್ಷಯವಿಲ್ಲದ, ಇಳ இளை
= ಎಳೆಯ, ಪಿಱೈಯುಮ್ பிறையும் = ಚಂದ್ರನೂ ಸಹ, ಎನ್ ತನಕ್ಕು
என் தனக்கு = ನನಗೆ, ಓರ್ ஓர் = ಅಪರೂಪವಾದ, ವೆಮ್ ತಳಲೇ வெ
ம் தழலே = ಸುಡುವ ಬೆಂಕಿಯೇ!

ರಂಧ್ರವಿರುವ ಕೈಯನ್ನುಳ್ಳ ಆನೆಯು ಹೆದರುವಂತೆ ದಂತವನ್ನು ಮುರಿದು
ಹಾಸಿದ ಹಾವಿನ ಹಾಸಿಗೆಯುಳ್ಳವನು ನಮಗೆ ಕೃಪೆ ಮಾಡಿದ ರೀತಿಯೇ! ಸುಂ
ದರವಾದ ಸುರಹೊನ್ನೆಯು ಚಿನ್ನದಂಥ ಹೂಗಳನ್ನು ಉದುರಿಸುವ ತಿರುಪ್ಪುಲ್ಲಾಣಿ
ಯನ್ನು ಕೈಮುಗಿಯುತ್ತೇನೆ. ಕ್ಷಯವಿಲ್ಲದ ಎಳೆಯ ಚಂದ್ರನೂ ಸಹ ನನಗೆ (8)
ಅಪರೂಪವಾದೊಂದು ಸುಡುವ ಬೆಂಕಿಯೇ!

ಯುವತಿಯು ಹೇಳುತ್ತಾಳೆ: ಪಕ್ಷಿಗಳೇ, ನನ್ನ ಪ್ರಿಯತಮನು ಹಿಂದೆ
ಒಂದು ಕಾಲದಲ್ಲಿ ಕುವಲಯಾಪೀಡವೆಂಬ ಆನೆಯು ತನ್ನ ಮೇಲೆ ಬೀಳಲು
ಬಂದಾಗ, ಅದರ ದಂತವನ್ನೇ ಮುರಿದು ಅದನ್ನು ಶಿಕ್ಷಿಸಿದನು. ಹಾವನ್ನೇ ತನ್ನ
ಹಾಸಿಗೆಯಾಗಿ ಉಳ್ಳ ಅವನು ನಮಗೆ ತೋರಿದ ಕೃಪೆ ಎಷ್ಟು ಅತಿಶಯವಾದದ್ದು!
ಅವನು ನನ್ನನ್ನಗಲಿದನು. ಅದರಿಂದ ನನಗೆ ಬಹಳ ಸಂಕಟವಾಗಿದೆ. ವೃದ್ಧಿಹೊಂದು
ತ್ತಿರುವ ಬಾಲಚಂದ್ರನೂ ಸಹ ನನಗೆ ಅಪರೂಪವಾದೊಂದು ಸುಡುವ ಬೆಂಕಿಯೇ
ಆಗಿದ್ದಾನೆ. ನನ್ನ ಪ್ರಿಯತಮನು ಈಗ ತಿರುಪ್ಪುಲ್ಲಾಣಿಯಲ್ಲಿ ನೆಲಸಿದ್ದಾನೆ. ಅದು
ಬಹಳ ಸುಂದರವಾದ ಕ್ಷೇತ್ರ. ಸುರಹೊನ್ನೆ ಮರಗಳು ಎಲ್ಲೆಲ್ಲೂ ಬೆಳೆದು ಅರಳಿದ
ಸೊಗಸಾದ ಹೂಗಳನ್ನು ಉದುರಿಸುತ್ತಾ ಚಿನ್ನದಂತೆ ಹೊಳೆಯುತ್ತವೆ. ಹೊಸ ಬಗೆಯ
ತಿರುಪ್ಪುಲ್ಲಾಣಿಯನ್ನು ಇಲ್ಲಿಂದಲೇ ಧ್ಯಾನಿಸಿಕೊಳ್ಳುತ್ತಾ ಕೈಮುಗಿಯುತ್ತೇನೆ.
ಪಕ್ಷಿಗಳೇ, ನೀವು ನನ್ನ ಸ್ವಾಮಿಯ ಬಳಿಗೆ ಹೋಗಿ. ನನ್ನ ದುಸ್ಥಿತಿಯನ್ನು
ಅವನಿಗೆ ವಿವರಿಸಿ ಹೇಳಿ. ನನ್ನನ್ನು ಅವನು ಕರುಣಿಸುವಂತೆ ಮಾಡಿ

9. வேதமும் வேள்வியும் விண்ணு மிருசுடரும்,
ஆதியுமானான் அருள் தந்தவா நமக்கு,
போதலரும் புன்னை சூழ் புல்லாணி கைதொழுதேன்,
ஓதமும் நானும் உறங்காதிருந்தேனே.

ವೇದಮುಮ್ ವೇಳ್ವಿಯುಮ್ ವಿಣ್ಣು ಮಿರುಶುಡರುಮ್,
ಆದಿಯುಮಾನಾನ್ ಅರುಳ್ ತನ್ದವಾ ನಮಕ್ಕು,
ಪೋದಲರುಮ್ ಪುನ್ನೈ ಶೂೞ್ ಪುಲ್ಲಾಣಿ ಕೈತೊೞುದೇನ್,
ಓದಮುಮ್ ನಾನುಮ್ ಉಱಙ್ಗಾದಿರುನ್ದೇನೇ.

ವೇದಮುಮ್ வேதமும் = ವೇದಸ್ವರೂಪನೂ, ವೇಳ್ವಿಯುಮ್
வேள்வியும் = ಯಜ್ಞಸ್ವರೂಪನೂ, ವಿಣ್ಣುಮ್ விண்ணும் = ಸ್ವರ್ಗಾ
ದಿಲೋಕಗಳೆಲ್ಲವೂ, ಇರುಶುಡರುಮ್ இருசுடரும் = ಎರಡು ಜ್ಯೋ

Garani Srinivasan

ಕಿಗಳೂ, ಆದಿಯುಮಾ ಆಕ್ಕಿಯಮ್ = ಜನದಾದಿಯೂ (ಎಲ್ಲಕ್ಕೂ ಆದಿಯೂ)
ಆನಾನ್ ಆದ್ರಣ್ = ಆದವನು, ನಮಕ್ಕು ನಮಕ್ಕು = ನಮಗೆ, ಅಲ
ರ್ಕ್ ಶನ್ದ ಆ ಅರುಳ್ ಕುರ್ನ್ದ ಆ = ಕೃಪೆ ಮಾಡಿದ ಅಂತಿಯೋ! ಪೊಂದು
ಪೋತು = ಕಾಲಕ್ಕೆ, ಅಲರುಮಾ ಅಲರುಮ್ = ಅರಳುವ, ಪೊನ್ನೈ ಪುನ್
ಜಾ = ಪುರಸ್ಪೊನ್ನೆಯಿಂದ, ಶೂಲ್ ಕೂಳ್ = ಸುತ್ತು ವರಿದಿರುವ, ಪುಲ್ಲಾ
ಣಿ ಪುಲ್ಲಾಣಿ = ತಿರುಪ್ಪುಲ್ಲಾಣಿಯನ್ನು, ಕೈ ಕಳೆಯುದೇನ್ ಕಾಕುತ್ತಾ
ಪುಕೇಣ್ = ಕೈ ಮುಗಿಯುತ್ತೇನೆ, ~~[illegible]~~ ಉದಯುಮಾ ಇತ್ತುಮ್ = ಕಡ
ಲೂ, ನಾನುಮಾ ನಾನುಮ್ = ನಾನೂ, ಉಱಕ್ಕಮು ಉಱಂಗಾತು
= ನಿದ್ರಿಸದೆ, ಇರುಪ್ಪೇನೇ ಇರುನ್ದೇನೇ = ಇರುತ್ತೇವಲ್ಲ!

ವೇದಸ್ವರೂಪನೂ, ಯಜ್ಞಸ್ವರೂಪನೂ, ಸ್ವರ್ಗಾದಿಲೋಕಗಳೂ, ಎರಡು ಜ್ಯೋತಿಗಳೂ, ಎಲ್ಲಕ್ಕೂ ಆದಿಯೂ ಆದವನು ನಮಗೆ ಕೃಪೆ ಮಾಡಿದ ಅಂತಿಯೋ! ಕಾಲಕ್ಕೆ ಸರಿಯಾಗಿ ಅರಳುವ ಪುರಸ್ಪೊನ್ನೆ ಮರಗಳಿಂದ ಕೂಡಿದ ಅಂತಿಯೋ! ಕಾಲಕ್ಕೆ ಸರಿಯಾಗಿ ಅರಳುವ ಪುರಸ್ಪೊನ್ನೆ ಮರಗಳಿಂದ ಸುತ್ತು ವರಿದಿರುವ ತಿರುಪ್ಪುಲ್ಲಾಣಿಯನ್ನು ಕೈ ಮುಗಿಯುತ್ತೇನೆ. ಕಡಲೂ ನಾನೂ ನಿದ್ರಿಸದೆ ಇರುತ್ತೇವಲ್ಲ! (9)

ಯುವತಿಯು ಹೇಳುತ್ತಾಳೆ: ಪಕ್ಷಿಗಳೇ, ನನ್ನ ಪ್ರಿಯತಮನು ಎಲ್ಲಕ್ಕೂ ಆದಿಕಾರಣನು. ಅವನ ಸ್ವರೂಪಸ್ವಭಾವಗಳನ್ನು ತಿಳಿದುಕೊಳ್ಳುವುದಕ್ಕೆ ಅನುಕೂಲವಾದ ಜ್ಞಾನಸ್ವರೂಪನೂ, ವೇದಸ್ವರೂಪನಾದ್ದನೆ. ಅವನೇ ಯಜ್ಞಸ್ವರೂಪನು. ಸ್ವರ್ಗಾದಿ ಲೋಕಗಳೆಲ್ಲವೂ ಅವನೇ. ಜಗತ್ತನ್ನು ಬೆಳಗಿಸುವ ಸೂರ್ಯಚಂದ್ರಾದಿಗಳೂ ಅವನೇ. ಅವನು ನಮ್ಮ ಇಷ್ಟಕ್ಕೆ ಬಹಳ ಅತಿಶಯವಾದ ಅಂತಿಯಲ್ಲಿ ಕೃಪೆ ಮಾಡಿದ್ದಾನೆ. ಅವನು ಇದ್ದಕ್ಕಿದ್ದಂತೆ ನನ್ನನ್ನಗಲಿ ಹೊರಟು ಹೋದನು.. ಹೊತ್ತು ಹೊತ್ತಿಗೆ ಅರಳುವ ಪರಿಮಳವನ್ನು ಸೂಸುವ ಹೂಗಳಿಂದ ಕೂಡಿದ ಪುರಸ್ಪೊನ್ನೆ ಮರಗಳಿಂದ ಸುತ್ತುವರಿದಿರುವ ತಿರುಪ್ಪುಲ್ಲಾಣಿಯಲ್ಲಿ ಈಗ ನೆಲಸಿದ್ದಾನೆ. ಪಕ್ಷಿಗಳೇ, ಕಡಲಿನ ಹಾಗೆ ನಾನೂ ನಿದ್ದೆಯನ್ನು ಕಳೆದುಕೊಂಡಿದ್ದೇನೆ. ನೀವು ಹೋಗಿ ನನ್ನ ಸ್ವಾಮಿಗೆ ಈ ವಿಷಯವನ್ನು ತಿಳಿಸಿ. ನನ್ನಲ್ಲಿ ಕರುಣೆ ಬರುವಂತೆ ಅವನಿಗೆ ತಿಳಿಸಿ.

ಕಡಲಿನ ಅಲೆಗಳು ಎಡೆಬಿಡದೆ ಏಳುತ್ತಲೇ ಇರುತ್ತವೆ. ಕಡಲಿಗೆ ಅಲೆಗಳಿಲ್ಲದ ಶಾಂತಿ, ನಿದ್ರೆ ಎಂದಿಗೆ ಉಂಟಾದೀತು? ಹಾಗೆಯೇ ವಿರಹಿಯಾದ ನನಗೆ ಆಲೋಚನೆ ತುಂಬಿರುವುದರಿಂದ ನನಗೆ ನಿದ್ದೆಯೆಂಬುದೇ ಇಲ್ಲವಾಗಿದೆ.

10. பொன்னலரும் புன்னைசூழ் புல்லாணியம்மானை,
மன்னிடையார் வேட்கை நோய் கூர இருந்ததனை,
கன்னவிலும் திண்டோள் கலியன் ஒலிவல்லார்,
மன்னவராய் மண்ணாண்டு வானாடு முன்னுவரே.

ಪೊನ್ನಲರುಮ್ ಪುನ್ನೈಶೂಳ್ ಪುಲ್ಲಾಣಿಯಮ್ಮಾನೈ,
ಮಿನ್ನಿಡೈಯಾರ್ ವೇಟ್ಕೈ ನೋಯ್ ಕೂರ ಇರುನ್ದದನೈ,

Garani Srinivasan

ಕನ್ನವಿಲುಮ್ ತಿಣ್ತೋಳ್ ತಲೈಯನ್ ಕಲಿವಲ್ಲಾರ್,
ಮನ್ನವರಾಯ್ ಮಣ್ಣಾಂಡು ವಾನಾಡು ಮನ್ನವರೇ.

ಪೊನ್ ಅಲರುಮ್ பொன் அலரும் = ಚಿನ್ನವನ್ನು ಅರಳಿಸುವ, ಪುನ್ನೈ புன்னை = ಪುನ್ನಾಗ ಮರಗಳಿಂದ, ಸೂಳ್ சூழ் = ಸುತ್ತುವರಿದಿರುವ, ಪುಲ್ಲಾಣಿ ಅಮ್ಮಾನೈ புல்லாணி அம்மானை = ತಿರುಪ್ಪುಲ್ಲಾಣಿಯ ಸ್ವಾಮಿಯನ್ನು ಕುರಿತು, ಮಿನ್ ಇಡೈ ಯಾರ್ மின் இடையார் = ಮಿಂಚಿನ ಬಳ್ಳಿಯಂತೆ ನಡುವನ್ನುಳ್ಳವರು, ವೇಟ್ಕೈ வேட்கை = ಕಾಮದ, ನೋಯ್ நோய் = ನೋವನ್ನು (ಸಂಕಟವನ್ನು) (ಅನುಭವಿಸುತ್ತ), ಕೂರ = ಬಹಳ ಹೆಚ್ಚುತ್ತಿರುವಂತೆಯೇ, ಇರುನ್ದದನೈ இருந்ததனை = ಇರುವುದನ್ನು, ಕಲ್ ನವಿಲುಮ್ கல் நவிலும் = ಬೆಟ್ಟಕ್ಕಿಂತಲೂ ಪ್ರಬಲವಾದ, ತಿಣ್ ತೋಳ್ திண் தோள் = ಶಕ್ತಿಪೂರ್ಣವಾದ ಬಾಹುಗಳುಳ್ಳ, ಕಲಿಯನ್ கலியன் = ಕಲಿಯನ, ಒಲಿ ஒலி = ಪಾಶುರವನ್ನು, ವಲ್ಲಾರ್ வல்லார் = ಬಲ್ಲವರು, ಮನ್ನವರ್ ಆಯ್ மன்னவர் ஆய் = ರಾಜರುಗಳಾಗಿ, ಮಣ್ ಆಣ್ಡು மண் ஆண்டு = ಭೂಮಿಯನ್ನಾಳಿ, (ಬಳಿಕ), ವಾನ್ ನಾಡುಮ್ வான் நாடும் = ಪರಮಪದ ~~ವನ್ನು~~ ದಲ್ಲಿಯೂ, ಉನ್ನವರೇ உன்னுவரே = ಉನ್ನತ ಪದವಿಗೆ ಏರುವವರೇ ಆಗುತ್ತಾರೆ.

ಚಿನ್ನವನ್ನು ಅರಳಿಸುವ ಪುನ್ನಾಗ ಮರಗಳಿಂದ ಸುತ್ತುವರಿದಿರುವ ತಿರುಪ್ಪುಲ್ಲಾಣಿ ಕ್ಷೇತ್ರದ ಸ್ವಾಮಿಯಲ್ಲಿ ಮಿಂಚಿನ ಬಳ್ಳಿಯಂತೆ ನಡುವನ್ನುಳ್ಳವರು ಕಾಮದ ನೋವನ್ನು ಹೆಚ್ಚುತ್ತಿರುವಂತೆಯೇ ಅನುಭವಿಸುತ್ತ ಇರುವುದನ್ನು ಬೆಟ್ಟಕ್ಕಿಂತಲೂ ಪ್ರಬಲವಾದ ಶಕ್ತಿಪೂರ್ಣವಾದ ತೋಳುಗಳುಳ್ಳ ಕಲಿಯನು (ತಿರುಮಂಗೈ ಆಳ್ವಾರರು) ಹಾಡಿದ ಪಾಶುರಗಳನ್ನು ಬಲ್ಲವರು ರಾಜರಂತೆ ಭೂಮಿಯನ್ನಾಳಿದ ಬಳಿಕ ಪರಮಪದದಲ್ಲಿಯೂ ಉನ್ನತ ಪದವಿಗೆ ಏರುವವರೇ ಆಗುತ್ತಾರೆ. (10)

ಇದು ಈ ತಿರುಮೊಳಿಯ ಕಡೆಯ ಪಾಶುರ. "ಪುಲ್ಲಾಣಿ ಕ್ಕೈ ತೊಳುದೇನ್ - புல்லாணி கைதொழுதேன் ಮತ್ತು "ಅವನ್ ಅರುಳ್ ತನ್ದ ಆ" - அவன் அருள் தந்த ஆ" ಎಂಬ ವಾಕ್ಯಭಾಗಗಳು ಒಂದೊಂದು ಪಾಶುರದಲ್ಲೂ ಎದ್ದುಕಾಣುತ್ತವೆ.

ಪಾಶುರದ ಯುವತಿಗೆ ತನ್ನ ಪ್ರಿಯತಮನ ಪರಮಶ್ರೇಷ್ಠನು. ಅವನು ಕೃಪಾಳು, ಕರುಣಾನಿಧಿ. ಯುವತಿಯ ಮುಗ್ಧತೆಗೆ, ಶುದ್ಧ ಮನಸ್ಸಿಗೆ ಮೆಚ್ಚಿ ಅವನು ಬಹಳ ಅತಿಶಯವಾದ ರೀತಿಯಲ್ಲಿ ಅವಳಲ್ಲಿ ಕೃಪೆ ತೋರುತ್ತಾನೆ. ಅವಳಲ್ಲಿ ತನಗೆ ಗಾಢ ಪ್ರೇಮವಿದೆಯೆಂದು ಬಗೆಬಗೆಯಾಗಿ ತೋರಿಸಿ ಅವಳಿಗೆ ಭರವಸೆ ಕೊಡುತ್ತಾನೆ. ಇನ್ನು ಅವಳನ್ನು ಅಗಲುವುದೇ ಇಲ್ಲವೆಂದು ಮಾತುಕೊಡುತ್ತಾನೆ. ಅದರಂತೆ ನಡೆದುಕೊಳ್ಳದಂತೆ, ಅವಳ ಮನಸ್ಸನ್ನು ಮಾತ್ರ ತನ್ನೊಡನೆ ಕರೆದೊಯ್ದು ತಿರುಪ್ಪುಲ್ಲಾಣಿಯಲ್ಲಿ ನೆಲಸುತ್ತಾನೆ. ಅವಳೀಗ ತನ್ನ ಪ್ರಿಯನನ್ನೂ ನಲ್ಲನನ್ನೂ ಕಳೆದುಕೊಂಡ ಒಂಟಿಗಳಾಗುತ್ತಾಳೆ. ಅವಳಿಗೆ ತನ್ನನ್ನಗಲಿದ ಪ್ರಿಯನ ಚಿಂತೆ, ವ್ಯಥೆ, ವಿರಹ. ತನ್ನ ಪ್ರಿಯನನ್ನ ಮತ್ತೆ ಸೇರುವುದು ಹೇಗೆ? ತಾನೇ ಅಲ್ಲಿಗೆ ಹೋಗಬೇಕು - ಎಂದು ಅವಳು

Garani Srinivasan

ನಿರ್ಧರಿಸುತ್ತಾಳೆ. ತಿರುಪ್ಪಳ್ಳಾಣಿಗೆ ಅವಳು ಹೋಗಲು ಆಗದೆ ಹೋಯಿತೇನೋ! ಅಲ್ಲಿ ಸ್ವಚ್ಛಂದವಾಗಿ ಹಾರಾಡುವ ಹಕ್ಕಿಗಳಿಗೆ ಹೇಳುತ್ತಾಳೆ- ಅವು ತಿರುಪ್ಪಳ್ಳಾಣಿಗೆ ಹೋಗಬೇಕೆಂದೂ, ತನ್ನ ಪ್ರಿಯನಿಗೆ ತನ್ನ ವಿರಹ ವೇದನೆಯನ್ನು ವಿವರಿಸಿ ಹೇಳಬೇಕೆಂದೂ, ಅವನು ಮತ್ತೆ ತನ್ನಲ್ಲಿ ಕರುಣೆ ಬರುವಂತೆ ಮಾಡಬೇಕೆಂದೂ ಬೇಡಿಕೊಳ್ಳುತ್ತಾಳೆ. ತನ್ನ ಸ್ವಾಮಿಯನ್ನು ತಾನು ಮರೆಯುವುದಕ್ಕಾಗುವುದೇ ಇಲ್ಲ; ಇಲ್ಲಿಂದಲೇ ತಾನು ಅವನಿಗಾ ಅವನಿರುವ ತಿರುಪ್ಪಳ್ಳಾಣಿಗಾ ಕೈಮುಗಿಯುತ್ತೇನೆ- ಎಂದು ಬಾರಿಬಾರಿಗಾ ಹೇಳುತ್ತಾಳೆ.

ಭಕ್ತನ ಮನಸ್ಸು ಭಗವಂತನತ್ತ ವಾಲಿದರೆ, ಅವನಿಗೆ ಭಕ್ತಿಯು ವೃದ್ಧಿಯಾಗುವುದು. ಅವನ ಜೀವನ ಪುಷ್ಟಿಯಾಗುವುದು. ಪ್ರಾಪಂಚಿಕದ ಹವ್ಯಾಸವು ಕಡಿಮೆಯಾಗುವುದು. ಅದಕ್ಕೆ ಬದಲಾಗಿ, ಮನಸ್ಸು ಪ್ರಾಪಂಜಿಕದತ್ತ ಸಾಗಿದರೆ, ಅವನ ಕರ್ಮ ಮುಗಿಯದು. ಅವನಿಗೆ ಅಧೋಗತಿಯೂ ಪುನರ್ಜನ್ಮ ಮರಣಗಳ ಕೋಟಲೆಯೂ ತಪ್ಪುವುದಿಲ್ಲ.

ಪಾಶುರದ ಯುವತಿಯು ಪಡೆದ ಪ್ರೇಮಾನುಭವವನ್ನು, ಅವಳ ಮನೋಯಾತನೆಯನ್ನು, ತನ್ನ ಪ್ರಿಯತಮನನ್ನು ಸೇರಬೇಕೆಂಬ ಅತೀವವಾದ ಹಂಬಲವನ್ನು, ಅವಳು ಅನುಭವಿಸಿದ ಹಾಗೆಯೇ ಈ ತಿರುಮಾಲೆಯ ಪಾಶುರಗಳಲ್ಲಿ ಕಲಿಯನು ಹಾಡಿದ್ದಾನೆ. ಈ ವಿಷಯವನ್ನು ಚೆನ್ನಾಗಿ ಅರ್ಥಮಾಡಿಕೊಂಡು, ಹಾಗೆಯೇ ನಡೆದುಕೊಂಡವರು ಭೂಲೋಕದಲ್ಲಿ ವಾಸಮಾಡುವಷ್ಟು ಕಾಲವೂ ರಾಜರಂತೆ ಮನ್ನಣೆಯನ್ನು ಪಡೆಯುವವರಾಗುತ್ತಾರೆ. ಆ ಬಳಿಕ, ಅವರು ಪರಮಪದವನ್ನೇ ಸೇರುತ್ತಾರೆ. ಅಲ್ಲಿಯೂ ಸಹ ಅವರು ಅತ್ಯುತ್ತಮವಾದ ಮನ್ನಣೆಯನ್ನೇ ಪಡೆಯುತ್ತಾರೆ ಹೀಗಿದೆ ಈ ತಿರುಮಾಲೆಗೆ ಫಲಶ್ರುತಿ!

———— o ————

ಅಡಿಯನಡೆ: அடிவரவு:- ಕಾವಾರ್ காவார், ಮುನ್ನಮ್ முன்னம், ವಳ್ಳಿ வள்ளி, ಪೆರಿಯ பெரிய, ವಿಲ್ வில், ಸುಳನ್ರು சுழன்று, ಕನ್ನಿ கன்னி, ತೂಮ್ಬುಡೈ தூம்புடை, ವೇದಮ್ வேதம், ಪೊನ್ನಲರುಮ್ பொன்னலரும், (ತವಳ தவள)

———— o ————

Garani Srinivasan

11|11|78

ಪೆರಿಯ ತಿರುಮೊಳಿ - ಒಂಬತ್ತನೆಯ ದಶಕ - ಐದನೆಯ ತಿರುಮೊಳಿ

பெரிய திருமொழி - ஒன்பதாம் பத்து - ஐந்தாந் திருமொழி

5. ತವಳ ಇಳಮ್ಬಿಱೈ - தவள இளம் பிறை.

1. தவளவிளம் பிறை துள்ளுமுந்நீர்த்
தண்மலர்த் தென்றலோடன்றிலொன்றித்
துவள, என்னெஞ்சகஞ் சோர வீரும்
சூழ்பனி நாள் துயிலாதிருப்பேன்,
இவளுமோர் பெண்கொடியென்றிரங்கார்
என்னலமைந்துமுன் கொண்டுபோன,
குவளை மலர் நிறவண்ணர் மன்னு
குறுங்குடிக்கேயென்னை யுய்த்திடுமின்.

ತವಳವಿಳಮ್ಬಿಱೈ ತುಳ್ಳುಮುನ್ನೀರ್
ತ್ತಣ್ ಮಲರ್ತ್ತೆನ್ಱಲೋಡನ್ಱಿಲೊನ್ಱಿ
ತ್ತುವಳ, ಎನ್ನೆಂಜಗಂ ಜೋರವೀರುಮ್
ಶೂೞ್ ಪನಿ ನಾಳ್ ತುಯಿಲಾದಿರುಪ್ಪೇನ್,
ಇವಳುಮೋರ್ ಪೆಣ್ ಕೊಡಿಯೆನ್ಱಿರಂಗಾರ್
ಎನ್ನಲಮೈನ್ದುಮುನ್ ಕೊಣ್ಡು ಪೋನ,
ಕುವಳೈ ಮಲರ್ ನಿಱವಣ್ಣರ್ ಮನ್ನು
ಕುಱುಙ್ಗುಡಿಕ್ಕೇಯೆನ್ನೈ ಯುಯ್ತ್ತಿಡುಮಿನ್

ತವಳಮ್ தவளம் = ಬೆಳ್ಳಗಿರುವ, ಇಳ இள = ಎಳೆಯ, ಪಿಱೈ பிறை = ಚಂದ್ರನು, ತುಳ್ಳುಮ್ துள்ளும் = ಅಲೆಗಳನ್ನು ಚೆಲ್ಲುತ್ತಿರುವ, ಮುನ್ನೀರ್ முந்நீர் = ಕಡಲು, ತಣ್ தண் = ತಂಪಾಗಿ, ಮಲರ್ மலர் = ಹೂವಿನ ಮೇಲೆ ಬೀಸುವ, ತೆನ್ಱಲೋಡು தென்றலோடு = ತೆಂಗಾಳಿಯು, ಅನ್ಱಿಲ್ அன்றில் = ಕ್ರೌಂಚ ಪಕ್ಷಿಗಳೂ, ಒನ್ಱಿ ஒன்றி = ಒಟ್ಟಾಗಿ, ತುವಳ துவள = (ನನ್ನನ್ನು) ಬಾಡಿಸು (ಸೊರಗಿಸು)ತ್ತಿರಲು, ಎನ್ ನೆಂಜು ಅಗಮ್ என் நெஞ்சு அகம் = ನನ್ನ ಮನಸ್ಸೂ ಹೃದಯವೂ, ಸೋರ சோர = ಜಾರಿಹೋಗುತ್ತಿರಲು, ಈರುಮ್ ஈரும் = ಬಾಧೆ (ಯಾತನೆ) ~~ಯಾತನೆ~~ ಪಡಿಸುತ್ತಿವೆ, ಶೂೞ್ சூழ் = ಸುತ್ತುಮುತ್ತಲೂ, ಪನಿ பனி = ಮಂಜು ಬೀಳುತ್ತಿರುವ, ನಾಳ್ நாள் = ಸಮಯದಲ್ಲಿ, ತುಯಿಲಾದು துயிலாது = ನಿದ್ರಿಸದೆ, ಇರುಪ್ಪೇನ್ இருப்பேன் = ಇದ್ದೇನೆ, ಇವಳುಮ್ இவளும் = ಇವಳೂ ಸಹ, ಓರ್ ಪೆಣ್ ಕೊಡಿ ஓர் பெண் கொடி = ಒಬ್ಬ ಎಳೆವಯಸ್ಸಿನ ಹೆಣ್ಣು, ಎನ್ಱು என்று = ಎಂದು, ಇರಂಗಾರ್ இரங்கார் = ಕನಿಕರಿಸರು, ಎನ್ என் = ನನ್ನ, ನಲಮ್ நலம் = ಸೊಬಗನ್ನೂ, ಐನ್ದುಮ್ ஐந்தும் = ಪಂಚೇಂದ್ರಿಯಗಳನ್ನೂ, ಮುನ್ முன் =

ಈ ಮುಂಚೆಯೇ, ಕೊಣ್ಡು ಪೋನ (கொண்டு போன) = ಸೂರೆಗೊಂಡು ಹೋದ, ಕುವಳೈ ಮಲರ್ (குவளை மலர்) = ಕನ್ನೈದಿಲೆ ಹೂವಿನ, ನಿಱಮ್ (நிறம்) = ಬಣ್ಣದ, ವಣ್ಣರ್ (வண்ணர்) = ದೇಹಕಾಂತಿಯುಳ್ಳವರು, ಮನ್ನು (மன்னு) = ನೆಲಸಿರುವ, ಕುಱುಙ್ಗುಡಿಕ್ಕೇ (குறுங்குடிக்கே) = ತಿರುಕುರುಂಗುಡಿ ಕ್ಷೇತ್ರಕ್ಕೇ, ಎನ್ನೈ (என்னை) = ನನ್ನನ್ನು, ಉಯ್ತ್ತಿಡುಮಿನ್ (உய்த்திடுமின்) = ಕರೆದೊಯ್ಯಿರಿ.

ಬೆಳ್ಳಗಿರುವ ಬಾಲಚಂದ್ರನೂ, ಅಲೆಗಳನ್ನು ತಳ್ಳುತ್ತಿರುವ ಕಡಲೂ, ತಂಪಾಗಿ ಹೂವಿನ ಮೇಲೆ ಬೀಸುವ ತಂಗಾಳಿಯೂ, ಕ್ರೌಂಚ ಪಕ್ಷಿಗಳೂ, ಒಬ್ಬಂಟಿ (ನನ್ನನ್ನು) ಕೊರಗಿಸುತ್ತಿವೆ. ನನ್ನ ಮನಸ್ಸೂ ಹೃದಯವೂ ಜಾರಿ ಹೋಗಿರಲು ನನ್ನನ್ನು ಯಾತನೆ ಪಡಿಸುತ್ತಿವೆ. ಸುತ್ತಮುತ್ತಲೂ ಮಂಜು ಬೀಳುತ್ತಿರುವ ಸಮಯದಲ್ಲಿ ನಿದ್ರಿಸದೆ ಇದ್ದೇನೆ. ಇವಳೂ ಒಬ್ಬ ಎಳೆವಯಸ್ಸಿನ ಹೆಣ್ಣು ಎಂದು ಕನಿಕರಿಸದಿರುವ ನನ್ನ ದೇಹವನ್ನೂ ಪಂಚೇಂದ್ರಿಯಗಳನ್ನೂ ಈ ಮುಂಚೆಯೇ ಸೂರೆಗೊಂಡು ಹೋದ ಕನ್ನೈದಿಲೆ ಹೂವಿನ ಬಣ್ಣದ ದೇಹಕಾಂತಿಯುಳ್ಳವರು ನೆಲಸಿರುವ ತಿರುಕ್ಕುರುಂಗುಡಿ ಕ್ಷೇತ್ರಕ್ಕೆ ನನ್ನನ್ನು ಕರೆದೊಯ್ಯಿರಿ (1)

ಆಳ್ವಾರರು ತಿರುಪ್ಪುಲ್ಲಾಣಿ ಕ್ಷೇತ್ರದಿಂದ ತಿರುಕ್ಕುರುಂಗುಡಿ ಕ್ಷೇತ್ರಕ್ಕೆ ಬಂದಿದ್ದಾರೆ. ಹಿಂದಿನ ತಿರುಮೊಳಿಗಳಂತೆಯೇ ಈ ತಿರುಮೊಳಿಯಲ್ಲೂ ಆಳ್ವಾರರು ತಮ್ಮನ್ನು ನಾಯಕಿಯೆಂದು ಭಾವಿಸಿಕೊಂಡು, ತಮ್ಮ ಪ್ರೀತಿಯ ನಾಯಕನಾದ ಭಗವಂತನಿಗಾಗಿ ವಿರಹಪಡುವುದನ್ನು ಕಾಣಬಹುದಾಗಿದೆ. ಭಗವದ್ಭಕ್ತಿಯ ಪ್ರೌಢಿಮೆಯಲ್ಲಿ ನಾಯಕ-ನಾಯಕೀ ಭಾವದ ವೈಶಿಷ್ಟ್ಯವನ್ನು ಅವರು ಪ್ರಕಟಗೊಳಿಸುತ್ತಿದ್ದಾರೆ ಎನ್ನಬಹುದು.

"ಬೆಳ್ಳಗಿರುವ ಬಾಲಚಂದ್ರನೂ ... ಒಬ್ಬಂಟಿ ನನ್ನನ್ನು ಕೊರಗಿಸುತ್ತಿವೆ" — ನಿರ್ಮಲವಾದ (ಶುದ್ಧವಾದ) ಬಾಲಚಂದ್ರನು ಪರಿಶುದ್ಧವಾದ ನೀಲಗಗನದಲ್ಲಿ ಉದಯಿಸಿ ಬೆಳಗಲು ಪ್ರಾರಂಭಿಸಿದರೆ, ಅದು ಎಲ್ಲರಿಗೂ ಆಹ್ಲಾದವನ್ನು ತುಂಬುವುದು. ವಿರಹಿಗಳಿಗೆ ಅದು ಸುಡುವ ಬೆಂಕಿಯಾಗುತ್ತದೆ. ಎಡೆಬಿಡದೆ ತೆರೆಗಳ ಅಲೆಗಳನ್ನು ತಳ್ಳುತ್ತಲೇ ಇರುವ ಕಡಲೂ ಸದಾ ಉದಯಿಸುವ ಚಂದ್ರನೊಡನೆ ಜನರ ಮನದಲ್ಲಿ ಆನಂದವನ್ನು ಉಕ್ಕಿಸುವುದು. ವಿರಹಿಗಳಿಗೆ ಇದೂ ಒಂದು ಕಿಚ್ಚು! ಪರಿಮಳದಿಂದ ತುಂಬಿ, ತಂಪಾಗಿ, ಹಿತವಾದ ರೀತಿಯಲ್ಲಿ ಮೆಲ್ಲ ಮೆಲ್ಲಗೆ ಬೀಸುವ ತಂಗಾಳಿಗೆ ಮೈಯೊಡ್ಡಿ ಜನರು ಆನಂದಿಸುತ್ತಾರೆ. ವಿರಹಿಗಳಿಗೆ ಅದರಿಂದಲೂ ಸಂತೋಷವಿಲ್ಲ. ಕ್ರೌಂಚ ದಂಪತಿಗಳು ನಡೆಸುವ ಸಲ್ಲಾಪದ ಧ್ವನಿ ಎಲ್ಲರನ್ನೂ ಹರ್ಷಗೊಳಿಸುತ್ತವೆ. ಅವುಗಳ (ಪಕ್ಷಿಗಳ) ಸಂಮಿಲನವೇ ವಿರಹಿಗಳ ವ್ಯಥೆಯನ್ನು ಹೆಚ್ಚಿಸುವುದು. ಇವೆಲ್ಲವೂ ಒಬ್ಬಂಟಿಗಳಾಗಿ ಕೊರಗಿಕೊಂಡಿರುವ ವಿರಹಿಗಳ ಪಾಡು ನಾಯಿಪಾಡೇ!

"ನನ್ನ ಮನಸ್ಸೂ ಹೃದಯವೂ ಜಾರಿ ಹೋಗಿರಲು" — ಮನಸ್ಸೂ ಅದರ ಅಂತರಂಗವೂ ಎರಡೂ ತನ್ನ ಪ್ರಿಯತಮನ ಅಧೀನವಾಗಿರುವಾಗ, ಅವನ ಸ್ವರೂಪ ಸ್ವಭಾವಗಳಿಗೆ ಮಾರುಹೋಗಿರುವಾಗ, ಬೇರೆ ವಿಷಯಗಳಲ್ಲಿ ಅವುಗಳನ್ನು

Garani Srinivasan

ಕೊಡಗಿಸುವುದಾದರೂ ಹೇಗೆ ಸಾಧ್ಯ? ಪ್ರಾಪಂಚಿಕ ರೀತಿಯಲ್ಲಿ ಅವು ತನ್ನಿಂದ ದೂರ ಹೋದಂತೆಯೇ, ತಾನು ಅವುಗಳನ್ನು ಪರಿಹಾರ ಮಾಡಿದಂತೆಯೇ.

"ಸುತ್ತ ಮುತ್ತಲೂ ಮಂಜು ಬೀಳುತ್ತಿರುವ ಸಮಯದಲ್ಲಿ ನಿದ್ರಿಸದೆ ಇದ್ದೇನೆ" — ಸುಮಾರು ನಡುರಾತ್ರಿಯನ್ನು ದಾಟಿದ ಬಳಿಕಲೇ ಮಂಜು ಎಲ್ಲೆಲ್ಲೂ ತುಂಬಿಕೊಳ್ಳುವುದು. ಅದು ಚಳಿಯ ಸಮಯ. ಆಗ ತನ್ನ ಪ್ರಿಯತಮನ ಪ್ರೀತಿಯ ತೆಕ್ಕೆಯಲ್ಲಿ ಬೆಚ್ಚಗೆ ಮಲಗಿ, ಮೈಮರೆತು ನಿದ್ರಿಸುವುದು ಅತ್ಯಾತುರವಾದ ಕೆಲಸ. ಒಂಟಿಗಳಾಗಿ, ಪ್ರಿಯನಿಂದ ವಂಚಿತಳಾಗಿರುವವಳಿಗೆ ಸುಖವಾಗಲಿ, ನಿದ್ದೆಯಾಗಲಿ ಎಲ್ಲಿಂದ ಬರಬೇಕು?

"ಇವಳೂ ಒಬ್ಬ ಎಳೆವಯಸ್ಸಿನ ಹೆಣ್ಣು ಎಂದು ತಿಳಿಯಬಾರದು" — ವಯಸ್ಸು, ಅಂಗ, ರೂಪ ಮುಂತಾದವುಗಳು ಕನಿಕರಕ್ಕೆ ಎಡೆಕೊಡತಕ್ಕವು. ಪುರುಷನು ಪ್ರಿಯನಾಗಿರುವಾಗ ಅವನು ತನ್ನ ಪ್ರಿಯಳಿಗೆ ಯೋಚಿಸಬೇಕಾದ ವಿಷಯಗಳಲ್ಲಿ ಕೆಲವು ಇವು. ಎಳೆಯವಯಸ್ಸಿನವಳು, ಯೌವನದ ಹೊಸಿಲಲ್ಲಿ ಕಾಲಿಟ್ಟವಳಿಗೆ ಭಯ ತಾನಾಗಿ ಲಭ್ಯವಾಗುವುದು. ಹೆಣ್ಣಾಗಿರುವುದು ಆ ಭಯವನ್ನು ಹೆಚ್ಚಿಸುವುದು. ತಾನು ಹೆಣ್ಣು ತನಗೆ ತನ್ನ ಪ್ರಿಯನ ರಕ್ಷಣೆ ಬೇಕು. ಅದಿದ್ದರೆ, ತನ್ನ ರೂಪ ಸ್ವಭಾವಗಳಿಗೆ ಪೋಷಣೆ ದೊರೆಯುತ್ತದೆ. ಈ ವಿಷಯವನ್ನರಿತು, ಅವಳ ಇಂಗಿತವನ್ನು ತಿಳಿದು, ಅವಳಿಗೆ ಆಶ್ರಯ ಕೊಡಬೇಕಾದವನು ಪ್ರಿಯನೇ. ಅವನೇ ಅವಳಲ್ಲಿ ಕನಿಕರ ತೋರದಿದ್ದರೆ ತೋರುವವರು ಮತ್ತಾರು?

"ನನ್ನ ಸೌಭಾಗ್ಯವನ್ನು ಪಂಚೇಂದ್ರಿಯಗಳನ್ನೂ ಈ ಮುಂಜಾನೆಯೇ ನಾನು ...ಗೊಂಡೆ" — ಅಪೂರ್ವವಾದ ಸೌಭಾಗ್ಯದಿಂದಲೂ, ದೇಹಕಾಂತಿಯಿಂದಲೂ ... ನನ್ನ ಪ್ರಿಯನು ನನ್ನ ಬಳಿಗೆ ಬಂದನು. ಅವನನ್ನು ಕಂಡೊಡನೆ ನಾನು ವ್ಯಾಮೋಹಗೊಂಡೆ. ಅವನು ನನ್ನೊಡನೆ ಮಧುರವಾದ ಪ್ರೇಮದ ಮಾತುಗಳನ್ನಾಡಿದನು. ನನ್ನ ಮನಸ್ಸನ್ನು ಅದರಿಂದ ಸೂರೆಗೊಂಡನು. ನನ್ನನ್ನು ಇನ್ನು ಅಗಲುವುದೇ ಇಲ್ಲವೆಂದು ಮಾತುಕೊಟ್ಟನು. ಅದಕ್ಕೆ ನಾನು ಮರುಳಾದೆ. ನನ್ನ ತನುಮನಗಳನ್ನೆಲ್ಲಾ ನಾನು ಅವನ ಅಧೀನ ಮಾಡಿದೆ. ನನಗೆ ಬೇಕಾದದ್ದೆಲ್ಲ ನನಗೆ ಲಭಿಸಿತು ಎಂದು ನಾನು ನಂಬಿಕೊಂಡೆ. ಹೀಗಲ್ಲವೇ, ಅವನು ನನ್ನನ್ನು ವಂಚಿಸಿ, ನನ್ನ ಸರ್ವಸ್ವವನ್ನೂ ಸೂರೆಗೊಂಡದ್ದು!

ಯುವತಿಯು ಹೇಳುತ್ತಾಳೆ: ಗೆಳತಿಯರೇ, ಸಾಮಾನ್ಯವಾಗಿ ಎಲ್ಲರಿಗೂ ಹರ್ಷ, ಉತ್ಸಾಹ, ಆಹ್ಲಾದಗಳನ್ನು ತರುವ ಬಾಲಚಂದ್ರನೂ, ಕಡಲೂ, ಮಂದಮಾರುತವೂ, ಕ್ರೌಂಚಪಕ್ಷಿಗಳೂ ನನ್ನ ಪಾಲಿಗೆ ಸುಡುವ ಕಿಚ್ಚಿನಂತಾಗಿವೆ. ನನ್ನ ಮನಸ್ಸೂ ನನ್ನ ಅಂತರಂಗವೂ ನನ್ನ ಪ್ರಿಯತಮನಲ್ಲಿಗೆ ದೂರ ಹೋಗಿವೆ! ನನಗೆ ಮನೋಯಾತನೆ ಹೆಚ್ಚುತ್ತಿದೆ. ಎಲ್ಲೆಲ್ಲೂ ಮಂಜು ಮುಸುಕಿ, ಇಬ್ಬನಿ ಬೀಳುವ ಸಮಯದಲ್ಲಿ, ನನ್ನ ಪ್ರಿಯತಮನ ಸಾನ್ನಿಧ್ಯವಿಲ್ಲದೆ, ನನಗೆ ನಿದ್ದೆ ಬಾರದು. ಅವನು ಈ ಮುಂಜಾನೆ ನನ್ನ ಸೌಭಾಗ್ಯವನ್ನೂ ನನ್ನ ಇಂದ್ರಿಯಗಳನ್ನೂ ಸೂರೆಗೊಂಡು, ನನ್ನನ್ನು ವಂಚಿಸಿ, ಅಗಲಿ ಹೋದ! ಆ ದಿವ್ಯಾನಂ

ದರನೂ, ಕನ್ನಡಿಲ್ ಹೂವಿನ ಬಣ್ಣದ ಬೇರೆ ಕಾಂತಿಯುಳ್ಳವನಗೆ, ನಾನೊಬ್ಬ ಅಪರಾಧಿಯಾಗಿಳಾದ, ಎಲ್ಲರೊಬ್ಬನದ ಹೆಣ್ಣು ಎಂಬುವರಲ್ಲಿ ಕನಿಕರಬೇಡವೇ? ಗೆಳತಿಯರೇ, ನನ್ನ ಪ್ರಿಯನು ಈಗ ತಿರುಕ್ಕುರುಂಗುಡಿಯಲ್ಲಿ ನೆಲಸಿದ್ದಾನೆ. ಹೊಂಗರA, ಯಾತನೆ ಪಡುತ್ತಾ, ಶಕ್ತಿಗುಂದಿರುವ ನನ್ನನ್ನು ನನ್ನ ಪ್ರಿಯನಲ್ಲಿಗೆ ನನ್ನನ್ನು ಸೇರಿಸಿ

ಭಗವಂತನಲ್ಲಿ ವ್ಯಾಮೋಹಗೊಂಡ ಭಕ್ತನಿಗೆ ಪ್ರಾಪಂಚಿಕ ಸುಖಸಂತೋಷಗಳನ್ನು ತರುವಂಥವೆಲ್ಲವೂ ಅಹಿತವೇ. ಭಗವಂತನ ವಿಷಯವಲ್ಲದೆ ಅವನಿಗೆ ಮತ್ತಾವುದೂ ಬೇಡ. ಮನಸ್ಸು, ಬುದ್ಧಿ, ಇಂದ್ರಿಯಗಳು- ಎಲ್ಲವೂ ಭಗವಚ್ಚಿಂತನೆಗೇ ಮೀಸಲು. ಅವನನ್ನು ಕಾಣುವುದು, ಸೇರುವುದು ಎಂಬುದೇ ಭಕ್ತನಗುರಿ. ಅವನ ಪಾದಗಳ ಆಶ್ರಯವನ್ನೊಂದಿಗೆ ಪಡೆದೇನು ಎಂಬುದು ಸಂಬಲ.

2. தாதவிழ் மல்லிகைபுல்கிவந்த
தண்மதியினிளவாடையின்னே,
ஊதைதிரிதந்துழறியுண்ண
ஓரிரவுமுறங்கேன், உறங்கும்
பேதையர் பேதைமையாலிருந்து
பேசிலும் பேசுகபெய்வளையார்,
கோதைநறுமலர்மங்கைமார்பன்
குறுங்குடிக்கேயென்னையுய்த்திடுமின்.

ತಾದವಿೞ್ ಮಲ್ಲಿಗೈ ಪುಲ್ಗಿ ವನ್ದ
ತಣ್ ಮದಿಯಿನಿಳವಾಡೈಯಿನ್ನೇ,
ಊದೈ ತಿರಿತನ್ದುೞಱಿಯುಣ್ಣ
ಓರಿರವುಮುಱಙ್ಗೇನ್, ಉಱಙ್ಗುಮ್
ಪೇದೈಯರ್ ಪೇದೈಮೈಯಾಲಿರುನ್ದು
ಪೇಸಿಲುಮ್ ಪೇಸುಗ ಪೆಯ್ವಳೈಯಾರ್,
ಕೋದೈ ನಱುಮಲರ್ ಮಙ್ಗೈಮಾರ್ಬನ್
ಕುಱುಙ್ಗುಡಿಕ್ಕೇಯೆನ್ನೈಯುಯ್ತ್ತಿಡುಮಿನ್.

ತಾದು தாது = ಧೂಳನ್ನು, ಅವಿೞ್ அவிழ் = ಹರಡುವ, ಮಲ್ಲಿಗೈ மல்லிகை = ಮಲ್ಲಿಗೆ ಹೂವನ್ನು, ಪುಲ್ಗಿ புல்கி = ಸೇರಿ, ವನ್ದ வந்த = ಬಂದ, ತಣ್ தண் = ತಂಪಾದ, ಮದಿಯಿನ್ மதியின் = ಚಂದ್ರನೊಡನೆ ಕೂಡಿ, ಇಳವಾಡೈ இள = ... ವಾಡೈ வாடை = ಸುಳಿ (ಎಳೆಯ) ಗಾಳಿಯು, ಇನ್ನೇ இன்னே = ಈ ಕ್ಷಣವೇ, ಊದೈ ஊதை = ಚಳಿಗಾಳಿಯಾಗಿ, ತಿರಿತನ್ದು திரிதந்து = ಅಲ್ಲಲ್ಲಿ ಸುತ್ತಿ ಸುತ್ತಿ ಬಂದು, ಉೞಱಿ உழறி = ಮಿಶ್ರಮಾಡಿ (ಚಳಿಯುಂಟುಮಾಡಿ), ಉಣ್ಣ உண்ண = ತಿನ್ನುತ್ತಿರಲು, ಓರ್ ಇರವುಮ್ ஓர் இரவும் = ಒಂದು ರಾತ್ರಿಯೂ ಕೂಡ,

Garani Srinivasan

ಉಱಙ್ಗೇನ್ உறங்குகேண் = ನಿದ್ರಿಸಲಾರೆ, (ನಿದ್ರಿಸುವುದಿಲ್ಲ), ಉಱಙ್ಗುಮ್ உறங்கும் ನಿದ್ರಿಸುವ, ಪೇದೈಯರ್ பேதையர் = ಹೆಂಗಸರು, ಪೇದೈಮೈಯಾಯ್ ಇರುನ್ದು பேதைமையாய் இருந்து = ಅವಿವೇಕದಿಂದಲೇ ಇರುತ್ತಾ, ಪೇಶಿಲುಮ್ பேசிலும் = (ನನ್ನನ್ನು ಕುರಿತು) ಆಡಿಕೊಂಡರೂ, ಪೇಶುಗ பேசுக = ಆಡಿಕೊಳ್ಳಲಿ, ಪೆಯ್ವಳೈಯಾರ್ பெய்வளையார் = ಕೈತುಂಬ ಬಳೆ ತೊಟ್ಟಿರುವವರು, ಕೋದೈ கோதை = ಕೂದಲನ್ನು, ನಱುಮಲರ್ நறுமலர் = ಪರಿಮಳದ ಹೂವನ್ನು ಮುಡಿದಿರುವ, ಮಙ್ಗೈ மங்கை = ದೇವಿಯನ್ನು, ಮಾರ್ಬನ್ மார்பன் = ಎದೆಯಲ್ಲಿ ಉಳ್ಳವನು, ಕುಱುಙ್ಗುಡಿಕ್ಕೇ குறுங்குடிக்கே = ತಿರುಕ್ಕುರುಂಗುಡಿ ಕ್ಷೇತ್ರಕ್ಕೇ, ಎನ್ನೈ என்னை = ನನ್ನನ್ನು, ಉಯ್ತ್ತಿಡುಮಿನ್ உய்த்திடுமின் = ಕೊಂಡ್ಹೋಗಿಯು ಸೇರಿಸಿ.

ವಿರಾಗವನ್ನು ಚೆಲ್ಲುವಂಥ ಮಲ್ಲಿಗೆ ಹೂವನ್ನು ಸೇರಿ ಬಂದ ಎಳೆಯ ಗಾಳಿಯು ತಂಪಾದ ಚಂದ್ರನೊಡನೆ ಕೂಡಿ ಈ ಕ್ಷಣದಲ್ಲೇ ಚಳಿಗಾಳಿಯಾಗಿ ಸುತ್ತಿ ಸುತ್ತಿ ಬಂದು (ನನ್ನನ್ನು) ಚಟ್ಟೆಯಂತೆ ಮಾಡಿ ತಿನ್ನುತ್ತಿರಲು, (ನಾನು) ಒಂದು ರಾತ್ರಿಯೂ ಸಹ ನಿದ್ರಿಸುವುದಿಲ್ಲ. ನಿದ್ರಿಸುವ ಹೆಂಗಸರು ಅವಿವೇಕದಿಂದಲೇ ಕೂಡಿರುತ್ತಾ (ನನ್ನನ್ನು ಕುರಿತು) ಆಡಿದರೂ ಆಡಿಕೊಳ್ಳಲಿ. (ಅವರು) ಕೈತುಂಬ ಬಳೆತೊಟ್ಟಿರುವವರು. ಕೂದಲಿನಲ್ಲಿ ಪರಿಮಳದ ಹೂವನ್ನು ಮುಡಿದಿರುವ ದೇವಿಯನ್ನು ಎದೆಯಲ್ಲಿ ಉಳ್ಳವನ ತಿರುಕ್ಕುರುಂಗುಡಿ ಕ್ಷೇತ್ರಕ್ಕೇ ನನ್ನನ್ನು ಕೊಂಡ್ಹೋಗಿಯು ಸೇರಿಸಿ. (2)

ಯುವತಿಯು ಹೇಳುತ್ತಾಳೆ: ಗೆಳತಿಯರೇ, ಸುಂದರವಾಗಿ ಅರಳುತ್ತ ವಿರಾಗವನ್ನು ಹೊರಚೆಲ್ಲುತ್ತಿರುವ ಮಲ್ಲಿಗೆ ಹೂಗಳನ್ನು ಸವರಿಕೊಂಡು ಅವುಗಳ ಪರಿಮಳವನ್ನು ಹೊತ್ತು ಮೃದುವಾಗಿ ಬೀಸುವ ಸುಳಿಗಾಳಿ ಮನಸ್ಸಿಗೆ ಎಷ್ಟು ಆಹ್ಲಾದವನ್ನು ತರಬೇಕು! ತಂಪಾದ ಬೆಳದಿಂಗಳೂ ಅದರೊಂದಿಗೆ ಕೂಡಿಕೊಂಡಿದ್ದರೆ, ಅಂಥ ರಾತ್ರಿಗಳು ಆನಂದಮಯವಲ್ಲವೇ! ಶೀತಲವಾದ ಈ ಮಂದ ಮಾರುತವೇ ನನಗೆ ಈ ಕ್ಷಣದಲ್ಲಿ ಚಳಿಗಾಳಿಯಾಗಿ, ನನ್ನನ್ನು ಸುತ್ತಿ ಸುತ್ತಿ ಬೀಸುತ್ತಾ, ನನ್ನನ್ನು ಚಟ್ಟೆಯನ್ನಾಗಿ ಮಾಡಿ ತಿಂದು ಹಾಕುತ್ತಿವೆ. ಇದರಿಂದ, ಒಂದು ರಾತ್ರಿಯೂ ನನಗೆ ನಿದ್ರೆ ಬರುತ್ತಿಲ್ಲವಲ್ಲ! ಪರಿಮಳಿಸುವ ಮಂದಮಾರುತದ ನಡುವೆಯಲ್ಲಿ ಸುಖವಾಗಿ ನಿದ್ರಿಸುವ ಸ್ತ್ರೀಯರು ನನ್ನನ್ನು ಕುರಿತು ಮನಸ್ಸಿಗೆ ಬಂದಂತೆ ಮಾತನಾಡಿಕೊಳ್ಳುತ್ತಿದ್ದಾರೆ. ನನ್ನ ಅವಸ್ಥೆಯನ್ನು ಕಂಡು, ಅವರು ತುಂಬ ವಿವೇಕಿಗಳಂತೆ, ನನ್ನನ್ನು ಹಾಸ್ಯಮಾಡುತ್ತಾರೆ. ಅವರ ಅವಿವೇಕ ಅವರಿಗೆ ತಿಳಿಯುವುದೇ? ಅವರು ತಮ್ಮ ಕೈತುಂಬ ಬಳೆಗಳನ್ನು ತೊಟ್ಟಿರುವವರು. ಪ್ರಾಣಕಾಂತರ ಸುಖ ಸಂಶ್ಲೇಷಗಳಿಂದ ತುಂಬ ಆನಂದಿಸುತ್ತಿರುವವರು ಅವರು. ನನ್ನ ಕೈಬಳೆಗಳು ಕೈಗಳಲ್ಲಿ ನಿಲ್ಲುವುದೇ ಇಲ್ಲ! ಅವು ಕಳಚಿ ಬೀಳುತ್ತವೆಯಲ್ಲ! ನನಗೆ ನನ್ನ ಪ್ರಿಯತಮನ ಬಗೆಗೆ ವೇದನೆ. ಅವನ ಅಗಲಿಕೆಯನ್ನು ನಾನು ಸಹಿಸಲಾರೆ. ಇತರ ಹೆಂಗಸರು ನನ್ನನ್ನು ಕುರಿತು ಏನು ಬೇಕಾದರೂ ಆಡಿಕೊಳ್ಳಲಿ. ನನ್ನ ಪ್ರಿಯತಮನು ಈಗ ತಿರುಕ್ಕುರುಂಗುಡಿಯಲ್ಲಿ ನೆಲಸಿದ್ದಾನೆ. ಪರಮ ಸುಂದರಿಯಾದ ಶ್ರೀದೇವಿಯು ನನ್ನ ಪ್ರಿಯನ ಎದೆಯಲ್ಲಿ ನೆಲಸಿದ್ದಾಳೆ. ದಯಾಮಯಿಯಾದ ಅವಳ ನೆರವಿನಿಂದ ನಾನು ನನ್ನ ಪ್ರಿಯನನ್ನು ಸೇರುವೆನೆಂಬ ನಂಬಿಕೆ ನನಗಿದೆ. ಆದ್ದರಿಂದ,

Gorani Srinivasan

ಗೆಳತಿಯರೇ, ನನ್ನನ್ನು ತಿರುಕ್ಕುರುಂಗುಡಿಗೆ ಕರೆದೊಯ್ದು ನನ್ನ ಪ್ರಯಾಸವನ್ನು ತನೆ ನನ್ನನ್ನು ರಕ್ಷಿಸಿ.

3 காலையும் மாலையொற்றுண்டு
கங்குல் நாழிகையூழியின் நீண்டுலாவும்,
போல்வதோர் தன்மை புகுந்து நிற்கும்
பொங்கழலேயொக்கும் வாடை சொல்லில்,
மாலவன் மாமணி வண்ணன் மாயன்
மற்றுள அவை வந்திடாமுன்,
கோலமயில் பயிலும் புறவில்
குறுங்குடிக்கே யென்னையுய்த்திடுமின்.

ಕಾಲೈಯುಮ್ ಮಾಲೈಯೊಱ್ಱುಣ್ಡು
ಕಙ್ಗುಲ್ ನಾೞಿಗೈಯೂೞಿಯಿನ್ ನೀಣ್ಡುಲಾವುಮ್,
ಪೋಲ್ವದೋರ್ ತನ್ಮೈ ಪುಗುನ್ದು ನಿಱ್ಕುಮ್
ಪೊಙ್ಗೞಲೇಯೊಕ್ಕುಮ್ ವಾಡೈ ಶೊಲ್ಲಿಲ್,
ಮಾಲವನ್ ಮಾಮಣಿ ವಣ್ಣನ್ ಮಾಯನ್
ಮಱ್ಱುಳ ಅವೈ ವನ್ದಿಡಾಮುನ್,
ಕೋಲ ಮಯಿಲ್ ಪಯಿಲುಮ್ ಪುಱವಿಲ್
ಕುಱುಙ್ಗುಡಿಕ್ಕೇ ಯೆನ್ನೈಯುಯ್ತ್ತಿಡುಮಿನ್.

ಕಾಲೈಯುಮ್ காலையும் = (ಬೆಳಗ್ಗೆ) ಬೆಳಗು, ಮಾಲೈ மாலை = ಸಂಜೆಯೂ ಸಹ ಒಱ್ಱು ಉಣ್ಡು ஒற்று உண்டு = ಒಟ್ಟುಗೂಡಿ ಸಂಕಟಪಡಿಸುತ್ತಿವೆ, ಕಙ್ಗುಲ್ ನಾೞಿಗೈ கங்குல் நாழிகை = ರಾತ್ರಿಯ ಕಾಲವು, ಊೞಿಯಿನ್ ஊழியின் = ಕಲ್ಪಕಾಲಕ್ಕಿಂತಲೂ, ನೀಣ್ಡು நீண்டு = ಉದ್ದನಾಗಿ, ಉಲಾವುಮ್ உலாவும் = ಸಂಚರಿಸುವ (ಅಲೆದಾಡುವ), ಪೋಲ್ವದು போல்வது = ಹೋಲುವ, ಓರ್ ஓர் = ಅಪಾರವಾದೊಂದು ತನ್ಮೈ தன்மை = ಸ್ವಭಾವವನ್ನು (ಗುಣವನ್ನು), ಪುಗುನ್ದು புகுந்து = ಪಡೆದು ನಿಱ್ಕುಮ್ நிற்கும் = ಇದೆ, ಪೊಙ್ಗು பொங்கு = ಉರಿಯುವ, (ಉಕ್ಕಿ ಏಳುವ), ಅೞಲೇಯೊಕ್ಕುಮ್ அழலேயொக்கும் = ಬೆಂಕಿಯನ್ನು ಹೋಲುತ್ತದೆ, ವಾಡೈ வாடை = ಮಂದಮಾರುತವು, ಶೊಲ್ಲಿಲ್ சொல்லில் = ಹೇಳುವುದಾದರೆ, ಮಾಲ್ ಅವನ್ மால் அவன் = ಅವನು ಅತ್ಯಂತ ಉನ್ನತನು, ಮಾಮಣಿ ವಣ್ಣನ್ மாமணி வண்ணன் ಶ್ರೇಷ್ಠವಾದ ನೀಲಮಣಿಯ ಬಣ್ಣವುಳ್ಳವನು, ಮಾಯನ್ மாயன் = ಅದ್ಭುತನು, ಮಱ್ಱುಮ್ மற்றும் = ಇತರ (ಮತ್ತೆಯೂ), ಉಳ உள = ಇರುವ, ಅವೈ அவை = ಅವುಗಳು (ಗುಣಲಕ್ಷಣಗಳು), ವನ್ದಿಡಾಮುನ್ வந்திடாமுன் = ಬಂದುಬಿಡುವುದಕ್ಕೆ ಮುಂಚೆಯೇ, ಕೋಲಮ್ கோலம் = ಸುಂದರವಾದ, ಮಯಿಲ್ மயில் = ನವಿಲುಗಳು, ಪಯಿಲುಮ್ பயிலும் = ವಾಸಿ

(ತುಂಬಾಲ),
ಕುಯಿಲ್ ಪುರವಿಲ್ புறவில் = ತೋಟಗಳನ್ನುಳ್ಳ, ಕುಯಿಲ್ಗಳಿರುವ குறுங்குடிக்கே = ತಿರುಕ್ಕುರುಂಗುಡಿ ಕ್ಷೇತ್ರಕ್ಕೆ, ಎನ್ನೈ = ನನ್ನನ್ನು, ಉಯ್ತು ಇಡುಮಿನ್ உய்த்திடுமின் = ಕರೆದೊಯ್ದು ಬಿಡಿ.

ಉದಯವು ಸಂಜೆಯೊಡನೆ ಕೂಡಿಕೊಂಡು ಸಂಕಟಗೊಳಿಸುತ್ತದೆ. ರಾತ್ರಿಯ ಕಾಲವು ಒಂದು ಕಲ್ಪಕ್ಕಿಂತಲೂ ಉದ್ದವಾಗಿ, ಅಲೆದಾಡುವುದನ್ನು ಬಿಡದೆ ಹೋಗುವ ಅಪರಾಧಿಯಾದೊಂದು ಸ್ವಭಾವವನ್ನು ಪಡೆದಿದೆ. ಉಕ್ಕಿ ಬರುವ ಬೆಂಕಿಯನ್ನೇ ಮಂದಮಾರುತವು ತೋರುತ್ತದೆ ಎನ್ನಬಹುದು. ಅವನು ನೀಲಮಣಿಯ ಬಣ್ಣದವನು, ಅದ್ಭುತ ಅತ್ಯಧಿಕನು, ಶ್ರೇಷ್ಠವಾದ ಇಂದ್ರನೀಲಮಣಿಯ ಬಣ್ಣದವನು, ಒಂದು ಬಿಡುವುದಕ್ಕೆ ಮುಂಚೆ. ಇನ್ನೂ ಇರುವ ಗುಣಾಲಕ್ಷಣಗಳು ಒಂದು ಬಿಡುವುದಕ್ಕೆ ಮುಂಚೆ, ಸುಂದರವಾದ ನವಿಲುಗಳು ತುಂಬಿಕೊಂಡಿರುವ ತೋಟಗಳನ್ನುಳ್ಳ ತಿರುಕ್ಕುರುಂಗುಡಿ ಕ್ಷೇತ್ರಕ್ಕೆ ನನ್ನನ್ನು ಕರೆದೊಯ್ದು ಸೇರಿಸಿಬಿಡಿ. (3)

ಯುವತಿಯು ಹೇಳುತ್ತಾಳೆ: ಗೆಳತಿಯರೇ, ಮುಂಜಾನೆ ಬಂದಾಗ ನನಗೆ ಒಂದು ಬಗೆಯ ಶಾಂತಿಯುಂಟಾಗುವುದೆಂದೂ, ಹಗಲನ್ನು ಹೇಗಾದರೂ ಕಳೆದುಬಿಡಬಹುದೆಂದೂ ಬಗೆದಿದ್ದೆ. ಚಟುವಟಿಕೆಯನ್ನು ತರುವ ಮುಂಜಾನೆ ನನ್ನ ಮನೋವೇದನೆಯನ್ನು ಸ್ವಲ್ಪವಾದರೂ ಮರೆಸಿಬಿಡುವುದೆಂದುಕೊಂಡಿದ್ದೆ. ಸಂಜೆಯಾಗುವುದಲ್ಲ, ಅದೇಕೆ ಬರುವುದೋ, ಎಂದು ಯೋಚಿಸುತ್ತಿದ್ದೆ. ವಿಶ್ರಾಂತಿಯನ್ನು ನೀಡುವ ಸಂಜೆಯಲ್ಲಿ ಅನಂತರ ಬರುವ ರಾತ್ರಿಯಲ್ಲಿ ನನಗೆ ವಿಶ್ರಾಂತಿಯಾಗಲಿ ನಿದ್ದೆಯಾಗಲಿ ~~[illegible]~~ ಉಂಟಾಗದು ಎಂದುಕೊಂಡಿದೆ. ಈಗ ನೋಡಿ, ನನಗೆ ಬೆಳಗಿನಲ್ಲೂ ಬೈಗಿನಲ್ಲೂ ಯಾವ ವ್ಯತ್ಯಾಸವೂ ಕಂಡುಬರುವುದಿಲ್ಲ. ಎರಡೂ ಒಂದೇ ಬಗೆಯಾಗಿ ನನ್ನನ್ನು ಸಂಕಟಕ್ಕೆ ಈಡುಮಾಡುತ್ತವೆ. ಇತರರಂತೆ ಹಗಲು ಚಟುವಟಿಕೆಯಿಂದ ಕಾಲ ಕಳೆಯುತ್ತಾ ಮನಸ್ಸಿನ ವಿಷಯಗಳನ್ನು ಮರೆಯುವುದೆಂದರೆ ನನಗೆ ಸಾಧ್ಯವಿಲ್ಲ. ಸಂಜೆ ಮತ್ತು ರಾತ್ರಿಗಳಲ್ಲಿರುವಂತೆಯೇ ಹಗಲಲ್ಲೂ ಮನೋವೇದನೆ, ಸಂಕಟ, ಬೇಸರ, ನಿಶ್ಶಕ್ತಿಗಳು ತುಂಬಿಹೋಗಿವೆ. ರಾತ್ರಿಯಂತೆ ಹಗಲೂ ಸಹ ನನ್ನನ್ನು ಹಿಂಸಿಸುತ್ತಿದೆಯಲ್ಲ!

ರಾತ್ರಿಯ ಒಂದೊಂದು ಕ್ಷಣವೂ ಒಂದೊಂದು ಯುಗದಂತಾಗುತ್ತದೆ. ರಾತ್ರಿಯ ಒಂದೊಂದು ಕ್ಷಣವೂ ಹೇಗೆ ಎಂದು ಯೋಚಿಸಿ ಬಲುದೀರ್ಘವಾದ ಕಾಲವನ್ನು ಕಳೆಯುವುದಾದರೂ ಹೇಗೆ ಎಂದು ನೋಯುತ್ತೇನೆ.

ಹಾಸಿಗೆಯಲ್ಲಿ ಮಲಗಿದ್ದರೂ ಸಹ ಕಣ್ಣಿಗೆ ನಿದ್ದೆ ಹತ್ತುವುದಿಲ್ಲ. ಹಾಸಿಗೆಯಲ್ಲಿ ಹೊರಳಾಡಿ ಹೊರಳಾಡಿ, ಯೋಚಿಸುತ್ತಾ, ಸಂಕಟ ಪಡುತ್ತಾ ಕಾಲ ಕಳೆಯಬೇಕಾಗಿದೆ. ಹೀಗೆ ನಿದ್ದೆಗೆಟ್ಟು ಅಲೆದಾಡುವ ಪಾಪಿಷ್ಠ ಸ್ವಭಾವವೇ ರಾತ್ರಿಯದಾಗಿರಬಹುದೇ ಎನಿಸುತ್ತದೆ.

ಮಂದಮಾರುತವು ಹಿತವಾಗಿ ಬೀಸುತ್ತಾ ನಿದ್ದೆಯನ್ನು ತರುವುದರ ಬದಲಾಗಿ, ಜ್ವಲಿಸಿ ಉರಿಯುವ ಬೆಂಕಿಯೇ ಆಗಿದೆ.

ನನ್ನ ಪ್ರಿಯತಮನು ಸದ್ಗುಣಗಳ ಗಣಿಯೇ. ಅವನು ಸರ್ವಶ್ರೇಷ್ಠನು. ಸರ್ವಾಧಿಕನು. ಅತ್ಯುತ್ತಮವಾದ ಇಂದ್ರನೀಲ ಮಣಿಯ ಬಣ್ಣದ ಸುಂದರಾಕರ್ಷಕ ದೇಹಕಾಂತಿ ಅವನದು. ಆದರೆ, ಅವನು ಮಾಯನ್ - ಅದ್ಭುತನು. ನನ್ನನ್ನು ಮರುಳುಗೊಳಿಸಿ, ವಂಚಿಸಿ ಹೊರಟು ಹೋದವನು. ಅವನ ಗುಣಲಕ್ಷಣಗಳು ಇನ್ನೂ ಬಗೆಬಗೆಯಾಗಿವೆ. ಅವುಗಳನ್ನು ನೆನಪಿಸುವ ಹೆಸರುಗಳು ಅವನಿಗಿವೆ. ಆ ಹೆಸರುಗಳನ್ನು ಒಂದೊಂದಾಗಿ ಸ್ಮರಿಸಿಕೊಳ್ಳುತ್ತ ಹೋದೆನೆಂದರೆ, ನನಗೆ ಅವನಲ್ಲಿರುವ ಗಾಢವಾದ ಪ್ರೇಮವು ಬತ್ತಿಹೋಗಬಹುದು. ಅದಕ್ಕೆ ಬದಲಾಗಿ ದ್ವೇಷವೇ ತುಂಬಿಬಿಡಬಹುದು. ಗೆಳತಿಯರೇ, ನನ್ನ ಮನಸ್ಸು ಆಂತರ್ಯದಲ್ಲಿ ವಿಚಿತ್ರವಾ... ಪ್ರಾಣ ಬಿಡುವುದಕ್ಕೆ ಮುಂಚೆಯೇ ನನ್ನನ್ನು ಸುಂದರವಾದ ನವಿಲುಗಳಿಂದ ತುಂಬಿರುವ ಶೋಲೆಗಳುಳ್ಳ ತಿರುಕ್ಕುರುಂಗುಡಿ ಕ್ಷೇತ್ರಕ್ಕೆ ಕರೆದೊಯ್ಯಿರಿ. ನನ್ನ ಪ್ರಿಯತಮನು ಅಲ್ಲಿ ನೆಲಸಿದ್ದಾನೆ. ನನ್ನನ್ನು ಅವನ ಬಳಿಗೆ ಸೇರಿಸಿರಿ. ಅವನ ಸಹವಾಸದಿಂದ ನನ್ನೆಲ್ಲ ಸಂಕಟಗಳು ಮಾಯವಾಗುವುವು.

4. கருமணி பூண்டு வெண்ணாகணைந்து
காரிமிலேற்றணர் தாழ்ந்துலாவும்,
ஒருமணியோசையென்னுள்ளந்தள்ள
ஓரிரவுமுறங்காதிருப்பேன்,
பெருமணிவானவருச்சிவைத்த
பேரருளாளன் பெருமைபேசி,
குருமணிநீர் கொழிக்கும் புறவில்
குறுங்குடிக்கேயென்னையுய்த்திடுமின்.

ಕರುಮಣಿ ಪೂಣ್ಡು ವೆಣ್ಣಾಗಣೈನ್ದು
ಕಾರಿಮಿಲೇಱ್ಱಣರ್ ತಾೞ್ನ್ದುಲಾವುಮ್,
ಒರುಮಣಿಯೋಶೈಯೆನ್ನುಳ್ಳನ್ದಳ್ಳ
ಓರಿರವುಮುಱಙ್ಗಾದಿರುಪ್ಪೇನ್,
ಪೆರುಮಣಿವಾನವರುಚ್ಚಿವೈತ್ತ
ಪೇರರುಳಾಳನ್ ಪೆರುಮೈಪೇಶಿ,
ಕುರುಮಣಿನೀರ್ ಕೊೞಿಕ್ಕುಮ್ ಪುಱವಿಲ್
ಕುಱುಙ್ಗುಡಿಕ್ಕೇಯೆನ್ನೈಯುಯ್ತ್ತಿಡುಮಿನ್

ಕರುಮಣಿ கருமணி = ಕರಿಯ ಮಣಿಗಳನ್ನು, ಪೂಣ್ಡು பூண்டு = ಧರಿಸಿ, ವೆಳ್ ನಾಗು வெள்நாகு = ಬಿಳಿಯ ಶಂಖಗಳನ್ನು, ಅಣೈನ್ದು அணைந்து = ಧರಿಸಿ, ಕಾರ್ கார் = ಕರಿಯ, ಇಮಿಲ್ இமில் = ಡುಬ್ಬಗಳುಳ್ಳ, ವೃಷ

Garani Srinivasan

ಏಱು = ಎತ್ತು(ಗೂಳಿ)ಗಳ ಅಣರ್ அணர் = ಕತ್ತುಗಳಲ್ಲಿ, ತಾೞ್ತ್ತ தாழ்த்த = ಇಳಿಯಬಿದ್ದ, ಉಲಾವುಮ್ உலாவும் = ಅಲ್ಲಾಡುವ, ಒರು ಮಣಿ ஒருமணி = ಒಂದು ಗಂಟೆಯ, ಓಶೈ ஓசை = ಶಬ್ದವು, ಎನ್ ನಾಣ್ = ನನ್ನ, ಉಳ್ಳಮ್ உள்ளம் = ಮನಸ್ಸನ್ನು, ಕಳ್ಳ குள்ள = ಸಂಕಟಗೊಳಿಸಲು, ಓರ್ ಇರವುಮ್ ஓர் இரவும் = ಒಂದು ರಾತ್ರಿಯೂ ಸಹ, ಉಱಂಗಾದು உறங்காது = ನಿದ್ರಿಸದೆ, ಇರುಪ್ಪೇನ್ இருப்பேன் = ಇರುತ್ತೇನೆ, ಪೆರುಮಣಿ பெருமணி = ದಿವ್ಯವಾದ ಮಣಿಯನ್ನು, ವಾನವರ್ வானவர் = ದೇವತೆಗಳ (ಅಮರರ), ಉಚ್ಚಿ உச்சி = ನೆತ್ತಿಯ ಮೇಲೆ, ವೈತ್ತ வைத்த = ನೆಲೆಗೊಳಿಸಿದ, ಪೇರ್ ಅರುಳಾಳನ್ பேர்அருளாளன் = ಮಹಾಕೃಪಾಳುವಿನ, ಪೆರುಮೈ பெருமை = ಹಿರಿಮೆಯನ್ನು, ಪೇಶಿ பேசி = ಮಾತನಾಡಿಕೊಳ್ಳುವ (ಹೊಗಳುವಂಥ), ಕುರುಮಣಿ குருமணி = ಶ್ರೇಷ್ಠವಾದ ರತ್ನಗಳನ್ನು, ನೀರ್ நீர் = ಪ್ರವಾಹವು, ಕೊೞಿಕ್ಕುಮ್ கொழிக்கும் = ದಡಕ್ಕೆ ತಳ್ಳುವ, ಪುಱವಿಲ್ புறவில் = ಅಡವಿಯ ಮೂಲಕ (ಕಾಡಿನ ಮೂಲಕ, ಗದ್ದೆಗಳ ಮೂಲಕ), ಕುಱುಂಗುಡಿಕ್ಕೇ குறுங்குடிக்கே = ತಿರುಕ್ಕುರುಂಗುಡಿ ಕ್ಷೇತ್ರಕ್ಕೆ, ಎನ್ನೈ என்னை = ನನ್ನನ್ನು, ಉಯ್ತ್ತು ಇಡುಮಿನ್ உய்த்து இடுமின் = ಕರೆದೊಯ್ದು ಸೇರಿಸಿ.

ಕರಿಯ ಮಣಿಗಳನ್ನು ಧರಿಸಿ, ಬಿಳಿಯ ಶಂಖಗಳನ್ನು ಧರಿಸಿ, (ಹಾಕಿಸಿ), ಕರಿಯ ಬಿಳುಪುಳ್ಳ ಗೂಳಿಗಳ ಕತ್ತುಗಳಲ್ಲಿ ಇಳಿಯಬಿದ್ದ ಅಲ್ಲಾಡುವ ಒಂದು ಗಂಟೆಯ ಶಬ್ದವು ನನ್ನ ಮನಸ್ಸನ್ನು ಸಂಕಟಗೊಳಿಸಲು, ಒಂದು ರಾತ್ರಿಯೂ ಸಹ (ನಾನು) ನಿದ್ರಿಸದೆ ಇರುತ್ತೇನೆ. ದೇವತೆಗಳ ನೆತ್ತಿಯ ಮೇಲೆ ದಿವ್ಯವಾದ ಮಣಿಯನ್ನು ನೆಲೆಗೊಳಿಸಿದ ಮಹಾಕೃಪಾಳುವಿನ ಹಿರಿಮೆಯನ್ನು ಹೊಗಳುವಂಥ ಶ್ರೇಷ್ಠವಾದ ರತ್ನಗಳನ್ನು ಪ್ರವಾಹವು ದಡಕ್ಕೆ ತಳ್ಳುವಂಥ ಕಾಡಿನ (ಗದ್ದೆಗಳ) ಮೂಲಕ ತಿರುಕ್ಕುರುಂಗುಡಿ ಕ್ಷೇತ್ರಕ್ಕೆ ನನ್ನನ್ನು ಕರೆದೊಯ್ದು ಸೇರಿಸಿ. (4)

ಹಳ್ಳಿಗಳಲ್ಲಿ ~~ದನಗಳ ಕತ್ತುಗಳಿಗೆ~~ ಕರಿಯ ಮಣಿ, ನೀಲ ಮಣಿಗಳನ್ನು ಬಿಳಿಯ ಶಂಖಗಳನ್ನೂ, ಒಂದೊಂದು ಗಂಟೆಯನ್ನೂ ಪೋಣಿಸಿ, ದನಗಳ ಕತ್ತುಗಳಿಗೆ ಕಟ್ಟಿರುತ್ತಾರೆ. ದನಗಳಿಗೆ, ಅವುಗಳಲ್ಲಿ ಎತ್ತುಗಳಿಗೆ ಇದೊಂದು ಅಲಂಕಾರ. ಸಂಜೆಯಲ್ಲಿ ದನಕರುಗಳು ಮನೆಗಳಿಗೆ ಹಿಂತಿರುಗುವಾಗ, ಅವುಗಳ ಕತ್ತಿನ ಗಂಟೆಗಳು ಅಲುಗಾಡುತ್ತಾ ಸದ್ದು ಮಾಡುತ್ತಾ ಇರುತ್ತವೆ. ಈ ಸಹಜವಾದ ವಿಷಯವನ್ನು ಆಳ್ವಾರರು ಸಂಜೆಯ ಮತ್ತು ರಾತ್ರಿಯ ಬರವಿಗೆ ಸೂಚನೆಯೆಂಬುದನ್ನು ಬಹು ಸುಂದರವಾಗಿ ವರ್ಣಿಸಿದ್ದಾರೆ.

ಯುವತಿಯು ಹೇಳುತ್ತಾಳೆ: ಗೆಳತಿಯರೇ, ಎತ್ತುಗಳ ಕತ್ತಿನಲ್ಲಿ ಕರಿಯ ಮಣಿ, ಬಿಳಿಯ ಶಂಖಗಳ ನಡುವೆ ಪೋಣಿಸಿರುವ ಒಂದೊಂದು ಗಂಟೆಯೂ ಅಲುಗುವಾಗ ಮಾಡುವ ಸದ್ದು ನನ್ನ ಮನಸ್ಸನ್ನು ಸಂಕಟ

ಗೊಳ್ಳುತ್ತದೆ. ಇದು ರಾತ್ರಿಯ ಪ್ರಾರಂಭವನ್ನು ತರುವುದರಿಂದ, ನನಗೆ ರಾತ್ರಿಗಳಲ್ಲಿ ನಿದ್ದೆ ಬರುತ್ತಿರುವುದೇ ಇಲ್ಲ. ನನ್ನ ಪ್ರಿಯತಮನು ಪರಮಪದ [illegible] ಳು. ಅವನು ಮೇಲಿನ ಲೋಕಗಳಲ್ಲೆಲ್ಲಾ ಸೂರ್ಯನು ದಿವ್ಯ [illegible] ವಂತೆ ತರುಣಿಬಿದ್ದಾನೆ. ನಮಗಾದರೆ ಈ ಹಗಲು, ರಾತ್ರಿಗಳ ಬಾಧೆಯಿದೆ. ಅವನ ಹಿರಿಮೆಯನ್ನು ನಾನು ಎಡೆಬಿಡದೆ ಹೊಗಳುತ್ತಲೇ ಇದ್ದೇನೆ. ಅವನೀಗ ತಿರುಕ್ಕುರುಂಗುಡಿಯಲ್ಲಿ ನೆಲಸಿದ್ದಾನೆ. ಶ್ರೇಷ್ಠವಾದ ರತ್ನಗಳನ್ನು ದಡಕ್ಕೆ ತಳ್ಳುವ ಪ್ರವಾಹದ ಮೂಲಕವೂ, ಶಂಖ, ಶುಕ್ತಿ, ಫಲವತ್ತಾದ ಬಯಲುಗಳ ಮೂಲಕವೂ ನನ್ನನ್ನು ಕರೆದೊಯ್ದು, ತಿರುಕ್ಕುರುಂಗುಡಿಗೆ ಬಿಡಿ. ನನ್ನ ಪ್ರಿಯತಮನೊಡನೆ ಸೇರಿಕೊಂಡು ನಾನು ಸಮಾಧಾನ ಪಡುತ್ತೇನೆ

5. திண்டிமிலேற்றின் மணியும் ஆயன்
தீங்குழலோசையும் தென்றலோடு,
கொண்டதோர் மாலையுமந்தியீன்ற
கோலவிளம் பிறையோடு கூடி,
பண்டையவல்லவிவை நமக்குப்
பாவியேனாவியை வாட்டஞ்செய்யும்,
கொண்டல் மணிநிற வண்ணர் மன்னு
குறுங்குடிக்கே யென்னை யுய்த்திடுமின்.

ತಿಣ್ಣ್ ತಿಮಿಲೇಟ್ರಿನ್ ಮಣಿಯುಮ್ ಆಯನ್
ತೀಙ್ಗುಳಲೋಶೈಯುಮ್ ತೆನ್‌ಱಲೋಡು,
ಕೊಣ್ಡದೋರ್ ಮಾಲೈಯುಮನ್ದಿಯೀನ್ಱ
ಕೋಲವಿಳಮ್ ಪಿಱೈಯೋಡು ಕೂಡಿ,
ಪಣ್ಡೈಯವಲ್ಲವಿವೈ ನಮಕ್ಕು
ಪ್ಪಾವಿಯೇನಾವಿಯೈ ವಾಟ್ಟಂ ಶೆಯ್ಯುಮ್,
ಕೊಣ್ಡಲ್ ಮಣಿನಿಱ ವಣ್ಣರ್ ಮನ್ನು
ಕುಱುಙ್ಗುಡಿಕ್ಕೇ ಯೆನ್ನೈ ಯುಯ್ತ್ತಿಡುಮಿನ್.

ತಿಣ್ திண் = ಬಲವಾದ, ತಿಮಿಲ್ திமில் = ಹೆಗಲುಳ್ಳ, ಏಟ್ರಿನ್ ஏற்றின் = ಗೂಳಿಯ ಎತ್ತಿನ, ಮಣಿಯುಮ್ மணியும் = ಗಂಟೆಯೂ, ಆಯನ್ ஆயன் = ಗೋವಳನ, ತೀಮ್ தீம் = ಮಧುರವಾದ, ಕುಳಲ್ குழல் = ಕೊಳಲಿನ, ಓಶೈಯುಮ್ ஓசையும் = ಶಬ್ದವೂ, ತೆನ್ಱಲೋಡು தென்றலோடு = ತಂಗಾಳಿಯೊಡನೆ, ಕೊಣ್ಡದು கொண்டது = ಕೂಡಿಕೊಂಡಿರುವ, ಓರ್ ಮಾಲೈಯುಮ್ ஓர் மாலையும் = ಒಂದೊಂದು ಸಂಜೆಯೂ, ಅನ್ದಿ அந்தி = ರಾತ್ರಿಯು, ಈನ್ಱ ஈன்ற = ಉಂಟುಮಾಡುವ, ಕೋಲಮ್ கோலம் = ಸುಂದರವಾದ, ಇಳಮ್ ಪಿಱೈಯೋಡು இளம் பிறையோடு ಬಾಲಚಂದ್ರನೊಡನೆ, ಕೂಡಿ கூடி = ಕೂಡಿಕೊಂಡು, ಪಣ್ಡೈಯ பண்டைய = ಹಿಂದಿನ ಕಾಲದಲ್ಲಿದ್ದಂತೆ, ಅಲ್ಲ அல்ல = ಅಲ್ಲ, ಇವೈ இவை = ಇವುಗಳೆಲ್ಲ, ನಮಕ್ಕು நமக்கு = ನಮಗೆ,

Garani Srinivasan

ಪಾವಿಯೇನ್ பாவியேன் = ಪಾಪಿಯಾದವಳು ನಾನು, ಆವಿಯೈ ஆவியை = ಪ್ರಾಣಗಳನ್ನು, ವಾಟ್ಟಮ್ ಶೆಯ್ಯುಮ್ வாட்டம் செய்யும் = ಬಾಡಿಸಿಬಿಡುವುವು (ಸುಟ್ಟುಹಾಕುವುವು), ಕೊಣ್ಡಲ್ கொண்டல் = ಕಾರ್ಮುಗಿಲ, ~~...~~, ಮಣಿನಿಱಮ್ மணிநிறம் = ಇಂದ್ರನೀಲಮಣಿಯ, ಬಣ್ಣದ, ವಣ್ಣರ್ வண்ணர் = ಬಣ್ಣದವರು, ಮನ್ನು மன்னு = ನೆಲಸಿರುವ, ಕುಱುಂಗುಡಿಕ್ಕೇ குறுங்குடிக்கே = ಕಿರುಕ್ಕುರುಂಗುಡಿಗೆ, ಎನ್ನೈ என்னை = ನನ್ನನ್ನು, ಉಯ್ತ್ತಿಡುಮಿನ್ உய்த்திடுமின் = ಕರೆದೊಯ್ದು ಬಿಡಿರಿ.

ಬಲವಾದ ಹೆಗಲುಳ್ಳ ಎತ್ತಿನ ಗಂಟೆಯೂ ಗೋವಳರ ಮಧುರವಾದ ಕೊಳಲಿನ ನಾದವೂ, ಕೆಂಪಾಗಾಳಿಯೂ ಕೂಡಿಕೊಂಡಿರುವ ಒಂದೊಂದು ಸಂಜೆಯೂ ರಾತ್ರಿಯು ಕಾಣುವ ಸುಂದರವಾದ ಬಾಲಚಂದ್ರನೊಡನೆ ಸೇರಿ, ಮುಂಚಿನ ಕಾಲದಲ್ಲಿದ್ದಂತೆ ಅಲ್ಲ. ಕಡುಪಾಪಿ ನಾನು. ಇವುಗಳೆಲ್ಲ ನನ್ನ ಪ್ರಾಣಗಳನ್ನು ಸುಟ್ಟು ಬಾಡಿಸುವುವು. ಕಾರ್ಮುಗಿಲಂತೆಯೂ ಇಂದ್ರನೀಲಮಣಿಯಂತೆಯೂ ಬಣ್ಣದವನು (ನನ್ನ ಪ್ರಿಯತಮನು) ನೆಲಸಿರುವ ಕಿರುಕ್ಕುರುಂಗುಡಿ (5)
ಕ್ಷೇತ್ರಕ್ಕೆ ನನ್ನನ್ನು ಕರೆದೊಯ್ದು ಬಿಡಿರಿ.

ಯುವತಿಯು ಹೇಳುತ್ತಾಳೆ: ಗೆಳತಿಯರೇ, ನನ್ನ ಪ್ರಿಯತಮನೊಡನೆ ನನಗೆ ಸಂಬಂಧವು ಲಭಿಸುವುದಕ್ಕೆ ಮುಂಚೆ, ನನಗೆ ಸಂಜೆಗಳು ಸಂತೋಷಕರವಾಗಿರುತ್ತಿದ್ದವು. ಸಂಜೆಯ ಸಮಯದಲ್ಲಿ ಮನೆಗಳಿಗೆ ಹಿಂತಿರುಗುವ ಎತ್ತುಗಳ (ದನಗಳ) ಕತ್ತಿನ ಗಂಟೆಗಳ ಸದ್ದೂ, ಅವುಗಳ ಹಿಂದೆ ಬರುವ ಗೋವಳರ ಕೊಳಲಿನ ನಾದವೂ, ಮಂದಮಾರುತದೊಡನೆ ಬೆರೆತು ಆನಂದವನ್ನು ಉಕ್ಕಿಸುತ್ತಿದ್ದುವು; ಈಗ ಆ ಸಂತೋಷವೇ ಇಲ್ಲ, ಅವುಗಳಿಂದ ನನಗೆ ಹಿತವಿಲ್ಲ. ಅವುಗಳ ಜೊತೆಯಲ್ಲಿ ಬಾಲಚಂದ್ರನೂ ಕೂಡಿಕೊಂಡರಂತೂ, ಅಂಥ ಒಂದೊಂದು ಸಂಜೆಯೂ ನನ್ನ ಪ್ರಾಣಗಳನ್ನೇ ಹಿಂಡಿಹಾಕುತ್ತವೆ. ಬಾಡಿಸಿ ಸುಡುತ್ತವೆ. ನಾನು ಕಡುಪಾಪಿ! ನನ್ನ ಪ್ರಿಯತಮನು ಕಾರ್ಮುಗಿಲಿನಂತೆ ಆಕರ್ಷಕವಾದ ದೇಹಕಾಂತಿಯುಳ್ಳವನು. ಇಂದ್ರನೀಲಮಣಿಯಂತೆ ದೇಹಕಾಂತಿಯುಳ್ಳವನು. ಗೆಳತಿಯರೇ, ಅವನು ನೆಲಸಿರುವ ಕಿರುಕ್ಕುರುಂಗುಡಿ ಕ್ಷೇತ್ರಕ್ಕೆ ನನ್ನನ್ನು ಕರೆದೊಯ್ದು ಬಿಡಿರಿ. ಅವನ ಸನ್ನಿಧಿಯಲ್ಲಿ ನನ್ನ ಎಲ್ಲ ಸಂಕಟಗಳೂ ಮಾಯವಾಗುವುವು.

6. எல்லியும் நன் பகலு மிருந்தே
யேசிலு மேசுக வேந்திழையார்,
நல்லரவர் திறம் நாமறியோம்
நாண்மடமச்சம் நமக்கிங்கில்லை,
வல்லன சொல்லி மகிழ்வரேலும்
மாமணி வண்ணரை நாமறவோம்,
கொல்லை வளரிள முல்லை புல்கு
குறுங்குடிக்கே யென்னை யுய்த்திடுமின்.

ಎಲ್ಲಿಯುಮ್ ನನ್ಪಗಲುಮ್ ಇರುನ್ದೇ
ಯೇಶಿಲುಮ್ ಏಶುಗ ಏನ್ದಿೞೈಯಾರ್,
ನಲ್ಲರವರ್ ನಿಱಮ್ ನಾಮ್ ಅಱಿಯೋಮ್
ನಾಣ್ ಮಡಮ್ ಅಚ್ಚಮ್ ನಮಕ್ಕಿಙ್ಗಿಲ್ಲೈ,
ವಲ್ಲನ ಶೊಲ್ಲಿ ಮಗಿೞ್ವರೇಲುಮ್
ಮಾಮಣಿ ವಣ್ಣರೈ ನಾಮ್ ಮಱವೋಮ್,
ಕೊಲ್ಲೈ ವಳರಿಳ ಮುಲ್ಲೈ ಪುಲ್ಗು
ಕುಱುಙ್ಗುಡಿಕ್ಕೇ ಎನ್ನೈ ಉಯ್ತ್ತಿಡುಮಿನ್.

ಎಲ್ಲಿಯುಮ್ அல்லியும் = ರಾತ್ರಿಯಲ್ಲೂ, ನನ್ಪಗಲುಮ್ நன்பகலும் = ಬೆಳ್ಳಿಯ ಹಗಲಲ್ಲಿಯೂ, ಇರುನ್ದು இருந்து = ಇದ್ದುಕೊಂಡೇ, ಏಶಿಲುಮ್ ಏಶುಗ ஏசிலும் ஏசுக = ನಿಂದನೆ ಮಾಡಿದರೂ ಮಾಡಲಿ, ಏನ್ದು ஏந்து = ಧರಿಸಿರುವ, ಇೞೈಯಾರ್ இழையீர் = ಆಭರಣಗಳುಳ್ಳವರು, ನಲ್ಲರ್ நல்லர் = ಒಳ್ಳೆಯವರು (ಭಾಗ್ಯವತಿಯರು), ಅವರ್ அவர் = ಅವರ, ನಿಱಮ್ நிறம் = ಸ್ವಭಾವವನ್ನು, ನಾಮ್ ಅಱಿಯೋಮ್ நாம் அறியோம் = ನಾವು ಅರಿಯೆವು, ನಾಣ್ நாண் = ಲಜ್ಜೆಯೂ, ಮಡಮ್ மடம் = ಮರ್ಯಾದೆಯೂ, ಅಚ್ಚಮ್ அச்சம் = ಭಯವೂ, ನಮಕ್ಕು நமக்கு = ನಮಗೆ, ಇಲ್ಲೈ இல்லை = ಇಲ್ಲ, ಇಙ್ಗು இங்கு = ಈ ವಿಷಯದಲ್ಲಿ (ಇಲ್ಲಿ), ಶೊಲ್ಲಿ சொல்லி = ಹೇಳಿಕೊಂಡು, ವಲ್ಲನ வல்லன = ತಮಗೆ ಶಕ್ಯವಾದ, ಮಗಿೞ್ವರೇಲುಮ್ மகிழ்வரேலும் = ಹರ್ಷಿಸುತ್ತಾರೆ ಹು, ಮಗಿೞ್ವರೇಲುಮ್ மகிழ்வரேலும் = ಶ್ರೇಯಸ್ಸು ಕೊಂಡರುತ್ತದೆ, ಮಾಮಣಿ ವಣ್ಣರೈ மாமணிவண்ணரை = ಶ್ರೇಷ್ಠವಾದ ನೀಲಮಣಿಯ ಬಣ್ಣದವರನ್ನು, ನಾಮ್ நாம் = ನಾವು, ಮಱವೋಮ್ மறவோம் = ಮರೆಯೆವು, ಕೊಲ್ಲೈ கொல்லை = ಬಯಲುಗಳಲ್ಲಿ, ವಳರ್ வளர் = ಬೆಳೆಯುವ, ಇಳ ಮುಲ್ಲೈ இளமுல்லை = ಎಳೆಯ ಮಲ್ಲಿಗೆಯ (ಬಳ್ಳಿಯ), ಪುಲ್ಗು புல்கு = ತಬ್ಬಿಕೊಂಡಿರುವ, ಕುಱುಙ್ಗುಡಿಕ್ಕೇ குறுங்குடிக்கே = ತಿರುಕ್ಕುರುಙ್ಗುಡಿಕ್ಷೇತ್ರಕ್ಕೆ, ಎನ್ನೈ என்னை = ನನ್ನನ್ನು, ಉಯ್ತ್ತಿಡುಮಿನ್ உய்த்திடுமின் = ಕರೆದೊಯ್ದು ಬಿಡಿ.

ಆಭರಣಗಳನ್ನು ಧರಿಸಿರುವವರು ರಾತ್ರಿಯಲ್ಲೂ ಬೆಳ್ಳಿಯ ಹಗಲಲ್ಲೂ ಇದ್ದುಕೊಂಡೇ ನಿಂದನೆ ಮಾಡಿದರೂ ಮಾಡಲಿ. ಅವರು ಭಾಗ್ಯವತಿಯರು. ಅವರ ಗುಣಸ್ವಭಾವಗಳನ್ನು ನಾವು ಅರಿಯೆವು. ನಮಗೆ ಇಲ್ಲಿ (ಈ ವಿಷಯದಲ್ಲಿ) ಲಜ್ಜೆಯೂ, ಮರ್ಯಾದೆಯೂ, ಭಯವೂ ಇಲ್ಲ. ಅವರು ತಮಗೆ ಶಕ್ಯವಾದ ಹೇಳಿಕೊಂಡು ಹರ್ಷಿಸುತ್ತಾರೇನೋ? ಶ್ರೇಷ್ಠವಾದ ನೀಲಮಣಿಯ ಬಣ್ಣದವರನ್ನು ನಾವು ಮರೆಯೆವು. ಬಯಲುಗಳಲ್ಲಿ ಬೆಳೆಯುವ ಎಳೆಯ ಮಲ್ಲಿಗೆ ಬಳ್ಳಿಗಳು ತಬ್ಬಿರುವ ತಿರುಕ್ಕುರುಙ್ಗುಡಿಕ್ಷೇತ್ರಕ್ಕೆ ನನ್ನನ್ನು

ಕರೆದೊಯ್ದು ಪೋಂಪಿ. ನೆಟ್ಟಿಕಯುಳೇ,

ಯುವತಿಯು ಹೇಳುತ್ತಾಳೆ: (ಉಂಟಾದ ಇತರ ಯುವತಿಯರು ಭಾಗ್ಯವತಿಯರು. ಅವರು ಆಭರಣಗಳನ್ನು ಧರಿಸಿ ತಮ್ಮನ್ನು ಅಲಂಕರಿಸಿಕೊಂಡಿದ್ದಾರೆ. ಅವರು ನನ್ನನ್ನು ಕುರಿತು ಹಗಲೂ ಇರುಳೂ ನಿಂದಾವಾಕ್ಯ ಆಡಿಕೊಂಡರೆ ಆಡಿಕೊಳ್ಳಲಿ. ತಮಗೆ ತಕ್ಕುದಾಗಿ ಅವರು ಆಡಿಕೊಳ್ಳುತ್ತಾ ಹರ್ಷಿಸುತ್ತಾರೇನೋ! ಅವರ ಗುಣಸ್ವಭಾವಗಳೇನೆಂದು ನಮಗೆ ತಿಳಿಯದು. ನಾನು ಮಹಾಮಣಿವಣ್ಣನನ್ನು ದೃಢವಾಗಿ ಪ್ರೇಮಿಸಿದ್ದೇನೆ. ನನಗೆ, ಇಲ್ಲಿ, ಈ ವಿಷಯದಲ್ಲಿ ನಾಚಿಕೆಯಾಗಲಿ, ಮಾನಮರ್ಯಾದೆಯಾಗಲಿ, ಭಯವಾಗಲಿ ಇಲ್ಲ. ಅವನನ್ನಗಲಿ, ನಾನು ವಿರಹ. ತಾಪದ ವೇದನೆಯನ್ನು ಅನುಭವಿಸುತ್ತಿದ್ದೇನೆ. ಇದರಿಂದ, ನನ್ನ ದೇಹಬಲವನ್ನೂ ಮೈಬಣ್ಣವನ್ನು ಕಳೆದುಕೊಂಡಿದ್ದೇನೆ. ನನ್ನ ಕೈಯಲ್ಲಿ ಬಳೆಗಳು ನಿಲ್ಲವು. ಅಷ್ಟು ಬಡವಾಗಿದ್ದೇನೆ ನನ್ನ ಸೌಭಾಗ್ಯವೆಲ್ಲ ನನ್ನ ಪ್ರಿಯತಮನನ್ನು ಸೇರುವುದರಲ್ಲಿದೆ. ಅವನನ್ನು ಮರೆತುಬಿಡೆಂದು ಯಾರೇ ಹೇಳಿದರೂ ಹೇಗೆ? ಆದ್ದರಿಂದ, ನಾನು ಮರೆಯಲಾರೆ. ಅವನನ್ನು ಮರೆಯುವುದಾದರೂ ಹೇಗೆ? ~~ಓ~~ ತೋಟ್ಟಿಸು ನೆಟ್ಟಿಕಯುಳೇ, ಎಲ್ಲೆಲ್ಲೂ ಮಲ್ಲಿಗೆ ಬಳ್ಳಿಗಳು ಬೆಳೆದು ~~...~~ ಕರೆದೊಯ್ದು, ~~...~~ ಅಲ್ಲಿನ ಲ ವ ತಿರುಕ್ಕುರುಂಗುಡಿ ಕ್ಷೇತ್ರಕ್ಕೆ ನನ್ನನ್ನು ಸೇರಿಸಿಬಿಡಿ. ಲು ನನ್ನ ಪ್ರಿಯತಮನೊಡನೆ ನನ್ನನ್ನು ಸೇರಿಸಿಬಿಡಿ.

"ನಾಣ್ ಮಡಮ್ ಅಚ್ಚಮ್ — நாண் மடம் அச்சம்" — ನಾಚಿಕೆ, ಮಾನಮರ್ಯಾದೆ, ಭಯ — ಈ ಮೂರೂ ಸ್ತ್ರೀಯ ಸಹಜ ಗುಣಗಳು. ಪ್ರಾಪಂಚಿಕ ರೀತಿಯಲ್ಲಿ, ಕುಲೀನ ಸ್ತ್ರೀಯರಾಗಲಿ, ಸಾಮಾನ್ಯರಾಗಲಿ ಈ ಮೂರು ಗುಣಗಳನ್ನು ಬಿಡದೆ, ತಮ್ಮ ತಮ್ಮ ಯೋಗ್ಯತೆಗೆ ತಕ್ಕಂತೆ ಪಾಲಿಸಿಕೊಂಡು ಬರುತ್ತಾರೆ. ಈ ಗುಣಗಳನ್ನು ಕಳೆದುಕೊಂಡವರೇ "ಮಾನಬಿಟ್ಟವರು" ಎನ್ನಿಸಿಕೊಳ್ಳುವವರು. ಭಗವಂತನನ್ನು ಪಡೆಯುವುದರಲ್ಲಿ ತೊಡಗಿರುವವರು ನಿಜವಾಗಿಯೂ ಈ ಮೂರನ್ನೂ ಬಿಟ್ಟವರೇ ಆಗಬೇಕು.

ಪ್ರಾಪಂಚಿಕನಾ ಭಕ್ತನಾ ಇರುವ ವ್ಯತ್ಯಾಸವನ್ನು ಬಹಳ ಸ್ಪಷ್ಟವಾಗಿ, ಆದರೆ ಸುಂದರ ಸಂಪ್ರದಾಯರೀತಿಯಲ್ಲಿ, ಇಲ್ಲಿ ವಿವರಿಸಲಾಗಿದೆ.

7. செங்கணெடிய கரிய மேனிக்
தேவரொருவரிங்கே புகுந்து, என்
அங்கமெலிய வளைகழல
ஆதுகொலோவென்று சொன்ன பின்னை,
ஐங்கணைவில்லிதன் ஆண்மை
யென்னோடாடுமதனை யறியமாட்டேன்,

Garani Srinivasan

கொங்கலர் தண் பணை சூழ் புறவில்
குறுங்குடிக்கே யென்னையுய்த்திடுமின்.

ಶೆಙ್ಗಣ್ಣೆಡಿಯ ಕರಿಯ ಮೇನಿ
ತ್ತೇವರೊರುವರಿಙ್ಗೇ ಪುಗುನ್ದು, ಎನ್
ಅಙ್ಗಮೆಲಿಯ ವಳೈ ಕಳಲ
ಆದುಕೊಲೋ ವೆನ್ನುಮ್ ಶೊನ್ನ ಪಿನ್ನೈ.
ಐಙ್ಗಣೈ ವಿಲ್ಲಿ ತನ್ನಾಣ್ಮೈ
ಯೆನ್ನೋಡಾಡುಮದನೈಯರಿಯಮಾಟ್ಟೇನ್,
ಕೊಙ್ಗಲರ್ ತಣ್ ಪಣೈ ಶೂಳ್ ಪುರವಿಲ್
ಕುರುಙ್ಗುಡಿಕ್ಕೇ ಯೆನ್ನೈಯುಯ್ತ್ತಿಡುಮಿನ್.

ಶೆಮ್ ಕಣ್ செம் கண் = (ಕೆಂದಾವರೆಯಂತೆ) ಕೆಂಪಗೆ ಕಣ್ಣುಗಳು, ನೆಡಿಯ நெடிய = ದೀರ್ಘವಾಗಿಯೂ, ಕರಿಯ ಮೇನಿ கரிய மேனி = ಕಪ್ಪನೆಯ ದೇಹವನ್ನು ಉಳ್ಳ, ತೇವರ್ ಒರುವರ್ தேவர் ஒருவர் = ಅದ್ವಿತೀಯನಾದ ದೇವರೇ, ಇಙ್ಗೇ இங்கே = ಈ ಸ್ಥಳದಲ್ಲೇ, ಪುಗುನ್ದು புகுந்து = ಪ್ರವೇಶಿಸಿ, ಎನ್ ಅಙ್ಗಮ್ என் அங்கம் = ನನ್ನ ದೇಹವು, ಮೆಲಿಯ மெலிய = ಕೃಶವಾಗುವಂತೆಯೂ, ವಳೈ ಕಳಲ வளை கழல = ಬಳೆಗಳು ಕಳಚಿ ಬೀಳುವಂತೆಯೂ ಮಾಡಿ, ಆದುಕೊಲೋ ஆது கொலோ = ಅದೇ ಅಲ್ಲವೇ, ಎನ್ನುಮ್ என்று = ಎಂದು, ಶೊನ್ನ ಪಿನ್ನೈ சொன்ன பின்னை = ತಿಳಿಸಿದ ಬಳಿಕ, ಐಙ್ಗಣೈ ವಿಲ್ಲಿ ஐங்கணை வில்லி = ಐದು ಬಾಣಗಳು ಕೂಡಿದ ಬಿಲ್ಲನ್ನುಳ್ಳವನು (ಮನ್ಮಥನು), ತನ್ ಆಣ್ಮೈ தன் ஆண்மை = ತನ್ನ ಪೌರುಷವನ್ನು, ಎನ್ನೋಡು என்னோடு = ನನ್ನೊಡನೆ, ಆಡುಮ್ ಅದನೈ ஆடும் அதனை = ಆಡುವುದನ್ನು (ತೋರಿಸುವುದನ್ನು), ಅರಿಯ ಮಾಟ್ಟೇನ್ அறிய மாட்டேன் = ಅರಿಯಲಾರೆನು, ಕೊಙ್ಗು கொங்கு = ಮಕರಂದವನ್ನು, ಅಲರ್ அலர் = ಅರಳಿಸುವಂಥ, ತಣ್ தண் = ತಂಪಾದ, ಪಣೈ பணை = ತೋಂಟಗಳಿಂದ, ಶೂಳ್ சூழ் = ಸುತ್ತುವರಿದಿರುವ, ಪುರವಿಲ್ புறவில் = ತೋಪುಗಳನ್ನುಳ್ಳ, ಕುರುಙ್ಗುಡಿಕ್ಕೇ குறுங்குடிக்கே = ತಿರುಕ್ಕುರುಂಗುಡಿ ಕ್ಷೇತ್ರಕ್ಕೇ, ಎನ್ನೈ என்னை = ನನ್ನನ್ನು, ಉಯ್ತ್ತ ಇಡುಮಿನ್ உய்த்து இடுமின் = ಕರೆದೊಯ್ದು ಸೇರಿಸಿ.

(ಕೆಂದಾವರೆಯಂತೆ) ಕೆಂಪಗೆ ಕಣ್ಣುಗಳು ದೀರ್ಘವಾಗಿಯೂ, ಕಪ್ಪನೆಯ ದೇಹವನ್ನು ಉಳ್ಳ ಅದ್ವಿತೀಯನಾದ ದೇವರೇ ಇಲ್ಲಿ ಪ್ರವೇಶಿಸಿ, ನನ್ನ ದೇಹವು ಕೃಶವಾಗುವಂತೆಯೂ, ಕೈಬಳೆಗಳು ಕಳಚಿ ಬೀಳುವಂತೆಯೂ ಮಾಡಿ, 'ಅದೇ ಅಲ್ಲವೇ' ಎಂದು ತಿಳಿಸಿದ ಬಳಿಕ, ಐದು ಬಾಣಗಳನ್ನು ಕೂಡಿದ ಬಿಲ್ಲನ್ನುಳ್ಳವನು (ಮನ್ಮಥನು) ತನ್ನ ಪೌರುಷವನ್ನು ನನ್ನಲ್ಲಿ ತೋರಿಸುವುದನ್ನು ಅರಿಯಲಾರೆನು. ಮಕರಂದವನ್ನು ಅರಳಿಸುವಂಥ ತಂಪಾದ ತೋಂಟಗಳಿಂದ ಸುತ್ತುವರಿದಿರುವ ತೋಪುಗಳನ್ನುಳ್ಳ ತಿರುಕ್ಕುರುಂಗುಡಿಗೇ ನನ್ನನ್ನು ಕರೆದೊಯ್ದು ಸೇರಿಸಿ. (7)

Garani Srinivasan

ಯುವತಿಯು ಹೇಳುತ್ತಾಳೆ: ಗೆಳತಿಯರೇ, ನನ್ನ ಪ್ರಿಯತಮನಾಗಿ, ಅದ್ವಿತೀಯನಾದ ದೇವರೇ ಬಂದು ನನ್ನ ಅಂತರಂಗವನ್ನು ಪ್ರವೇಶಿಸಿದನು. ಅವನ ಕಣ್ಣುಗಳು ನಿಡಿದಾಗಿ, ವಿಶಾಲವಾಗಿ, ಕೆಂದಾವರೆಯಂತೆ ಕೆಂಪಗೆ ಅಂದವಾಗಿ, ಆಕರ್ಷಕವಾದವು. ಅವನ ದೇಹವು ಕರಿಯದಾಗಿ ಕಾಂತಿಯಿಂದ ಕೂಡಿದ್ದು ಅವನು ನನ್ನಲ್ಲಿ ಏಕಾಂತವಾಗಿ ಹೇಳಿದನು "ಇನ್ನು ನಿನ್ನನ್ನಗಲಿ ಹೋಗುವುದೇ ಇಲ್ಲ ಎಂದು. 'ಅದೇ ಅಲ್ಲವೇ' ಅವನು ನನಗೆ ತಿಳಿಸಿದ್ದು, ~~ಎಂದು~~ ನನಗೆ ಮಾತುಕೊಟ್ಟದ್ದು ಎಂದು ನಾನು ಸ್ಮರಿಸಿಕೊಳ್ಳುತ್ತಾ ಆನಂದಿಸುವುದಕ್ಕೆ ಎಡೆಕೊಡದಂತೆ ತಿರುಕ್ಕುರುಂಗುಡಿಯಲ್ಲಿ ಹೋಗಿ ಅವನೀಗ ನೆಲಸಿದ್ದಾನೆ ಅವನಿಗಾಗಿಯೇ ನನ್ನ ಮೈ ಬಡವಾಯಿತು. ನನ್ನ ಕೈ ಬಳೆಗಳು ಕಳಚಿ ಹೋದವು. ನನ್ನ ಪ್ರಿಯತಮನು ನನ್ನಲ್ಲಿಯೇ ನೆಲಸಿದ್ದನೆಂದು ನಂಬಿರುವ ನನ್ನನ್ನು ಪಂಚಬಾಣನಾದ ಮನ್ಮಥನು ಬಾಧೆಪಡಿಸುತ್ತಿದ್ದಾನಲ್ಲ! ಬಡವಾಯಿಯಾದ ನನ್ನ ಮೇಲೆಯೇ ಅವನು ತನ್ನ ಪೌರುಷವನ್ನು ತೋರುವುದು? ಅವನೇಕೆ ಜಗಳ ಮಾಡುವನೋ ನಾನರಿಯೆನಲ್ಲ! ನನ್ನ ವಿರಹವೇದನೆಯನ್ನು ನಾನು ಸಹಿಸಲಾರೆನಲ್ಲ! ಗೆಳತಿಯರೇ, ಹಸಿರಾಗಿ ಬೆಳೆದು, ಘಮಘಮಿಸುವ ಹೂಗಳಿಂದ ಅಲಂಕೃತವಾಗಿರುವ ತಂಪಾದ ಕೊಂಬೆಗಳಿಂದ ಕೂಡಿದ ಮರಗಳಿಂದ ತುಂಬಿರುವ ತೋಟಗಳಿಂದ ಸುತ್ತುವರಿದಿರುವ ತಿರುಕ್ಕುರುಂಗುಡಿಗೇ ನನ್ನನ್ನು ಕರೆದೊಯ್ದು ಬಿಡಿ. ನನ್ನ ಪ್ರಿಯತಮನೊಡನಿದ್ದು ನಾನು ಮದನಬಾಧೆಯಿಂದ ಪಾರಾಗುವೆನು

8. கேவலமன்று கடலின்ஓசை
கேண்மின்களாயன் கையாம்பல் வந்து, என்
ஆவியளவு மணைந்து நிற்கும்
அன்றியு மைந்து கணை தெரிந்திட்டு,
ஏவலங்காட்டி யிவனொருவன்
இப்படியே புகுந்தெய்திடா முன்,
கோவலர் கூத்தன் குறிப்பறிந்து
குறுங்குடிக்கே யென்னை யுய்த்திடுமின்.

ಕೇವಲ ಮನ್ಱು ಕಡಲಿನೋಶೈ
ಕೇಣ್ಮಿನ್ಗಳಾಯನ್ ಕೈಯಾಮ್ಬಲ್ ವನ್ದು, ಎನ್
ಆವಿಯಳವು ಮಣೈನ್ದು ನಿಱ್ಕುಮ್
ಅನ್ಱಿಯು ಮೈನ್ದು ಕಣೈ ತೆರಿನ್ದಿಟ್ಟು,
ಏವಲಙ್ಗಾಟ್ಟಿ ಯಿವನೊರುವನ್
ಇಪ್ಪಡಿಯೇ ಪುಗುನ್ದೆಯ್ದಿಡಾ ಮುನ್,
ಕೋವಲರ್ ಕೂತ್ತನ್ ಕುಱಿಪ್ಪಱಿನ್ದು
ಕುಱುಙ್ಗುಡಿಕ್ಕೇ ಯೆನ್ನೈ ಯುಯ್ತ್ತಿಡುಮಿನ್.

ಕೇವಲಮಾ கேவலம் = ಸಾಧಾರಣ, ಅನ್ಱು அன்று = ಅಲ್ಲ, ಕಡಲಿನ್ ಓಶೈ கடலின் ஓசை = ಕಡಲಿನ ಘೋಷವು, ಕೇಣ್ಮಿನ್ ದಳ್ கேண்மின் கள் = ಕೇಳಿರಿ. ಆಯನ್ ஆயன் = ಗೋವಳನ, ಕೈ ಆಮ್ಬಲ್ கை ஆம்பல் = ಕೈಯ ಬದಿರು (ಕೊಳಲು), ವನ್ದು வந்து = ಬಂದು, ಎನ್ ಆಣ್ = ನನ್ನ, ಆವಿ ಅಳವುಮಾ ಅಣಾವುಂ = ಪ್ರಾಣಗಳನ್ನು ಪೂರ್ತಿಯಾಗಿ, ಅಣೈನ್ದು அணைந்து = ಅಪ್ಪಿಕೊಂಡು. ನಿರ್ಕುಮಾ நிற்கும் = ನಿಲ್ಲುತ್ತದೆ. ಅನ್ಱಿಯುಮಾ அன்றியும் = ಅಲ್ಲದೆ, (ಮತ್ತು), ಐನ್ದು ಕಣೈ ஐந்து கணை = ಐದು ಬಾಣಗಳನ್ನು, ತೆರಿನ್ದಿಟ್ಟು தெரிந்திட்டு = ಗುರಿ ನಿಟ್ಟು, (ಗುರಿಮಾಡಿಕೊಂಡು), ಏವಲಮಾ ஏவலம் = ಸಾಮರ್ಥ್ಯವನ್ನು, ಕಾಟ್ಟಿ காட்டி = ತೋರಿಸಿ, ಇವನ್ இவன் = ಈ ಮನ್ಮಥನು, ಒರುವನ್ ஒருவன் = ಒಬ್ಬನು, ಇಪ್ಪಡಿಯೇ இப்படியே = ಬಗೆಯಲ್ಲಿ, ಪುಗುನ್ದು புகுந்து = ಪ್ರವೇಶಿಸಿ, ಎಯ್ದಾಯುನ್ ಮುಂಚೆಯೇ, ನಾಯ್ತಿಡಾ ಮುನ್ நாயிடா முன் = ಪ್ರಯೋಗಿಸುವುದಕ್ಕೆ ಮುಂಚೆಯೇ, ಕೋವಲರ್ கோவலர் = ಗೋವಳರನ್ನು ಕುಣಿಸುವ ಕೂತ್ತನ್ கூத்தன் = ಕುಣಿದಾಡುವವನ, ಕುಱಿಪ್ಪು குறிப்பு = ಗುರುತನ್ನು, ಅಱಿನ್ದು அறிந்து = ಅರಿತುಕೊಂಡು, ಕುಱುಂಗುಡಿಕ್ಕೇ குறுங்குடிக்கே = ತಿರುಕ್ಕುರುಂಗುಡಿಗೇ, ಎನ್ನೈ என்னை = ನನ್ನನ್ನು, ಉಯ್ತ್ತು ಇಡುಮಿನ್ உய்த்து இடுமின் = ಕರೆದೊಯ್ದು ಬಿಡಿ.

ಕಡಲಿನ ಘೋಷವೇನು ಸಾಧಾರಣವಲ್ಲ. ಕೇಳಿರಿ, ಗೋವಳನ ಕೈಯ ಬದಿರು (ಕೊಳಲು) ಬಂದು ನನ್ನ ಪ್ರಾಣಗಳನ್ನು ಪೂರ್ತಿಯಾಗಿ ಅಪ್ಪಿಕೊಂಡು ನಿಲ್ಲುತ್ತದೆ (ಇರುತ್ತದೆ). ಅಲ್ಲದೆ, (ಮತ್ತು), ಐದು ಬಾಣ ಗುರಿಮಾಡಿಕೊಂಡು, ತನ್ನ ಸಾಮರ್ಥ್ಯವನ್ನು ತೋರಿಸಿ ಈ ಮನ್ಮಥನೊಬ್ಬನು ಬಗೆಯಲ್ಲಿ ಪ್ರಯೋಗಿಸಿ ಬಿಡುವುದಕ್ಕೆ ಮುಂಚೆಯೇ, ಗೋವಳರನ್ನು ಕುಣಿಸುವಂಥವನ ಗುರುತನ್ನರಿತು ತಿರುಕ್ಕುರುಂಗುಡಿ ಕ್ಷೇತ್ರಕ್ಕೆ ನನ್ನನ್ನು ಕರೆದೊಯ್ದು ಬಿಡಿ. (8)

ಅವಳು ಹೀಗೆನ್ನುತ್ತಾಳೆ: ಗೆಳತಿಯರೇ, ಕಡಲಿನ ಕೂಗು ಸಾಧಾರಣವಾದದ್ದೇನಲ್ಲ. ಇದುವರೆಗೆ ಅದು ನನ್ನನ್ನು ಅಷ್ಟಾಗಿ ಹಿಂಸಿಸುತ್ತಿರಲಿಲ್ಲ. ಈಗ ನೋಡಿ ಕಡಲಿನ ಕೂಗು ನನ್ನ ಮನಸ್ಸಿನ ಯಾತನೆಯನ್ನು ಹೆಚ್ಚಿಸುತ್ತಿದೆಯಲ್ಲ! ರಾತ್ರಿಯಾಗುತ್ತ ಅದರ ಘೋಷವು ನನ್ನ ಸಂಕಟವನ್ನು ಸಹಿಸಲಾರದಂತೆ ಮಾಡುತ್ತದೆ. ಇದರ ಜೊತೆಗೆ ಸಂಜೆಯಲ್ಲಿ ಮನೆಗೆ ಹಿಂತಿರುಗುತ್ತಿರುವ ಗೋವಳನ ಕೈಬದಿರೂ ನನ್ನ ಪ್ರಾಣಗಳನ್ನು ಹಿಂಡಿ ಹಾಕುತ್ತಿವೆ. ಅಲ್ಲದೆ, ಪಂಚಬಾಣನು ತನ್ನ ಐದಂಬುಗಳನ್ನು ಬಿಲ್ಲಿಗೆ ಹೊರಡಿಸಿ ಸಿದ್ಧಮಾಡಿಕೊಂ

Garani Srinivasan

ಇದ್ದಾನೆ. ಒಂಟಿಯಾಗಿ, ಅಸಹಾಯಕಳಾಗಿ, ಅಬಲೆಯಾಗಿರುವ ನನ್ನ ಮೇಲೆ
ಅವನು ಈ ಬಾಣಗಳನ್ನು ಪ್ರಯೋಗಿಸಬಹುದೇ ಏನು? ನನ್ನ ದೇಹವ
ವನ್ನು ಕಡಿದು ಕೊಲ್ಲುವ (ಸುಡುವ) ಸಾಮರ್ಥ್ಯ ನನಗಿಲ್ಲವೇ? ಗೊಲ್ಲತಿಯರ,
ಗೋವಳರ ನಾಯಕನಾಗಿರುವವನು, ಅವರನ್ನು ಎಲ್ಲಬಗೆಯಿಂದಲೂ
ಕಾಪಾಡುವ ಸಮರ್ಥನೂ ನನ್ನ ಪ್ರಿಯಕರನು. ಅವನೀಗ ಕರುಣೆಯಿಲ್ಲದವನಾಗಿ
ಇಲ್ಲಿಗೆ ಬಂದಿದ್ದಾನೆ. ಈ ಕಾರಣದಿಂದ ನೀವು ಅವನನ್ನು ಸ್ಮರಿಸಬಹುದು.
ಮನ್ಮಥನು ತನ್ನ ಪಂಚಬಾಣಗಳನ್ನು ನನ್ನ ಮೇಲೆ ಪ್ರಯೋಗಿಸಬಹುದು
ದಕ್ಷಿಣ ಮಂದಮಾರುತವೂ ನನ್ನನ್ನು ಅಲ್ಲಿಗೆ ಕರೆದೊಯ್ದು ಬೀಸಿ ನನ್ನ
ಪ್ರಿಯಕರನೊಡನಿದ್ದು ನನ್ನೆಲ್ಲ ದೇಹವನ್ನು ನೀಗಿಕೊಳ್ಳುತ್ತೇನೆ.

9 சோத்தெனநின்று தொழவிரங்கான்
தொன்னலங்கொண்டெனக்கின்று தாறும்;
போர்ப்பதோர் பொற்படம் தந்து போனான்
போயின ஊரறியேன், என் கொங்கை
மூத்திடுகின்றன மற்றவன்றன்
மொய்யகலமணையாது வாளா,
கூத்தனிமையவர் கோன் விரும்பும்
குறுங்குடிக்கே யென்னையுய்த்திடுமின்

ಸೋತ್ತೆನ ನಿನ್ರು ತೊೞ ವಿರಙ್ಗಾನ್
ತೊನ್ನಲಙ್ಗೊಣ್ಡೆನಕ್ಕಿನ್ರು ತಾಱುಮ್,
ಪೋರ್ಪ್ಪದೋರ್ ಪೊಱ್ಪಡಮ್ ತನ್ದು ಪೋನಾನ್
ಪೋಯಿನ ವೂರಱಿಯೇನ್, ಎನ್ ಕೊಙ್ಗೈ
ಮೂತ್ತಿಡುಗಿನ್ಱನ ಮಱ್ಱವನ್ಱನ್
ಮೊಯ್ಯಗಲಮಣೈಯಾದು ವಾಳಾ,
ಕೂತ್ತನಿಮೈಯವರ್ ಕೋನ್ ವಿರುಮ್ಬುಮ್
ಕುಱುಙ್ಗುಡಿಕ್ಕೇಯೆನ್ನೈಯುಯ್ತ್ತಿಡುಮಿನ್

ಸೋತ್ತಮ್ சோத்தம் = 'ನಮಸ್ಕಾರ' (ಜೋಹಾರ), ಎನ ஏன = ಎಂದು, ನಿನ್ರು நின்று = ನಿಂತು, ತೊೞ தொழ = ಕೈಮುಗಿದರೂ, ಇರಙ್ಗಾನ್ இரங்கான் = ಕರುಣಿಸನು (ಕೃಪೆದೋರನು), ತೊಲ್ தொல் = ಹಿಂದಿನ, ನಲಮ್ நலம் = ಸ್ವಭಾವವನ್ನು, ಕೊಣ್ಡು கொண்டு = ತೆಗೆದುಕೊಂಡು, ಎನಕ್ಕು எனக்கு = ನನಗೆ, ಇನ್ರು ತಾಱುಮ್ இன்று தாறும் = ಇಲ್ಲಿಯವರೆಗೂ, ಪೋರ್ಪ್ಪದು போர்பது = ಮುಚ್ಚಿಕೊಳ್ಳುವುದಕ್ಕೆ, (ಆವರಣವಾಗಿ), ಓರ್ ஓர் = ಒಂದು, ಪೊನ್ ಪಡಮ್ பொன் படம் = ಹೊಂಬಟ್ಟೆಯನ್ನು, (ಹೊಂಬಣ್ಣವನ್ನು), ತನ್ದು தந்து = ಕೊಟ್ಟು, ಪೋನಾನ್ போனான் = ಹೊರಟುಹೋದನು, ಪೋಯಿನ

Garani Srinivasan

ಪೋಯಿನಾ = ಅವನು ಹೋದ, ಊರ್ ಇಣಾ = ಸ್ಥಳವನ್ನು, ಅಱಿಯೇನ್
ಅಱಿಯೇಣ್ = ಅರಿಯೆನು, ಎನ್ ಕೈಜ್ಜೈ ನಾಣ್ ಉಱಕಾಙ್ಙಳ = ನನ್ನ
ಮೊಲೆಗಳು, ಮೂರ್ತ್ತಿಡುಂದ್ ಅನ ಅಕ್ಕೆಱುಕಿಂಱನಾ = ಉಬ್ಬಿ
ಹೋಗುತ್ತಿವೆ; ಮತ್ತು ಮಱ್ಱು = ಮತ್ತು, ಅವನ್ ಕನ್ ಅಳಣ್ ಕಣ್
= ಅವನ, ಹೊಂಟ ಉಮಾಯ = ಸುಂದರವಾದ, ಅದಲವಾ ಅಕಲಂ
= ಎದೆಯನ್ನು, ಅಣೈಯಾದು ಅಣಾಯಾತು = ಅಪ್ಪಿಕೊಳ್ಳದೆ,
ವಾಳಾ ಹಾನಾ = ಬದುಕಲಾರವು, ಕೂರ್ತ್ತನ್ ಕಾಕ್ಕೈತಣ್ = ಚಿತ್ರ
ವಿಚಿತ್ರವಾಗಿ ಕುಣಿಸಿದ ಶಕ್ತನು, ಇಮ್ಮೈಯವರ್ ಇಱೈಮಯವರ್ = ದೇ
ವತೆಗಳ, ಕೋನ್ ಕೋಣ್ = ಒಡೆಯನು, ವಿರುಮ್ಬುವಾ ವಿಱಂ
ಪುಂ = ಆಶಿಸುವ, ಕುಱುಂಗುಡಿಕ್ಕೆ ಕುಱುಙ್ಗುಡಿಕ್ಕೇ = ತಿರು
ಕ್ಕುರುಂಗುಡಿ ಕ್ಷೇತ್ರಕ್ಕೆ, ಎನ್ನೈ ನಾಣ್ ಇಣಾ = ನನ್ನನ್ನು, ಉಯ್ತ್ತು ಇಡು
ಮಿನ್ ಉಯ್ಕ್ಕತು ಇಡುಮಿಣ್ = ಕರೆದೊಯ್ಯು ಬಿಡಿ.

ನೀನೇಗತಿ (ಶರಣ) ಎಂದು ಅಂಜಲಿಬದ್ಧಳಾಗಿ ನಿಂತರೂ ಕೃಪೆ ದೋರದನು. (ನನ್ನ) ಒಂದಿನ ಸ್ವಭಾವವನ್ನೆಲ್ಲ ದೋಚಿಕೊಂಡು, ನನಗೆ ಒಂದು ಹೊಂಬಟ್ಟೆಯನ್ನು (ಹೊಂಬಣ್ಣವನ್ನು) ಆವರಣವಾಗಿ (ಸುತ್ತಿಕೊಳ್ಳುವುದಕ್ಕೆ) ಕೊಟ್ಟು ಹೊರಟು ಹೋದನು. ಅವನು ಹೋದ ಸ್ಥಳವನ್ನು ಅರಿಯೆನು. ನನ್ನ ಮೊಲೆಗಳು ಉಬ್ಬಿ ಹೋಗುತ್ತಿವೆ. ಮತ್ತು, ಅವನ ಸುಂದರವಾದ ಎದೆಯನ್ನು ಅಪ್ಪಿಕೊಳ್ಳದೆ ~~ಅಪ್ಪದಿರ~~ ಬದುಕಲಾರವು. ಚಿತ್ರವಿಚಿತ್ರವಾಗಿ ಕುಣಿಸಿದ ಶಕ್ತನೂ ದೇವತೆಗಳ ಒಡೆಯನೂ ಆಶಿಸಿ ನೆಲೆಸಿರುವ ತಿರುಕ್ಕುರುಂಗುಡಿ ಕ್ಷೇತ್ರಕ್ಕೆ ನನ್ನನ್ನು ಕರೆದೊಯ್ದು ಬಿಡಿ. (೯)

ಯುವತಿಯನ್ನು ತಾಳೆ: ಗೆಳತಿಯರೇ, ಈ ನನ್ನ ಅಗಲಿಕೆಯ ವಿ[illegible] ಸ್ಥಿತಿಯಲ್ಲಿ, ನನ್ನ ಸಂಕಟದಲ್ಲಿ, ನನ್ನ ಪ್ರಿಯತಮನಿಗೆ ಕನಿಕರವೇ ಇಲ್ಲವೆನಿಸುತ್ತದೆ. ನಾನು ಕೈಜೋಡಿಸಿ ನಿಂತು "ನೀನೇ ನನ್ನ [illegible]. ನೀನೇ ಗತಿ. ನೀನೇ ನನ್ನ ರಕ್ಷಕ ನೀನೇ ಕಾಪಾಡಬೇಕು" ಎಂದು ಮುಂಚಿತವಾಗಿ ಬೇಡಿಕೊಂಡರೂ ಅವನು ನನಗೆ ಕೃಪೆದೋರನಲ್ಲ! ಸ್ತ್ರೀ ಸಹಜವಾದ ಲಜ್ಜೆ, ಮಾನ, ಭಯ ಮುಂತಾದವನ್ನೆಲ್ಲಾ ನಾನು ಕಳೆದುಕೊಂಡುಬಿಟ್ಟೆ. ಅವನು ~~[illegible]~~ ~~[illegible]~~ ನನ್ನ ಒಂದಿನ ಸ್ವಭಾವವನ್ನೇ ದೋಚಿಗೊಂಡ. ನನ್ನನ್ನು ಒಂಟಿಯಾಗಿ, ಅನಾಥಳನ್ನಾಗಿ ಮಾಡಿ, ನನ್ನನ್ನಗಲಿ ಹೊರಟೇ ಹೋದ ಎಲ್ಲಿಗೆ ಹೋದನೋ ನನಗೆ ತಿಳಿಯದು. ನನ್ನ ಸೌಂದರ್ಯವೂ ಹೋಯಿತು, ಸ್ವಭಾವವೂ ಹೋಯಿತು. ನನ್ನ ಮನೋವೇದನೆಯನ್ನು ಸಹಿಸಲಾರೆ. ಅವನ ಎದೆಯನ್ನು ಎಂದಿಗೆ ಅಪ್ಪಿಕೊಂಡೇನೋ ಎನಿಸುತ್ತದೆ. ಅದೇ ನನಗೆ ಚಿಂತೆ. ಅದರಿಂದಲೇ ನನಗೆ ಶಾಂತಿ. ಅವನೋ ಎಲ್ಲ ಜೀವಿಗಳನ್ನೂ ಚಿತ್ರವಿಚಿತ್ರವಾಗಿ ಕುಣಿಸುವ ಶಕ್ತನು— ಕಪಟನಾಟಕ ಸೂತ್ರಧಾರಿ. ದೇವತೆಗಳಿಗೆಲ್ಲ ಒಡೆಯನು— ದೇವಾದಿದೇವನು. ನನ್ನ ಪ್ರಿಯತಮನಿಗೆ ತಿರುಕ್ಕುರುಂಗುಡಿಯೆಂದರೆ ಬಹಳ

Garani Srinivasan

ಆಸೆಯೆಂದು ಹೇಳಿದ್ದೇನೆ. ಗೆಳತಿಯರೇ, ನನ್ನನ್ನು ಆ ತಿರುಕ್ಕುರುಂಗುಡಿಗೇ ಕರೆದೊಯ್ಯು ಬೇಡಿ

ಭಗವಂತನ ವಿಷಯದಲ್ಲಿ ಆಸೆ ಹೆಚ್ಚಿದಷ್ಟೂ ಮನುಷ್ಯನಿಗೆ ಪ್ರಾಪಂಚಿಕವಾದ ಆಸೆ ಕುಂದುತ್ತದೆ. ಅದಕ್ಕೆ ತಕ್ಕಂತೆ ಅವನ ಗುಣ ಸ್ವಭಾವಗಳು ಬದಲಾಗುತ್ತವೆ. ಭಗವಂತನನ್ನೇ ಗತಿಯೆಂದೂ, ಆಶ್ರಯವೆಂದೂ ನಂಬಿ, ಅವನನ್ನೇ ಮರೆ ಹೊಕ್ಕು, ಅವನನ್ನು ಎಂದೆಂದಿಗೆ ಬೇರೆ ಹೊಂದೇನು ಎಂದು ಹಂಬಲಿಸುವುದೇ ಅವನ ಬಾಳ್ವೆಯಾಗುತ್ತದೆ. ಅಂಥವನಲ್ಲಿ ಕೃಪಾಳು ಪಾದಸ್ವಾಮಿಯು ಕನಿಕರಪಡದ್ದಾನೇ?

10. செற்றவன் தென்னிலங்கை மலங்கத்
தேவபிரான் திருமாமகளைப்
பெற்றும், என்னெஞ்சகம் கோயில்கொண்ட
பேரருளாளன் பெருமைபேசக்
கற்றவன், காமருசீர்க் கலியன்
கண்ணகத்தும் மனத்துமகலாக்
கொற்றவன், முற்றுலகாளி நின்ற
குறுங்குடிக்கே யென்னையுய்த்திடுமின்.

ಶೆಟ್ರುವನ್ ತೆನ್ನಿಲಙ್ಗೈ ಮಲಙ್ಗ
ತ್ತೇವಪಿರಾನ್ ತಿರುಮಾಮಗಳೈ
ಪ್ಪೆಟ್ರುಮ್, ಎನ್ನೆಂಜಗಮ್ ಕೋಯಿಲ್ ಕೊಣ್ಡ
ಪೇರರುಳಾಳನ್ ಪೆರುಮೈ ಪೇಶ
ಕ್ಕಟ್ರುವನ್, ಕಾಮರು ಶೀರ್ಕ್ಕಲಿಯನ್
ಕಣ್ಣಗತ್ತುಮ್ ಮನತ್ತುಮಗಲಾ
ಕ್ಕೊಟ್ರುವನ್, ಮುಟ್ರುಲಗಾಳಿ ನಿನ್ಱ
ಕುಱುಙ್ಗುಡಿಕ್ಕೇ ಯೆನ್ನೈಯುಯ್ತ್ತಿಡುಮಿನ್.

ತೆನ್ ಇಲಙ್ಗೈ தென் இலங்கை = ದಕ್ಷಿಣ ದಿಕ್ಕಿನಲ್ಲಿರುವ (ಸುಂದರವಾದ) ಲಂಕೆಯು, ಮಲಙ್ಗ மலங்க = ಕಲಕ್ಕೊಳಗಾಗುವಂತೆ, ಶೆಟ್ರುವನ್ செற்றவன் = (ಅದನ್ನು) ನಾಶಪಡಿಸಿದವನೂ, ತೇವಪಿರಾನ್ தேவபிரான் = ದೇವತೆಗಳ ಒಡೆಯನೂ, ತಿರುಮಗಳೈ திருமகளை = ಶ್ರೀದೇವಿಯನ್ನು, ಪೆಟ್ರುಮ್ பெற்றும் = ಪಡೆದಿದ್ದರೂ ಸಹ, ಎನ್ ನೆಂಜಗಮ್ என் நெஞ்சகம் = ನನ್ನ ಮನಸ್ಸಿನೊಳಗೆ, ಕೋಯಿಲ್ ಕೊಣ್ಡ கோயில் கொண்ட = ನೆಲಸಿರುವ (ಪವಿತ್ರಗೊಳಿಸಿರುವ), ಪೇರರುಳಾಳನ್ பேருளாளன் = ಪರಮಕೃಪಾಳುವಿನ, ಪೆರುಮೈ பெருமை = ಹಿರಿಮೆಯನ್ನು, ಪೇಶ பேச = ಹೇಳುವುದರಲ್ಲಿ (ಹೊಗಳುವುದರಲ್ಲಿ), ಕಟ್ರುವನ್ கற்றவன் = ವಿದ್ವಾಂಸನೂ, ಕಾಮರುಶೀರ್

காமரு சீர் = ಆಶಿಸುವಂಥ ಸದ್ಗುಣಗಳನ್ನುಳ್ಳವನೂ, ಆದ, ಕಲಿಯನ್
கலியன் = ಕಲಿಯನ, ಕಣ್ಣಗತ್ತುಮ್ கண்ணாக்கும் =
ಕಣ್ಣುಗಳ ಒಳಗೂ, ಮನತ್ತುಮ್ மனக்கும் = ಮನದಲ್ಲಿಯೂ,
அகலா அகலா = ಅಗಲದಿರುವ, ಕೇಶವನ್ ಉಕಾಱ್ಱುವಣ್ =
ದೇವೇಶ್ವರನು, ಮುಟ್ರುಲದಾಳಿ முற்று உலகாளி = ಎಲ್ಲಾ
ಲೋಕಗಳನ್ನಾಳುವವನು, ನಿನ್ಱು நின்ற = ನೆಲಸಿರುವ, ಕುಱುಙ್ಗು
ಡಿಕ್ಕೇ குறுங்குடிக்கே = ತಿರುಕ್ಕುರುಂಗುಡಿಗೆ, ಎನ್ನೈ என்னை
= ನನ್ನನ್ನು, ಉಯ್ತ್ತು ಇಡುಮಿನ್ உய்த்து இடுமின் = ಕರೆದೊ
ಯ್ದು ಬಿಡಿರಿ.

ದಕ್ಷಿಣದ ಸುಂದರವಾದ ಲಂಕೆಯು ಕಲಕಿಹೋಗುವಂತೆ ಅದನ್ನು ನಾಶಪಡಿಸಿದವನೂ, ದೇವತೆಗಳ ಒಡೆಯನೂ, ಶ್ರೀದೇವಿಯನ್ನು ಪಡೆ ದದ್ದರೂಪದ ನನ್ನ ಮನಸ್ಸಿನ ಒಳಗೆ ನೆಲಸಿ ಪವಿತ್ರಗೊಳಿಸಿರುವ ವಿರ ಪುಣ್ಯಶಾಲಿಯ ಹಿರಿಮೆಯನ್ನು ಹೇಳುವುದರಲ್ಲಿ (ಹೊಗಳುವುದರಲ್ಲಿ) ವಿದ್ವಾಂಸನೂ (ಬಲ್ಲವನೂ), ಆಶಿಸುವಂಥ ಸದ್ಗುಣಗಳನ್ನುಳ್ಳವನೂ ಆದ ಕಲಿಯನ್ನ ಕಣ್ಣುಗಳ ಒಳಗೂ ಮನದಲ್ಲಿಯೂ ಅಗಲದಿರುವ ದೇವೇಶ್ವರನು ಎಲ್ಲಾ ಲೋಕಗಳನ್ನಾಳುವವನು ನೆಲಸಿರುವ (10)
ತಿರುಕ್ಕುರುಂಗುಡಿಗೇ ನನ್ನನ್ನು ಕರೆದೊಯ್ದು ಬಿಡಿರಿ

ಈ ತಿರುಮೊೞಿಯ ಕಡೆಯ ಪಾಶುರವಿದು. ಇತರ ತಿರುಮೊೞಿಗಳಲ್ಲಿ ಬರುವಹಾಗೆ ಇಲ್ಲಿಯೂ ಫಲಶ್ರುತಿಯಿದೆ. ಆದರೆ, ಅವುಗಳಂತೆ ಇದಲ್ಲ. ಭಿನ್ನವಾದದ್ದು. "ತಿರುಕ್ಕುರುಂಗುಡಿಗೇ ನನ್ನನ್ನು ಕರೆದೊಯ್ದು ಬಿಡಿರಿ" ಎಂಬುದು ಈ ತಿರುಮೊೞಿಗೆ ಇಲ್ಲವಿದ್ದಂತೆ. ಫಲಶ್ರುತಿಯೂ ಆದೇ.

ತಿರುಕುರುಂಗುಡಿ ಕ್ಷೇತ್ರದ ವೈಶಿಷ್ಟ್ಯವೇನು? ಅದು ಭಗವಂತನಿಗೆ ಬಹಳ ಇಷ್ಟವಾದ ಕ್ಷೇತ್ರ. ಭಕ್ತರನ್ನು ಉದ್ಧರಿಸುವ ಆಸೆಯಿಂದಲೇ ಸ್ವಾಮಿಯು ಅಲ್ಲಿ ನೆಲಸಿರುವುದು. ದುಷ್ಟರನ್ನು ನಿಗ್ರಹಿಸುವುದರಲ್ಲಿ ಅತಿಶಯ ಪರಾಕ್ರಮಿಯೂ, ಶಿಷ್ಟರನ್ನು ಆಶ್ರಿತರನ್ನು ಎಲ್ಲ ವಿಧದಲ್ಲಿಯೂ ಕಾಪಾಡುವವನೂ ಆದ ಭಗವಂತನಿಗೆ ಶ್ರೀದೇವಿಯೇ ನಿತ್ಯಾನಪಾಯಿನಿ. ಸ್ವಾಮಿಯ ವಕ್ಷಸ್ಥಲದಲ್ಲಿ ನಿತ್ಯವಾಸ ಮಾಡುತ್ತಾಳೆ. ಆದರೂ, ಎಲ್ಲ ಜೀವಿಗಳಲ್ಲೂ ಕನಿಕರಗೊಂಡು ಅವರ ಅಂತರಂಗದಲ್ಲಿ ನೆಲಸಿ ಅವರನ್ನು ಉದ್ಧರಿಸುತ್ತಾನೆ.

ಭಗವಂತನ ಸಕಲ ಕಲ್ಯಾಣಗುಣಗಳನ್ನೂ, ಸಾಟಿಯಿಲ್ಲದ ಅವನ ಹಿರಿಮೆಯನ್ನೂ ಹೊಗಳಿ ಹಾಡುವುದರಲ್ಲಿ ಕಲಿಯನು (ತಿರುಮಂಗೈ ಆಳ್ವಾರರು) ಸಮರ್ಥ ಪಂಡಿತನು. ಇತರರು ಅವನ ಸದ್ಗುಣಗಳನ್ನು ಅನುಸರಿಸಬೇಕೆಂದೂ, ದೇವೇಶ್ವರನೂ ಸಕಲಲೋಕನಾಯಕನೂ ಆದ ಭಗವಂತನನ್ನು ಅವನಂತೆಯೇ ಆಶ್ರಯಿಸಿ ಒಲಿಸಿಕೊಳ್ಳಬೇಕೆಂದೂ ಆಶಿಸುವಂಥ ಸದ್ಗುಣಸಂಪನ್ನನು. ಸ್ವಾಮಿಯು ಅವನ ಭಕ್ತಿಗೆ ಒಲಿದು, ಅವನ ಕಣ್ಣುಗಳಲ್ಲಿ ಎಡೆಬಿಡದೆ ನೆಲಸಿ ಅವನನ್ನು ರಕ್ಷಿಸುತ್ತಾನೆ. ಅದರ ಫಲವಾಗಿ ಹೊಮ್ಮಿದವೇ ಈ ಪಾಶುರಗಳು.

Garani Srinivasan

ತಾನು ಭಗವಂತನಲ್ಲಿ ಅತಿಶಯವಾದ ಪ್ರೇಮವುಳ್ಳ ಯುವತಿಯೆಂದೂ, ತನ್ನನ್ನು ಅಗಲುವುದೇ ಇಲ್ಲವೆಂದು ಮಾತುಕೊಟ್ಟು, ತನಗೆ ಅವನ ಪ್ರೇಮದ ರುಚಿಯನ್ನು ಹಿಡಿಸಿ, ಇದ್ದಕ್ಕಿದ್ದಂತೆ ತನ್ನಿಂದ ದೂರವಾದನಲ್ಲ ಎಂಬ ಸಂತಾಪವನ್ನು, ಅವನನ್ನಗಲಿ ಅನುಭವಿಸುತ್ತಿರುವ ಸಹಿಸಲಾರದ ವಿರಹವನ್ನು, ತನ್ನ ಅಭಿಪ್ರಾಯತತ್ವವನ್ನು, ತನ್ನ ಸ್ವಾಮಿಯಲ್ಲಿ ತಾನು ಹೇಳಿಕೊಳ್ಳಬೇಕೆಂಬ ಕಾತರವನ್ನು, ತನ್ನನ್ನು ಸ್ವಾಮಿಯ ಸನ್ನಿಧಿಗೆ ಕರೆದೊಯ್ಯಿರೆಂಬ ಬೇಡಿಕೆಯನ್ನು ಆಳ್ವಾರರು ಈ ಪಾಶುರಗಳಲ್ಲಿ ಹೇಳುತ್ತಿರುವ ಮುಖ್ಯ ವಿಷಯ. ಅನನ್ಯಭಕ್ತನಿಗೆ ಇರಬೇಕಾದ ಗುಣಗಳನ್ನೇ ಈ ಓಲೆಯಾ ಹೇಳುತ್ತಾ "ನನ್ನನ್ನು ತಿರುತ್ತೊಲೈವಿಲ್ಲಿಗೆ ಕರೆದೊಯ್ದು ಹೇಳಿ" ಎಂಬ ಕಿಲ್ರಾದಿತ್ತಿಯನ್ನೇ ಈ ತಿರುವಾಯ್ಮೊಳಿಯ ಫಲಶ್ರುತಿ ಎಂದು ಹೇಳಬಹುದೆನಿಸುತ್ತದೆ.

— o —

ಅಡಿಯುನದೆ: அடி வரவு :- ತವಳ ಕ್ಷುವணா, ಶಾದವಿಲ தாதவிழ், ಕಾಲ್ತ கால ತರುಮಣಿ கருமணி, ತನ್ನೊಯಿಲ್ குிண்டிமில், ಎಲ್ಲಾ ನರ್ವಿ, ತಿಜ್ಞರ್ ಉಚಂಗು ಕಣ்ಣಾ, ಕೇವலவ கேவலம், ತಿಂಗತ್ತಿನ சோக்கைகள், ತಿಟ್ರುವನ್ ಉಚ ற்றவண். (ಅಶ್ವ அக்கு)

— o —

23.11.78

ಪೆರಿಯ ತಿರುಮೊಳಿ - ಒಂಬತ್ತನೆಯ ದಶಕ - ಆರನೆಯ ತಿರುಮೊಳಿ

பெரிய திருமொழி - ஒன்பதாம் பத்து - ஆறாந்திருமொழி

6. ಅಕ್ಕುಮ್ ಪುಲಿಯಿನದಳುಮ್ - அக்கும் புலியினதளும்.

1. அக்கும் புலியினதளு முடையாரவரொருவர்,
பக்கம் நிற்க நின்ற பண்பரூர் போலும்,
தக்கமரத்தின் தாழ் சினையேறி, தாய்வாயில்
கொக்கின் பிள்ளை வெள்ளிறவுண்ணும் குறுங்குடியே.

ಅಕ್ಕುಮ್ ಪುಲಿಯಿನದಳು ಮುಡೈಯಾರವರೊರುವರ್,
ಪಕ್ಕಮ್ ನಿಱ್ಕ ನಿನ್ಱ ಪಣ್ಬರೂರ್ ಪೋಲುಮ್,
ತಕ್ಕಮರತ್ತಿನ್ ತಾಳ್ ಶಿನೈಯೇಱಿ, ತಾಯ್ ವಾಯಿಲ್
ಕೊಕ್ಕಿನ್ ಪಿಳ್ಳೈ ವೆಳ್ಳಿಱವುಣ್ಣುಮ್ ಕುಱುಂಗುಡಿಯೇ.

ಅಕ್ಕುಮ್ அக்கும் = ಎಲುಬನ್ನು ಪುಲಿಯಿನ್ புலியின் = ಹುಲಿಯ, ಅದಳುಮ್ அதளும் = ತೊಗಲನ್ನು, ಉಡೈಯಾರ್ உடையார் = ಉಳ್ಳವರು, ಅವರ್ ಒರುವರ್ அவர் ஒருவர் = ಒಬ್ಬರ, ಪಕ್ಕಮ್ பக்கம் = ಮಗ್ಗುಲಲ್ಲಿ, ನಿಱ್ಕ நிற்க = ಇರುವುದಕ್ಕೆಂದು, ನಿನ್ಱ நின்ற = ನೆಲಸಿರುವ, ಪಣ್ಬರ್ பண்பர் = ಸಹಜಸ್ವಭಾವವುಳ್ಳವರ (ಶೀಲವಂತರ), ಊರ್ ಪೋಲುಮ್ ஊர் போலும் = ದಿವ್ಯಕ್ಷೇತ್ರವೆನಿಸಿರುವುದು, ತಕ್ಕ ಮರತ್ತಿನ್ தக்கமரத்தின் = ತಕ್ಕದ್ದಾದ ಮರದ, ~~ತಾಳ್ தாழ்~~ ತಾಳ್ தாழ் = ತಗ್ಗಿ ಬಗ್ಗಿರುವ, ಶಿನೈ சினை = ಕೊಂಬೆಯನ್ನು, ಏಱಿ ஏறி = ಹತ್ತಿ, ತಾಯ್ ವಾಯಿಲ್ தாய் வாயில் = ತಾಯಿಯ ಬಾಯಿಂದ, ಕೊಕ್ಕಿನ್ ಪಿಳ್ಳೈ கொக்கின் பிள்ளை = ಬಕಪಕ್ಷಿಯ ಮರಿಯು, ವೆಳ್ಳಿಱವು வெள்ளிறவு = ವೆಳ್ಳರ ಎಂಬ ಮೀನನ್ನು, ಉಣ್ಣುಮ್ உண்ணும் = ಉಣ್ಣುವಂಥ, ಕುಱುಂಗುಡಿಯೇ குறுங்குடியே = ತಿರುಕ್ಕುರುಂಗುಡಿ ಕ್ಷೇತ್ರವೇ.

ಎಲುಬನ್ನು ಹುಲಿಯ ತೊಗಲನ್ನು ಉಳ್ಳವರೊಬ್ಬರ ಮಗ್ಗುಲಲ್ಲಿ ಇರುವುದಕ್ಕೆಂದೇ ನೆಲಸಿರುವ ಸಹಜಸ್ವಭಾವವುಳ್ಳವರ (ಶೀಲವಂತರ) ದಿವ್ಯಕ್ಷೇತ್ರವೆಂದರೆ, ತಕ್ಕದ್ದಾದ ಮರದ ಬಾಗಿದ ಕೊಂಬೆಯನ್ನೇರಿ ಕುಳಿತಿರುವ ತಾಯಿಯ ಬಾಯಿಂದ ಬಕಪಕ್ಷಿಯ ಮರಿಯು ವೆಳ್ಳರ ಎಂಬ ಮೀನನ್ನು ತಿನ್ನುವಂಥ ತಿರುಕ್ಕುರುಂಗುಡಿಯೇ. (1)

ತಿರುಕ್ಕುರುಂಗುಡಿ ಕ್ಷೇತ್ರವು ಭಗವಂತನ ಅಪಾರವಾದ ಭಕ್ತವಾತ್ಸಲ್ಯಕ್ಕೂ, ಅವನನ್ನು ಆಶ್ರಯಿಸುವ ಜೀವಿಗಳ ಅನನ್ಯ ಭಕ್ತಿಗೂ ಆಕರವಾದದ್ದು ಎಂಬುದು ಇಲ್ಲಿಯ ವಿಷಯ.

Garani Srinivasan

ಏಕೆ ಬನ್ನು ಎಂದರೆ, ಬ್ರಹ್ಮನ ಕಪಾಲವನ್ನು ಕೈಯಲ್ಲಿ ಹಿಡಿದು, ಹುಲಿಯ ತೊಗಲನ್ನು ಹೊದೆದು, ಭಿಕ್ಷಾಟನೆಯಾಗಿ ಬಿಕ್ಷೆ ಬೇಡುತ್ತಾ, ನಿಲ್ಲಲು ನೆಲೆಯಿಲ್ಲದಂತೆ ಅಲೆದಾಡುವ ರುದ್ರನಿಗೆ ತನ್ನ ಬಲಗಡೆಯಲ್ಲಿ ಆಶ್ರಯವಿತ್ತು ಅವನ ಸಂಕಟವನ್ನು ನೀಗಿಸಿ, ತಾನೂ ಅವನೊಡನೆ ನೆಲಸಿ ದರ್ಶನವೀವನು ಭಗವಂತ. ಸ್ವಾಮಿಯ ಸಹಜ ಸ್ವಭಾವವೇ ಇದು. ಯಾರು ದುಃಖಿಯೋ ಯಾರು ಸಂಕಟದಲ್ಲಿ ಸಿಲುಕಿರುವನೋ, ಯಾರಿಗೆ ಆಶ್ರಯವೆಂಬುದೇ ಇಲ್ಲವೋ ಅಂಥವನನ್ನು ಕೈಬಿಡದಂತೆ, ಆಶ್ರಯವನ್ನಿತ್ತು ರಕ್ಷಿಸುವ ವಾತ್ಸಲ್ಯ ಗುಣವುಳ್ಳವನು ಸ್ವಾಮಿ.

"ಕಪ್ಪದ್ದದ ಮರದ ... ಮೀನನ್ನು ತಿನ್ನುವಂತೆ":-

ಇದೊಂದು ಉಪಮಾನ. ನೀರ ನೆಲೆಗಳ ದಡದಲ್ಲಿ ಬೆಳೆದಿರುವ ಮರದ ರೆಂಬೆಗಳು ಬಗ್ಗಿ ನೀರಿಗೆ ಅಂಟಿಕೊಂಡಂತೆ ಬೆಳೆದಿವೆ. ಒಂದು ರೆಂಬೆಯ ಮೇಲೆ ಬಕಪಕ್ಷಿಯ ಮರಿ ಇದೆ. ತಾಯಿಪಕ್ಷಿ ಹತ್ತಿರದಲ್ಲೇ ನೀರಿನಲ್ಲಿದೆ. ಅದು (ವೆಳ್ಳರ) ಮೀನನ್ನು ಹಿಡಿದುಕೊಂಡಲ್ಲೇ, ಮರಿ ಅದನ್ನು ಗಮನಿಸಿ ರೆಂಬೆಯ ಮೂಲಕವೇ ನೀರಿನ ಅಂಚಿಗೆ ಇಳಿದು, ತಾಯಿಯ ಬಾಯಿಂದ ಮೀನನ್ನು ತಿನ್ನುತ್ತದೆ ಇದು ಇಲ್ಲಿನ ಚಿತ್ರ ತಾಯಿ ಉಣಿಸನ್ನು ಸಿದ್ಧ ಮಾಡುತ್ತದೆ. ಮರಿ ಅದನ್ನು ಶ್ರಮವಿಲ್ಲದಂತೆಯೇ ತಾನಾಗಿ ಪಡೆದು ತಿನ್ನುತ್ತದೆ. ತಾಯಿಯ ವಾತ್ಸಲ್ಯ ಔದಾರ್ಯಗಳೆಷ್ಟಿವೆ ಕಂಡಿರಾ! ಮೀನು ಹಿಡಿಯುವುದರಲ್ಲಿ ಮರಿಯ ಅಸಹಾಯಕತ್ವವೇನೆಂದು ತಾಯಿ ಅರಿತಿದೆ. ಅದಕ್ಕೆ ಉಣಿಸಬೇಡವೇ? ತನ್ನ ಬಾಗಿದ, ನೀರಿಗೆ ಅಂಟಿರುವ ರೆಂಬೆಯ ಬಳಿ ಮೀನನ್ನು ಹಿಡಿದರೆ, ತನ್ನ ಮರಿಗೆ ಅದು ಸುಲಭವಾಗಿ ಸಿಕ್ಕುವುದಲ್ಲ!

ಭಗವಂತನೂ ತಾಯಿಯೇ ಭಕ್ತ ಪರಾಯಣನು. ತನ್ನ ಭಕ್ತನು ತನ್ನನ್ನು ಸ್ವತಂತ್ರನಾಗಿ ಸೇರುವ ಶಕ್ತಿಯನ್ನು ಪಡೆದಿಲ್ಲ. ಅವನು ಅಸಹಾಯಕ. ಆದ್ದರಿಂದ, ಭಕ್ತನಿಗೆ ಕಾಲಕಾಲಕ್ಕೆ ಬೇಕಾದ್ದೇನು ಎಂಬುದನ್ನು ಭಗವಂತನೇ ಕಂಡುಕೊಳ್ಳುತ್ತಾನೆ. ಅಲ್ಲದೆ, ಅತಿಶಯವಾದ ವಾತ್ಸಲ್ಯದಿಂದ ಅವನಿಗೆ ಅತಿ ಸುಲಭನಾಗಿ ಒದಗಿಬರುವುದಕ್ಕಾಗಿ ತಿರುಕ್ಕುರುಂಗುಡಿಯೆಂಬ ದಿವ್ಯಕ್ಷೇತ್ರದಲ್ಲಿ ಅರ್ಚಾಮೂರ್ತಿಯಾಗಿ ನೆಲಸಿದ್ದಾನೆ. ಭಕ್ತನ ಮಗ್ಗುಲಲ್ಲೇ ಇದ್ದುಕೊಂಡು ಅವನನ್ನು ಬಿಡದೆ ರಕ್ಷಿಸುತ್ತಾನೆ.

2. துங்காரரவத்திரை வந்துலவு, தொடுகடலுள்
பொங்காரரவில் துயிலும் புனிதரூர் போலும்,
செங்காலன்னம் திகழ் தண்பணையில் பெடையோடும்,
கொங்கார் கமலத்தலரில் சேருங்குறுங்குடியே.

ತುಙ್ಗಾರರವತ್ತಿರೈ ವನ್ದುಲವ, ತೊಡುಕಡಲುಳ್
ಪೊಙ್ಗಾರರವಿಲ್ ತುಯಿಲುಮ್ ಪುನಿದರೂರ್ ಪೋಲುಮ್,

Garani Srinivasan

ಶೆಙ್ಗಾಲನ್ನಮ್ ತಿಗಳ್ ತಣ್ ಪಣೈಯಿಲ್ ಪೆಡೈಯೋಡುಮ್,
ಕೊಙ್ಗಾರ್ ಕಮಲತ್ತಲರಿಲ್ ಶೇರುಙ್ ಕುರುಙ್ಗುಡಿಯೇ

ತುಙ್ಗಮ್ துங்கம் = ಎತ್ತರವಾಗಿಯೂ; ಆರ್ ஆர் = ವಿಸ್ತಾರವಾಗಿಯೂ,
ಅರವಮ್ அரவம் = ಗದ್ದಲ ಮಾಡುತ್ತಲೂ, ಇರುವ ತಿರೈ திரை =
ಅಲೆಗಳು, ವನ್ದು வந்து = ಎಡೆಬಿಡದೆ ಬಂದು, ಉಲವ உலவ = ಹೊಯ್ದಾ
ಡುತ್ತಿರಲು (ಸಂಚರಿಸುತ್ತಿರಲು), ತೊಡು தொடு = ಆಳವಾದ, ಕಡಲುಳ್
கடலுள் = ಕಡಲಲ್ಲಿ, ಪೊಙ್ಗು ಆರ್ பொங்கு ஆர் = ಪ್ರಕಾಶದಿಂದ
ತುಂಬಿರುವ, ಅರವಿಲ್ அரவில் = ಹಾವಿನ ಮೇಲೆ, ತುಯಿಲುಮ್ துயி
லும் = ಪವಡಿಸುವ (ನಿದ್ರಿಸುವ) ಪುನಿದರ್ ~~ಪೋಲುಮ್~~ புனிதர் ~~ஊ~~
~~ரும்~~ = ಪರಮ ಪವಿತ್ರನ, ಊರ್ [ಪೋಲುಮ್ போலும்] ஊர் = ನೆಲಸಿರುವ ಸ್ಥಳದಂತೆ (ಸ್ಥಳ
ವೆಂದರೆ, ಶೆಮ್ ಕಾಲ್ செம் கால் = ಕೆಂಪು ಕಾಲುಗಳ, ಅನ್ನಮ್ அன்
னம் = ಹಂಸವು, ತಿಗಳ್ திகழ் = ಶೋಭಿಸುವ, ತಣ್ தண் = ತಂಪಾದ,
ಪಣೈಯಿಲ್ பணையில் = ನೀರ್ನೆಲೆಗಳಲ್ಲಿ, ಪೆಡೈಯೋಡುಮ್ பெ
டையோடும் = ತನ್ನ ಹೆಣ್ಣಿನೊಡನೆ, ಕೊಙ್ಗು ಆರ್ கொங்கு ஆர் =
ಪರಿಮಳ ತುಂಬಿರುವ, ಕಮಲತ್ತು ಅಲರಿಲ್ கமலத்து அலரில் =
ಕಮಲದ ಹೂವಿನಲ್ಲಿ, ಶೇರುಮ್ சேரும் = ಕೂಡಿಕೊಳ್ಳುವ, ಕುರು
ಙ್ಗುಡಿಯೇ குறுங்குடியே = ತಿರುಕ್ಕುರುಂಗುಡಿ ಕ್ಷೇತ್ರವೇ.

ಎತ್ತರವಾಗಿಯೂ ವಿಸ್ತಾರವಾಗಿಯೂ ಗದ್ದಲ ಮಾಡುತ್ತಲೂ ಇರುವ ~~ಆಳವಾದ ಕಡಲಲ್ಲಿ~~ ಅಲೆಗಳು ಎಡೆಬಿಡದೆ ಬಂದು ಸಂಚರಿಸುತ್ತಿರಲು, ಆಳವಾದ ಕಡಲಲ್ಲಿ ತೇಜಸ್ಸಿನಿಂದ ತುಂಬಿರುವ ಹಾವಿನ ಮೇಲೆ ಪವಡಿಸುವ ಪರಮ ಪವಿತ್ರನು ನೆಲಸಿರುವ ಸ್ಥಳವೆಂದರೆ, ಕೆಂಪು ಕಾಲುಗಳ ಹಂಸವು ಶೋಭಿಸುವ ತಂಪಾದ ನೀರಿನ ನೆಲೆಗಳಲ್ಲಿ ತನ್ನ ಹೆಣ್ಣಿನೊಡನೆ ಪರಿಮಳ ತುಂಬಿರುವ ಕಮಲದ ಹೂವಿನಲ್ಲಿ ಕೂಡಿಕೊಳ್ಳುವಂಥ ತಿರುಕ್ಕುರುಂಗುಡಿಯೇ (2)

ಕಡಲಲ್ಲಿ ದೊಡ್ಡ ದೊಡ್ಡ ಅಲೆಗಳು ಬಹಳ ಎತ್ತರಕ್ಕೆ ಏಳುವುವು. ಅವುಗಳ ಎಡೆಬಿಡದ ಚಲನೆಯಿಂದ ಕಡಲು ಕಲಕಿ ಹೋಗುವುದು. ಅಲೆಗಳ ~~ಚಲನೆಯು~~ ಏಳುವ ಬೀಳುವ ಗದ್ದಲವೂ ತುಂಬಿರುತ್ತದೆ. ಇಂಥ ಅಲ್ಲೋಲ ಕಲ್ಲೋಲದ ನಡುವೆ, ತೇಜಸ್ಸಿನಿಂದ ತುಂಬಿರುವ ಹಾವಿನ ಹಾಸಿಗೆಯಲ್ಲಿ ಭಗವಂತನು ನಿಶ್ಚಿಂತನಾಗಿ ಪವಡಿಸಿರುತ್ತಾನೆ. ಅವನು ಪರಮ ಪವಿತ್ರನು. ತನ್ನನ್ನು ಆಶ್ರಯಿಸಿರುವ ಭಕ್ತರಿಗೆ ಪ್ರಾಣಾಶ್ರಯವನ್ನು ನೀಡುವುದಾಗಲಿ ಅವರನ್ನು ಎಲ್ಲ ಕಾಲದಲ್ಲೂ ಎಲ್ಲ ರೀತಿಯಲ್ಲೂ ರಕ್ಷಿಸುವುದಾಗಲಿ ಸ್ವಾಮಿಯು ಮರೆಯುವವನೇ ಅಲ್ಲ. ಅದಕ್ಕಾಗಿಯೇ ಅವನು ತಿರುಕ್ಕುರುಂಗುಡಿಯಲ್ಲೂ ಇರುವುದು

3. வாழக்கண்டோம் வந்து காண்மின் தொண்டீர்காள்,
கேழல் செங்கண் மாமுகில் வண்ணர் மருவுமூர்.
ஏழைச் செங்கால் இன் துணை நாரைக்கிரை தேடி,
கூழைப் பார்வைக் கார்வயல் மேயும் குறுங்குடியே.

ವಾಳಕ್ಕಣ್ಡೋಮ್ ವನ್ದು ಕಾಣ್ಮಿನ್ ತೊಣ್ಡೀರ್ಗಾಳ್,
ಕೇಳಲ್ ಶೆಙ್ಗಣ್ ಮಾಮುಗಿಲ್ ವಣ್ಣರ್ ಮರುವುಮೂರ್,
ಏಳೈಚ್ಚೆಙ್ಗಾಲ್ ಇನ್ತುಣೈ ನಾರೈಕ್ಕಿರೈ ತೇಡಿ,
ಕೂಳೈಪ್ಪಾರ್ವೈಕ್ಕಾರ್ವಯಲ್ ಮೇಯುಮ್ ಕುರುಙ್ಗುಡಿಯೇ.

ವಾಳಕ್ಕಣ್ಡೋಮ್ வாழக் கண்டோம் = ಬಾಳುವ ರೀತಿಯನ್ನು ಕಂಡುಕೊಂಡಿದ್ದೇವೆ, ವನ್ದು வந்து = ಬಂದು, ಕಾಣ್ಮಿನ್ காண்மின் = (ನೀವೂ) ಕಂಡುಕೊಳ್ಳಿರಿ, ತೊಣ್ಡೀರ್ಗಾಳ್ தொண்டீர்காள் = ಭಕ್ತರೇ (ದಾಸಜನರೇ), ಕೇಳಲ್ கேழல் = ಮಹಾವರಾಹನಾದವನೂ, ಶೆಙ್ಗಣ್ செங்கண் = ಕೆಂದಾವರೆಯಂತೆ ಕಣ್ಣುಳ್ಳವನೂ, ಮಾಮುಗಿಲ್ ವಣ್ಣರ್ மாமுகில் வண்ணர் = ಬಲುದೊಡ್ಡ ಕಾಲಮೇಘದ ಬಣ್ಣದವನೂ, ಮರುವುಮ್ மருவும் = ನೆಲಸಿರುವ, ಊರ್ ஊர் = ಸ್ಥಳವೆಂದರೆ, ಏಳೈ ஏழை = ಅಸಹಾಯಕಳಿಯೂ, ಶೆಙ್ಗಾಲ್ செங்கால் = ಕೆಂಪಗೆ ಕಾಲುಗಳುಳ್ಳದ್ದೂ, ಇನ್ இன் = ಇನಿಯದೂ, ಆದ, ತುಣೈ துணை = ಜೊತೆಯ, (ಸಂಗಾತಿಯಾದ), ನಾರೈಕ್ಕು நாரைக்கு = ಬಕಪಕ್ಷಿಗೆ, ಇರೈ ತೇಡಿ இரை தேடி = ಆಹಾರವನ್ನು ಹುಡುಕಿ, ಕೂಳೈಪ್ಪಾರ್ವೈ கூழைப் பார்வை = ಹತ್ತಿರದ ನೋಟನೋಡುತ್ತ, ಕಾರ್ கார் = ಕರಿಯ, ವಯಲ್ வயல் = ಬಯಲುಗಳಲ್ಲಿ, ಮೇಯುಮ್ மேயும் = ವಾಸಿಸುವ, ಕುರುಙ್ಗುಡಿಯೇ குறுங்குடியே = ತಿರುಕ್ಕುರುಂಗುಡಿಯೇ.

ನಾವು ಬಾಳುವ ರೀತಿಯನ್ನು ಕಂಡುಕೊಂಡೆವು. ಭಕ್ತರೇ, ಬಂದು ನೀವೂ ಕಂಡುಕೊಳ್ಳಿರಿ. ಮಹಾವರಾಹನಾದವನೂ, ಕೆಂದಾವರೆಯಂತೆ ಕಣ್ಣುಳ್ಳವನೂ, ಬಲುದೊಡ್ಡ ಕಾಲಮೇಘದ ಬಣ್ಣದವನೂ ನೆಲಸಿರುವ ಊರು ಎಂದರೆ, ಅಸಹಾಯಕಳಿಯೂ, ಕೆಂಪನೆಯ ಕಾಲುಗಳುಳ್ಳದೂ, ಇನಿಯದೂ, ಆದ ಸಂಗಾತಿಯಾದ ಬಕಪಕ್ಷಿಗೆ ಆಹಾರವನ್ನು ಹುಡುಕುತ್ತಾ, ಹತ್ತಿರದ ನೋಟನೋಡುತ್ತ, ಕರಿಯ ಬಯಲುಗಳಲ್ಲಿ ವಾಸಿಸುವ ತಿರುಕ್ಕುರುಂಗುಡಿಯೇ. (3)

ಆಳ್ವಾರರು ಹೇಳುತ್ತಾರೆ: ಭಕ್ತರೇ, ತಿರುಕ್ಕುರುಂಗುಡಿ ಕ್ಷೇತ್ರವು ಬಹಳ ಶ್ರೇಷ್ಠವಾದದ್ದು. ಅಲ್ಲಿ ವಾಸಿಸುವ ಪಕ್ಷಿಗಳೂ ಸಹ ಸ್ವಾರ್ಥಿಗಳಲ್ಲ. ಗಂಡು (ಬಕ) ಪಕ್ಷಿಯು ತನ್ನನ್ನು ಆಶ್ರಯಿಸಿರುವ, ಅಸಹಾಯಕಳಾದ ತನ್ನ ಸಂಗಾತಿಗೆ ಆಹಾರವನ್ನೊದಗಿಸುತ್ತ, ಅದರತ್ತ ತನ್ನ ಕುಡಿಗಣ್ಣನ್ನು ಹರಿಸುತ್ತ, ಕರಿಯ ಬಯಲುಗಳಲ್ಲಿ ವಾಸಿಸುತ್ತದೆಯಲ್ಲ! ಹಾಗೆಯೇ, ಆ ಕ್ಷೇತ್ರದಲ್ಲಿ ನೆಲಸಿರುವ ಭಗವಂತನು ಪರಮೋಪಕಾರಿ, ಆಶ್ರಿತವತ್ಸಲ, ಕಾರ್ಮುಗಿಲ ಬಣ್ಣದವನಾ ದಿವ್ಯಸುಂದರನಾಗಿ ಶೋಭಿಸುವವನು. ಅವನ ತಿರುವಡಿಗಳನ್ನಾಶ್ರಯಿಸಿ, ಸೇವೆ ಮಾಡುತ್ತಾ, ಸ್ವಾಮಿಯನ್ನು ಭಜಿಸಿ ಪೂಜಿಸುವವರನ್ನು ಅವನೆಂದಿಗೂ ಕೈಬಿಡುವುದಿಲ್ಲ. ಅವನನ್ನು ತಪ್ಪದೆ ಉಜ್ಜೀವನಗೊಳಿಸುತ್ತಾನೆ. ಭಕ್ತರೇ, ನಾನು ತಿರುಕ್ಕುರುಂಗುಡಿಯಲ್ಲಿ ಕಂಡುಕೊಂಡಿರುವ ಆತ್ಮೋದ್ಧಾರದ ಮಾರ್ಗವಿದೇ! ನಾನು ಅದರಿಂದ, ಸ್ವಾಮಿಯನ್ನಾಶ್ರಯಿಸುವುದರಿಂದ ಉಜ್ಜೀವನಗೊಂಡಿದ್ದೇನೆ. ನೀವೂ ನನ್ನಂತೆಯೇ ಸ್ವಾಮಿಯ ತಿರುವಡಿಗಳನ್ನಾಶ್ರಯಿಸಿ ನಿಮ್ಮ ಉದ್ಧಾರವನ್ನು ಕಂಡುಕೊಳ್ಳಿ

Garani Srinivasan

4. சிரமுனைந்துமைந்தும் சிந்தச்சென்று, அரக்க
னுரமும் கரமும் துணிக்க உரவோனூர் போலும்,
இரவும் பகலும் ஈண்தேன் முரல, மன்றெல்லாம்
குரவின் பூவே தான் மணநாறும் குறுங்குடியே.

ಶಿರಮುನ್ನೈನ್ದು ಮೈನ್ದುಮ್ ಶಿನ್ದಚ್ಚೆನ್ಱು, ಅರಕ್ಕ
ನುರಮುಮ್ ಕರಮುಮ್ ತುಣಿತ್ತ ಉರವೋನೂರ್ ಪೋಲುಮ್,
ಇರವುಮ್ ಪಗಲುಮ್ ಈನ್ ತೇನ್ ಮುರಲ, ಮನ್ಱೆಲ್ಲಾಮ್
ಕುರವಿನ್ ಪೂವೇತಾನ್ ಮಣನಾಱುಮ್ ಕುಱುಙ್ಗುಡಿಯೇ.

ಶಿರಮ್ சிரம் = ತಲೆಗಳು, ಐನ್ದುಮ್ ಐನ್ದುಮ್ ஐந்தும் ஐந்து
ம் = ಹತ್ತನ್ನು, ಶಿನ್ದ சிந்த = ಚೆಲ್ಲಾಡುವ ಹಾಗೆ, ಶೆನ್ಱು சென்று
= (ಲಂಕೆಗೆ) ಹೋಗಿ, ಅರಕ್ಕನ್ அரக்கன் = ರಾಕ್ಷಸನ, ಉರಮುಮ್
உரமும் = ಎದೆಯನ್ನು, ಕರಮುಮ್ கரமும் = ತೋಳು (ಕೈ)ಗಳನ್ನು,
ತುಣಿತ್ತ துணிக்க = ಕುಂದಗಿಸಿದ, ಉರವೋನ್ உரவோன் = ~~ಅ~~
~~[illegible]~~ ಅಮಿತ ಪರಾಕ್ರಮಿಯು, ಊರ್ ಪೋಲುಮ್ ஊர் போ
லும் = ನೆಲಸಿರುವ ಸ್ಥಳವೆಂದರೆ, ಇರವುಮ್ இரவும் = ರಾತ್ರಿಯೂ,
ಪಗಲುಮ್ பகலும் = ಹಗಲೂ, ಈನ್ ஈண் = ಮಧುರವಾಗಿ, ತೇನ್
தேன் = ದುಂಬಿಗಳು, ಮುರಲ முரல = ಗಾನಮಾಡುತ್ತಿರುವ, ಮನ್ಱು
ಎಲ್ಲಾಮ್ மன்று எல்லாம் = ಊರಿನ ಚೌಕಗಳಲ್ಲೆಲ್ಲಾ, ~~[illegible]~~ ಕೇಬಲು
ಕುರವಿನ್ ಪೂವೇ ತಾನ್ குரவின் பூவே தான் = ಶಾಲಿ, ಅಡಕೆ, ಶೆಂಗು,
ಹೂಗಳೇ, ಮಣಮ್ மணம் = ಪರಿಮಳವನ್ನು, ನಾಱುಮ್ நாறு
ம் = ಹರಡುತ್ತಿರುವ, ಕುಱುಙ್ಗುಡಿಯೇ குறுங்குடியே = ತಿರುಕ್ಕುಱುಂ
ಗುಡಿಯೆಂಬುದೇ.

ಹತ್ತು ತಲೆಗಳನ್ನು ಚೆಲ್ಲಾಡುವ ಹಾಗೆ (ಲಂಕೆಗೆ) ಹೋಗಿ, ರಾಕ್ಷಸ
ನ ಎದೆಯನ್ನು ತೋಳುಗಳನ್ನು ಕುಂದಗಿಸಿದ ಅಮಿತ ಪರಾಕ್ರಮಿಯು
ನೆಲಸಿರುವ ಸ್ಥಳವೆಂದರೆ, ದುಂಬಿಗಳು ರಾತ್ರಿಯೂ ಹಗಲೂ (ಎಡೆಬಿಡದೆ)
ಮಧುರವಾಗಿ ಗಾನಮಾಡುತ್ತಿರುವ ಮತ್ತು ಶಾಲಿ, ಅಡಕೆ, ಶೆಂಗು, ಕೇಬಲು
ಹೂಗಳೇ ಪರಿಮಳವನ್ನು ಊರಿನ ಚೌಕಗಳಲ್ಲೆಲ್ಲಾ ಹರಡುತ್ತಿರುವ ತಿರುಕ್ಕು (4)
ಱುಂಗುಡಿಯೆಂಬುದೇ.

ಆೞ್ವಾರರು ಹೇಳುತ್ತಾರೆ: ತಿರುಕ್ಕುಱುಂಗುಡಿಯಲ್ಲಿ ~~ಎಡೆಬಿಡದ~~
ದುಂಬಿಗಳ ಎಡೆಬಿಡದ ಮಧುರವಾದ ಗಾನವೂ, ಶಾಲಿ ಶೆಂಗು ಕೇಬಲು
ಅಡಕೆಮುಂತಾದವುಗಳ ಹೂಗಳ ಪರಿಮಳವೂ ಊರಿನ ಚೌಕಗಳಲ್ಲೆ
ಲ್ಲಾ ತುಂಬಿಕೊಂಡು ಸಂತೋಷವನ್ನುಂಟುಮಾಡುವುದು. ಅಲ್ಲಿಂದಲೇ
ಅಮಿತ ಪರಾಕ್ರಮಿಯಾದ ಭಗವಂತನು ನೆಲಸಿದ್ದಾನೆ. ಅಂದರೆ, ಅವನೇ

Garani Srinivasan

ಶ್ರೀರಾಮನನ್ನು ಅವತರಿಸಿ, ಲಂಕೆಯನ್ನು ಪ್ರವೇಶಿಸಿ, ದುಷ್ಟರಾಷ್ಟ್ರನಾದ ರಾವಣನ ಹತ್ತು ತಲೆಗಳನ್ನೂ ಇಪ್ಪತ್ತು ತೋಳುಗಳನ್ನೂ, ಎದೆಯನ್ನೂ ಕಂಡರಿಸಿ ಹಾಕಿದನು. ಈಗ, ಅವನೇ ಆಶ್ರಿತರಕ್ಷಕನಾಗಿ ಭಕ್ತರನ್ನು ಉದ್ಧರಿಸುವುದಕ್ಕಾಗಿ, ತಿರುಕ್ಕುರುಂಗುಡಿಯಲ್ಲಿ ನೆಲಸಿದ್ದಾನೆ. ಭಕ್ತರೇ, ಬನ್ನಿ, ಧ್ಯಾನಿಯನ್ನು ತ್ರಯಿಸಿ, ನಾವೆಲ್ಲರೂ ಉದ್ಧಾರವಾಗೋಣ

5. கவ்வைக்களிற்று மன்னர் மாளக் களிமாந்தேர்
ஐவர்க்காய், அன்றமரி லுய்த்தானூர் போலும்,
மைவைத்திலங்கு கண்ணார் தங்கள் மொழியொப்பான்,
கொவ்வைக்கனிவாய்க் கிள்ளை பேசும் குறுங்குடியே.

ಕವ್ವೈಕ್ಕಳಿಟ್ರು ಮನ್ನರ್ ಮಾಳಕ್ಕಲಿಮಾನ್ದೇರ್
ಐವರ್ಕ್ಕಾಯ್, ಅನ್ರಮರಿಲುಯ್ತ್ತಾನೂರ್ ಪೋಲುಮ್,
ಮೈವೈತ್ತಿಲಙ್ಗು ಕಣ್ಣಾರ್ ತಙ್ಗಳ್ ಮೊಳಿಯೊಪ್ಪಾನ್,
ಕೊವ್ವೈಕ್ಕನಿವಾಯ್ ಕ್ಕಿಳ್ಳೈ ಪೇಶುಮ್ ಕುರುಙ್ಗುಡಿಯೇ.

ಕವ್ವೈ கவ்வை = ಘೋಂಕರಿಸುತ್ತಿರುವ, ಕಳಿಟ್ರು களிறு = ಆನೆಗಳ, ಮನ್ನರ್ மன்னர் = ರಾಜರುಗಳು, ಮಾಳ மாளா = ನಾಶವಾಗುವಂತೆ, ಮಾ மா = ದೊಡ್ಡ, ಕಲಿ கலி = ಬಲಿಷ್ಠವಾದ (ಯುದ್ಧಯೋಗ್ಯವಾದ), ಐವರ್ಕ್ಕು ஐவர்க்கு = ಪಂಚಪಾಂಡವರಿಗೆ, ತೇರ್ தேர் = ರಥಗಳ, ಆಯ್ ஆய் = ಸಹಾಯಕನಾಗಿ, ಅನ್ರು அன்று = ಅಂದು, ಅಮರಿಲ್ அமரில் = ಯುದ್ಧದಲ್ಲಿ, ಉಯ್ತ್ತಾನ್ உய்த்தான் = ಜಯಗಳಿಸಿದವನ (ಉದ್ಧರಿಸಿದವನ), ಊರ್ ಪೋಲುಮ್ ஊர் போலும் = ಊರು ಎಂದರೆ, ಮೈವೈತ್ತು மைவைத்து = ಕಾಡಿಗೆಯನ್ನು ಹಚ್ಚಿ, ಇಲಙ್ಗು இலங்கு = ಬೆಳಗುವ, ಕಣ್ಣಾರ್ ತಙ್ಗಳ್ கண்ணார் தங்கள் = ಕಣ್ಣುಳ್ಳವರ, ಮೊಳಿ மொழி = ಭಾಷೆ (ಮಾತನ್ನು)ಯನ್ನು, ಒಪ್ಪಾನ್ ஒப்பான் = ಹೋಲುವಂತೆ, ಕೊವ್ವೈಕ್ಕನಿವಾಯ್ கொவ்வைக்கனிவாய் = ತೊಂಡೆಹಣ್ಣಿನಂತೆ ಬಾಯುಳ್ಳ, ಕಿಳ್ಳೈ கிளி = ಗಿಳಿಗಳು, ಪೇಶುಮ್ பேசும் = ಮಾತನಾಡುವ, ಕುರುಙ್ಗುಡಿಯೇ குறுங்குடியே = ತಿರುಕ್ಕುರುಂಗುಡಿ ಎಂಬುದೇ.

ಘೋಂಕರಿಸುತ್ತಿರುವ ಆನೆಗಳ ಸೈನ್ಯವುಳ್ಳ ರಾಜರುಗಳು ನಾಶವಾಗುವಂತೆ, ಬಲಿಷ್ಠವೂ ಯುದ್ಧಯೋಗ್ಯವೂ ಆದ ದೊಡ್ಡ ರಥಗಳ ಐವರಿಗೆ (ಪಂಚಪಾಂಡವರಿಗೆ) ಸಹಾಯಕನಾಗಿ, ಅಂದು, ಯುದ್ಧದಲ್ಲಿ ಜಯ ಗಳಿಸಿಕೊಟ್ಟು ಉದ್ಧರಿಸಿದವನ ಊರು ಎಂದರೆ ಕಾಡಿಗೆಯನ್ನು ಹಚ್ಚಿ ಬೆಳಗುವ ಕಣ್ಣುಳ್ಳವರ

ಮಾಣಿಕ್ಯ ಹೂವಿನಂತೆ ಕೆಂಪೇರಿದ್ದ ಬಾಯುಳ್ಳ ಗಿಳಿಗಳು ಮಾತನಾ-
ಡುವ ತಿರುಕ್ಕುರುಂಗುಡಿಯೆಂಬುದೇ

ಆಳ್ವಾರರು ಹೇಳುತ್ತಾರೆ: ತಿರುಕ್ಕುರುಂಗುಡಿಯಲ್ಲಿ ಹೆಂಗಸರು ಕಣ್ಣಿಗೆ ಕಾಡಿಗೆಯಿಟ್ಟು ಅವರ ಸುಂದರ ಮುಖಕ್ಕೆ ಅಂದಕಟ್ಟುವಂತೆ ಅಲಂಕರಿಸಿ ಕೊಂಡಿರುತ್ತಾರೆ. ಅವರ ಮಾತೂ ಆಕರ್ಷಕವೇ — ಮೃದುವಾಗಿ ಮತ್ತು ಮಧುರವಾಗಿರುತ್ತದೆ. ಆ ಕ್ಷೇತ್ರದಲ್ಲಿ ವಾಸಿಸುವ ಗಿಳಿಗಳೂ ಹಾಗೆಯೇ. ತೊಂಡೆ ಹಣ್ಣಿನಂತೆ ಕೆಂಪಗೆ ಅಂದವಾಗಿರುವ ಬಾಯನ್ನುಳ್ಳವು. ಇತರರ ವಿಷಯಗಳನ್ನೂ ಅವೂ ಮಾತನಾಡುತ್ತವೆ. ಹೆಂಗಸರ ಹಿತವಾದ ಮಾತನ್ನೇ ಕೇಳುವಂತೆ ಗಿಳಿಗಳೂ ಮನೋಹರವಾಗಿ ಮಾತನಾಡುತ್ತವೆ. ರಮ್ಯವಾದ ಆ ಕ್ಷೇತ್ರದಲ್ಲಿ ಭಗವಂತನೂ ನೆಲಸಿದ್ದಾನೆ. ಹಿಂದೆ, ಅವನೇ ಶ್ರೀಕೃಷ್ಣನಾಗಿ ಅವತರಿಸಿದನು. ಅವನು ಪಾಂಡವರ ~~ಬೆಂಬ~~ ಬೆಂಬಲಿಗನಾಗಿ ನಿಂತು, ಮಹಾಭಾರತ ಯುದ್ಧದಲ್ಲಿ ಅವರ ಸಹಾಯಕನಾಗಿ, ಅವರಿಗೆ ಜಯಗಳಿಸಿಕೊಟ್ಟು ಅವರನ್ನು ರಕ್ಷಿಸಿದನು. ಭಕ್ತರೇ ಬನ್ನಿ. ಸ್ಥಳವನ್ನು ಆಶ್ರಯಿಸೋಣ. ನಾವೂ ಸಹ ಅವನ ಕೃಪೆಗೆ ಪಾತ್ರರಾಗಿ ನಮ್ಮ ಆತ್ಮೋದ್ಧಾರವನ್ನು ಮಾಡಿಕೊಳ್ಳೋಣ

6. சீர்நீர் வண்ண மாமலர் கொண்டு விரை யேந்தி,
தூநீர் பரவித் தொழுமின் எழுமின் தொண்டீர் காள்,
மாநீர் வண்ணர் மருவி யுறையு மிடம், வானில்
கூநீர் மதியை மாடம் தீண்டும் குறுங்குடியே

ಶೀನೀರ್ ವಣ್ಣ ಮಾಮಲರ್ ಕೊಣ್ಡು ವಿರೈಯೇನ್ದಿ,
ತೂನೀರ್ ಪರವಿತ್ತೊಳುಮಿನೆಳುಮಿನ್ ತೊಣ್ಡೀರ್ಗಾಳ್,
ಮಾನೀರ್ ವಣ್ಣರ್ ಮರುವಿಯುರೈಯುಮಿಡಮ್, ವಾನಿಲ್
ಕೂನೀರ್ ಮದಿಯ್ಯೆ ಮಾಡಮ್ ತೀಣ್ಡುಮ್ ಕುಱುಙ್ಗುಡಿಯೇ,

ಶೀ சீ = ಕಾಂತಿಯನ್ನು, ನೀರ್ நீர் = ನೀರನ್ನು, ವಣ್ಣ வண்ணம் = ಬಗೆಬಗೆಯ (ಸುಂದರವಾದ) ಬಣ್ಣದ, ಮಾ மா = ಶ್ರೇಷ್ಠವಾದ, ಮಲರ್ மலர் = ಹೂಗಳನ್ನು, ಕೊಣ್ಡು கொண்டு = ತೆಗೆದುಕೊಂಡು, ವಿರೈ விரை = ಗಂಧ, ಏನ್ದಿ ஏந்தி = (ಕೈಚಾಚಿ) ಸಮರ್ಪಿಸಿ, ~~ಪರವಿ பரவி =~~ ~~ಸ್ತುತಿಸಿ~~, ತೂ தூ = ಪರಿಶುದ್ಧರಾಗಿ, ನೀರ್ நீர் = ನೀವು, ಪರವಿ பரவி = ಸ್ತುತಿಸಿ, ತೊಳುಮಿನ್ தொழுமின் = ಪೂಜಿಸಿ (ಸೇವೆ ಮಾಡಿ), ಎಳುಮಿನ್ எழுமின் = ಉಜ್ಜೀವನಗೊಳ್ಳಿರಿ, ತೊಣ್ಡೀರ್ಗಾಳ್ தொண்டீர்காள் = ಭಕ್ತರೇ, ಮಾನೀರ್ ವಣ್ಣರ್ மாநீர் வண்ணர் = ಕಡಲ ಬಣ್ಣದವರು, ಮರುವಿ மருவி = ನೆಲಸಿ, ಉರೈಯುಮ್ உறையும் = ಶಾಶ್ವತವಾಗಿರುವ, ಇಡಮ್ இடம் = ಸ್ಥಳವೆಂದರೆ, ವಾನಿಲ್ வானில் = ಆಕಾಶದಲ್ಲಿ, ಕೂನ್ ನೀರ್ கூன்நீர் = ಬಗ್ಗಿರುವ ಸ್ವಭಾವದ,

Garani Srinivasan

ಮುಟಿಯ್ವ ಮದಿಯೈ = ಚಂದ್ರನನ್ನು, ಮಾಡಮಾ மாடம் = ಮಹಡಿಮ
ನೆಗಳು, ಶೇಣ್ಡುಮಾ ಕ್ಕೊಣ್ಡುಮ್ = ಸವರುತ್ತಿರುವಂಥ, ಕುಱುಂಗುಡಿ
ಯೇ குறுங்குடியே = ತಿರುಕ್ಕುರುಂಗುಡಿಯೆಂಬುದೇ.

ಭಕ್ತರೇ, ಚೆಂಕಿಯನ್ನು ನೀರನ್ನು ಬಗೆಬಗೆಯ ಸುಂದರವಾದ ಬಣ್ಣದ ಉತ್ತಮವಾದ ಹೂಗಳನ್ನು ತೆಗೆದುಕೊಂಡು, ನೀವು ಪರಿಶುದ್ಧರಾಗಿ, ಬೇಗ ಕೈನೀಡಿ ಸಮರ್ಪಿಸಿ, ಸ್ತುತಿಸಿ, ಸೇವೆ ಮಾಡಿ (ಪೂಜಿಸಿ) ಉಜ್ಜೀವನಗೊಳ್ಳಿರಿ. ಕಡಲವಣ್ಣನ ಸ್ವಾಮಿಯು ನೆಲಸಿರುವ ಮತ್ತು ಕೀರ್ತಿ ಪಡೆದಿರುವ ಸ್ಥಳವೆಂದರೆ, ಬಾನಿನಲ್ಲಿ (ಬಿಲ್ಲಿನಂತೆ) ಬಗ್ಗಿರುವ ಸ್ವಭಾವದ ಚಂದ್ರನನ್ನು ಮಹಡಿಮನೆಗಳು ಸವರುತ್ತಿರು (6)
ವಂಥ ತಿರುಕ್ಕುರುಂಗುಡಿಯೆಂಬುದೇ.

ಆಳ್ವಾರರು ಹೇಳುತ್ತಾರೆ: ಭಕ್ತರೇ, ತಿರುಕ್ಕುರುಂಗುಡಿ ಕ್ಷೇತ್ರದಲ್ಲಿ ಬಹಳ ಎತ್ತರವಾದ ಮುಗಿಲು ಮುಟ್ಟುವಂಥ ಮಹಡಿ ಮನೆಗಳಿವೆ. ಬಾನಿನಲ್ಲಿ ಬೆಳಗುವ ಬಾಲಚಂದ್ರನನ್ನು ಅವು ಸವರುತ್ತ ಇರುತ್ತವೆ. ಅಲ್ಲಿಯೇ ಕಡಲವಣ್ಣನಾದ ಭಗವಂತನು ಭಕ್ತರನ್ನು ಉದ್ಧರಿಸಬೇಕೆಂಬ ಆಶೆಯಿಂದ ಶಾಶ್ವತವಾಗಿ ನೆಲಸಿದ್ದಾನೆ. ಭಕ್ತರೇ, ಬೇಗ ನೀವು ಪರಿಶುದ್ಧರಾಗಿ. ಪೂಜೆಗೆ ಬೇಕಾದ ವಸ್ತುಗಳನ್ನು ಸಲಕರಣೆಗಳನ್ನು ಅಣಿ ಮಾಡಿಕೊಳ್ಳಿ. ಸ್ವಾಮಿಯ ಬಳಿಗೆ ~~[illegible]~~ ಹೋಗಿ. ಅವನಿಗೆ ಭಕ್ತಿಯಿಂದ ಕೈನೀಡಿ ಎಲ್ಲವನ್ನು ಸಮರ್ಪಿಸಿ. ಸ್ವಾಮಿಯನ್ನು ಸ್ತುತಿಸಿ. ಅವನನ್ನು ಪೂಜಿಸಿ. ಅವನ ತಿರುವಡಿಗಳನ್ನಾಶ್ರಯಿಸಿ. ಅವನ ಸೇವೆ ಮಾಡಿ ಉಜ್ಜೀವನಗೊಳ್ಳಿ.

'ಚೆಂಕಿ' — ಧೂಪ, ದೀಪ, ನೀರಾಜನ, ಮಂಗಳಾರತಿಗಳು. 'ನೀರು' — ಅರ್ಘ್ಯ, ಪಾದ್ಯ, ಆಚಮನೀಯ, ಸ್ನಾನಗಳು. 'ಬಗೆಬಗೆಯ ಹೂಗಳು' — ಸ್ವಾಮಿಯನ್ನು ಅವುಗಳಿಂದ ವಿಧವಿಧವಾಗಿ ಕಣ್ಣು ತಣಿಯುವಂತೆ ಅಲಂಕರಿಸುವುದು. ಇವುಗಳಲ್ಲದೆ, ಅರ್ಚನೆ, ನೈವೇದ್ಯ, ಪ್ರದಕ್ಷಿಣನಮಸ್ಕಾರ, ಸ್ತುತಿ, ನುತಿ, ಛತ್ರ, ಚಾಮರ, ನೃತ್ಯ, ಗೀತ, ವಾದ್ಯ ಮುಂತಾದವು ನಾನಾ ಉಪಚಾರಗಳು. ಭಗವಂತನನ್ನು ಒಲಿಸಿಕೊಳ್ಳುವುದಕ್ಕೆ ಇವು ಭಕ್ತಿಕರ್ಮಗಳು.

7. வல்லிச் சிறு நுண்ணிடையாரிடை நீர் வைக்கின்ற,
அல்லல் சிந்தை தவிர அடைமினடியீர்காள்!,
சொல்லின் திருவேயனையார் கனிவாயெயிறொப்பான்,
கொல்லைமுல்லை மெல்லரும்பீனும் குறுங்குடியே.

ವಲ್ಲಿಚ್ಚಿಱು ನುಣ್ಣಿಡೈಯಾರಿಡೈ ನೀರ್ ವೈಕ್ಕಿನ್ಱ,
ಅಲ್ಲಲ್ ಶಿನ್ದೈ ತವಿರ ಅಡೈಮಿನಡಿಯೀರ್ಗಾಳ್,
ಶೊಲ್ಲಿನ್ ತಿರುವೇಯನೈಯಾರ್ ಕನಿವಾಯೆಯಿಱೊಪ್ಪಾನ್,
ಕೊಲ್ಲೈ ಮುಲ್ಲೈ ಮೆಲ್ಲರುಮ್ಬೀನುಮ್ ಕುಱುಙ್ಗುಡಿಯೇ.

ವಲ್ಲಿ வல்லி = ಬಳ್ಳಿಯಂತೆ, ಶಿಱು சிறு = ಸಣ್ಣದಾದ, ನುಣ್ நுண் =

Garani Srinivasan

ನುಣುಪಾದ, ಇಡೈಯಾರ್ ಇಡೈ இடையார் இடை = ನಡುವುಳ್ಳವ
ರಲ್ಲಿ, ನೀರ್ நீர் = ನೀವು, ವೈಕ್ಕಿನ್ರ வைக்கின்ற = ಇಟ್ಟಿರುವ
(ಇಡುವ), ಅಲ್ಲಲ್ அல்லல் = ಸಂಕಟವನ್ನು, ಶಿನ್ದೈ சிந்தை = ಹಿಂಸೆ
ವ್ಯಥೆಗಳನ್ನು, ತವಿರ தவிர = ನೀಗಿಸುವುದಕ್ಕಾಗಿ, ಅಡೈಮಿನ್ அடை
மின் = ಹೋಗಿ ಸೇರಿ, ಅಡಿಯೀರ್ಗಾಳ್ அடியீர்காள் = ಪಾದ
ಸೇವಕರಾದ ಭಕ್ತರೇ. ಶೊಲ್ಲಿಲ್ சொல்லில் = ಹೇಳುವುದಾದರೆ, (ವರ್ಣ
ನೆಯಲ್ಲಿ), ತಿರುವೇ ಅನ್ನೈಯಾರ್ திருவே அனையார் = ಶ್ರೀದೇವಿ
ಯನ್ನೇ ಹೋಲುವವರ, ಕನಿವಾಯ್ கனிவாய் = ತೊಂಡೆಹಣ್ಣಿನ
ಬಾಯಿಯ, ಎಯಿಱು ಒಪ್ಪಾನ್ எயிறு ஒப்பான் = ಹಲ್ಲುಗಳಂತೆ,
ಕೊಲ್ಲೈ ಮುಲ್ಲೈ கொல்லை முல்லை = ಬಯಲುಗಳಲ್ಲಿ ಬೆಳೆಯುವ
ಮಲ್ಲಿಗೆಯ, ಮೆಲ್ மெல் = ಮೃದುವಾದ (ಕೋಮಲವಾದ), ಅರುಮ್ಬು-
அரும்பு = ಮೊಗ್ಗುಗ~~ಳನ್ನು~~, ಈನುಮ್ ஈனும் = ಉತ್ಪತ್ತಿ ಮಾಡುವಂ
ಥ, ಕುರುಂಗುಡಿಯೇ குறுங்குடியே = ತಿರುಕ್ಕುರುಂಗುಡಿಯೆಂಬುದೇ.

ಪಾದಸೇವಕರಾದ ಭಕ್ತರೇ, ಬಳ್ಳಿಯಂತೆ ಸಣ್ಣ ನುಣುಪಾದ ನಡು
ವುಳ್ಳವರಲ್ಲಿ ನೀವು ಇಡುವ ಸಂಕಟವನ್ನು ಹಿಂಸೆ ವ್ಯಥೆಗಳನ್ನು ನೀಗಿಸು
ವುದಕ್ಕಾಗಿ ಹೋಗಿ ಸೇರಿ. ವರ್ಣಿಸುವುದಾದರೆ, ಶ್ರೀದೇವಿಯನ್ನೇ ಹೋಲು
ವವರ ತೊಂಡೆಹಣ್ಣಿನ ಬಾಯಿಯ ಹಲ್ಲುಗಳಂತೆ ಬಯಲುಗಳಲ್ಲಿ ಬೆಳೆ
ಯುವ ಮಲ್ಲಿಗೆಯ ಕೋಮಲವಾದ ಮೊಗ್ಗುಗಳನ್ನು ಉಂಟುಮಾಡು (7)
ವಂಥ ತಿರುಕ್ಕುರುಂಗುಡಿಯೇ ಅದು

ಹಿಂದಿನ ಪಾಶುರದಲ್ಲಿ ಆಳ್ವಾರರು ಬೇಗ ಪರಿಶುದ್ಧರಾಗಿ ಭಗ
ವಂತನ ಸೇವೆಯಲ್ಲಿ ತೊಡಗಿರೆಂದು ಭಕ್ತರಿಗೆ ಕರೆ ಕೊಟ್ಟರು. ಏಕೆ
ಎಂಬುದನ್ನು ಇಲ್ಲಿ ಹೇಳಲಿದ್ದಾರೆ.

ಆಳ್ವಾರರು ಹೇಳುತ್ತಾರೆ: ಭಕ್ತರೇ, ನೀವು ಸಾಂಸಾರಿಕ ದುಃಖ
ಸಂಕಟಗಳಿಗೆ ಈಡಾಗಿರುವವರು. ~~ಸಣ್ಣ ನಡುವಿನ~~, ಬಳ್ಳಿಯಂತೆ
ಬಳುಕುವ ಸಣ್ಣನಡುವಿನ ಸ್ತ್ರೀಯರ ವಿಷಯದಲ್ಲಿ ನೀವು ಹಚ್ಚಿಕೊಂ
ಡಿರುವ ಹಿಂಸೆ ವ್ಯಥೆಗಳನ್ನು ನೀವು ತೊಲಗಿಸಿಕೊಳ್ಳುವುದಕ್ಕೆ ಭಗ
ವಂತನ ತಿರುವಡಿಗಳ ಆಶ್ರಯ ಮತ್ತು ಸೇವೆಗಳೇ ಉಪಾಯ. ಆದ್ದರಿಂ
ದ, ನೀವು ಆದಷ್ಟು ಬೇಗ ನಿಮ್ಮ ಲೌಕಿಕ ಜೀವನವನ್ನು ಬದಲಾಯಿಸಿ
ಕೊಳ್ಳಿ. ನಡೆಯಿರಿ ಭಗವಂತ ಸಾನ್ನಿಧ್ಯಕ್ಕೆ: ಪರಮಸುಂದರಿಯಾದ
ಶ್ರೀದೇವಿಯನ್ನೇ ಹೋಲುವಂಥ ಸುಂದರ ಸ್ತ್ರೀಯರ ತೊಂಡುಟಿಗಳ
ನಡುವೆ ಕಿರಿ ಕಾಣಿಸಿಕೊಳ್ಳುವ ಶುಭ್ರವಾದ ಬಿಳಿಯ ಹಲ್ಲಿನಂತೆ
ಪ್ರಕೃತಿ ಶ್ರೀಯ ಮುಖದಲ್ಲಿ (ಹೊಲಗಳಲ್ಲಿ ಬೆಳೆಯುವ) ಕಾಣಿಸಿಕೊ
ಳ್ಳುವ ಕೋಮಲವಾದ ಮಲ್ಲಿಗೆ ಮೊಗ್ಗುಗಳು ಎಲ್ಲೆಲ್ಲೂ ತುಂಬಿಕೊಂ
ಡಿರುವುದು ತಿರುಕ್ಕುರುಂಗುಡಿಯಲ್ಲಿ. ಭಕ್ತೋದ್ಧಾರಕನಾಗಿ ಭಗವಂತ
ನು ನೆಲಸಿರುವುದು ಅಲ್ಲಿಯೇ. ನೀವು ಹೋಗಿ ಸೇರಬೇಕಾದದ್ದು,

ಭಗವಂತನ ಸೇವೆ ಮಾಡಬೇಕಾದ್ದು ಅಲ್ಲವೇ.

ಭಗವಂತನ ನಿತ್ಯನಿವಾಸಿಯಾಗಿ ಇರುವವಳು ಶ್ರೀದೇವಿ. ದೇವಿಯು ಮಂದಹಾಸಕ್ಕೆ ಕಾರಣ(?) ಭಕ್ತನಿಗೆ ಭಗವಂತನ ಕೃಪೆ ತಪ್ಪದೆ ಬರುತ್ತದೆ. ತಿರುಕ್ಕುರುಂಗುಡಿಯಲ್ಲಿ ಹಸಿರಾದ ಬಯಲುಗಳಲ್ಲೆಲ್ಲಾ ಹೇರಳವಾಗಿ ಮಲ್ಲಿಗೆ ಬಳ್ಳಿಗಳು. ಅವುಗಳಲ್ಲಿ ಶುಭ್ರವಾದ ಬಿಳಿಯ ಮೊಗ್ಗುಗಳು. ಅವು ಶ್ರೀದೇವಿಯ ಬಾಯಿಂದ ಸ್ವಲ್ಪವೇ ಕಾಣಿಸುವ(?) ಹಲ್ಲುಗಳಂತೆ ತೋರುತ್ತಾ ಹರ್ಷವನ್ನು ತುಂಬುತ್ತವೆ. ಬಹು ಸುಂದರವಾದ ಉಪಮಾನವಿದು!

8. நாராரிண்டை நாண்மலர் கொண்டு நந்தமர்காள்,
ஆராவன்போடு எம்பெருமானூரடைமின்கள்,
தாராவாரும் வார்புனல் மேய்ந்து வயல்வாழும்,
கூர்வாய்நாரை பேடையோடாடும் குறுங்குடியே.

ನಾರಾರಿಣ್ಡೈ ನಾಣ್ಮಲರ್ ಕೊಣ್ಡು ನನ್ದಮರ್ಗಾಳ್,
ಆರಾವನ್ಬೋಡು ಎಮ್ಬೆರುಮಾನೂರಡೈಮಿನ್ಗಳ್,
ತಾರಾವಾರುಮ್ ವಾರ್ಪುನಲ್ ಮೇಯ್ನ್ದು ವಯಲ್ ವಾಳುಮ್,
ಕೂರ್ವಾಯ್ ನಾರೈ ಪೇಡೈಯೊಡಾಡುಮ್ ಕುಱುಙ್ಗುಡಿಯೇ.

ನಾರ್ நார் = ನಾರಿನಿಂದ, ಆರ್ ஆர் = ತುಂಬಿರುವ, ನಾಣ್ ಮಲರ್ நாண் மலர் = ಹೊಸದಾಗಿ ಅರಳಿದ ಹೂಗಳನ್ನು, ಕೊಣ್ಡು கொண்டு = ತೆಗೆದುಕೊಂಡು, ನನ್ದಮರ್ಗಾಳ್ நந்தமர்காள் = ನಮ್ಮಂಥವರೇ, ಆರಾ ஆரா = ತೃಪ್ತಿತೀರದಂಥ (ಅತಿಶಯವಾದ), ಅನ್ಬೋಡು அன்போடு = ಪ್ರೇಮ(ಭಕ್ತಿ)ದಿಂದ, ಎಮ್ಬೆರುಮಾನ್ எம்பெருமான் = ಭಗವಂತನ (ನಮ್ಮ ಸ್ವಾಮಿಯ), ಊರ್ ஊர் = ಸ್ಥಳವನ್ನು, ಅಡೈಮಿನ್ಗಳ್ அடைமின்கள் = ಸೇರಿರಿ, ತಾರಾ தாரா = ನೀರ್ ಪಕ್ಷಿಗಳು, ಆರುಮ್ ஆரும் = ತುಂಬಿರುವ, ವಾರ್ ಪುನಲ್ வார் புனல் = ಉದ್ದನಾದ ಪ್ರವಾಹಗಳಲ್ಲಿ, ಮೇಯ್ನ್ದು மேய்ந்து = ಆಹಾರವನ್ನುಂಡು, ವಯಲ್ ವಾಳುಮ್ வயல் வாழும் = ಬಯಲುಗಳಲ್ಲಿ ಬಾಳುವ, ಕೂರ್ ವಾಯ್ கூர் வாய் = ಚೂಪಾದ ಬಾಯುಳ್ಳ, ನಾರೈ நாரை = ಬಕಪಕ್ಷಿಗಳು, ಪೇಡೈಯೊಡು பேடையோடு = ತಮ್ಮ ಹೆಣ್ಣುಗಳೊಡನೆ, ಆಡುಮ್ ஆடும் = ಆಡುವಂಥ, ಕುಱುಙ್ಗುಡಿಯೇ குறுங்குடியே = ತಿರುಕ್ಕುರುಂಗುಡಿಯೇ ಆಗಿದೆ.

ನಾರಿನಿಂದ ತುಂಬಿರುವ ಹೊಸದಾಗಿ ಅರಳಿದ ಹೂಗಳನ್ನು ತೆಗೆದುಕೊಂಡು, ನಮ್ಮಂಥವರೇ, ತೃಪ್ತಿಯಿಲ್ಲದಂತೆ ಅತಿಶಯವಾದ ಪ್ರೇಮಭಕ್ತಿಗಳಿಂದ ನಮ್ಮ ಸ್ವಾಮಿಯ ಸ್ಥಳವನ್ನು ಸೇರಿರಿ. ನೀರ್ ಪಕ್ಷಿಗಳು ತುಂಬಿರುವ ಉದ್ದವಾದ ಪ್ರವಾಹಗಳಲ್ಲಿ ~~ತುಂಬಿಕೊಂಡು~~ ಆಹಾರವನ್ನುಂಡು ಬಯಲುಗಳ

Garani Srinivasan

ಲ್ಲಿ ಬಾಳುವ ಜೀವಾದ ಬಾಯಿಗಳ್ಳ ಬಹ ವಿಷಯಗಳು ಶಮ್ಮ ಜನ್ಮಾಗಳ್ಲಿ 8
ದನ ಅದ್ದುವಂತಹ ತಿರುಕ್ಕುರುಂಗುಡಿ ಎಂಬುದೇ ಅದು.

ಆಳ್ವಾರರು ಸೊಲ್ಲುತ್ತಾರೆ: ಭಗವಂತನ ಪಾದ ಸೇವೆಯಲ್ಲೇ ಸದಾ ತೊಡಗಿದ್ದು ಆನಂದಿಸಬೇಕು ಎನ್ನುವಂಥವರೇ, ನೀವು ತಪ್ಪದೆ ತಿರುಕ್ಕುರುಂಗುಡಿ ಕ್ಷೇತ್ರಕ್ಕೆ ಹೋಗಿ. ಅದು ಬದ್ಧರಾಗಿ ದಣಿಯುವ ನೀರಿನ ಪ್ರವಾಹದಿಂದಲೂ ಅದರ ಮಗ್ಗುಲಲ್ಲೇ ಹರಿಯುವ ನದಿ ಬಯಲುಗಳಿಂದಲೂ ಕೂಡಿ ಶೋಭಿಸುತ್ತದೆ. ಅಲ್ಲಿ ಹರಿಯುವ ನದಿ ಬಯಲುಗಳಿಂದಲೂ ಕೂಡಿ, ನೀರ್ ಬಾಳುವ ಬಾಳು, ನೀರ್ ತೋಟ್ಟಿ, ಕೆರೆಕೃಷಿ, ಬಹ ವಿಷಯ ಮುಂತಾದ ನೀರ್ ಬಾಳುವ ಬಾಳು, ನೀರ್ ತೀರ್ಥ, ಬಹ ವಿಷಯ ಮುಂತಾದ ವಿಷಯಗಳು ದಣಿಯುವ ನೀರಿನಲ್ಲಿರುವ ಸಮೃದ್ಧಿಯಾದ ಬೆಳೆಯನ್ನುಂಡು ವಿಸ್ತಾರ ಬಯಲುಗಳಲ್ಲಿಯೇ ಜನ್ಮ ಜನ್ಮದಲ್ಲಿ ಆನಂದದಿಂದ ಶಾಲ ಕಳೆಯುತ್ತವೆ. ಭಕ್ತರೇ, ಆ ಆನಂದಮಯವಾದ ಪ್ರಕೃತಿಯ ನಡುವೆ [illegible] ಭಗವಂತನು ನೆಲಸಿದ್ದಾನೆ. ನೀವು ಹೋಗುವಾಗ ಹೊಸದಾಗಿ ಅರಳಿರುವ ಪರಿಮಳ ಪುಷ್ಪಗಳ ಹಾರಗಳನ್ನು ತೆಗೆದುಕೊಂಡು ಹೋಗಿ. ಶ್ರುತಿ ಶಾರದಂತ ಅತಿಶಯವಾದ ಭಕ್ತಿ ಪ್ರೇಮಗಳನ್ನು ತುಂಬಿಕೊಂಡು ಹೋಗಿ. ಸ್ವಾಮಿಯ ತಿರುವಡಿಗಳಲ್ಲಿ ಅವುಗಳನ್ನು ಭಗವತ್ಸನ್ನಿಧಿಯಲ್ಲಿ ಕ್ಷೇಪಿಸಿ ಹೋಗಿ, ಪಿಡಿಸಿ, ಸೇವೆ ಮಾಡಿ, ಉಜ್ಜೀವನಗೊಳ್ಳಿ.

1. நின்ற வினையும் துயரும் கெட மாமலரேந்தி,
சென்று பணிமின் எழுமின் தொழுமின் தொண்டீர்காள்,
என்றும் இரவும் பகலும் வரிவண்டிசை பாட,
குன்றின் முல்லை மன்றிடை நாறும் குறுங்குடியே

ನಿನ್ರ ವಿನೈಯುಮ್ ತುಯರುಮ್ ಕೆಡ ಮಾಮಲರೇನ್ದಿ,
ಶೆನ್ರು ಪಣಿಮಿನ್ ಎಳುಮಿನ್ ತೊಳುಮಿನ್ ತೊಣ್ಡೀರ್ಗಾಳ್,
ಎನ್ರುಮ್ ಇರವುಮ್ ಪಗಲುಮ್ ವರಿ ವಣ್ಡಿಶೈ ಪಾಡ,
ಕುನ್ರಿನ್ ಮುಲ್ಲೈ ಮನ್ರಿಡೈ ನಾಱುಮ್ ಕುಱುಙ್ಗುಡಿಯೇ

ನಿನ್ರ நின்ற = ಬಹುಕಾಲದಿಂದ ಬೆಳೆದು ಬಂದ, ತುಯರುಮ್ துயரும் = ದುಃಖ ದಂಡನೆಗಳೂ, யும் = ಪಾಪಗಳೂ, ಮಾಮಲರ್ மலர் = ಶ್ರೇಷ್ಠವಾದ, ಕೆಡ கெட = ನಾಶವಾಗಲು, ಮಾ மா = ಶ್ರೇಷ್ಠವಾದ, ಮಲರ್ மலர் = ಹೂಗಳನ್ನು, ಏನ್ದಿ ஏந்தி = ತೆಗೆದುಕೊಂಡು, ಶೆನ್ರು சென்று = ಹೋಗಿ, ಪಣಿಮಿನ್ பணிமின் = ಸೇವೆ ಮಾಡಿ (ನಮಸ್ಕರಿಸಿ), ಎಳುಮಿನ್ ஏழுமின் = ಉದ್ಧಾರ ಹೊಂದಿರಿ, ತೊಳುಮಿನ್ தொழுமின் = ಪ್ರೇಮದಿಂದ, ತೊಣ್ಡೀರ್ಗಾಳ್ தொண்டீர்காள் = ಭಕ್ತರೇ, ಎನ್ರುಮ್ என்றும் = ಯಾವಾಗಲೂ, ಇರವುಮ್ இரவும் = ರಾತ್ರಿಗಳಲ್ಲೂ, ಪಗಲುಮ್ பகலும் = ಹಗಲಲ್ಲೂ, ವರಿ ವಣ್ಡು வரி வண்டு = ಸುಂದರವಾದ ದುಂಬಿಗಳು, ಇಶೈ ಪಾಡ இசை பாட = ಗಾನಮಾಡುವಂತಹ, ಕುನ್ರಿನ್ ಮುಲ್ಲೈ குன்றின் முல்லை = ಬೆಟ್ಟದ

ಮಲ್ಲಿಗೆಯು. ಮನ್ ಉಂ ಮಣ್ಣಾರು = ಹೆಣೆದು ಕೊಂಡಿರುವ, ಇಡೈಕ್ಕಿ-
ಡೈ = ಸ್ಥಳದಲ್ಲಿ, ನಾಱುಮ್ ನಾಱುಂ = ಪರಿಮಳ ಸೂಸುತ್ತಿರುವ,
ಕುಱುಂಗುಡಿಯುಳ் குறுங்குடி ಯೇ = ತಿರುಕ್ಕುರುಂಗುಡಿಯಲ್ಲಿ
ಬಂದೇ ಅದು

~~ಆಳ್ವಾರರು ಹೇಳುತ್ತಾರೆ~~ ಭಕ್ತರೇ, ಬಹುಕಾಲದಿಂದ ಬೆಳೆದು ಬಂದ ಪಾಪಗಳೂ, ದುಃಖ ಸಂಕಟಗಳೂ ನಾಶವಾಗುವುದಕ್ಕಾಗಿ ಶ್ರೇಷ್ಠವಾದ ಹೂಗಳನ್ನು ಕೊಯ್ದುಕೊಂಡು ಹೋಗಿ ಸೇವೆ ಮಾಡಿ, ಕ್ಷೇಮವಾಗಿಯೂ, ಮತ್ತು ಉದ್ಧಾರಗೊಳ್ಳಿ. ರಾತ್ರಿ ಹಗಲು ಎನ್ನದೆ ಯಾವಾಗಲೂ ಸುಂದರವಾದ ದುಂಬಿಗಳು ಗಾನಮಾಡುವಂಥ ಚೆಲ್ವದ ಮಲ್ಲಿಗೆ ಹೂಗಳು ಹೆಣೆದುಕೊಂಡಿರುವ ಪರಿಮಳ ಸೂಸುತ್ತಿರುವ ಸ್ಥಳವೇ ತಿರುಕ್ಕುರುಂಗುಡಿ ಎಂಬುದು (9)

ಆಳ್ವಾರರು ಹೇಳುತ್ತಾರೆ: ಭಕ್ತರೇ, ನೀವು ತಿರುಕ್ಕುರುಂಗುಡಿಯೆಂಬ ಕ್ಷೇತ್ರಕ್ಕೆ ಹೋಗಿ. ಚೆಲ್ವದ ಮಲ್ಲಿಗೆಯು ಎಲ್ಲೆಲ್ಲಿಯೂ ಬೆಳೆದು ಆ ಪ್ರದೇಶವನ್ನೆಲ್ಲಾ ಪರಿಮಳದಿಂದ ತುಂಬಿಸಿವೆ. ಅಂದವಾದ ದುಂಬಿಗಳು ರಾತ್ರಿ ಹಗಲೆನ್ನದೆ ಯಾವಾಗಲೂ ಅವುಗಳ ನಡುವೆ ಗಾನಮಾಡುತ್ತಾ ಇರುತ್ತವೆ. ಭಗವಂತನು ನೆಲಸಿರುವುದು ಅಲ್ಲಿಯೇ. ನೀವು ಅಲ್ಲಿಗೆ ಹೋಗುವಾಗ ಉತ್ತಮವಾದ ಹೂಗಳನ್ನು ಕೊಯ್ದುಕೊಂಡು ಹೋಗಿ ಆ ಹೂಗಳನ್ನು ಭಕ್ತಿಯಿಂದ ಭಗವಂತನ ತಿರುವಡಿಗಳಿಗೆ ಸಮರ್ಪಿಸಿ. ಅವನ ತಿರುವಡಿಗಳಿಗೆ ಎರಗಿ. ಅವನ ಸೇವೆಯಲ್ಲಿ ತೊಡಗಿರಿ. ಇದರಿಂದ, ನಿಮ್ಮ ಜನ್ಮಜನ್ಮಾಂತರಗಳಿಂದಲೂ ಕೂಡಿಕೊಂಡು ಬಂದಿರುವ ಪಾಪಗಳೆಲ್ಲವೂ ಕಳೆದು ಹೋಗುವುವು. ಈ ಜನ್ಮದ ನಿಮ್ಮ ದುಃಖಗಳೂ, ಸಂಕಟಗಳೂ ನಾಶವಾಗುವುವು. ನೀವು ಉಜ್ಜೀವನಗೊಳ್ಳುವಿರಿ.

10. சிலையாலிலங்கை செற்றான் மற்றோர் சினவேழம்,
கொலையார் கொம்பு கொண்டான் மேய குறுங்குடி மேல்,
கலையார் பனுவல் வல்லான் கலியனொலிமாலை,
நிலையார் பாடல் பாடப் பாவம் நில்லாவே.

ಶಿಲೈಯಾಲಿಲಙ್ಗೈ ಶೆಟ್ರಾನ್ ಮಟ್ರೋರ್ ಶಿನವೇೞಮ್,
ಕೊಲೈಯಾರ್ ಕೊಮ್ಬು ಕೊಣ್ಡಾನ್ ಮೇಯ ಕುಱುಙ್ಗುಡಿಮೇಲ್,
ಕಲೈಯಾರ್ ಪನುವಲ್ ವಲ್ಲಾನ್ ಕಲಿಯನೊಲಿಮಾಲೈ,
ನಿಲೈಯಾರ್ ಪಾಡಲ್ ಪಾಡಪ್ಪಾವಮ್ ನಿಲ್ಲಾವೇ.

ಶಿಲೈಯಾಲ್ சிலை யால் = ಕೋದಂಡ (ಬಿಲ್ಲು) ದಿಂದಲೇ, ಇಲಂಗೈ இலங்கை = ಲಂಕೆಯನ್ನು, ಶೆಟ್ರಾನ್ செற்றான் = ನಾಶಪಡಿಸಿದವನೂ, ಮಟ್ರು மற்று = ಮತ್ತು, ಓರ್ ஓர் = ಒಂದು, ಶಿನ சின = ಕೋಪಗೊಂಡ, ವೇಳಮ್ வேழம் = ಸಲಗದ, ಕೊಲೈ ಆರ್ கொலை ஆர் = ಕೊಲ್ಲುವಷ್ಟು ದಂತವಾದ (ಕೊಲೆಗಳಿಂದ ತುಂಬಿದ), ಕೊಂಬು கொம்பு = ದಂತವನ್ನು, ಕೊಂಡಾನ್ கொண்டாண் = ನಾಶಪಡಿಸಿದವನು (ಮುರಿದುಹಾಕಿದವನು), ಮೇಯ மேய = ನೆಲಸಿರುವ, ಕುರುಂಗುಡಿ ಮೇಲ್ குறுங்குடி மேல் = ತಿರುಕ್ಕುರುಂಗುಡಿಯನ್ನು ಕುರಿತು, ಕಲೈ ಆರ್ கலை ஆர் = ಕಲೆಯಿಂದ ಸೊಗಸಾಗಿರುವ (ತುಂಬಿರುವ), ಪನುವಲ್ பனுவல் = ಕವಿತೆಯನ್ನು ವಲ್ಲಾನ್ வல்லாண் = ಬಲ್ಲವನಾದ, ಕಲಿಯನ್ கலியன் = ಕಲಿಯನ, ಒಲಿ ಮಾಲೈ ஒலி மாலை = ಹಾಡಿನ ಮಾಲೆಯನ್ನು, ನಿಲೈ ಆರ್ நிலை ஆர் = ಸ್ಥಿರತೆಯಿಂದ ತುಂಬಿರುವ, ಪಾಡಲ್ பாடல் = ಹಾಡುಗಳನ್ನು, ಪಾಡ பாட = ಹಾಡುವುದರಿಂದ, ಪಾವಮ್ பாவம் = ಪಾಪಗಳು, ನಿಲ್ಲಾವೇ நில்லாவே = ಇರುವುದೇ (ನಿಲ್ಲುವುದೇ) ಇಲ್ಲ.

ಕೋದಂಡದಿಂದಲೇ ಲಂಕೆಯನ್ನು ನಾಶಪಡಿಸಿದವನೂ, ಮತ್ತು, ಕೋಪಗೊಂಡ ಒಂದು ಸಲಗದ ಕೊಲೆಗಳಿಂದ ತುಂಬಿರುವ ದಂತವನ್ನು ಮುರಿದುಹಾಕಿದವನೂ ನೆಲಸಿರುವ ತಿರುಕ್ಕುರುಂಗುಡಿಯನ್ನು ಕುರಿತು ಸೊಗಸಾದ ಕಲೆಯಿಂದ ತುಂಬಿರುವ ~~ಕ~~ವಿತೆಯನ್ನು ಬಲ್ಲವನಾದ ಕಲಿಯನ (ತಿರುಮಂಗೈ ಆಳ್ವಾರರು) ಹಾಡಿನ ಮಾಲೆಯನ್ನು, ನಿಲುಗಡೆಯಿಂದ ತುಂಬಿರುವ ಈ ಹಾಡುಗಳನ್ನು ಹಾಡುವುದರಿಂದ ಪಾಪಗಳು ನಿಲ್ಲುವುದೇ ಇಲ್ಲ. (10)

ಈ ತಿರುಮೊಳಿಗೆ ಇದು ಕಡೆಯ ಪಾಶುರ. ತಿರುಮೊಳಿಯಲ್ಲಿ ಒಂದೊಂದು ಪಾಶುರದಲ್ಲೂ ಭಕ್ತರಿಗೆ ಆತ್ಮೀಯವಾದ ಕರೆ ಕೊಡಲಾಗಿದೆ. ಇಂಥ ಕರೆ ಕೊಡುತ್ತಿರುವವನು ಕಲಿಯನು. (ತಿರುಮಂಗೈ ಆಳ್ವಾರರು). ಅವನು ಕವಿತೆಯ ಕಲೆಯಲ್ಲಿ ನುರಿತವನು. ಭಗವಂತನ ಅಡಿದಾವರೆಗಳನ್ನು ಆಶ್ರಯಿಸಿ ಉಜ್ಜೀವನಗೊಂಡವನು. ತಾನು ಹಿಡಿದು ಉಜ್ಜೀವನಗೊಂಡ ಮಾರ್ಗವನ್ನೇ ಇತರರೂ ಹಿಡಿದು ಉದ್ಧಾರಗೊಳ್ಳಬೇಕೆಂಬ ಹಂಬಲತೆಯಿಂದ "ನಮ್ಮಂಥವರೇ" ಎಂದು ಅವರನ್ನು ಕರೆದು ಹುರಿದುಂಬಿಸುತ್ತಿದ್ದಾನೆ. ದೃಢವಾದ ತನ್ನ ಅನುಭವದ ಸಾರವನ್ನೇ ಈ ಪಾಶುರಗಳಲ್ಲಿ ತುಂಬಿಸಿ ಹಾಡಿದ್ದಾನೆ. ಇದನ್ನು ಹಾಡುವುದನ್ನು ಮಾತ್ರವಲ್ಲದೆ, ಇದರಲ್ಲಿ ಹೇಳಿರುವ ಮಾರ್ಗವನ್ನು ತಪ್ಪದೆ ಅನುಸರಿಸಬೇಕು ಎಂದು ಕರೆ ಕೊಡುತ್ತಿದ್ದಾರೆ.

ಭಗವಂತನು ಅಬ್ಜಾರ್ಣವಶಾಯಿಯಾಗಿ, ದಿವ್ಯಸುಂದರನಾಗಿ, ಶಾಂತಿಪ್ರದವಾದ ರಮ್ಯವಾದ ಪ್ರಕೃತಿಯ ನಡುವೆ ನೆಲಸಿರುವುದು ಭಕ್ತಜನರ

ಉದ್ಧಾರಕ್ಕಾಗಿಯೇ. ಭಕ್ತರು ಅಲ್ಲಿಗೆ ಹೋಗಬೇಕು. ಸ್ವಾಮಿಯ ತಿರುವಡಿಗಳನ್ನು ಆಶ್ರಯಿಸಬೇಕು. ಶ್ರೀಮನ್ ಭಗವಂತನನ್ನು ಯಾವ ರೀತಿಯಲ್ಲಿ ಪೂಜಿಸಲು ಸಾಧ್ಯವೋ, ಅನುಕೂಲವೋ, ಅದರಂತೆ ಅವನನ್ನು ಪೂಜಿಸಬೇಕು. ಅವನ ತಿರುವಡಿಗಳಿಗೆ ಎರಗುವುದು, ಶ್ರದ್ಧೆಯಾಗಿದ್ದು ನಿಂತು ಅವನ ಗುಣಗಾನ ಮಾಡುವುದು ಮತ್ತು ಅವನ ಸೇವೆಯಲ್ಲಿ ತೊಡಗುವುದು — ಹೀಗೆ, ಯಾರು ಬೇಕಾದರೂ ಮಾಡಬಹುದಾದ ಈ ಸರಳವಾದ ಭಗವತ್ಸೇವೆಯಿಂದ ಜನ್ಮ ಜನ್ಮಾಂತರಗಳಿಂದ ಕೂಡಿಬಂದಿರುವ ಸಂಚಿತ ಪಾಪರಾಶಿಯೆಲ್ಲವೂ ನಾಶವಾಗುತ್ತವೆ. ಅಲ್ಲದೆ, ಈ ಜನ್ಮದ ಸಂಸಾರ ಬಂಧನದ ದುಃಖ, ಸಂಕಟಗಳೆಲ್ಲವೂ ತೊಲಗಿ ಹೋಗುತ್ತವೆ. (ಹುಟ್ಟಿಲ್ಲದ ನೆಲೆಯು ಕೂಡಾ ಲಭಿಸುತ್ತದೆ.) ಹೀಗಿದೆ ಈ ತಿರುವೇಂಗಡಮಲೆಯ ಮಹಿಮೆ.

ಅಡಿಯನಡೆ: அடிவரவு: — ಅಕ್ಕುತ್ತು அக்குத்து, ಕುಜ್ಞಾರ குங் ಕಪ್ಪೆ கவ்ணவை, காா், ವಾಳ வாழ, ಶಿರಮುಮ் சிரமும், ನಾರ್ நாரார், ನಿನ್ನ நின் ಕೀನೀರ್ கீநீர், ವಲ್ಲಿ வல்லி, ஐ. ಶಿಲೈಯಾಲ್ சிலயால், (ತನ್ವೈ தந்தை).

ಪೆರಿಯ ತಿರುಮೊೞಿ - ಒಂಬತ್ತನೆಯ ದಶಕ - ಏಳನೆಯ ತಿರುಮೊೞಿ

பெரிய திருமொழி - ஒன்பதாம் பத்து - ஏழாந் திருமொழி

7. ತನ್ದೈತಾಯ್ — தந்தை தாய்

1. தந்தை தாய் மக்களே
சுற்றமென் றுற்றவர் பற்றி நின்ற,
பந்தமார் வாழ்க்கையை
நொந்து நீ பழியெனக் கருதி னாயேல்,
அந்தமா யாதியாய்
ஆதிக்கு மாதியா யாயனாய,
மைந்தனார் வல்லவாழ்
சொல்லுமா வல்லையாய் மருவு நெஞ்சே

ತನ್ದೈ ತಾಯ್ ಮಕ್ಕಳೇ ಶುಟ್ರಮೆನ್ಱುಟ್ರವರ್ ಪಟ್ರಿ ನಿನ್ಱ,
ಪನ್ದಮಾರ್ ವಾೞ್ಕ್ಕೈಯೈ ನೊನ್ದು ನೀ ಪೞಿಯೆನಕ್ಕರುದಿನಾಯೇಲ್,
ಅನ್ದಮಾ ಯಾದಿಯಾಯ್ ಆದಿಕ್ಕುಮಾದಿಯಾಯಾಯನಾಯ,
ಮೈನ್ದನಾರ್ ವಲ್ಲವಾೞ್ ಶೊಲ್ಲುಮಾ ವಲ್ಲೈಯಾಯ್ ಮರುವು ನೆಞ್ಜೇ.

ತನ್ದೈ, ತಾಯ್, ಮಕ್ಕಳೇ தந்தை, தாய், மக்களே = ತಂದೆ, ತಾಯಿ, ~~ಮಕ್ಕಳು~~ ಎನ್ ಮಕ್ಕಳು ಎಂಬವರೇ, ಶುಟ್ರಮ್ சுற்றம் = ಬಂಧುಗಳು, ಎನ್ಱು என்று = ಎಂದು, ಉಟ್ರು உற்று = ನಿಜವಾಗಿ (ಯಥಾರ್ಥವಾಗಿ), ಅವರ್ அவர் = ಅವರನ್ನು, ಪಟ್ರಿ பற்றி = ಹಿಡಿದುಕೊಂಡು, ನಿನ್ಱ நின்ற = ಇರುವ, ಪನ್ದಮ್ ಆರ್ பந்தம் ஆர் = ಬಂಧನದಿಂದ ಕೂಡಿರುವ, ವಾೞ್ಕ್ಕೈಯೈ வாழ்க்கையை = ಬಾಳ್ವೆಯನ್ನು, ನೊನ್ದು நொந்து = ~~...~~ ಅನುಭವಿಸಿ (ನೊಂದು) ದವನಾಗಿ, ನೀ நீ = ನೀನು, ಪೞಿ பழி = ಅಪರಾಧ, ಕರುದಿನಾಯ್ ಏಲ್ கருதினாய் ஏல் = ಭಾವಿಸಿದೆ ಎನ ಆದರೆ = ಎಂದು, ಅನ್ದಮ್ அந்தம் = ಅಂತ್ಯವೂ, ಆದಿ ஆதி = ಆದಿಯೂ, ಆಯ್ ಯಾದರೆ, ಆದಿಕ್ಕುಮ್ ஆதிக்கும் = ಆ ಆದಿಗೆ ಸಹ, ಆಯ್ ஆய் = ಆಗಿರುವವನೂ, ಆಯನ್ ஆயன் = ಆದಿ ಆಯ್ ஆதி ஆய் = ಆದಿಯಾಗಿರುವವನು, ಆಯ ஆய = ಆದವನಾದ, ಮೈನ್ದನಾರ್ மைந்தனார் = ಗೋಪಾಲನು, ವಲ್ಲವಾೞ್ வல்லவாழ் = ಸರ್ವೇಶ್ವರನು (ಸರ್ವಶಕ್ತನು) ನೆಲಸಿರುವ, ವಲ್ಲವಾೞ್ ಎಂಬ ಕ್ಷೇತ್ರವನ್ನು, ಶೊಲ್ಲುಮ್ ஆ சொல்லும் ஆ = ತಿರುವಲ್ಲವಾೞ್ ಎಂಬ ಕ್ಷೇತ್ರವನ್ನು, ಹೇಳುವ (ಹೊಗಳುವ) ಶಕ್ತಿರುವಂತೆ, ವಲ್ಲೈ ಆಯ್ வல்லை ஆய் = ~~...~~ ಸಾಮರ್ಥ್ಯವನ್ನು ಪಡೆದು, ~~...~~ ಮರುವು மருவு = ಸಮಾಧಾನವನ್ನು ಪಡೆ, ನೆಞ್ಜೇ நெஞ்சே = ಮನಸ್ಸೇ

ತಂದೆ ತಾಯಿ ಮಕ್ಕಳೇ ಬಂಧುಗಳು ಎಂಬುದು ಸತ್ಯವೆಂದು ಅವರನ್ನು ಅಂಟಿಕೊಂಡು ಇರುವ ಬಂಧನದಿಂದ ಕೂಡಿರುವ ಬಾಳ್ವೆಯನ್ನು ಅನುಭವಿಸಿ ನೊಂದವನಾಗಿ, (ಇದೆಲ್ಲವೂ) ದೋಷಪೂರ್ಣವೆಂದು ಭಾವಿಸಿರುವೆಯಾದರೆ,

Garani Srinivasan

ಅಂತವೂ ಆದಿಯೂ ಆಗಿರುವವನೂ, ಆ ಆದಿಗೂ ಸಹ ಆದಿಯಾಗಿರುವವನೂ,
ಗೋಪಾಲನೂ ಆದ ಸರ್ವೇಶ್ವರನು (ಸರ್ವಶಕ್ತನು) ನೆಲಸಿರುವ ತಿರುವಲ್ಲವಾ
ಳ್ ಎಂಬ ಕ್ಷೇತ್ರವನ್ನು ಹೇಳುತ್ತಾ ಹೊಗಳುತ್ತಾ ಇರುವಂತೆ ಸಾಮರ್ಥ್ಯವನ್ನು (1)
ಪಡೆದು ನೆಮ್ಮದಿಯಾಗಿರು, ಮನವೇ!

ಮನುಷ್ಯನಾಗಿ ತಾನು ಬಾಳುತ್ತಿರುವ ಸಂಸಾರವೇ ಸಾರವತ್ತಾದದ್ದೆಂದೂ, ಎಲ್ಲ ಬಗೆಯ ಸುಖವೂ ಆನಂದವೂ ಅದರಿಂದಲೇ ದೊರೆಯುವುದೆಂದೂ ಭಾವಿಸುತ್ತಾ, ಹಾಗೆಯೇ ನಡೆದುಕೊಳ್ಳುವುದು ಸಾಮಾನ್ಯವಾದದ್ದು. 'ಸಂಸಾರ' ಎಂದಕೂಡಲೇ 'ತಂದೆ, ತಾಯಿ, ಮಡದಿ, ಮಕ್ಕಳು, ಮತ್ತು ಇವರಿಗೆ ಸಂಬಂಧಿಸಿದ ನೆಂಟರು, ಇಷ್ಟರು' ಎಂಬ ಭಾವನೆ ಬರುತ್ತದೆ. ಇವರೊಡನೆ ಕೂಡಿ ಬಾಳುವುದೇ ನಿಜವಾದ ಬಾಳ್ವೆಯೆಂದೂ, ಇತರರೆಲ್ಲರೂ ಸಂಸಾರಗಳಾ ಸುಲಭವಾಗಿ ಬಾಳುವ ಹಾಗೆಯೇ ತಾನೂ ಬಾಳಬೇಕೆಂದೂ ಆಶಿಸಿ, ಮನುಷ್ಯನು ಬಿಡಿಸಿಕೊಳ್ಳಲಾರದ ಬಂಧನದಲ್ಲಿ ಸಿಕ್ಕಿ ಬೀಳುತ್ತಾನೆ. ಮೊದ ಮೊದಲು ಯಾವುದು ಸುಖಕರವೆಂದು ಕಂಡುಬರುವುದೋ ಆ ಸಂಸಾರವೇ ಬರಬರುತ್ತ ಭರಿಸಲಾರದ ದುಃಖಸಂಕಟಗಳಿಗೆ ಈಡುಮಾಡುವುದೆಂದು ಅನುಭವದಿಂದ ತಿಳಿದ ಬಳಿಕವೇ, ಮನುಷ್ಯನಿಗೆ ಸಂಸಾರದ ವಿಷಯದಲ್ಲಿ ಜುಗುಪ್ಸೆ ಹುಟ್ಟುವುದು. ಅದರಿಂದ ಅವನು ಸ್ವತಃ ತನ್ನನ್ನು ಗುರಿಮಾಡುವ ಸಂಕೋಲೆಯಿಂದ, ಹೇಗಾದರೂ ಮಾಡಿ ಅದರಿಂದ ತಾನು ಬಿಡುಗಡೆ ಹೊಂದಲೇಬೇಕು ಎಂಬ ತಿಳಿವಳಿಕೆಯುಂಟಾಗುವುದು. ಹೀಗೆ ಸಿದ್ಧವಾದ ಮನಸ್ಸನ್ನು, ಆಧ್ಯಾತ್ಮದ ಕಡೆಗೆ ವಾಲಿದ ಮತ್ತು ಆತ್ಮೋನ್ನತಿಗೆ ತಕ್ಕದ್ದಾದ ಮನಸ್ಸು ಎನ್ನಬಹುದು. ಇಂಥ ಮನಸ್ಸುಳ್ಳವರಿಗೆ ಆಳ್ವಾರರು ಈ ಪಾಶುರದಲ್ಲಿ ತಮ್ಮ ಹಿತನುಡಿಯನ್ನು ನೀಡುತ್ತಿದ್ದಾರೆ.

ಆಳ್ವಾರರು ಹೇಳುತ್ತಾರೆ: ಈ ಸಂಸಾರಕ್ಕೂ, ಈ ಜಗತ್ತಿಗೂ, ಇಡಿಯ ಸೃಷ್ಟಿಗೂ, ಮತ್ತು ಅದೆಲ್ಲದರ ಅಂತ್ಯಕ್ಕೂ ಕಾರಣನಾದವನು ಭಗವಂತ. ಅವನೇ ಎಲ್ಲಕ್ಕೂ ಆದಿಗೂ ಆದಿಯಾದವನು. ಅವನೊಬ್ಬನಿಗೇ ಆದಿಯೂ ಇಲ್ಲ, ಅಂತ್ಯವೂ ಇಲ್ಲ. ಹಿಂದೆ, ಗೋಪಾಲನಾಗಿ, ಅದ್ಭುತಲೀಲೆಯನ್ನು ತೋರಿಸಿದವನೂ ಅವನೇ. ಸರ್ವಶಕ್ತನಾದ, ಸರ್ವೇಶ್ವರನಾದ, ಪರಮಪುರುಷನೂ ಅವನೇ. 'ತಿರುವಲ್ಲವಾಳ್' (ಶ್ರೀದೇವಿಯ ವಲ್ಲಭನು ನೆಲಸಿರುವ ಕ್ಷೇತ್ರ) ಮುಂತಾದ ದಿವ್ಯಕ್ಷೇತ್ರಗಳಲ್ಲಿ ದಿವ್ಯಸುಂದರನಾದ ಅರ್ಚಾವತಾರಿಯಾಗಿ ಅವನೇ ನೆಲಸಿದ್ದಾನೆ. ಮನಸ್ಸೇ, ಆ ಪರಮಪುರುಷನನ್ನು ಅವನು ನೆಲಸಿರುವ ಕ್ಷೇತ್ರವನ್ನು ಎಡೆಬಿಡದೆ ಸ್ಮರಿಸಿಕೊಳ್ಳುತ್ತ, ನೆಮ್ಮದಿಯಾಗಿರು. ಇದರಿಂದ ನಿನಗೆ ಸಂಸಾರಬಂಧನವೆಂಬುದು ತಾನಾಗಿ ಬಿಟ್ಟುಹೋಗುವುದು.

ಈ ತಿರುವಾಯ್ಮೊಳಿಯೆಲ್ಲ 'ತಿರುವಲ್ಲವಾಳ್' ಕ್ಷೇತ್ರದ ವರ್ಣನೆಗೆ ಮೀಸಲು.

Gagani Srinivasan

2\. மின்னுமா வல்லியும் வஞ்சியும்
வென்ற நுண்ணிடை நுடங்கும்,
அன்ன மென்னடையினார்
கலவியை அருவருத்தஞ்சினாயேல்,
துன்னு மாமணி முடிப் பஞ்சவர்க்காகி
முன் தூது சென்ற,
மன்னனார் வல்லவாழ் சொல்லுமா
வல்லையாய் மருவு நெஞ்சே.

ಮಿನ್ನುಮಾ ವಲ್ಲಿಯುಮಾ ವಂಜಿಯುಮಾ ವೆನ್‌ಱ ನುಣ್ಣಿಡೈ ನುಡಙ್ಗುಮ್,
ಅನ್ನಮೆನ್ನಡೈಯಿನಾರ್ ಕಲವಿಯೈ ಅರುವರುತ್ತಂಜಿನಾಯೇಲ್,
ತುನ್ನು ಮಾ ಮಣಿ ಮುಡಿ ಪ್ಪಂಜವರ್ಕ್ಕಾಗಿ ಮುನ್ ತೂದು ಶೆನ್‌ಱ,
ಮನ್ನನಾರ್ ವಲ್ಲವಾಳ್ ಶೊಲ್ಲುಮಾ ವಲ್ಲೈಯಾಯ್ ಮರುವು ನೆಂಜೇ.
ಮಾ மா = ಸುಂದರವಾದ

ಮಿನ್ನುಮಾ மின்னும் = ಮಿಂಚನ್ನು, ವಲ್ಲಿಯುಮಾ வல்லியும் = ಬಳ್ಳಿಯನ್ನು, ವಂಜಿಯುಮಾ வஞ்சியும் = ಬೆತ್ತವನ್ನು, ವೆನ್‌ಱ வென்ற = ಜಯಿಸುವಂಥ, ನುಣ್ நுண் = ಸೂಕ್ಷ್ಮವಾದ, ಇಡೈ இடை = ನಡುವು, ನುಡಙ್ಗುಮಾ நுடங்கும் = ಬಳುಕುವಂಥ, ಅನ್ನಮಾ அன்னம் = ಹಂಸದ, ಮೆಲ್ ನಡೈಯಿನಾರ್ மெல் நடையினார் = ಮೃದುವಾದ ನಡಗೆಯುಳ್ಳವರ, ಕಲವಿಯೈ கலவியை = ಕೂಡಿಕೆಯನ್ನು, ಅರುವರುತ್ತು அருவருத்து = ಬೇಸರಪಟ್ಟು ಅಂಜಿನಾಯೇಲ್ அஞ்சினாயேல் = ಅಂಜುವೆಯಾದರೆ (ಅಂಜುರುವೆಯಾದರೆ), ತುನ್ನುಮಾ துன்னும் = ದಟ್ಟವಾಗಿ ಹುದುಗಿರುವ (ಕೂಡಿರುವ), ಮಾ ಮಣಿ மா மணி = ಶ್ರೇಷ್ಠವಾದ ರತ್ನಗಳ, ಮುಡಿ முடி = ಕಿರೀಟಗಳ, ಪಂಜವರ್ಕ್ಕಾಗಿ பஞ்சவர்க்கு ஆகி = ಪಾಂಡವರಿಗೆ ಸಹಾಯಕನಾಗಿ, ಮುನ್ முன் = ಹಿಂದೆ ಒಂದು ಕಾಲದಲ್ಲಿ, ತೂದು ಶೆನ್‌ಱ தூது சென்ற = ದೌತ್ಯವನ್ನು ನಡೆಸಿದ, ಮನ್ನನಾರ್ மன்னனார் = ಒಡೆಯನು, ನೆಲಸಿರುವ, ವಲ್ಲವಾಳ್ வல்லவாழ் = ತಿರುವಲ್ಲವಾಳ್ ಕ್ಷೇತ್ರವನ್ನು, ಶೊಲ್ಲುಮಾ சொல்லும் = ಹೇಳುವಂಥ, ವಲ್ಲೈ ಆಯ್ வல்லை ஆய் = ಸಮರ್ಥನಾಗಿ, ಮರುವು மருவு = ನೆಮ್ಮದಿಗೊಳ್ಳು, ನೆಂಜೇ நெஞ்சே = ಮನಸ್ಸೇ.

ಮನಸ್ಸೇ, ಮಿಂಚನ್ನು ಸುಂದರವಾದ ಬಳ್ಳಿಯನ್ನು ಬೆತ್ತವನ್ನು ಜಯಿಸುವಂಥ ಸೂಕ್ಷ್ಮವಾದ ನಡುವು ಬಳುಕುವಂಥ, ಹಂಸದ ಮೃದುವಾದ ನಡಗೆಯುಳ್ಳವರ ಕೂಡಿಕೆಯನ್ನು ಬೇಸರಪಟ್ಟು ಅಂಜುರುವೆಯಾದರೆ, ದಟ್ಟವಾಗಿ ಹುದುಗಿ ಕೂಡಿರುವ ಶ್ರೇಷ್ಠವಾದ ರತ್ನಗಳ ಕಿರೀಟಗಳ ಪಾಂಡವರಿಗೆ ಸಹಾಯಕನಾಗಿ, ಹಿಂದೆ ಒಂದು ಕಾಲದಲ್ಲಿ, ದೌತ್ಯವನ್ನು ನಡೆಸಿದ ಒಡೆಯನು ನೆಲಸಿರುವ ತಿರುವಲ್ಲವಾಳ್ ಕ್ಷೇತ್ರವನ್ನು ಹೇಳುವಂಥ ಸಮರ್ಥನಾಗಿ ನೆಮ್ಮದಿಗೊಳ್ಳು.

(2)

ಹಿಂದಿನ ಪಾಶುರದಲ್ಲಿ ಸಂಸಾರದ ದುಃಖ ಸಂಕಟಗಳ ವಿಷಯವನ್ನು ಎತ್ತಿಕೊಳ್ಳ

ಲಾಯಿತು. ಅದಕ್ಕೆ ಮೂಲವೇ ಸ್ತ್ರೀಯೆಂದೂ, ಅವಳ ಮೈಮಾಟ, ನಗೆ, ಬಗಿನ, ನಡಗೆಯ ವೈಯಾರದ ಆಕರ್ಷಣೆಗಳಿಗೆ ಸಿಲುಕುವುದರಿಂದಲೇ ಮನುಷ್ಯನು ಸಂಸಾರದ ಕಷ್ಟ ದುಃಖಗಳಲ್ಲಿ ಸಿಕ್ಕಿಕೊಳ್ಳುತ್ತಾನೆಂದೂ, ಅದರಲ್ಲಿ ಮುಳುಗಿದ್ದ ಪುರುಷರಿಗೆ ಭಗವಂತನ ಕಡೆಗೆ ಮನಸ್ಸು ಹರಿಯುವುದು ದುರ್ಲಭವೆಂದೂ ಈ ಪಾಶುರದಲ್ಲಿ ಹೇಳಲಾಗಿದೆ.

ಆಳ್ವಾರರು ಹೇಳುತ್ತಾರೆ: ಮನಸ್ಸೇ, ನಿನಗೆ ಬಳುಕುವ ನಡುವಿನ, ಹಂಸನಡಿಗೆಯ ಸುಂದರಿಯರೊಡನೆ ಕಲೆಯುವಿಕೆಯಿಂದ ಬೇಸರ ಬಂದರೆ ಯೋಚಿಸು. ಅಂಜಿಕೆಯನ್ನು ಅದು ಅಂಜಿಕೆಯನ್ನು ತಂದಿದೆಯೇ? ಹಾಗಾದಲ್ಲಿ, ನೀನು ತಿರುವಲ್ಲವಾಳ್ ಮುಂತಾದ ದಿವ್ಯ ಸ್ಥಳಗಳಲ್ಲಿ ನೆಲಸಿರುವ ಭಗವಂತನನ್ನು, ಅವನ ದಿವ್ಯಾದ್ಭುತ ಚರಿತ್ರೆಯನ್ನೂ, ಕಲ್ಯಾಣಗುಣಗಳನ್ನೂ ಸ್ಮರಿಸುತ್ತಾ ನೆಮ್ಮದಿಗೊಳ್ಳು. ಇದೇ ನಿನಗೆ ಸಂಸಾರದ ಸಂಕೋಲೆಯನ್ನು ಕಡಿದು ಹಾಕುವುದು ಶಾಶ್ವತವಾದ ಸುಖಶಾಂತಿಗಳು ಕೈಸೇರುವುವು. (ಅದಕ್ಕೆ ಭಗವತ್ಪ್ರೇಮವು ಮುಖ್ಯವೆಂದೂ)

'ಕಾಮ'ವನ್ನು ಜಯಿಸುವುದು ದುರ್ಲಭವಲ್ಲವೆಂದೂ ತಿಳಿದವರು ಹೇಳುತ್ತಾರೆ. ಅದನ್ನು ಜಯಿಸಿದ ಹೊರತು ಮನಸ್ಸು ನೆಮ್ಮದಿಗೊಳ್ಳುವುದಿಲ್ಲ. ಆದ್ದರಿಂದ ಯಾವುದು ಮೊದಲು ನಡೆಯಬೇಕು? ಹೆಣ್ಣಿನ ವ್ಯಾಮೋಹವನ್ನು ಅಂಜುವುದೇ, ಅದರಲ್ಲಿ ಬೇಸರಗೊಳ್ಳುವುದೇ? ಅಥವಾ, ಭಗವಂತನನ್ನು ಕುರಿತು ಚಿಂತಿಸುವುದು, ಅದಕ್ಕೆ ಶಿಸಲು ಯತ್ನಿಸುವುದೇ? ಈ ಸಮಸ್ಯೆಗೆ ಭಗವಂತನ ಚಿಂತನೆಯೇ ದಿವ್ಯೌಷಧಿಯೆಂಬುದನ್ನು ಅರ್ಥಗರ್ಭಿತವಾಗಿ ಇಲ್ಲಿ ಹೇಳಲಾಗಿದೆ ಎನ್ನಬಹುದೇ?

3. பூணுலா மென்முலைப் பாவைமார்
பொய்யினை மெய்யிதென்று,
பேணுவார் பேசுமப் பேச்சை
நீ பிழையெனக் கருதினையேல்,
நீணிலா வெண்குடை வாணனார்
வேள்வியில் மண்ணிரந்த,
மாணியார் வல்லவாழ்
சொல்லுமா வல்லையாய் மருவு நெஞ்சே.

ಪೂಣುಲಾ ಮೆನ್ ಮುಲೈಪ್ಪಾವೈಮಾರ್ ಪೊಯ್ಯಿನೈ ಮೆಯ್ಯಿದೆನ್ರು,
ಪೇಣುವಾರ್ ಪೇಶುಮಪ್ಪೇಚ್ಚೈ ನೀ ಪಿೞೈಯೆನಕ್ಕರುದಿನಾಯೇಲ್,
ನೀಣಿಲಾ ವೆಣ್ಕುಡೈ ವಾಣನಾರ್ ವೇಳ್ವಿಯಿಲ್ ಮಣ್ಣಿರಂದ,
ಮಾಣಿಯಾರ್ ವಲ್ಲವಾೞ್ ಶೊಲ್ಲುಮಾ ವಲ್ಲೈಯಾಯ್ ಮರುವು ನೆಂಜೇ.

ಪೂಣ್ பூண் = ಆಭರಣಗಳು, ಉಲಾಮ್ உலாம் = ಹರಡಿಕೊಂಡಿರುವ, ಮೆನ್ மென் = ಕೋಮಲವಾದ, ಮುಲೈ முலை = ಮೊಲೆಗಳುಳ್ಳ, ಪಾವೈಮಾರ್ பாவைமார் = ಹೆಣ್ಣುಗಳ, ಪೊಯ್ಯಿನೈ பொய்யினை = ಅಸತ್ಯವನ್ನು (ವಂಚನೆಯನ್ನು), ಮೆಯ್ ಇದು மெய்யிது = ಸತ್ಯವೇ ಇದು, ಎನ್ರು என்று = ಎಂದು, ಪೇಣುವಾರ್ பேணுவார் = ನಂಬಿ, ಆದರಿಸುವವರು, ಪೇಶುಮ್ பேசும் = ಆಡುವ, ಅಪ್ಪೇಚ್ಚೈ அப்பேச்சை =

ಆ ಮಾತುಗಳನ್ನೆಲ್ಲಾ, ನೀಙ್ಗೋ = ನೀನು, ~~ಪಿಳ್ಳೈ ಪಿಣಾಣಾ~~ ಪಿಲುಕ್ಕೈ ಪಿಣಾಱು = ತಪ್ಪು, ಎನಲಾ = ಎಂದು, ಕರುದಿನಾಯ್ ಏಲ್ கருதினாயேல் = ಭಾವಿಸಿದೆಯಾದರೆ (ಭಾವಿಸುವೆಯಾದರೆ), ನೀಳ್ நீள் = ವಿಸ್ತಾರವಾದ, ನಿಲಾ நிலா = ಬೆಳದಿಂಗಳಿನ, ವೆಣ್ಕುಡೈ வெண் குடை = ಬಿಳಿ ಕೊಡೆಯ, ವಾಣನಾರ್ வாணனார் = ಮರ್ದನೀಯನಾದವನ (ಮಹಾಪುರುಷನಾದವನ), ವೇಳ್ವಿಯುಲ್ வேள்வியில் = ಯಜ್ಞದಲ್ಲಿ, ಮಣ್ மண் = ನೆಲವನ್ನು, ಇರನ್ದ இரந்த = ಯಾಚಿಸಿದ, ಮಾಣಿಯಾರ್ மாணியார் = ಬ್ರಹ್ಮಚಾರಿಯ, ವಲ್ಲವಾಲ್ வல்லவாழ் = ತಿರುವಲ್ಲವಾಳ್ ಕ್ಷೇತ್ರವನ್ನು ಕುರಿತು, ಶೊಲ್ಲುಮ ಆ சொல்லும் ஆ = ಹೇಳುವುದಕ್ಕೆ (ಹೇಳುವಂಥ), ವಲ್ಲೈ ಆಯ್ வல்லை ஆய் = ಸಮರ್ಥನಾಗಿ, ಮರುವು மருவு = ನೆಮ್ಮದಿಯಾಗಿರು, ನೆಂಜೇ நெஞ்சே = ಮನಸ್ಸೇ.

ಆಭರಣಗಳು ಧರಿಸಿಕೊಂಡಿರುವ ಕೋಮಲವಾದ ತೋಳುಗಳುಳ್ಳ ಹೆಣ್ಣುಗಳ ಅನಿತ್ಯವನ್ನು (ವಂಚನೆಯನ್ನು) ನಿತ್ಯವೇ ಇದು ಎಂದು ನಂಬಿ ಆದರಿಸುವವರು ಆಡುವ ಆ ಮಾತುಗಳನ್ನೆಲ್ಲಾ ನೀನು ತಪ್ಪು ಎಂದು ಭಾವಿಸುವೆ (ತಿಳಿದುಕೊಳ್ಳುವೆ) ಯಾದರೆ, ವಿಸ್ತಾರವಾದ ಬೆಳದಿಂಗಳಿನ ಬಿಳಿಗೊಡೆಯ ಮಹಾಪುರುಷನ ಯಜ್ಞದಲ್ಲಿ ನೆಲವನ್ನು ಯಾಚಿಸಿದ ಬ್ರಹ್ಮಚಾರಿಯ ತಿರುವಲ್ಲವಾಳ್ ಕ್ಷೇತ್ರವನ್ನು ಕುರಿತು ಹೇಳುವಂಥ ಸಮರ್ಥನಾಗಿ ನೆಮ್ಮದಿಯಾಗಿರು ಮನಸ್ಸೇ. (3)

ಆಳ್ವಾರರು ಹೇಳುತ್ತಾರೆ: ಮನಸ್ಸೇ, ಆಭರಣಗಳಿಂದ ಅಲಂಕೃತರಾಗಿರುವ ಕೋಮಲವಾದ ತೋಳುಗಳುಳ್ಳ ಸುಂದರ ಯುವತಿಯರ ಕಪಟ (ಅವುಗಳೆಲ್ಲವೂ ಅನಿತ್ಯವೇ ಆದರೂ ಸಹ) ಶುದ್ಧವಾದ ವಂಚನೆಗಳನ್ನೆಲ್ಲಾ ನಿತ್ಯವೆಂದು ನಂಬುವವರು ಇದ್ದಾರೆ. ಅದನ್ನು ಆದರಿಸುತ್ತಾರೆ, ಆಶಿಸುತ್ತಾರೆ, ಅದರಂತೆ ನಡೆದುಕೊಳ್ಳುತ್ತಾರೆ. ಅವರು ಆಡುವುದು ಮಾಡುವುದು ತಪ್ಪು, ಎಂಬುದು ಆ ಜನರಿಗೆ ಅರಿವಾಗುವುದಿಲ್ಲ. ಇದಕ್ಕೆ ಕಾರಣ ಅವರ ಇಂದ್ರಿಯ ಚಾಪಲ್ಯವೇ! ವಿಷಯ ಲೋಲುಪತೆಯೇ! ಮನಸ್ಸೇ, ಅವರ ಮಾತುಗಳೆಲ್ಲ ತಪ್ಪು, ಅವು ನಿತ್ಯಕ್ಕೆ ದೂರವಾದವು ಎಂದು ನಿನಗೆ ಮನವರಿಕೆಯಾಯಿತೆಂದರೆ, ನೀನು ಭಗವಚ್ಚಿಂತನೆಗೆ ಅರ್ಹನಾಗುತ್ತೀ. ಮಹಾದಾನಿ ಎನಿಸಿದ ಬಲಿಚಕ್ರವರ್ತಿಯ ಯಜ್ಞಶಾಲೆಯಲ್ಲಿ ಮೂರಡಿ ನೆಲವನ್ನು ದಾನವಾಗಿ ಬೇಡಿದ ವಾಮನ ವಟುವಾಗಿ ರೂಪಗೊಂಡ ಭಗವಂತನು ನೆಲಸಿರುವ ತಿರುವಲ್ಲವಾಳ್ ಕ್ಷೇತ್ರವನ್ನು ಕುರಿತು ಎಡೆಬಿಡದೆ ಚಿಂತಿಸಲು ಸಮರ್ಥನಾಗುವೆ. ಹಾಗೆ ಚಿಂತಿಸುತ್ತಾ ನೀನು ನೆಮ್ಮದಿ ಪಡೆ. ನಿನಗೆ ಶಾಶ್ವತವಾದ ಶಾಂತಿ ದೊರೆಯುವುದು

4. பண்ணுலாமென் மொழிப்பாவைமார்
பணைமுலையணைதும் நாமென்று,

Galari Srinivasan

எண்ணுவாரெண்ணமதொழித்து
நீ பிழைத்துய்யக் கருதிறுயேல்,
விண்ணுளார் விண்ணின் மீதியன்ற
வேங்கடத்துளார், வளங்கொள்முந்நீர்
வண்ணனார் வல்லவாழ்
சொல்லுமா வல்லையாய் மருவு நெஞ்சே.

ಪಣ್ಣುಲಾವಿನ ಮೆನ್ ಮೊಳಿ ಪ್ಪಾವೈಮಾರ್ ಪಣೈ ಮುಲೈಯಣೈದುಮ ನಾಮೆನ್ರು,
ಎಣ್ಣುವಾರೆಣ್ಣಮದೊಳಿತ್ತು ನೀ ಪಿಳೈತ್ತುಯ್ಯಕ್ಕರುದಿನಾಯೇಲ್,
ವಿಣ್ಣುಳಾರ್ ವಿಣ್ಣಿನ್ ಮೀದಿಯನ್ರ ವೇಙ್ಗಡತ್ತುಳಾರ್, ವಳಙ್ಗೊಳ್ ಮುನ್ನೀರ್
ವಣ್ಣನಾರ್ ವಲ್ಲವಾಳಿ ಶೊಲ್ಲುಮಾ ವಲ್ಲೈಯಾಯ್ ಮರುವು ನೆಂಜೇ.

ಪಣ್ பண் = ಗಾನಮಾಧುರ್ಯದಿಂದ, ಉಲಾಮ உலாம் = (ತುಂಬಿ)ಮೆರೆಯುವ ~~ಕಡಲ~~, ಮೆಲ್ மென் = ಕೋಮಲವಾದ, ಮೊಳಿ மொழி = ಮಾತನಾಡುವ, ಪಾವೈಮಾರ್ பாவைமார் = ಹೆಣ್ಣುಗಳ, ಪಣೈ பணை = ಗಟ್ಟಿಯಾದ(ದಪ್ಪನಾದ), ಮುಲೈ முலை = ಮೊಲೆಗಳನ್ನು, ಅಣೈದುಮ அணைதும் = ಆಲಿಂಗಿಸೋಣ, ನಾಮ ಎನ್ರು நாம் என்று = ನಾವು ಎಂದು, ಎಣ್ಣುವಾರ್ எண்ணுவார் = ಚಿಂತಿಸುವವರ, ಎಣ್ಣಮ ಅದು எண்ணம் அது = ಯೋಚನೆಗಳನ್ನು, ಒಳಿತ್ತು ஒழித்து = ನೀಗಿ, ನೀ நீ = ನೀನು, ಪಿಳೈತ್ತು பிழைத்து = ಬದುಕಿ, ಉಯ್ಯ உய்ய = ಉಜ್ಜೀವನಗೊಳ್ಳಲು, ಕರುದಿನಾಯ್ ಏಲ್ கருதிறாய் ஏல் = ಆಶಿಸುವೆಯಾದರೆ, ವಿಣ್ಣುಳಾರ್ விண்ணுளார் = ದೇವತೆಗಳು (ನಿತ್ಯಸೂರಿಗಳು), ವಿಣ್ಣಿನ್ ಮೀದು விண்ணின் மீது = ಗಗನದಲ್ಲಿ (ಪರಮಪದದಲ್ಲಿ), ಇಯನ್ರ இயன்ற = ಸಂತುಷ್ಟಿಸುವ, ವೇಙ್ಗಡತ್ತು வேங்கடத்து = ತಿರುಮಲೆಯಲ್ಲಿ, ಉಳಾರ್ உளார் = ನೆಲಸಿರುವವನೂ, ವಳಮ ಕೊಳ್ வளம் கொள் = ಸುಂದರವಾದ, ಮುನ್ನೀರ್ ವಣ್ಣನಾರ್ முந்நீர் வண்ணனார் = ಕಡಲವರ್ಣದವನೂ, ನೆಲಸಿರುವ, ವಲ್ಲವಾಳಿ வல்லவாழ் = ತಿರುವಲ್ಲವಾಳ್ ಕ್ಷೇತ್ರವನ್ನು ಕುರಿತು, ಶೊಲ್ಲುಮ ಆ சொல்லும் ஆ = ಹೇಳುವಂತೆ, ವಲ್ಲೈಯಾಯ್ வல்லையாய் = ಬಲ್ಲವನಾಗಿ, ಮರುವು ನೆಂಜೇ மருவு நெஞ்சே. = ನೆಮ್ಮದಿಗೊಳ್ಳು ಮನಸ್ಸೇ.

ಗಾನಮಾಧುರ್ಯದಿಂದ ತುಂಬಿ ಬೆಳಗುವ ಕೋಮಲವಾದ ಮಾತನ್ನಾಡುವ ಹೆಣ್ಣುಗಳ ಗಟ್ಟಿಯಾದ (ದಪ್ಪನಾದ) ಮೊಲೆಗಳನ್ನು ನಾವು ಆಲಿಂಗಿಸೋಣವೆಂದು ಚಿಂತಿಸುವವರ ಯೋಚನೆಯನ್ನು ನೀಗಿ, ನೀನು ಬದುಕಿ ಉಜ್ಜೀವನಗೊಳ್ಳಲು ಆಶಿಸುವೆಯಾದರೆ, ದೇವತೆಗಳು (ನಿತ್ಯಸೂರಿಗಳು) ಗಗನದಲ್ಲಿ (ಪರಮಪದದಲ್ಲಿ) ಸಂತುಷ್ಟಿಸುವ ತಿರುವೆಂಕಟಾದ್ರಿಯಲ್ಲಿ ನೆಲಸಿರುವವನೂ ಸುಂದರವಾದ ಕಡಲವರ್ಣದವನೂ ನೆಲಸಿರುವ ತಿರುವಲ್ಲವಾಳ್ ಕ್ಷೇತ್ರವನ್ನು ಕುರಿತು ಹೇಳುವಂತೆ (ಸ್ತೋತ್ರಗಳ ಹಾಡುವಂತೆ) ಬಲ್ಲವನಾಗಿ ನೆಮ್ಮದಿಯಾಗಿರು ಮನಸ್ಸೇ. (4)

ಇಂದ್ರಿಯಗಳನ್ನು ಪ್ರಚೋದಿಸುವಂಥ ಕೆಲಸಗಳಲ್ಲಿಯೇ ತೊಡಗಿರುವುದನ್ನು, ಇಂದ್ರಿಯ ಚಾಪಲ್ಯವನ್ನೇ ಹೆಚ್ಚಿಸಿಕೊಳ್ಳುತ್ತಾ ಹೋಗುವುದನ್ನು, 'ಬದುಕ

ಎನಿಸುವುದಿಲ್ಲ. ಅದು 'ಬದುಕೇ' ಅಲ್ಲ. ಅದರಿಂದ ಬರುವುದು ಅಧೋಗತಿಯೇ! ಎಣಿಕೆಯಿಲ್ಲದಷ್ಟು ಪುನರ್ಜನ್ಮದ ಪುನರಾವರ್ತನೆಯೇ! ದುಃಖ ಸಂಕಟಗಳೇ!

ಭಗವಚ್ಚಿಂತನೆಯಲ್ಲಿ ಎಡೆಬಿಡದೆ ಕಾಲಕಳೆಯುವುದೇ ನಿಜವಾದ 'ಬದುಕು'! ಮನುಷ್ಯನನ್ನು ಸಾಂಸಾರಿಕ ಬಂಧನದಿಂದ ಉದ್ಧರಿಸುವುದು ಇದೇ. ಈ ನಿಜವಾದ ಬದುಕನ್ನು ಆತ್ಮೋದ್ಧಾರವನ್ನು ಪಡೆಯಲಿಕ್ಕೆ ಇರುವುದೇ ಮನುಷ್ಯನ ಗುರಿಯಾಗಬೇಕು.

ಆಳ್ವಾರರು ಹೇಳುತ್ತಾರೆ: ಮನಸ್ಸೇ, ಕಿವಿಯನ್ನು ಸೆಳೆಯುವ ಮಧುರವಾದ ಕಂಠವುಳ್ಳ, ಕಣ್ಣನ್ನು ಸೆಳೆಯುವ ದೇಹ (ರೂಪ) ಸೌಂದರ್ಯಾದಿಗಳನ್ನುಳ್ಳ ಯೌವನವತಿಯರ ಆಲಿಂಗನದಲ್ಲಿಯೇ ಕಾಲಕಳೆಯೋಣವೆಂದು ಆಶಿಸುವವರು ಬಹಳ ಮಂದಿ. ಅವರು ನಡೆಸುವುದು ನಿಜವಾದ ಬದುಕಲ್ಲ. ನೀನು ಅವರ ಹಾಗೆಯೇ ಯೋಚಿಸುವುದನ್ನು, ನಡೆಯುವುದನ್ನು, ಆ ಜಾಡನ್ನು ಅನುಸರಿಸುವುದನ್ನು ಬಿಟ್ಟುಬಿಡು. ನಿಜವಾದ ಬಾಳ್ವೆಯಲ್ಲಿ ನಿನಗೆ ಆಸಕ್ತಿಯಿರುವುದಾದರೆ, ಈ ಜನ್ಮದಲ್ಲಿ ಆತ್ಮೋದ್ಧಾರಗೊಳ್ಳಬೇಕಾದರೆ, ನೀನು ಭಗವಂತನನ್ನು ಆಶ್ರಯಿಸು. ಅವನನ್ನು ಕುರಿತು ಚಿಂತಿಸು. ಅವನಿರುವ ಕ್ಷೇತ್ರಗಳನ್ನು ಸಂದರ್ಶಿಸು. ಅವುಗಳನ್ನು ಕುರಿತು ಯೋಚಿಸು. ದೇವತೆಗಳೂ ನಿತ್ಯಸೂರಿಗಳೂ ಪೂಜಿಸುವಂಥ ತಿರುವೇಂಕಟನಾಯಕನನ್ನು, ಅವನ ದಿವ್ಯಸುಂದರ ರೂಪವನ್ನು ಹೊಗಳಿ ಹಾಡುವುದನ್ನು ಬಲ್ಲವನಾಗು. ಇದರಿಂದ ನಿನ್ನ ಜೀವನ ಉತ್ತಮಗೊಳ್ಳುವುದು. ನೀನು ಉದ್ಧಾರಗೊಳ್ಳುವೆ

5. மஞ்சு தோய் வெண்குடை மன்னராய்
வாரணம் சூழ வாழ்ந்தார்,
துஞ்சினாரென்பதோர் சொல்லை
நீ துயரெனக் கருதியேல்,
நஞ்சு தோய் கொங்கை மேல்
அங்கை வாய் வைத்து அவள் நாளையுண்ட,
மைந்தனார் வல்ல வாழ்
சொல்லுமா வல்லையாய் மருவு நெஞ்சே.

ಮಂಜುತೋಯ್ ವೆಣ್ಕುಡೈ ಮನ್ನರಾಯ್ ವಾರಣಮ್ ಶೂೞ ವಾೞ್ನ್ದಾರ್,
ತುಂಜಿನಾರೆನ್ಬದೋರ್ ಶೊಲ್ಲೈ ನೀ ತುಯರೆನಕ್ಕರುದಿನಾಯೇಲ್,
ನಂಜುತೋಯ್ ಕೊಂಗೈಮೇಲ್ ಅಂಗೈ ವಾಯ್ ವೈತ್ತು ಅವಳ್ ನಾಳೈಯುಣ್ಡ,
ಮೈನ್ದನಾರ್ ವಲ್ಲವಾೞ್ ಶೊಲ್ಲುಮಾ ವಲ್ಲೈಯಾಯ್ ಮರುವು ನೆಂಜೇ.

ಮಂಜುತೋಯ್ மஞ்சு தோய் = ಮೋಡಗಳು ಮುಸುಕುವ, ವೆಣ್ಕುಡೈ வெண்குடை = ಬೆಳ್ಗೊಡೆಯ, ಮನ್ನರ್ ಆಯ್ மன்னர்

ಆಯ = ಚಕ್ರವರ್ತಿಯಾಗಿ, ಪಾರ್ಣಾಮೂ ಕೋಲು ಬಾಗ ಣಾಮ್ ತೃಷ್ಣ = ಆನೆಯ ಬಲದಿಂದ ದುಷ್ಟವೆಂದು, ವಾಳೋನ್ನಾರ್ ಬಷ್ಟಿಂಗ್ ಕಾರ್ = ಬಾಳಿದವರನ್ನು, ಕುಂಜನಾರ್ ತುರುತ್ತಿದ್ದಾರ್ = ನಾಶಪಡಿಸಿದರು (ವಿಶೇಷಣಿದ್ದವಾಗಿ ಏದರು), ಎನ್ನದು ಓರ ಕೇಳ್ಳಾ ರಾಣಪತು ಕ್ವಾರ್ ಶಾಲ್ನಿಲು = ಎಂಬ ಒಂದು ಮಾತನ್ನು (ವಿಷಯವನ್ನು), ನೀಣ್ಡ್ = ನೀನು, ಕುಯರ್ಪನ ಶರುದಿನಾಲ್ ಪಲ್ ಕುರುಕ್ಕಿಲು ತುಯರ್ ಣಾ = ದುಃಖದ ದಿಂಗಳಿ ಎಂದು, ನಂಜು ಕೋಯಿಲ್ ನರುಕ್ಕ ಕೋಯ = ಯ್ ಗಾಲ್ = ಯೋಚಿಸಿದೆಯಾದರೆ, ನಂಜು ಕೋಯಿಲ್ ನರುಕ್ಕ ಮೇಲ್ = ಪಾಲ್ ವಿಷದಿಂದ ಕುಂಬಿರುವ, ಕೋಲ್ಗಳ ಮೇಲ್ ಕಾಕ್ಕಾಕ ಮೆಶ = ಪಾಲ್ ಕಳ್ಳವೇಲ್, ಅಮಾಕ್ಕೆ, ವಾಯ್, ಪ್ಲೈತ್ತ ಅಂ ಣಾಕ ಬಾಯ್ ಣಾಯಕ್ಕು ಕಳ್ಳವೇಲ್, ಅಮಾಕ್ಕೆ, ವಾಯ್, ಪ್ಲೈತ್ತ ಅಂ ಣಾಕ ಬಾಯ್ ಣಾಯಕ್ಕು = ಸುಂದರವಾದ ಕೈಗಳನ್ನೂ ಬಾಯನ್ನೂ ಇಟ್ಟು, ಅವಳ್ ಅಬಂ = ಅವಳ, ನಾಳ್ಳೈ ನಾಗಿ = ಆಯುಸ್ಸನ್ನೇ, ಉಣ್ಡ ಉಣ್ಡ = ಸುಂಗಿದ, ಪ್ಲೈನ್ನಾರ್ ಣಾಮಗ್ಗ ತ್ತುರ್ = ಸ್ವಾಮಿ (ಪರಮಪುರುಷನ)ಯು, ವಲ್ಲಪಾಲ್ ಬಾಲು ಬಾಗ್ = ಶಿರುವಲ್ಲವಾಲ್ ಕ್ಷೇತ್ರವನ್ನು ಕೂಡಲು, ಕೋಲ್ಲುವ ಆ ಶಾ ಲ್ ಸ್ರುಂ ಆ = ಹೇಳುವಂತೆ, ವಲ್ಲೈ ಆಂಯ್ ಬಾಲಲ್ ಆಯ್ = ಸಮರ್ಥನಾಗಿ, ಮರುವು ನೆಂಜೇ ಮರುವು ನರುಕ್ಕ = ನಮ್ಮದಿಗೆ ಳ್ಳು ಮನಸ್ಸೇ.

ಮನಸ್ಸೇ, ಮೊಲದಗಳು ಮುದುಕುವಂತೆ ಬೆಳ್ಳಿಗ್ಗಡೆಯ ಚಕ್ರವರ್ತಿಯಾಗಿ, ಆನೆಯ ಬಲದಿಂದ ದುಷ್ಟವೆಂದು ಬಾಳಿದವರನ್ನು ಮಡಿಯಿಸಿದನು ಎಂಬ ಒಂದು ವಿಷಯವನ್ನು ನೀನು ದುಃಖದ ದಿಂಗಳಿ ಎಂದು ಭಾವಿಸುವುದಾದರೆ, ವಿಷದಿಂದ ಕುಂಬಿರುವ ಮೊಲೆಗಳ ಮೇಲೆ ಸುಂದರವಾದ ಕೈಗಳನ್ನೂ ಬಾಯನ್ನೂ ಇಟ್ಟು, ಅವಳ ಆಯುಸ್ಸನ್ನೇ ಉಂಡುಬಿಟ್ಟ ಪರಮಪುರುಷನ ಶಿರುವಲ್ಲವಾಲ್ ಕ್ಷೇತ್ರವನ್ನು ಕೂಡಲು ಹೇಳುವದಕ್ಕೆ ಸಮರ್ಥನಾಗಿ ನಮ್ಮ ದಿಗೆಳ್ಳು. (5)

"ಮೇಲ್ಮು ಮಂಡಲವನ್ನು ಮುಟ್ಟುವಷ್ಟು ಉನ್ನತವಾದ (ವಿಶಾಲವಾದ) ಶ್ವೇತಚ್ಛತ್ರದಡಿಯಲ್ಲಿ ಮೆರೆಯುತ್ತಿದ್ದ ಇಡಿಯ ಭಾರತಖಂಡದ ಚಕ್ರವರ್ತಿಯಾದ ದುರ್ಯೋಧನನನ್ನೂ ಅವನ ವಂಶವನ್ನೆಲ್ಲಾ ಕೊಲ್ಲಿಸಿಬಿಟ್ಟನಲ್ಲ! ಭಗವಂತನ ಈ ಧನವನ್ನೂ ಯುಕ್ತವಾದ ಕಾರ್ಯ ಸಾಧುವೇ? ಎಂದು ಪ್ರಶ್ನಿಸುವವರೂ ಇದ್ದಾರೆ. ಒಂದು ನಿದರ್ಶನವನ್ನು ಇಲ್ಲಿ ಹೇಳಬಹುದು. ಶ್ರೀಕೃಷ್ಣನು ಪಾಂಡವರ ಪಕ್ಷಪಾತಿಯಾದರೆ, ಅವನ ಅಣ್ಣನೇ ಆದ ಬಲರಾಮನು ಕೌರವರ ಪಕ್ಷಪಾತಿಯಾಗಿದ್ದ. ಕಾಲಕ್ಕೆ ದರಿಯಾಗಿ ಬಲರಾಮನು ಅವರ ಬೆಂಬಲಕ್ಕೆ ನಿಂತು ಬದಗಿ ಬರಲಿಲ್ಲ, ಅಷ್ಟೆ. ಈ ಬಗೆಯ ಮನೋಭಾವವುಳ್ಳವರಿಗೆ ಆಳ್ವಾರರು ಈ ಪಾಶುರದಲ್ಲಿ ಉತ್ತಮವಾದ ಸಮಾಧಾನವನ್ನು ಹೇಳುತ್ತಿದ್ದಾರೆ.

ಆಳ್ವಾರರು ಹೇಳುತ್ತಾರೆ: ಮನಸ್ಸೇ, "ಚಕ್ರವರ್ತಿಯಾದ ದುರ್ಯೋಧನನನ್ನು ಅವನ ವಂಶವನ್ನು ಕೊಲ್ಲಿಸಿ ಹಾಕಬಹುದೇ? ಇದು ಯಾವ ನ್ಯಾಯ? ಇದೊಂದು ವ್ಯಸನದ ಸಂಗತಿ" ಎಂದು ನೀನು ಭಾವಿಸುವೆಯಾ? ಆ ಪರಮ ಪುರುಷನೇ ಹಸುಗೂಸಾಗಿದ್ದಾಗ, ಕಂಸನಿಂದ ಪ್ರೇರಿತಳಾ, ಪೂತನಾ ರಾಕ್ಷಸಿಯು ಯಶೋದೆಯಂತೆ ಸುಂದರ ರೂಪವನ್ನು ತಳೆದು, ಮೊಲೆಗಳಲ್ಲಿ ವಿಷವನ್ನು ತುಂಬಿಕೊಂಡು, ಅವನನ್ನು ಕೊಲ್ಲಲು ಬಂದವಳು ಪೂತನಿ. ಸ್ವಾಮಿಯು ತನ್ನ ಸುಂದರವಾದ ಪುಟ್ಟ ಕೈಗಳಿಂದ ಅವಳ ಮೊಲೆಗಳನ್ನು ಸವರುತ್ತಾ, ಅದಕ್ಕೆ ಬಾಯಿ ಹಚ್ಚಿ, ವಿಷದ ಹಾಲನ್ನೇ ಸವಿದು ಉಂಡನಲ್ಲವೇ? ಅವಳ ~~[illegible]~~ ಕೃತ್ರಿಮವಂತಿಕೆಗಾಗಿ ಅವಳ ಪ್ರಾಣವನ್ನು ಹೀರಿ ಬಿಟ್ಟದ್ದು ಅನ್ಯಾಯವೇ? ಈ ವಿಷಯವನ್ನು ನೀನು ಯೋಚಿಸು, ಅಂತು, ಹೊಗಳಿ ಹಾಡಬಲ್ಲೆಯಾದರೆ, ನೀನು ನೆಮ್ಮದಿಗೊಳ್ಳುತ್ತೀ. ಆ ಪರಮ ಪುರುಷನೇ ಈಗ ತಿರುವಲ್ಲವಾಳ್ ಎಂಬ ದಿವ್ಯಕ್ಷೇತ್ರದಲ್ಲಿ ನೆಲಸಿದ್ದಾನೆ. ಅವನನ್ನು, ಅವನು ನೆಲಸಿರುವ ಕ್ಷೇತ್ರಗಳನ್ನು ಕುರಿತು ಎಡೆಬಿಡದೆ ಚಿಂತಿಸುತ್ತಾ ನೆಮ್ಮದಿಗೊಳ್ಳು.

ಭಗವಂತನಿಗೆ ಪಕ್ಷಪಾತವಿಲ್ಲ. ಎಲ್ಲರೂ ಅವನಿಗೆ ಒಂದೇ. ಅವನನ್ನು ಆಶ್ರಯಿಸಿದ ಸಜ್ಜನರಿಗೆ ಅವನು ಪರಮ ಕೃಪಾಳು. ಎಲ್ಲ ಬಗೆಯಲ್ಲೂ ಸ್ವಾಮಿಯು ಅವರನ್ನು ರಕ್ಷಿಸುತ್ತಾನೆ. ಅವರನ್ನು ಪೋಷಿಸುತ್ತಾನೆ. ಯಾರು ದುಷ್ಕರ್ಮಗಳಿಗೆ ವಶೀಭೂತರೋ, ಯಾರನ್ನು ಸನ್ಮಾರ್ಗಕ್ಕೆ ತರಲು ಸಾಧ್ಯವಿಲ್ಲವೋ ಅವರನ್ನು ಶಿಕ್ಷಿಸದೆ ಬಿಡುವುದಿಲ್ಲ. ಭಗವಂತನ ಕೆಲಸವೇ ಇದು – ದುಷ್ಟ ಶಿಕ್ಷಣ, ಶಿಷ್ಟ ರಕ್ಷಣ.

6. உருவினார் பிறவி சேர்
ஊன்பொதிநரம்பு தோற்குரம்பையுள்புக்கு,
அருவிநோய் செய்துநின்றைவர்தாம்
வாழ்வதற்கஞ்சினாயேல்,
திருவினார் வேதநான்கைந்துதீ
வேள்வியோடங்கமாறும்,
மருவினார் வல்லவாழ்
சொல்லுமா வல்லையாய் மருவுநெஞ்சே.

ಉರುವಿನಾರ್ ಪಿಱವಿ ಶೇರ್ ಊನ್ ಪೊದಿನರಮ್ಬು ತೋಱ್ಕುರಮ್ಬೈಯುಳ್ ಪುಕ್ಕು,
ಅರುವಿನೋಯ್ ಶೆಯ್ದು ನಿನ್ಱೈವರ್ ತಾಮ್ ವಾೞ್ವದಱ್ಕಂಜಿನಾಯೇಲ್,
ತಿರುವಿನಾರ್ ವೇದನಾನ್ಗೈನ್ದು ತೀ ವೇಳ್ವಿಯೋಡಙ್ಗಮಾಱುಮ್,
ಮರುವಿನಾರ್ ವಲ್ಲವಾೞ್ ಶೊಲ್ಲುಮಾ ವಲ್ಲೈಯಾಯ್ ಮರುವು ನೆಂಜೇ.

ಉರುವಿನ್ உருவின் = ರೂಪದಿಂದ, ಆರ್ ஆர் = ತುಂಬಿ (ಸುಂದರವಾ),
ಪಿಱವಿ ಶೇರ್ பிறவி சேர் = ಸ್ವಭಾವದಿಂದ ಕೂಡಿ (ಹುಟ್ಟುಗುಣದಿಂದ ಕೂಡಿ)

ಊನ್ ಊಣ್ = ಮಾಂಸದಿಂದಲೂ, ಪೊದಿಂಬಾக்கி = ಹುದುಗಿರುವ, ನರಮ್ಬು நரம்பு = ನರಗಳಿಂದಲೂ, ಶೋಲ್ தோல் = ಚರ್ಮದ ಹೊದಿಕೆಯಿಂದಲೂ, ಉಳ್ಳ, ಕುರುಮ್ಬೈ குரம்பை = (ಸ್ಥೂಲ) ದೇಹವನ್ನು, ಉಳ್ಪುಕ್ಕು உள்புக்கு = ಒಳಹೊಕ್ಕು, ಅರುವಿ அருவி = ರೂಪವಿಲ್ಲದೆಯೇ, ನೋಯ್ ಶೆಯ್ದು நோய்செய்து = ಯಾತನೆಯನ್ನುಂಟುಮಾಡಿ, ನಿನ್ಱ நின்ற = ಇರುವ, ಐವರ್ಕಾವಾ ஐவர்காம் = ಪಂಚೇಂದ್ರಿಯಗಳು, ವಾೞ್ವದರ್ಕು வாழ்வதற்கு = ಬಾಳುವುದಕ್ಕೆ, ಅಂಜಿನಾಯ್ ಏಲ್ அஞ்சினாய் ஏல் = ಅಂಜಿದೆಯಾದರೆ, ತಿರುವಿನಾಳ್ திருவினாள் = ಶ್ರೀಕಾರದಿಂದ ಕೂಡಿರುವ, ವೇದಮ್ ನಾನ್ಗು வேதம் நான்கு = ನಾಲ್ಕು ವೇದಗಳನ್ನು, ಐನ್ದು ತೀ, ವೇಳ್ವಿಯೋಡು ஐந்து தீ வேள்வியோடு = ಐದು ಅಗ್ನಿಗಳನ್ನು, ಯಜ್ಞಗಳನ್ನು, ಅಙ್ಗಮ್ ಆಱುಮ್ அங்கம் ஆறும் = ಆರು ವೇದಾಂಗಗಳನ್ನು, ಮಱುವಿನಾರ್ மறுவினார் = ಹುಟ್ಟುಗಾಡಿದುವವರ (ಸ್ವಾಮಿಯು), ವಲ್ಲವಾೞ್ வல்லவாழ் = ತಿರುವಲ್ಲವಾೞ್ ಕ್ಷೇತ್ರವನ್ನು, ಶೊಲ್ಲುಮಾಱು சொல்லுமாறு = ಹೇಳುವಹಾಗೆ, ವಲ್ಲೆ ಆಯ್ ವಲ್ಲೈ ஆய = ಸಮರ್ಥನಾಗಿ, ಮಱುವು மறவு = ನೆಮ್ಮದಿಗೊಳ್ಳು, ನೆಂಜೇ நெஞ்சே = ಮನಸ್ಸೇ.

ಮನಸ್ಸೇ, ರೂಪದಿಂದಲೂ, ಸ್ವಭಾವದಿಂದಲೂ (ಹುಟ್ಟುಗುಣದಿಂದ), ಮಾಂಸದಿಂದಲೂ, ಹುದುಗಿರುವ ನರಗಳಿಂದಲೂ, ಚರ್ಮದಿಂದಲೂ ಕೂಡಿ), ಮಾಂಸದಿಂದಲೂ, ಹುದುಗಿರುವ ನರಗಳಿಂದಲೂ, ಚರ್ಮದ ಹೊದಿಕೆಯಿಂದಲೂ ಕೂಡಿರುವ ದೇಹವನ್ನು ಒಳಹೊಕ್ಕು ರೂಪವಿಲ್ಲದಂತೆಯೇ ಯಾತನೆಯನ್ನುಂಟು ಮಾಡುತ್ತಾ ಇರುವ ಪಂಚೇಂದ್ರಿಯಗಳು ಬಾಳುವುದಕ್ಕೆ (ಅಲ್ಲಿ) ಅಂಜುವೆ (ಅಂಜಿದೆ)ಯಾದರೆ, ಶ್ರೀಯಿಂದ ಕೂಡಿ, ನಾಲ್ಕು ವೇದಗಳನ್ನು ಐದು ಅಗ್ನಿಗಳನ್ನು, ಐದು ಯಜ್ಞಗಳನ್ನು, ಆರು ವೇದಾಂಗಗಳನ್ನು ಹುಟ್ಟುಗಾಡಿದುವವರು ನೆಲಸಿರುವ ತಿರುವಲ್ಲವಾೞ್ ಕ್ಷೇತ್ರವನ್ನು ಹೇಳುವಹಾಗೆ ಸಮರ್ಥನಾಗಿ ನೆಮ್ಮದಿಗೊಳ್ಳು. (6)

ಆೞ್ವಾರರು ಹೇಳುತ್ತಾರೆ: ಮನಸ್ಸೇ, ಮಾನವಸಿಕ್ಕ, ಎಲ್ಲರ ಕಣ್ಣಿಗೆ ಕಾಣಿಸುವ ದೇಹವಿದೆ. ಅದು ಮಾಂಸ, ಮಜ್ಜೆ, ರಕ್ತ, ನರ, ಚರ್ಮಗಳಿಂದ ಆಗಿದೆ. ಅದಕ್ಕೆ ಒಂದು ರೂಪವಿದೆ. ಹುಟ್ಟುಗುಣ ಸ್ವಭಾವಗಳಿವೆ. ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮವೆಂಬ ಜ್ಞಾನೇಂದ್ರಿಯಗಳಿವೆ. ಇವುಗಳ ಒಳಗೆ ರೂಪವಿಲ್ಲದಂತಿರುವ ಪಂಚೇಂದ್ರಿಯಗಳು ಮಾನವ ದೇಹದ ಒಳಹೊಕ್ಕು, ಅದನ್ನು ವಿಷಯಗಳಲ್ಲಿ (ಎಂದರೆ, ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಇಂದ್ರಿಯಾರ್ಥಗಳಲ್ಲಿ) ತೊಡಗಿಸಿ, ನಾನಾಬಗೆಯ ಯಾತನೆಗೆ, ಬಾಧೆಗಳಿಗೆ, ಈಡು ಮಾಡುತ್ತವೆ. ಮನುಷ್ಯನನ್ನು ಅಧೋಗತಿಗೆ ತಳ್ಳುವಶಕ್ತಿ ಇವೆ. ಈ ಅಧೋಗತಿಯನ್ನು ತಪ್ಪಿಸಿಕೊಳ್ಳಬೇಕಾ

ದಶೆ, ದಯಾಸ್ವರೂಪಳೇ ಆಗಿರುವ ಶ್ರೀದೇವಿಯಿಂದ ಕೂಡಿರುವ, ಪರಮಪುರುಷನನ್ನು ಆಶ್ರಯಿಸಬೇಕು. ಅವನೇ ನಾಲ್ಕು ವೇದಗಳನ್ನೂ, ಮೂರು ಅಗ್ನಿಗಳನ್ನೂ, ಐದು ಯಜ್ಞಗಳನ್ನೂ, ಆರು ವೇದಾಂಗಗಳನ್ನೂ ಒಟ್ಟಾಗಿಸಿರುವವನು. (ಜ್ಞಾನ, ಕರ್ಮ, ಭಕ್ತಿಗಳನ್ನು ಒಂದುಗೂಡಿಸಿರುವವನು) ಅವನನ್ನು, ಅವನು ನೆಲಸಿರುವ ದಿವ್ಯಕ್ಷೇತ್ರಗಳನ್ನೂ ಕೂಡ ಹೊಗಳುವಂಥ ಸಾಮರ್ಥ್ಯವನ್ನು ಪಡೆದುಕೋ. ಇದರಿಂದ ನಿನಗೆ ಇಂದ್ರಿಯಗಳಿಂದ ಬರಬಹುದಾದ ಬಾಧೆಯೂ ಅಂಜಿಕೆಯೂ ತೊಲಗಿಹೋಗುವುದು ನಿನಗೆ ನೆಮ್ಮದಿ ಬರುವುದು

7. நோயெலாம் பெய்ததோராக்கையை
மெய்யெனக்கொண்டு, வாளா
பேயர்தாம் பேசும்பேச்சை
நீ பிழையெனக் கருதினாயேல்,
தீயுலா வெங்கதிர் திங்களாய்
மங்குல்வானாகி நின்ற,
மாயனார் வல்லவாழ்
சொல்லுமா வல்லையாய் மருவு நெஞ்சே.

ನೋಯೆಲಾಮ್ ಪೆಯ್‌ದದೋರಾಕ್ಕೈಯ್ಯೈ ಮೆಯ್ಯೆನಕ್ಕೊಂಡು, ವಾಳಾ
ಪೇಯರ್ ತಾಮ್ ಪೇಶುಮ್ ಪೇಚ್ಚೈ ನೀ ಪಿಳೈಯೆನಕ್ಕರುದಿನಾಯೇಲ್,
ತೀಯುಲಾ ವೆಙ್ಗದಿರ್ ತಿಙ್ಗಳಾಯ್ ಮಙ್ಗುಲ್ ವಾನಾಗಿ ನಿನ್ರ,
ಮಾಯನಾರ್ ವಲ್ಲವಾಳ್ ಶೊಲ್ಲುಮಾ ವಲ್ಲೈಯಾಯ್ ಮರುವು ನೆಂಜೇ.

ನೋಯ್ நோய் = ರೋಗಗಳನ್ನು, ಎಲಾಮ್ எலாம் = ಎಲ್ಲವನ್ನು, ಪೆಯ್‌ದದು பெய்தது = ತುಂಬಿಕೊಂಡಿರುವ (ಕಟ್ಟಿಕೊಂಡಿರುವ), ಓರ್ ಆಕ್ಕೈಯ್ಯೈ ஓர் ஆக்கையை = ಒಂದು ದೇಹವನ್ನು, ಮೆಯ್ ಎನ மெய் என = ನಿಜವಾದದ್ದೆಂದು, ಕೊಂಡು கொண்டு = ಎಣಿಸಿ, ವಾಳಾ வாளா = ಸುಮ್ಮನೆ (ಅಲಕ್ಷ್ಯದಿಂದ, ವ್ಯರ್ಥವಾಗಿ), ಪೇಯರ್ ತಾಮ್ பேயர் தாம் = ಅವಿವೇಕಿಗಳು, ಪೇಶುಮ್ பேசும் = ಆಡುವ, ಪೇಚ್ಚೈ பேச்சை = ಮಾತನ್ನು, ನೀ நீ = ನೀನು, ಪಿಳೈ பிழை = ತಪ್ಪು (ಸುಳ್ಳು), ಎನ என = ಎಂದು, ಕರುದಿನಾಯ್ ಏಲ್ கருதினாய் ஏல் = ಭಾವಿಸಿದೆಯಾದರೆ, ತೀ ಉಲಾಮ್ தீ உலாம் = ಜ್ವಾಲೆ ಸುತ್ತಿರುವ, ವೆಮ್ ಕದಿರ್ வெம் கதிர் = ಸೂರ್ಯನೂ, ತಿಙ್ಗಳ್ திங்கள் = ಚಂದ್ರನೂ, ಆಯ್ ஆய் = ಆಗಿ, ಮಙ್ಗುಲ್ மங்குல் = ಮೋಡಗಳಿರುವ, ವಾನ್ ಆಗಿ வான் ஆகி = ಆಕಾಶವಾಗಿ, ನಿನ್ರ நின்ற = ಇರುವ, ಮಾಯನಾರ್ மாயனார் = ಆಶ್ಚರ್ಯಕರನ, ವಲ್ಲವಾಳ್ வல்லவாழ் = ತಿರುವಲ್ಲವಾಳ್ ಕ್ಷೇತ್ರವನ್ನು ಕುರಿತು, ಶೊಲ್ಲುಮ್ ಆ சொல்லும் ஆ = ಹೇಳುವಂತೆ (ಹೇಳುವ ಹಾಗೆ), ವಲ್ಲೈ ಆಯ್ வல்லை ஆய் = ಬಲ್ಲೆಯಾಗಿ, ಮರುವು மருவு = ನೆಮ್ಮದಿಗೊಳ್ಳು, ನೆಂಜೇ நெஞ்சே = ಮನಸ್ಸೇ.

ಮನಸ್ಸೇ, ಯಾತನೆಗಳೆಲ್ಲವನ್ನೂ ತುಂಬಿಟ್ಟು ಕೊಂಡಿರುವುದೊಂದು ದೇಹವನ್ನು ನಿಜವಾದದ್ದೆಂದು ಭಾವಿಸಿ, ವ್ಯರ್ಥವಾಗಿ ಅವಿವೇಕಿಗಳು ಆಲಸ್ಯದಿಂದ ಆಡುವ ಮಾತುಗಳನ್ನು ನೀನು ತಪ್ಪು (ಸುಳ್ಳು) ಎಂದು ಭಾವಿಸುವೆಯಾದರೆ, ಪ್ರಜ್ವಲಿಸುವ ಸೂರ್ಯನೂ ಚಂದ್ರನೂ ಆಗಿ, ಮೋಡಗಳಿರುವ ಗಗನವೂ ಆಗಿರುವ ಆಶ್ಚರ್ಯಕಾರಕನ ತಿರುವಲ್ಲವಾಳ್ ಕ್ಷೇತ್ರವನ್ನು ಕುರಿತು ಹೇಳುವ ಹಾಗೆ ಸಮರ್ಥನಾಗಿ ನೆಮ್ಮದಿಗೊಳ್ಳು. (7).

ಆಳ್ವಾರರು ಹೇಳುತ್ತಾರೆ: ಮನಸ್ಸೇ, ಈ ಮಾನವ ದೇಹಕ್ಕೆ ಕಟ್ಟಿಟ್ಟಿದ್ದು ದುಃಖ ಸಂಕಟಗಳೇ. ಅವನ್ನು ತುಂಬಿಟ್ಟು ಕೊಂಡೇ ಬರುತ್ತದೆ ಈ ದೇಹ! ಈ ದೇಹ ಶಾಶ್ವತವಾದದ್ದಲ್ಲ. ಇದು ಯಾವಾಗ ಬಿದ್ದು ಹೋಗುವುದೋ ಹೇಳುವುದಕ್ಕಾಗುವುದಿಲ್ಲ. ಇಂಥ ಅಶಾಶ್ವತವಾದ ದೇಹವನ್ನೇ ಶಾಶ್ವತವೆಂದೂ, ಇದರ ಸುಖ ಭೋಗಗಳೇ ನಿಜವೆಂದೂ ತಿಳಿದು ಜೀವನ ನಡೆಸುವವರು ಅವಿವೇಕಿಗಳು. ಅವರ ಮಾತುಗಳೆಲ್ಲವೂ ಅಸದ್ದಯ ಮಾತುಗಳು. ಮನಸ್ಸೇ, ನೀನು ಅವರ ಮಾತುಗಳಿಗೆ ಕಿವಿಗೊಡಬಾರದು. ಅವುಗಳೆಲ್ಲ ತಪ್ಪು ಮಾತುಗಳು ಎಂದು ನೀನು ತಿಳಿಯುವೆಯಾದರೆ, ಆಧ್ಯಾತ್ಮಿಕ ಜೀವನದಲ್ಲಿ ತೊಡಗಲು ನೀನು ಸಮರ್ಥನಾಗುವೆ. ಪ್ರಜ್ವಲಿಸುವ ಸೂರ್ಯನೂ, ಬೆಳಗುವ ಚಂದ್ರನಾಗಿ, ಆ ಸೂರ್ಯಚಂದ್ರರೂ ಮೋಡಗಳೂ ಸಂಚರಿಸುವ ಗಗನವೂ ತಾನಾ, ಆಶ್ಚರ್ಯಕಾರಕನಾದ ಭಗವಂತನನ್ನು ಮತ್ತು ಅವನು ನೆಲಸಿರುವ ತಿರುವಲ್ಲವಾಳ್ ಮುಂತಾದ ದಿವ್ಯಕ್ಷೇತ್ರಗಳನ್ನು ಕುರಿತು ಹೊಗಳಿ ಹಾಡಬಲ್ಲ ಸಮರ್ಥನಾಗಿ ನೆಮ್ಮದಿಯಾಗಿರು. ಇದರಿಂದಲೇ ನಿನ್ನ ಉದ್ಧಾರ.

8\. மஞ்சு சேர் வானெரி நீர் நிலம்
காலிவை மயங்கி நின்ற,
அஞ்சு சேராக்கையை
அரணமன்றென்றுய்யக்கருதிறையேல்;
சந்து சேர் மென்முலைப்
பொன்மலர்ப்பாவையும் தாமும், நாளும்
வந்து சேர் வல்லவாழ்
சொல்லுமா வல்லையாய் மருவு நெஞ்சே.

ಮಂಜು ಶೇರ್ ವಾನೆರಿ ನೀರ್ ನಿಲಮ್ ಕಾಲಿವೈ ಮಯಙ್ಗಿ ನಿನ್ಱ,
ಅಂಜು ಶೇರಾಕ್ಕೈಯೈ ಅರಣಾಮನ್ಱೆನ್ಱುಯ್ಯಕ್ಕರುದಿನಾಯೇಲ್,
ಶನ್ದು ಶೇರ್ ಮೆನ್ಮುಲೈಪ್ಪೊನ್ ಮಲರ್ಪ್ಪಾವೈಯುಮ್ ತಾಮುಮ್, ನಾಳುಮ್
ವನ್ದು ಶೇರ್ ವಲ್ಲವಾೞ್ ಶೊಲ್ಲುಮಾ ವಲ್ಲೈಯಾಯ್ ಮರುವು ನೆಂಜೇ.

ಮಂಜು ಶೇರ್ மஞ்சு சேர் = ಮೋಡಗಳು ಕೂಡುವ, ವಾನ್ வான் = ಬಾನು, ಎರಿ எரி = ಬೆಂಕಿ, ನೀರ್ நீர் = ನೀರು, ನಿಲಮ್ நிலம் = ನೆಲ, ಕಾಲ್ கால் = ಗಾಳಿ, ಇವೈ இவை = ಇವುಗಳು, ಮಯಙ್ಗಿ ನಿನ್ಱ மயங்கி நின்ற = ಭ್ರಮಿಸಿ ಸೇರಿಕೊಂಡಿರುವ, ಅಂಜು ಶೇರ್ அஞ்சு சேர் = ಅಂಜಿಕೆಯಿಂದ ಕೂಡಿರುವ, ಆಕ್ಕೈಯೈ ஆக்கையை = ದೇಹವನ್ನು, ಅರಣಾಮ್ அரணாம் = (ಸುಭದ್ರವಾದ) ಕೋಟೆ, ಅನ್ಱು அன்று =

ಅಲ್ಲ, எனக்கு உணர்ந்து = ಎಂದು ಭಾವಿಸಿ, உய்ய உய்ய = ಉಜ್ಜೀವನಗೊಳ್ಳಲು, கருதினாயேல் உருக்கிலாய் ரூப = ಭಾವಿಸುತಿಯಾದರೆ (ಭಾವಿಸಿರುತಿಯಾದರೆ), தண்டு சேர் சந்து சேர் = ಚಂದನ ಬಿಂದ ಕೂಡಿರುವ, பொன் மலர் பொன் முல்லை மணம் முகிழ் = ಕೋಮಲವಾದ ಮೊಲೆಗಳು, பொன் மலர் பொன் ... = ಕನ್ನಿಕೆಯೂ, மலர் = ಸುಂದರವಾದ ಭೂವಿನ, ಭಾವ್ಯೆಯು மா பாவையும் = ಕನ್ನಿಕೆಯೂ, தாமுமா காமம் = ಕಾಮ್ರ (ಭಗವಂತನು), நாளுமா நாளும் = ನೆಲೆಸಿರುವ, ವಲ್ಲವಾಳೀ ಎಡೆಬಿಡದೆ, வந்து சேர் வந்து சேர் = (ಬಂದು) ನೆಲೆಸಿರುವ, ಕೊಲ್ಲುಮಾ ಆ ரசாயிலு வாழ்ந்து = ತಿರುವಲ್ಲವಾಳ್ ಕ್ಷೇತ್ರವನ್ನು, ಕೊಲ್ಲುಮಾ வகுவிலு ஆயு = ಬಲ್ಲವನಾಗಿ, மத்தா = ಹೇಳುವ ಹಾಗೆ, ವಲ್ಲಾಳಿ ಆಯ் வகுவிலு ஆயு = ಬಲ್ಲವನಾಗಿ, மனமே = ನೆಮ್ಮದಿಗೊಳ್ಳು, ಮನಸ್ಸೇ.

ಮರುವು ನೆಂಜೇ மருவு நாடு = ನೆಮ್ಮದಿಗೊಳ್ಳು ಮನಸ್ಸೇ.

ಮನಸ್ಸೇ, ಮೋಹದಗಳು ಕೂಡುವ ಬಾನು, ~~...~~ ಬೆಂಕಿ, ನೀರು, ನೆಲ, ಗಾಳಿ - ಇವುಗಳು ಭ್ರಮಿಸಿ ನಿಂತಿರುವ (ಸೇರಿಕೊಂಡಿರುವ) ಅಂಜಿಕೆಯಿಂದ ಕೂಡಿರುವ ದೇಹವನ್ನು ಶುಭ್ರವಾದ ಕೋಟೆಯಲ್ಲವೆಂದು ಭಾವಿಸಿ, ನೀನು ಉಜ್ಜೀವಿಸಲು ಯೋಚಿಸುತಿಯಾದರೆ, ಚಂದನಲೇಪಿತವಾದ ಕೋಮಲವಾದ ಮೊಲೆಗಳ ಸುಂದರವಾದ ಭೂಮಿ ಕನ್ನಿಕೆಯೂ ಕಾಮ್ರ (ಸ್ವಾಮಿಯೂ) ಎಡೆಬಿಡದೆ (ಬಂದು) ನೆಲೆಸಿರುವ ತಿರುವಲ್ಲವಾಳ್ ಕ್ಷೇತ್ರವನ್ನು ಹೇಳುವ ಹಾಗೆ ಬಲ್ಲವನಾಗಿ ನೆಮ್ಮದಿಯಿಂದಿರು (8)

ಎಡೆಬಿಡದಂತೆ ಎಲ್ಲೆಲ್ಲಿಯೂ ಹರಡಿಕೊಂಡಿರುವುದು ಬಾನು. ಎಲ್ಲವನ್ನೂ ಕೋಮಲಗೊಳಿಸುವುದು ನೀರು. ಎಲ್ಲವನ್ನು ಸುಟ್ಟು ಬೂದಿ ಮಾಡುವುದು ಬೆಂಕಿ. ಎಲ್ಲವನ್ನೂ ತನ್ನದಾಗಿ ತನ್ನಡಿಯಲ್ಲೇ ಮಾಡಿಕೊಳ್ಳುವುದು ನೆಲ. ನಿಂತಲ್ಲಿ ನಿಲ್ಲದಂತೆ ಎಲ್ಲೆಲ್ಲಿಯೂ ಚಲಿಸುತ್ತಿರುವುದು ಗಾಳಿ. ಇವು ಪಂಚಭೂತಗಳು. ತಮ್ಮ ತಮ್ಮ ಸ್ವಭಾವವನ್ನು ಇವು ಮರೆತು ಬಿಡಬಲ್ಲುದೇ? ಇವಕ್ಕೇನಾದರೂ ಭ್ರಮೆಯುಂಟಾಯಿತೇ? ಇವೇ ಒಟ್ಟುಗೂಡಿ, ಮಾನವದೇಹದಲ್ಲಿ ನೆಲಸಿ, ತಮಗೆ ಭಿನ್ನವಾಗಿ ವರ್ತಿಸುತ್ತಿವೆಯಲ್ಲ!

ಆಳ್ವಾರರು ಹೇಳುತ್ತಾರೆ: ಮನಸ್ಸೇ, ಸ್ವಭಾವತಃ ಪರಸ್ಪರ ಹೊಂದಿಕೆಯೇ ಇಲ್ಲದಂಥ ಪಂಚಭೂತಗಳು ಹೇಗೆ ಭ್ರಮೆಗೊಂಡವೋ, ಕಾಣೆ. ಇವೆಲ್ಲವೂ ಒಟ್ಟುಗೂಡಿ, ಅಂಜಿಕೆಗೆ ಆಕರವಾಗಿರುವ ಒಂದೆಡೆಯಲ್ಲಿ ನೀ ... ಮಾನವದೇಹವಾಗಿದೆಯಲ್ಲ! ಎಂದಿದ್ದರೂ ಅವು ಬೇರೆ ಬೇರೆಯಾಗತಕ್ಕ ಕೋಟೆ ಏನಿದು! ಅಶಾಶ್ವತವಾದ ಈ ಮಾನವದೇಹವನ್ನು ಶುಭ್ರವಾದ ಕೋಟೆ ಎಂದು ಭಾವಿಸಬಲ್ಲುದೇ? ~~...~~ ಅದರೊಳಗೆ 'ನಾನು' ಶಾಶ್ವತವಾಗಿ ನೆಲೆಗೊಳ್ಳುವೆನೆಂದು ಆಶಿಸಬಲ್ಲುದೇ? ಈ ಬಗೆಯ ಯೋಚನೆಯೇ ಅವಿವೇಕ. ಮನಸ್ಸೇ, ನೀನು ಉಜ್ಜೀವಿಸಬೇಕೆಂದು ಆಶಿಸುತಿಯಾದರೆ, ಈ ದೇಹವನ್ನು ಭದ್ರವೂ ಶಾಶ್ವತವೂ ಆದದ್ದೆಂದು ಭಾವಿಸಬೇಡ. ಸುಂದರವಾದ ಭೂಮಿಕನ್ನಿಕೆಯೂ, ಸೌಭಾಗ್ಯಲಕ್ಷ್ಮಿಯಾಗಿ ದಯಾಮೂರ್ತಿಯಾಗಿ ಇರುವ ಶ್ರೀದೇವಿ ಯೊಡಗೂಡಿ ಭಗವಂತನು ತಿರುವಲ್ಲವಾಳ್ ಎಂಬ ದಿವ್ಯಕ್ಷೇತ್ರದಲ್ಲಿ

Garani Srinivasan

ನೆಲಸಿದ್ದಾನಷ್ಟೆ ನೀನು ಸ್ವಾಮಿಯ ಸ್ವರೂಪ ಸ್ವಭಾವಾದಿಗಳನ್ನೂ. ಅವನ ದಿವ್ಯಕ್ಷೇತ್ರಗಳ ಹಿರಿಮೆಯನ್ನು ಕುರಿತು ಹೊಗಳಿ ಹಾಡಬಲ್ಲ ಸಮರ್ಥನಾಗಿ, ನೆಮ್ಮದಿಯಿಂದಿರು. ನೀನು ಖಂಡಿತವಾಗಿ ಉಜ್ಜೀವನಗೊಳ್ಳುವೆ.

9. வெள்ளியார் பிண்டியார் போதியார்
என்றிவரோதுகின்ற,
கள்ளநூல் தன்னையும்
கருமமன்றென்றுய்யக் கருதினையேல்,
தெள்ளியார் கைதொழும் தேவனார்
மாமுநீரமுது தந்த,
வள்ளலார் வல்லவாழ்
சொல்லுமா வல்லையாய் மருவு நெஞ்சே.

ವೆಳ್ಳಿಯಾರ್ ಪಿಣ್ಡಿಯಾರ್ ಪೋದಿಯಾರ್ ಎನ್ಱಿವರೋದುಗಿನ್ಱ,
ಕಳ್ಳನೂಲ್ ತನ್ನೈಯುಮ್ ಕರುಮಮನ್ಱೆನ್ಱುಯ್ಯಕ್ಕರುದಿನಾಯೇಲ್,
ತೆಳ್ಳಿಯಾರ್ ಕೈತೊಳುಮ್ ತೇವನಾರ್ ಮಾಮುನೀರಮುದು ತನ್ದ,
ವಳ್ಳಲಾರ್ ವಲ್ಲವಾೞ್ ಶೊಲ್ಲುಮಾ ವಲ್ಲೈಯಾಯ್ ಮರುವು ನೆಂಜೇ.

ವೆಳ್ಳಿಯಾರ್ வெள்ளியார் = ಅಜ್ಞಾನಿಗಳು, ಪಿಣ್ಡಿಯಾರ್ பிண்டியார் = ಜೈನರು, ಪೋದಿಯಾರ್ போதியார் = ಬೌದ್ಧರು, ಎನ್ಱು என்று = ಎಂಬ, ಇವರ್ இவர் = ಇವರು, ಓದುಗಿನ್ಱ ஓதுகின்ற = ಹೇಳುತ್ತಿರುವ (ಓದುತ್ತಿರುವ), ಕಳ್ಳಮ್ ನೂಲ್ ತನ್ನೈಯುಮ್ கள்ளம் நூல் தன்னையும் = ಅಸತ್ಯವಾದ ಶಾಸ್ತ್ರಗಳನ್ನು, ಕರುಮಮ್ கருமம் = ಕರ್ತವ್ಯ, ಅನ್ಱು அன்று = ಅಲ್ಲ, ಎನ್ಱು என்று = ಎಂದು, ಉಯ್ಯ உய்ய = ಉಜ್ಜೀವಿಸಲು, ಕರುದಿನಾಯ್ ಏಲ್ கருதினாய் ஏல் = ಭಾವಿಸಿದೆಯಾದರೆ, ತೆಳ್ಳಿಯಾರ್ தெள்ளியார் = ಜ್ಞಾನಿಗಳು (ತಿಳುವಳಿಕೆಯುಳ್ಳವರು), ಕೈತೊೞುಮ್ கைதொழும் = ಪೂಜಿಸುವ (ನಮಸ್ಕರಿಸುವ), ತೇವನಾರ್ தேவனார் = ಸ್ವಾಮಿಯಾದವನು, ಮಾಮುನೀರ್ மாமுநீர் = ಮಹಾಸಾಗರದಿಂದ, ಅಮುದು அமுது = ಅಮೃತವನ್ನು, ತನ್ದ தந்த = ತಂದುಕೊಟ್ಟ, ವಳ್ಳಲಾರ್ வள்ளலார் = ಪರಮ ಉದಾರಿಯಾದವನು ನೆಲಸಿರುವ, ವಲ್ಲವಾೞ್ வல்லவாழ் = ತಿರುವಲ್ಲವಾೞ್ ಕ್ಷೇತ್ರವನ್ನು ಕುರಿತು, ಶೊಲ್ಲುಮಾ ஆ சொல்லும் ஆ = ಹೇಳುವ ಹಾಗೆ, ವಲ್ಲೈ ಆಯ್ வல்லை ஆய் = ಬಲ್ಲವನಾಗಿ, ಮರುವು மருவு = ನೆಮ್ಮದಿಗೊಳ್ಳು, ನೆಂಜೇ நெஞ்சே = ಮನಸ್ಸೇ.

ಮನಸ್ಸೇ, ಅಜ್ಞಾನಿಗಳು, ಜೈನರು, ಬೌದ್ಧರು, ಎಂಬ ಇವರು ಓದುತ್ತಿರುವ (ಹೇಳುತ್ತಿರುವ) ಅಸತ್ಯವಾದ ಶಾಸ್ತ್ರಗಳನ್ನು ಕರ್ತವ್ಯವಲ್ಲವೆಂದು ನೀನು ಭಾವಿಸಿದೆಯಾದರೆ, ಜ್ಞಾನಿಗಳು ಸ್ತುತಿಸುವ ಸ್ವಾಮಿಯಾದವನೂ ಮಹಾಸಾಗರದಿಂದ ಅಮೃತವನ್ನು ತಂದುಕೊಟ್ಟ ಉದಾರಿಯಾದವನೂ

ನೆಲಸಿರುವ ತಿರುವಲ್ಲವಾಳ್ ಕ್ಷೇತ್ರವನ್ನು ಕುರಿತು ಹೇಳುವ ಹಾಗೆ ಬಲ್ಲ (9)
ವನಾಗಿ ನೆಮ್ಮದಿಯಿಂದಿರು.

ಇತರ ದೈವಗಳನ್ನು ಪರಮೇಶ್ವರನೆಂದು ನಂಬಿ ಪೂಜಿಸುವವರು ಅಜ್ಞಾನಿಗಳು. ಇವರಲ್ಲದೆ ಜೈನರು, ಬೌದ್ಧರು ವೇದಗಳನ್ನು ನಂಬದವರು. ಅದರಂತೆ ನಡೆಯದೆ ಅದನ್ನು ನಿಶ್ವಾಸವೆನ್ನದೆ ಇರುವವರು. ಅವರು ವೇದಬಾಹಿರರು. ಅವರ ಶಾಸ್ತ್ರಗ್ರಂಥಗಳೇ ಬೇರೆ. ಅವು ವೇದಕ್ಕೆ ದೂರ.

ವೇದಗಳನ್ನು ಜ್ಞಾನ ಭಂಡಾರವೆಂದೂ ಶಾಸ್ತ್ರವಾದ ತಿಳಿವಳಿಕೆಯೆಂದೂ ನಂಬಿ, ಅದರಂತೆ ನಡೆದುಕೊಳ್ಳುವವರು ಜ್ಞಾನಿಗಳು.

ಆಳ್ವಾರರು ಹೇಳುತ್ತಾರೆ: ಮನಸ್ಸೇ, ಜೈನರು, ಬೌದ್ಧರು, ಮತ್ತು ಇತರ ಅಜ್ಞಾನಿಗಳು ಹೇಳುವುದನ್ನೆಲ್ಲಾ ಶಾಸ್ತ್ರವಿಹಿತವಾದದ್ದು ಎಂದು ನೀನು ಭಾವಿಸುತ್ತೀಯಾದರೆ, ಜ್ಞಾನಿಗಳು ಸ್ತೈಮಗಯುವವನಾಗಿ ಪರಮ ಉದಾರಿಯಾಗಿ ಆದ ಕಡಲಿನಿಂದ ಅಮೃತವನ್ನು ತಂದು ಕೊಟ್ಟ ಸ್ವಾಮಿಯನ್ನು ~~[illegible]~~ ಅವನು ನೆಲಸಿರುವ ದಿವ್ಯಕ್ಷೇತ್ರಗಳನ್ನು ಕುರಿತು ಹೇಳಬಲ್ಲವನಾಗು. ಇದರಿಂದ ನಿನ್ನ ಆತ್ಮೋದ್ಧಾರವಾಗುವುದು.

10. மறைவலார் குறைவிலார் உறையுமூர்
வல்லவாழடிகள்தம்மை,
சிறைகுலாவண்டறை சோலைசூழ்
கோலநீளாலிநாடன்,
கறையுலாவேல்வல்ல
கலியன் வாயொலியிவை கற்றுவல்லார்,
இறைவராயிருநிலம் காவல் பூண்டு
இன்பம்நன்கெய்துவாரே.

ಮಱೈವಲಾರ್ ಕುಱೈವಿಲಾರ್ ಉಱೈಯುಮೂರ್ ವಲ್ಲವಾಳಡಿಗಳ್ ತಮ್ಮೈ,
ಶಿಱೈಕುಲಾವಣ್ಡಱೈ ಶೋಲೈಶೂೞ್ ಕೋಲನೀಳಾಲಿನಾಡನ್,
ಕಱೈಯುಲಾವೇಲ್ ವಲ್ಲ ಕಲಿಯನ್ ವಾಯೊಲಿಯಿವೈ ಕಱ್ಱುವಲ್ಲಾರ್,
ಇಱೈವರಾಯಿರುನಿಲಮ್ ಕಾವಲ್ ಪೂಣ್ಡು ಇನ್ಬಮ್ ನನ್ಗೆಯ್ದುವಾರೇ.

ಮಱೈವಲಾರ್ மறைவலார் = ವೇದಗಳನ್ನು ಬಲ್ಲವರೂ, ಕುಱೈವು ಇಲಾರ್ குறைவு இலார் = (ಯಾವ ಬಗೆಯ) ಕೊರತೆಗಳೂ ಇಲ್ಲದವರೂ; ಉಱೈಯುಮ್ உறையும் = ವಾಸಿಸುವ, ಊರ್ ஊர் = ಊರಾದ, ವಲ್ಲವಾಳ್ வல்வாழ் = ತಿರುವಲ್ಲವಾಳ್ ಕ್ಷೇತ್ರದ, ಅಡಿಗಳ್ ತಮ್ಮೈ அடிகள் தம்மை = ಸ್ವಾಮಿಯನ್ನು ಕುರಿತು. ಶಿಱೈ சிறை = ರೆಕ್ಕೆಗಳನ್ನುಳ್ಳ, ಕುಲಾ குலா = ಆನಂದದಿಂದ ಸಂಚರಿಸುವ, ವಣ್ಡು வண்டு = ದುಂಬಿಗಳು, ಅಱೈ அறை = ಸದ್ದುಮಾಡುವ, ಶೋಲೈ ಶೂೞ್ சோலைசூழ் = ತೋಪುಗಳಿಂದ ಸುತ್ತುವರಿದಿರುವ, ಕೋಲಮ್ கோலம் =

ಸುಂದರವಾದ, ನೀಳ್ ನೆರಿಣ್ = ವಿಸ್ತಾರವಾದ, ಆಲಿನಾಡನ್ ஆலி நாடன்
= ತಿರುವಾಲಿ ನಾಡಿನ ಒಡೆಯನೂ, ಕಟ್ಟೆ கறை = (ರಕ್ತದ) ಕಲೆಯು,
ಉಲಾವು உலாம் = ಹರಡಿರುತ್ತಲೇ ಇರುವ, ವೇಲ್ ವಲ್ಲ வேல் வல்ல
= ವೇಲಾಯುಧವನ್ನು ಪ್ರಯೋಗಿಸಬಲ್ಲವನೂ, ಆದ, ಕಲಿಯನ್
கலியன் = ಕಲಿಯನ, ವಾಯ್ ಒಲಿ வாய் ஒலி = ಬಾಯಮಾತಾದ,
ಇವೈ ஐந்தும் = ಇವುಗಳನ್ನು, ಕಱ್ಱುವಲ್ಲಾರ್ கற்று வல்லார் =
ಕಲಿಯುಬಲ್ಲವರು, ಇಱೈವರ್ ಆಯ್ இறைவர் ஆய் = ರಾಜರಾಗಿ,
ಇರುನಿಲವುಂ இருநிலம் = ವಿಶಾಲವಾದ ಭೂಮಿಯನ್ನು, ಕಾವಲ್
ಪೂಣ್ಡು காவல் பூண்டு = ಆಳಿದ ಬಳಿಕ, ಇನ್ಬಮ್ இன்பம் =
ಆನಂದವನ್ನು, ನನ್ಗು நன்கு = ಬಹಳ ಚೆನ್ನಾಗಿ, ಎಯ್ದುವಾರ್ ತಾಯ್ಗು
வாகுர = ಪಡೆಯುವವರೇ ಆಗುತ್ತಾರೆ.

ವೇದಗಳನ್ನು ಬಲ್ಲವರೂ, ಯಾವ ಬಗೆಯ ತೊಂದರೆಯೂ ಇಲ್ಲದವರೂ ವಾಸಿಸುವ ಊರಾದ ತಿರುವಲ್ಲವಾಳ್ ಕ್ಷೇತ್ರದ ಸ್ವಾಮಿಯನ್ನು ಕುರಿತು, ಜೇನುಬನಿಗ ರೆಕ್ಕೆಗಳುಳ್ಳ ಆನಂದದಿಂದ ನಿಂತಿರುವ ದುಂಬಿಗಳು ಗದ್ದಲಮಾಡುವ ತೋಟಗಳಿಂದ ಸುತ್ತುವರಿದಿರುವ ಸುಂದರವಾದ ಮತ್ತು ವಿಸ್ತಾರವಾದ ತಿರುವಾಲಿ ನಾಡಿನ ಒಡೆಯನೂ, ರಕ್ತದ ಕಲೆಯು ಹರಡಿರುತ್ತಲೇ ಇರುವ ವೇಲಾಯುಧವನ್ನು ಪ್ರಯೋಗಿಸಬಲ್ಲವನೂ ಆದ ಕಲಿಯನ್ (ತಿರುಮಂಗೈ ಆಳ್ವಾರರು) ಬಾಯಮಾತಾದ ಈ ಪಾಶುರಗಳನ್ನು ಕಲಿಯುಬಲ್ಲವರು ರಾಜರಾಗಿ ಈ ವಿಶಾಲವಾದ ಭೂಮಿಯನ್ನು ಆಳಿದ ಬಳಿಕ ಆನಂದವನ್ನು ಬಹಳ ಚೆನ್ನಾಗಿ ಪಡೆಯುವವರೇ ಆಗುತ್ತಾರೆ. (10)

ತಿರುವಲ್ಲವಾಳ್ ಕ್ಷೇತ್ರದಲ್ಲಿ ವೇದವಿದ್ವಾಂಸರಿದ್ದಾರೆ. ಅವರು ಅಲ್ಲಿ ನೆಲಸಿರುವ ದಿವ್ಯೇಶ್ವರನ ತಿರುವಡಿಗಳನ್ನು ನಿಶ್ಚಲವಾಗಿ ಆಶ್ರಯಿಸಿದ್ದಾರೆ. ಭಗವತ್ಕೃಪೆಯೆಂಬ ಅವರಿಗೆ ತಮ್ಮ ಜೀವನದ ಮೇಲೆಯೇ ಪ್ರೀತಿಯಾದ ದಶೆ ಒಟ್ಟಿ ಬಂದಿದೆ. ಇದರ ಫಲವಾಗಿ ಮನಸ್ಸು ನೆಮ್ಮದಿಗೊಂಡಿದೆ. ಇದು ಜೀವನದಲ್ಲಿ ನಿಂತುಬಿಟ್ಟಿದೆ. ಆದ್ದರಿಂದ ತಿರುವಲ್ಲವಾಳ್ ಕ್ಷೇತ್ರವನ್ನು, ಅಲ್ಲಿ ನೆಲಸಿರುವ ಭಗವಂತನನ್ನು ಕುರಿತು ಎಡೆಬಿಡದೆ ಹೊಗಳಿ ಹಾಡುತ್ತಿರುವುದರಿಂದ, ಅದು ಹಾಡುವವರ ಮನಸ್ಸಿನ ಮೇಲೆಯೂ ಖಂಡಿತವಾಗಿ ನಿಶ್ಚಲ ಪರಿಣಾಮವನ್ನೇ ಉಂಟುಮಾಡುತ್ತದೆ.

" ತಿರುವಲ್ಲವಾಳ್ ಕ್ಷೇತ್ರವನ್ನು ಕುರಿತು ಹೊಗಳಿ ಹಾಡಬಲ್ಲವನಾಗಿ ನೆಮ್ಮದಿಗೊಳ್ಳು, ಮನಸ್ಸೇ" - ಎಂಬುದು ಈ ತಿರುಮೊಳಿಯ ಒಂದೊಂದು ಪಾಶುರಕ್ಕೂ ಪಲ್ಲವಿ. ಮನುಷ್ಯನು ಸಂಸಾರ ತಾಪತ್ರಯಗಳನ್ನು, ಇಂದ್ರಿಯಗಳ ಪೀಡನೆಯನ್ನು ತಪ್ಪಿಸಿಕೊಳ್ಳಲೇ ಬೇಕು. ಇದಕ್ಕೆ ಭಗವಂತನ ಅದ್ಭುತ ಲೀಲಾ ವಿಶೇಷಗಳನ್ನು, ಸ್ವರೂಪ ಸ್ವಭಾವಗಳನ್ನು, ಸ್ವಾಮಿಯು ನೆಲಸಿರುವ ದಿವ್ಯಕ್ಷೇತ್ರಗಳನ್ನು ಎಡೆಬಿಡದೆ ಚಿಂತಿಸುತ್ತಿರಬೇಕು. ಆಗ್ಲೇ

Garani Srinivasan

ದ್ವಾರಕ್ಕೆ ಇದೊಂದೇ ಸುಲಭವಾದ (113) ಉಪಾಯ. ಭವರೋಗಕ್ಕೆಲ್ಲ ಇದೊಂದೇ ದಿವ್ಯೌಷಧಿ.

ಒಳಗೆ ವಿವರಿಸಿ ಹೇಳಿರುವವನು ಕಲಿಯನು. ಅವನು ಶಿಗಿಬಗಿನಿಂ ದ ತುಂಬಿದ ಶೋಭಿಸುವ ಗುಂಡ ಸುತ್ತು ಮಂಡರಿಸಿ, ದ ಹಾರಾಡುತ್ತಾ ಆನಂದದಿಂದ ಗದ್ದಲಮಾಡುತ್ತಾ ಇರುವ ಸುಂದರವಾದ ದುಂಬಿಗಳಿಂದ ತುಂಬಿರುವ ಶಿರುವಾಲಿ ನಗರದ ಒಡೆಯನು. ವೇಲಾಯುಧವನ್ನು ಸುಟಿಯಾಗಿ ಪ್ರಯೋಗಿಸುವವರಲ್ಲಿ ನಿಪುಣನು.

ಕಲಿಯನು ಹೇಳಿರುವ ಈ ಹತ್ತು ಪಾಶುರಗಳನ್ನು ಚೆನ್ನಾಗಿ ಕಲಿತವರಿಗೆ ಇಹಲೋಕದಲ್ಲಿ ರಾಜರ ಮರ್ಯಾದೆ ದೊರೆಯುತ್ತದೆ. ಆಬಳಿಕ ಅವರು ಪರಮಾನಂದವನ್ನೇ ಹೊಂದಿ ಬಾಳುವವರಾಗುತ್ತಾರೆ. ಒಳಗಡೆ ಈ ಶಿರುಮಾಲಿಗೆ ಫಲಶ್ರುತಿ

ಅಡಿಯುನಡಿ: அடியிரவு — ಕನ್ನಿ குருந்தை, ಮುನ್ನುಮ
மின்னும், ಪೂನ್ ಪூண், ಪನ್ ಪண், ಮಂಜು மருங்கு,
ಉರುವಿನ ஊருவின், ನೋಯ್ நோய், ಮಂಜುಳೇರ் மருங்கு
ಮಜ್ಜೊ மறை,
சேர், ವೆಳ್ಳಿಯಾರ் வெள்ளியார், ಮಜ್ಜೊ மறை,
(ಮುನ್ನಂ முந்துற)

ಪೆರಿಯ ತಿರುಮೊೞಿ — ಒಂಬತ್ತನೆಯ ದಶಕ — ಎಂಟನೆಯ ತಿರುಮೊೞಿ

பெரிய திருமொழி — ஒன்பதாம் பத்து — எட்டாந்திருமொழி

8. ಮುನ್ದುಱ ಉರೈಕ್ಕೇನ್ — முந்துற வுரைக்கேன்

1 முந்துற வுரைக்கேன் விரைக்குழல் மடவார்
கலவியை விடு தடுமாறல்,
அந்தரமேழு மலைகடலேழுமாய
எம்மடிகள் தம் கோயில்,
சந்தொடு மணியு மணி மயில் தழையும்
தழுவி வந்தருவிகள் நிரந்து,
வந்திழி சாரல் மாலிருஞ்சோலை
வணங்குதும் வா மடநெஞ்சே.

ಮುನ್ದುಱ ಉರೈಕ್ಕೇನ್ ವಿರೈಕ್ಕುೞಲ್ ಮಡವಾರ್
ಕಲವಿಯೈ ವಿಡು ತಡುಮಾಱಲ್,
ಅನ್ದರಮೇೞು ಮಲೈ ಕಡಲೇೞುಮಾಯ
ಎಮ್ಮಡಿಗಳ್ ತಮ್ ಕೋಯಿಲ್,
ಶನ್ದೊಡು ಮಣಿಯು ಮಣಿ ಮಯಿಲ್ ತೞೈಯುಮ್
ತೞುವಿ ವನ್ದರುವಿಗಳ್ ನಿರನ್ದು
ವನ್ದಿೞಿ ಶಾರಲ್ ಮಾಲಿರುಞ್ಜೋಲೈ
ವಣಙ್ಗುದುಮ್ ವಾ ಮಡನೆಞ್ಜೇ.

ಮುನ್ முன் = ಹಿಂದಿನ (ಇದುವರೆಗಿನ), ತುಱ துற = ಆಪತ್ತುಗಳನ್ನು, ಉರೈಕ್ಕೇನ್ உரைக்கேன் = ಹೇಳುತ್ತೇನೆ(ಕೇಳು), ವಿರೈ விரை = ಪರಿಮಳವುಳ್ಳ, ಕುೞಲ್ குழல் = ಕೇಶಗಳುಳ್ಳ, ಮಡವಾರ್ மடவார் = ಸ್ತ್ರೀಯರ, ಕಲವಿಯೈ கலவியை = ಕೂಡಿಕೆಯನ್ನು, ವಿಡು விடு = ಬಿಟ್ಟುಬಿಡು, ತಡುಮಾಱಲ್ தடுமாறல் = ಹಿಂದುಮುಂದು ನೋಡುವುದನ್ನು, (ವಿಡು விடு = ಬಿಟ್ಟುಬಿಡು), ಅನ್ದರಮ್ ಏೞುಮ್ அந்தரம் ஏழும் = ಏಳು ದ್ವೀಪಗಳು, ಮಲೈ ಕಡಲ್ மலை கடல் = ಏಳು ಬೆಟ್ಟಗಳು, ಕಡಲುಗಳು, ಏೞುಮ್ ಆಯ ஏழும் ஆய = ಏಳು ಆಗಿರುವ, ಎಮ್ಮಡಿಗಳ್ ತಮ್ ಎம்மடிகள் தம் = ನಮ್ಮ ಸ್ವಾಮಿಯ, ಕೋಯಿಲ್ கோயில் = ನೆಲಸಿರುವ ಸ್ಥಳವಾಗಿರುವ, ಶನ್ದೊಡು சந்தொடு = ಚಂದನವೃಕ್ಷಗಳನ್ನು, ಮಣಿಯುಮ್ மணியும் = ರತ್ನಗಳನ್ನು, ಅಣಿ அணி = ಸುಂದರವಾದ, ಮಯಿಲ್ ತೞೈಯುಮ್ மயில் தழையும் = ನವಿಲುಗರಿಗಳನ್ನು, ತೞುವಿ ವನ್ದು தழுவி வந்து = ತಳ್ಳಿಕೊಂಡು ಬಂದು, ಅರುವಿಗಳ್ அருவிகள் = ಬೆಟ್ಟದ ಝರಿಗಳು, ವನ್ದು

ವನ್ದು ಉನ್ದುಕ್ಕು = ಬಂದು, ಇಲೈ ತಿಪ್ಪಿ = ಪ್ರವಾಹದ, ಶಾರಲ್ ಸಾರಲ್ = ಬೆಟ್ಟದ ತಪ್ಪಲಿನ (ಜಾರಿಕೆ), ಮಾಲಿರುಂಜೋಲೈ ಮಾಲಿರುಂಶೋಲೈ = ತಿರುಮಾಲಿರುಂಜೋಲೈ ಕ್ಷೇತ್ರವನ್ನು, ವಣಙ್ಗುದುಮ್ ವಾ ಮಣಾಙ್ಗುಕ್ಕು ಮಂ ಬಾ = ನಮಸ್ಕರಿಸೋಣ ಬಾ, ಮಡನೆಂಜೇ ಮಡನೆಞ್ಜೇ = ಮೂಢಮನಸ್ಸೇ.

ಮೂಢ ಮನಸ್ಸೇ, ಹಿಂದಿನ (ಇದುವರೆಗಿನ) ಆಸಕ್ತಿಗಳನ್ನೆಲ್ಲಾ ಬಿಟ್ಟುಬಿಡು. ಮಿಂಚುಳ್ಳುವ ತಲೆಗೂದಲಿನ ಹೆಣ್ಣುಗಳ ಕೂಟಿಕೆಯನ್ನು ಬಿಟ್ಟುಬಿಡು. (ಅವುಗಳ ಬಗೆಗೆ) ಹಿಂದು ಮುಂದು ನೋಡುವುದನ್ನು ಬಿಟ್ಟುಬಿಡು. ಏಳು ದ್ವೀಪಗಳೂ, ಏಳು ಬೆಟ್ಟಗಳೂ, ಏಳು ಕಡಲುಗಳೂ ಆಗಿರುವ ನಮ್ಮ ಸ್ವಾಮಿಯು ನೆಲಸಿರುವ ಸ್ಥಳವಾಗಿಯೂ, ಬೆಟ್ಟದ ಝರಿಗಳು ಗಂಧದ ಮರಗಳನ್ನೂ, ರತ್ನಗಳನ್ನೂ, ಸುಂದರವಾದ ನವಿಲುಗರಿಗಳನ್ನೂ ಹೊತ್ತುಕೊಂಡು ಬಂದು ಇಳಿಯುವ ತಪ್ಪಲಿನದಾಗಿಯೂ ಇರುವ ತಿರುಮಾ (1) ಲಿರುಂಜೋಲೈ ಕ್ಷೇತ್ರವನ್ನು ಪೂಜಿಸೋಣ ಬಾ.

ಹಿಂದಿನ ತಿರುಮೊಳಿಯಲ್ಲಿ ಆಳ್ವಾರರು ತಿರುವಲ್ಲವಾಳ್ ಕ್ಷೇತ್ರವನ್ನು ಕುರಿತು ಹಾಡಿದರಷ್ಟೆ. "ಆ ಕ್ಷೇತ್ರವನ್ನು, ಅಲ್ಲಿ ನೆಲಸಿರುವ ಭಗವಂತನನ್ನು ಕುರಿತು ಹೊಗಳಿ ಹಾಡಲು ಸಮರ್ಥನಾನು" ಎಂದು ಅವರು ತಮ್ಮ ಮನಸ್ಸಿಗೆ ಬುದ್ಧಿ ಹೇಳಿದರು. ಈ ತಿರುಮೊಳಿಯಲ್ಲಿ, ತಿರುಮಾಲಿರುಂಜೋಲೈ ಮಲೈ ಎಂಬ ಮತ್ತೊಂದು ದಿವ್ಯಕ್ಷೇತ್ರಕ್ಕೆ ಅವರು ಬಂದಿದ್ದಾರಾಗಿ, ಅದರ ಬಗೆಗೆ ತಮ್ಮ ಬುದ್ಧಿಯಿಲ್ಲದ ಚಂಚಲವಾದ ಮನಸ್ಸಿಗೆ ಹಿತವನ್ನು ನುಡಿಯುತ್ತಿದ್ದಾರೆ.

ಆಳ್ವಾರರು ಹೇಳುತ್ತಾರೆ: ಮೂಢ ಮನಸ್ಸೇ, ಹಿಂದಿನ ಆಸಕ್ತಿಗಳೆಲ್ಲವೂ ನಿನ್ನನ್ನು ಇನ್ನೂ ಬಾಧಿಸುತ್ತಿವೆಯಲ್ಲವೇ? ನನ್ನ ಮಾತನ್ನು ಕೇಳು. ಇದುವರೆಗಿನ ನಿನ್ನ ಪ್ರಾಪಂಚಿಕವಾದ ಆ ಆಸಕ್ತಿಗಳನ್ನೆಲ್ಲಾ ತೊಲಗಿಸಿಬಿಡು. ಅವುಗಳಿಂದ ನಿನಗೆ ಯಾವ ಪ್ರಯೋಜನವೂ ಇಲ್ಲ. ಅಲಂಕರಿಸಿಕೊಂಡಿರುವ, ಮಿಂಚುಳ್ಳುವ ತಲೆಗೂದಲಿನ ಹೆಣ್ಣುಗಳ ಸಹವಾಸವನ್ನು ಮೊದಲು ಬಿಟ್ಟುಬಿಡು. ನಿನ್ನ ಆಸಕ್ತಿಗಳನ್ನು ಬಿಟ್ಟುಕೊಡಲು ಹಿಂದು ಮುಂದು ನೋಡಬೇಡ. ಅದಕ್ಕೆ ಬದಲಾಗಿ, ನೆಮ್ಮದಿಯಿಂದ ನನ್ನೊಡನೆ ಬಾ. ನಾವು ಭಗವಂತನು ನೆಲಸಿರುವ ದಿವ್ಯಕ್ಷೇತ್ರಗಳಿಗೆ ಹೋಗೋಣ. ನಮ್ಮ ಸ್ವಾಮಿಯು ಸಾಮಾನ್ಯನಲ್ಲ — ಸರ್ವೇಶ್ವರನು, ಸರ್ವಶಕ್ತನು! ಸಪ್ತ ದ್ವೀಪಗಳೂ, ಸಪ್ತ ಕುಲಪರ್ವತಗಳೂ, ಸಪ್ತಸಾಗರಗಳೂ ಆಗಿರುವ ಬ್ರಹ್ಮಾಂಡವೇ ಅವನಾಗಿ, ಅವುಗಳ ರಕ್ಷಕನೂ ಆಗಿರುವ ಪರಮಾಶ್ಚರ್ಯಕರಂ! ಅವನೇ ಈಗ ತಿರುಮಾಲಿರುಂಜೋಲೈ ಮಲೈ ಎಂಬ ಕ್ಷೇತ್ರದಲ್ಲಿ ಭಕ್ತರ ಉದ್ಧಾರಕ್ಕಾಗಿಯೇ ನೆಲಸಿದ್ದಾನೆ. ಆ ಕ್ಷೇತ್ರ ಪ್ರಕೃತಿ ರಮ್ಯವಾದದ್ದು. ಬೆಟ್ಟದ ಝರಿಗಳು ತಮ್ಮ ತಮ್ಮ ಪ್ರವಾಹಗಳ ಮೂಲಕ ಗಂಧದ ಮರಗಳನ್ನೂ, ದಿವ್ಯವಾದ ರತ್ನಗಳನ್ನೂ, ಸುಂದರವಾದ ನವಿಲುಗರಿಗಳನ್ನೂ ಹೊತ್ತುಕೊಂಡು ಬಂದು ಸ್ವಾಮಿಯ ತಿರುವಡಿಗಳ ಬಳಿಗೆ ಇಳಿಜಾರಿನಲ್ಲಿ ಕಾಣಿಕೆಯನ್ನಾಗಿ ಅರ್ಪಿಸುತ್ತವೆ. ಮನಸ್ಸೇ ಬಾ. ನಾವು ಅಲ್ಲಿಗೆ

Garani Srinivasan

ಹೋಗೋಣ. ಸ್ವಾಮಿಯು ದಯಮಾಡಿದಲ್ಲಿ ನೀವು ಅವನನ್ನು ಪೂಜಿಸಿ ಅವನ
ಶಿರುವಡಿಗಳಿಗೆ ಎರಗೋಣ. ಅದೇ ನಮ್ಮ ಉದ್ಧಾರಕ್ಕೆ ದಾರಿ.

2. இண்டையும் புனலும் கொண்டிடையின்றி
யெழுமினோ தொழுதுமென்று, இமையோர்
அண்டரும் பரவவரவணைத்துயின்ற
சுடர்முடிக்கடவுள் தம் கோயில்,
விண்டலர் தூளிவேய்வளர் புறவில்
விரைமலர்க்குறிஞ்சியின் நறுந்தேன்,
வண்டமர் சாரல் மாலிருஞ்சோலை
வணங்குதும் வா மடநெஞ்சே

ಇಣ್ಡೈಯುಮ್ ಪುನಲುಮ್ ಕೊಣ್ಡಿಡೈಯಿನ್ರಿ
ಯೆೞುಮಿನೋ ತೊೞುದುಮೆನ್ರು, ಇಮೈಯೋರ್
ಅಣ್ಡರುಮ್ ಪರವವರವಣೈತ್ತುಯಿನ್ರ
ಶುಡರ್ಮುಡಿಕ್ಕಡವುಳ್ ತಮ್ ಕೋಯಿಲ್,
ವಿಣ್ಡಲರ್ ತೂಳಿ ವೇಯ್ ವಳರ್ ಪುಱವಿಲ್
ವಿರೈಮಲರ್ಕ್ಕುಱಿಂಜಿಯಿನ್ ನಱುನ್ದೇನ್,
ವಣ್ಡಮರ್ ಶಾರಲ್ ಮಾಲಿರುಂಜೋಲೈ
ವಣಙ್ಗುದುಮ್ ವಾ ಮಡನೆಂಜೇ.

ಇಣ್ಡೈಯುಮ್ இண்டையும் = ಹೂವಿನ ಹಾರಗಳನ್ನು, ಪುನಲುಮ್ புனலும் = ತೀರ್ಥವನ್ನು, ಕೊಣ್ಡು கொண்டு = ತೆಗೆದುಕೊಂಡು ಬಂದು, ಇಡೈ ಇನ್ರಿ இடையின்றி = ಎಡೆಬಿಡದೆ, ಎೞುಮಿನೋ எழுமினோ = ಏಳಿ, ತೊೞುದುಮ್ தொழுதும் = ಪೂಜಿಸೋಣ, ಎನ್ರು என்று = ಎಂದು, ಇಮೈಯೋರ್ இமையோர் = ಪರಮಪದವಾಸಿಗಳು, ಅಣ್ಡರುಮ್ அண்டரும் = ದೇವತೆಗಳು, ಪರವ பரவ = ಕೊಂಡಾಡುತ್ತಿರಲು, ಅರವು ಅಣೈ அரவணை = ಹಾವಿನ ಹಾಸಿಗೆಯಲ್ಲಿ, ಶುಯಿನ್ರ துயின்ற = ನಿದ್ರಿಸುವ, ಶುಡರ್ ಮುಡಿ சுடர்முடி = ಹೊಳೆಹೊಳೆಯುವ ಕಿರೀಟವುಳ್ಳ, ಕಡವುಳ್ கடவுள் = ಭಗವಂತನ ~~ನೆಲೆಸಿರುವ~~, ಕೋಯಿಲ್ கோயில் = (ನೆಲೆಸಿರುವ) ಸ್ಥಳವೆಂಬ, ವಿಣ್ಡು விண்டு = ಆಕಾಶದಲ್ಲಿ (ಬೆಟ್ಟದಮೇಲೆ), ಅಲರ್ அலர் = ಅರಳುವ, ತೂಳಿ தூளி = ಪರಾಗವನ್ನು ಚೆಲ್ಲುವ, ವೇಯ್ வேய் = ಬಿದಿರು, ವಳರ್ வளர் = ಬೆಳೆಯುವ, ಪುಱವಿಲ್ புறவில் = ಪ್ರದೇಶದಲ್ಲಿ, ವಿರೈ விரை = ಪರಿಮಳ ತುಂಬಿದ, ಮಲರ್ மலர் = ಹೂಗಳಿಂದ ಕೂಡಿದ, ಕುಱಿಂಜಿಯಿನ್ குறிஞ்சியின் = ಬೆಟ್ಟದ ಹೂಗಳಿಂದ, ನಱು நறு = ಉತ್ತಮವಾದ, ತೇನ್ தேன் = ಜೇನಿಗೆ, ವಣ್ಡು வண்டு = ದುಂಬಿಗಳು,

ಅಮರ್ அமர் = ಮುದುರಿಕೊಂಡಿರುವ, ಶಾರಲ್ சாரல் = ಬೆಟ್ಟದ ತಪ್ಪಲಿನ,
ಮಾಲಿರುಂಜೋಲೈ மாலிருஞ்சோலை = ತಿರುಮಾಲಿರುಂಜೋಲೈ ಮಲೈ
ಕ್ಷೇತ್ರವನ್ನು, ವಣಂಗುದುಮ್ ವಾ வணங்குதும் வா = ಪೂಜಿಸೋಣ
ಬಾ, ಮಡನೆಂಜೇ மட நெஞ்சே = ಬುದ್ಧಿಹೀನ ಮನಸ್ಸೇ.

ಬುದ್ಧಿಯಿಲ್ಲದ ಮನಸ್ಸೇ, ಹೂವಿನ ಹಾರಗಳನ್ನು ಶರೀರವನ್ನು ಕಳೆದು
ಕೊಂಡು ಎಡೆಬಿಡದೆ ಪೂಜಿಸೋಣ ~~ಬೆಂಡು~~ ಶ್ರೀಹರಿ ಎಂದು ಪರಮ
ಪದವಾಸಿಗಳೂ ದೇವತೆಗಳೂ ಋಷಿ ಸಂತರುಗಳು, ಹಾವಿನ ಹಾಸಿಗೆಯಲ್ಲಿ
ನಿದ್ರಿಸುವ ಹೊಳೆಹೊಳೆಯುವ ಕಿರೀಟವುಳ್ಳ ಭಗವಂತನು ನೆಲೆಸಿರುವ
ಸ್ಥಳವಾದ ಆಕಾಶದಲ್ಲಿ (ಬೆಟ್ಟದ ಮೇಲೆ) ಅರಳಿ ಪರಿಮಳವನ್ನು ಚೆಲ್ಲುವ
ಬಿದಿರು ಬೆಳೆಯುವ ಪ್ರದೇಶದಲ್ಲಿ ಪರಿಮಳ ತುಂಬಿದ ಹೂಗಳಿಂದ ಕೂಡಿದ
ಬೆಟ್ಟದ ಹೂಗಳಿಂದ ಪ್ರವಹಿಸುವ ಉತ್ತಮವಾದ ಜೇನಿನಲ್ಲಿ ದುಂಬಿಗಳು ಮುದುರಿಕೊಂಡಿರುವ
ಬೆಟ್ಟದ ತಪ್ಪಲಿನ ತಿರುಮಾಲಿರುಂಜೋಲೈ ಮಲೈ ಕ್ಷೇತ್ರವನ್ನು ಪೂಜಿಸೋಣ (2)
ಬಾ.

ಆಳ್ವಾರರು ಹೇಳುತ್ತಾರೆ: ಮೂಢ ಮನಸ್ಸೇ, ಭಗವಂತನ ಹಿರಿಮೆ
ಯೇನೆಂಬುದನ್ನು ತಿಳಿಯಲು ಇಚ್ಛಿಸುವೆಯಾ? ಪರಮಪದವಾಸಿಗಳಾದ
ಅಮರರೂ, ದೇವಾದಿ ದೇವತೆಗಳೂ ಅವನನ್ನು ಎಡೆಬಿಡದಂತೆ ಪೂಜಿಸಬೇಕೆಂದು
ಹೂವಿನ ಹಾರಗಳನ್ನು ಶೀರ್ಷವನ್ನಾಗಿ ತೆಗೆದುಕೊಂಡು ಹೋಗಿ, ಸಾಧು ಸಂತರು
ತ್ತಾರೆ. ಅಷ್ಟು ಸುಲಭನೇ ಸ್ವಾಮಿ ಅವರ ಪೂಜೆಯನ್ನು ಕೈಗೊಳ್ಳುವುದು! ಅವ
ಕಲ್ಲಿ ನಿಂತಿರುವಂತೆಯೇ, ಸ್ವಾಮಿಯು ಕಣ್ಣು ಕಾಣುತ್ತಿರುವಂತೆ ಹೊಳೆಯುವ
ಕಿರೀಟವನ್ನು ಧರಿಸಿದವನಾಗಿ, ಹಾವಿನ ಹಾಸಿಗೆಯಲ್ಲಿ ಹಾಲುಕಡಲಲ್ಲಿ ಪವಡಿ
ಸಿ ನಿದ್ರಿಸುತ್ತಾನೆ! ದೇವಾದಿದೇವತೆಗಳಿಗೂ ಸುಲಭಸಾಧ್ಯನಲ್ಲದ ಸ್ವಾಮಿಯು
ಕೀನ, ಭಕ್ತರ ಉದ್ಧಾರಕ್ಕಾಗಿಯೇ, ತಿರುಮಾಲಿರುಂಜೋಲೈ ಮಲೈ ಕ್ಷೇತ್ರ
ದಲ್ಲಿ ನೆಲೆಸಿದ್ದಾನೆ. ಬೆಟ್ಟದ ತಪ್ಪಲು ಬಿದಿರು ಮೆಳೆಗಳಿಂದಲೂ, ಬೆಟ್ಟದ ಹೂ
ಗಳಿಂದಲೂ ಕೂಡಿ, ಜೇನು ಸುರಿಸುತ್ತ, ದುಂಬಿ ಮುದುರುತ್ತಿರುತ್ತದೆ. ಮನ
ಸ್ಸೇ, ಅಲ್ಲಿಗೆ ಹೋಗೋಣ ಬಾ. ಭಗವಂತನನ್ನು ಪೂಜಿಸೋಣ. ನಾವು
ಉಜ್ಜೀವನಗೊಳ್ಳೋಣ.

3. பிணிவளராக்கை நீங்க நின்றேத்தப்
பெருநிலமருவில் முன்னருளி,
அணிவளர் குறளாயகலிட முழுதும்
அளந்தவெம்மடிகள் தம் கோயில்,
கணிவளர் வேங்கை நெடுநிலமதனில்
குறவர்தம் கவணிடைத்துரந்த,
மணிவளர் சாரல் மாலிருஞ்சோலை
வணங்குதும் வா மட நெஞ்சே.

ಪಿಣಿವಳರಾಕ್ಕೈ ನೀಙ್ಗ ನಿನ್ರೇತ್ತ
ಪ್ಪೆರುನಿಲಮರುವಿಲ್ ಮುನ್ನರುಳಿ,

Garani Srinivasan

ಅಣಿ ವಳರ್ ಕುಱಳಾಯ್ ಅಗಲಿಡಮ್ ಮುೞುದುಮ್
ಅಳನ್ದ ಎಮ್ಮಡಿಗಳ್ ತಮ್ ಕೋಯಿಲ್,
ಕಣಿ ವಳರ್ ವೇಙ್ಗೈ ನೆಡು ನಿಲಮದನಿಲ್
ಕುಱವರ್ ತಮ್ ಕವಣಿಡೈತ್ತುರನ್ದ,
ಮಣಿ ವಳರ್ ಶಾರಲ್ ಮಾಲಿರುಂ ಶೋಲೈ
ವಣಙ್ಗುದುಮ್ ವಾ ಮಡ ನೆಂಜೇ.

ಪಿಣಿ பிணி = ಆಶೆ ಸಂಕಟಗಳನ್ನು, ವಳರ್ வளர் = ಬೆಳೆಸುವ, ಆಕ್ಕೈ ஆக்கை = ದೇಹವನ್ನು, ನೀಙ್ಗ நீங்க = ನೀಗುವುದಕ್ಕಾಗಿ (ಕಳೆಯುವುದಕ್ಕಾಗಿ), ನಿನ್ಱು நின்று = ನಿಂತು, ಏಙ್ಗ ஏங்க = ಸ್ತುತಿಸುವುದಕ್ಕಾಗಿ, ಪೆರುನಿಲಮ್ பெருநிலம் = ವಿಸ್ತಾರವಾದ ಭೂಮಿಯನ್ನು, ಅರುಳಿಲ್ அருளில் = ಕೃಪೆಯಲ್ಲಿ (ಕೃಪೆಯಿಂದ), ಮುನ್ முன் = ಹಿಂದೆ ಒಂದು ಕಾಲದಲ್ಲಿ, ಅರುಳಿ அருளி = ಕೃಪೆ ಮಾಡಿ, ಅಣಿ ವಳರ್ அணி வளர் = ಶೋಭೆಯು ಬೆಳೆಯುವ, ಕುಱಳ್ ಆಯ್ குறளாய் = (ವಾಮನ) ಬ್ರಹ್ಮಚಾರಿಯಾಗಿ, ಅಗಲ್ அகல் = ವಿಸ್ತಾರವಾದ, ಇಡಮ್ ಮುೞುದುಮ್ இடம் முழுதும் = ಭೂಮಿ (ಸ್ಥಳ) ಯನ್ನೆಲ್ಲಾ, ಅಳನ್ದ அளந்த = ಅಳೆದ, ಎಮ್ ಅಡಿಗಳ್ ತಮ್ எம் அடிகள் தம் = ನಮ್ಮ ಸ್ವಾಮಿಯ, ಕೋಯಿಲ್ கோயில் = (ನೆಲಸಿರುವ) ಸ್ಥಳವಾದ, ಕಣಿ ವಳರ್ கணி வளர் = ಹೇರಳ ಬೆಳೆಯುತ್ತಿರುವ, ವೇಙ್ಗೈ வேங்கை = ಫಲವತ್ತಾದ, ನೆಡುನಿಲಮ್ ಅದನಿಲ್ நெடுநிலம் அதனில் = ವಿಸ್ತಾರವಾದ (ವ್ಯವಸಾಯದ) ನೆಲದಲ್ಲಿ, ಕುಱವರ್ குறவர் = ಕುರವರು, ತಮ್ தம் = ತಮ್ಮ, ಕವಣ್ கவண் = ಕವಣೆ ಕಲ್ಲುಗಳನ್ನು, ಇಡೈ இடை = ನಡುನಡುವೆ (ಆಗಾಗ), ತುರನ್ದ துரந்த = ಬೀಸುವಂಥ, ಮಣಿ ವಳರ್ மணி வளர் = ರತ್ನದಿಂದ ಕೂಡಿರುವ (ರತ್ನ ಬೆಳೆಯುವ), ಶಾರಲ್ சாரல் = ಬೆಟ್ಟದ ತಪ್ಪಲಿನ, ಮಾಲಿರುಂಜೋಲೈ மாலிருஞ்சோலை = ತಿರುಮಾಲಿರುಂಜೋಲೈ ಕ್ಷೇತ್ರವನ್ನು, ವಣಙ್ಗುದುಮ್ வணங்குதும் = ಪೂಜಿಸೋಣ, ವಾ ಮಡ ನೆಂಜೇ வா மட நெஞ்சே = ಬಾ ಅವಿವೇಕಿಯಾದ ಮನಸ್ಸೇ.

ಅವಿವೇಕಿಯಾದ ಮನಸ್ಸೇ, ಆಶೆ ಸಂಕಟಗಳನ್ನು ಬೆಳೆಸುವ ದೇಹವನ್ನು ನೀಗುವುದಕ್ಕಾಗಿ, ನಿಂತು ಸ್ತುತಿಸುವುದಕ್ಕಾಗಿ, ಹಿಂದೆ ಒಂದು ಕಾಲದಲ್ಲಿ ವಿಸ್ತಾರವಾದ ಭೂಮಿಯನ್ನು ಕರುಣಿಸಿ ಕೃಪೆ ಮಾಡಿದವನೂ, ಶೋಭೆಯು ಬೆಳೆಯುವ ವಾಮನ ಬ್ರಹ್ಮಚಾರಿಯಾಗಿ ವಿಶಾಲವಾದ ಭೂಮಿಯನ್ನೆಲ್ಲಾ ಅಳೆದವನೂ ಆದ ನಮ್ಮ ಸ್ವಾಮಿಯು ನೆಲಸಿರುವ ಸ್ಥಳವಾದ, ಹೇರಳ ಬೆಳೆಯುತ್ತಿರುವ ಫಲವತ್ತಾದ ಮತ್ತು ವಿಸ್ತಾರವಾದ ವ್ಯವಸಾಯದ ನೆಲದಲ್ಲಿ ಕುರವರು ತಮ್ಮ ಕವಣೆ ಕಲ್ಲುಗಳನ್ನು ಆಗಾಗ ಬೀಸುವಂಥ, ರತ್ನ ಬೆಳೆಯುತ್ತಿರುವ ಬೆಟ್ಟದ ತಪ್ಪಲಿನ ತಿರುಮಾಲಿರುಂಜೋಲೈ ಕ್ಷೇತ್ರವನ್ನು ಪೂಜಿಸೋಣ ಬಾ. (3)

ಮಾನವನ ಬೆಳವಣಿಗೆ ಮೂಲ ಆಶೆಯಿಂದ. ಆಶೆಯೇ ಅವನನ್ನು ದೊಡ್ಡ ದೊಡ್ಡ ಸಂಕಟದಲ್ಲಿ ಸಿಕ್ಕಿಸುವುದು. ಆಶೆಯೂ, ಸಂಕಟವೂ ಜೀವ ಕೊನೆವರೆಗೂ ಬಿಡದಂತೆ ಬೆಳೆಯುತ್ತಲೇ ಹೋಗುವುವು. ಮನುಷ್ಯನನ್ನು ದುಃಖ-ನೋವುಗಳ ಸಂಕೋಲೆಯಿಂದ ಬಿಗಿದು ಬಿಡುವುವು.. ಈ ಬಂಧನದಿಂದ ಬಿಡುಗಡೆಯಾಗಲು ಭಗವಂತನ ಕೃಪಾಕಟಾಕ್ಷಕ್ಕೆ ಅವನು ಪಾತ್ರನಾಗಬೇಕು. ಭಗವತ್ಕೃಪೆಯನ್ನು

ಗಳಿಸಿಕೊಳ್ಳುವುದಕ್ಕೆ. ಭಗವಂತನನ್ನು ಸ್ತುತಿಸಿ, ನಮಿಸಿ, ಭಜಿಸಿ, ಪೂಜಿಸಿ, ಅವನನ್ನು ಒಲಿಸಿಕೊಳ್ಳಬೇಕು.

ಭಗವಂತನ ಕೃಪೆ ಅಪಾರವಾದದು. ಮನುಷ್ಯನನ್ನು ಉದ್ಧರಿಸುವುದಕ್ಕಾಗಿ, ಅವನಿಗೆ ವಿಶಾಲವಾದ ಈ ಭೂಮಿ ಶಾಶ್ವತ ಸುಖವನ್ನು ದೊರಕಿಸಿಕೊಡುವುದಕ್ಕಾಗಿ, ಅರ್ಚಾವತಾರಿಯಾಗಿ ನೆಲಸಿದ್ದಾನೆ ಯನ್ನು ಕರುಣಿಸಿದ್ದಾನೆ. ತಾನೂ, ಅಲ್ಲಲ್ಲಿ ಅವನಿಗೆ ಎಲ್ಲ ಸೌಲಭ್ಯಗಳನ್ನೂ ಸ್ವಾಮಿಯ ತಿರುವಡಿಗಳನ್ನು ಆಶ್ರಯಿಸುವುದಕ್ಕೆ ಒದಗಿಸಿದ್ದಾನೆ.

ತಾನು ಕೊಡುವನ್ಯಾವನೆಂದು ತೋರಿಸಿಕೊಳ್ಳುವುದೂ, ತನ್ನ ಬಳಿಗೆ ಯಾಚಿಸಲು ಬಂದವರು ಬರಿಗೈಯಲ್ಲಿ ಹಿಂತಿರುಗುವುದಿಲ್ಲವೆಂದು ಹೆಮ್ಮೆಗೊಳ್ಳುವುದೂ ಬಲಿಚಕ್ರವರ್ತಿಯ ಸ್ವಭಾವವಾಗಿತ್ತು. ಮಿತಿಮೀರಿದರೆ ಯಾವುದೂ ಒಳ್ಳೆಯದಲ್ಲವೆಂಬ ಪಾಠವನ್ನು ಅವನಿಗೆ ಕಲಿಸುವುದಕ್ಕಾಗಿ ಭಗವಂತನೇ ಸ್ವತಃ ವಾಮನವಟುವಾಗಿ ಅವನ ಬಳಿಗೆ ಬಂದನು. ತನ್ನ ಪುಟ್ಟ ಹೆಜ್ಜೆಗಳಲ್ಲಿ ಮೂರಡಿ ಹೆಜ್ಜೆಗಳಷ್ಟು ನೆಲವನ್ನು ಯಾಚಿಸಿದನು. ಬಲಿಯಿಂದ ಅದನ್ನು ಪಡೆದ ಕೂಡಲೇ ಸ್ವಾಮಿಯು ತ್ರಿವಿಕ್ರಮನಾಗಿ ಬೆಳೆದು, ತನ್ನ ಒಂದು ಹೆಜ್ಜೆಯಿಂದ ವಿಶಾಲವಾದ ಭೂಮಿಯನ್ನೆಲ್ಲಾ ಆವರಿಸಿಬಿಟ್ಟನು. ಮತ್ತೊಂದು ಹೆಜ್ಜೆಯಿಂದ ಇತರಲೋಕಗಳೆಲ್ಲವನ್ನೂ ಅಳೆದುಕೊಂಡನು. ಭಗವಂತನ ಅದ್ಭುತ ಸಾಮರ್ಥ್ಯಕ್ಕೆ ಬೆರಗಾಗಿದ್ದ ಬಲಿಯ ತಲೆಯ ಮೇಲೆ, ಸ್ವಾಮಿಯು ತನ್ನ ತಿರುವಡಿಯನ್ನಿಟ್ಟು (ಮೂರನೆಯ ಹೆಜ್ಜೆಯನ್ನಿಟ್ಟು) ಅವನಿಗೆ ಶಾಶ್ವತ ಸುಖಾನಂದಗಳನ್ನು ಕೃಪೆಮಾಡಿದನು. ಭಗವಂತನ ಅಪಾರವಾದ ಕೃಪೆಗೆ ಇದೊಂದು ನಿದರ್ಶನ!

ಆಳ್ವಾರರು ಹೇಳುತ್ತಾರೆ: ಏನೂ ಅರಿಯದ ಮನಸ್ಸೇ, ಭಗವಂತನು ಪರಮ ಕಾರುಣಿಕ. ಆತ ಸಂಕಟಗಳಿಂದ ಮನುಷ್ಯನು ಪಡುವ ಪಾಡನ್ನು ನೀಗುವುದಕ್ಕಾಗಿಯೇ ಅವನಿಗೆ ಈ ಭೂಲೋಕವನ್ನು ಕರುಣಿಸಿದ್ದಾನೆ. ತಾನೂ ದಿವ್ಯಸುಂದರನಾಗಿ, ಅಲ್ಲಲ್ಲಿ, ದಿವ್ಯಕ್ಷೇತ್ರಗಳಲ್ಲಿ, ನೆಲಸಿದ್ದಾನೆ. ಮನಸ್ಸೇ, ಬಾ, ನಾವು ತಿರುಮಾಲಿರುಂಜೋಲೈ ಮಲೈ ಕ್ಷೇತ್ರಕ್ಕೆ ಹೋಗೋಣ. ಸ್ವಾಮಿಯ ಸಮ್ಮುಖದಲ್ಲಿ ನಿಂತು, ಅವನನ್ನು ಸ್ತುತಿಸಿ, ಅವನ ಕೃಪೆಗೆ ಪಾತ್ರರಾಗೋಣ

4. சூர்மையிலாய பேய்முலை சுவைத்துச்
சுடுசரமடுசிலைத்துரந்து,
நீர்மையிலாத தாடகைமாள
நினைந்தவர் மனங்கொண்ட கோயில்,
கார்மலி வேங்கை கோங்கலர் புறவில்
கடிமலர்க்குறிஞ்சியின் நறுந்தேன்,
வார்புனல்சூழ் தண் மாலிருஞ்சோலை
வணங்குதும் வா மட நெஞ்சே

ಶೂರ್ಮೈಯಿಲಾಯ ಪೇಯ್ ಮುಲೈ ಶುವೈತ್ತು
ಶುಡುಶರಮಡು ಶಿಲೈತ್ತುರನ್ದು,
ನೀರ್ಮೈಯಿಲಾದ ತಾಡಗೈಮಾಳ
ನಿನೈನ್ದವರ್ ಮನಙ್ಗೊಣ್ಡ ಕೋಯಿಲ್,

ಕಾರ್ ಮಲಿ ವೇಙ್ಗೈ ಕೋಙ್ಗಲರ್ ಪೊಳಿಲ್
ಕುಡಿಮಲರ್ ಕ್ಕು [illegible] ಯಿನ್ ನಱುನ್ದೇನ್,
ವಾರ್ ಪುನಲ್ ಶೂಳ್ ಕಣ್ ಮಾಲಿರುಂಜೋಲೈ
ವಣಙ್ಗುದುಮ್ ವಾ ಮಡನೆಂಜೇ.

ಕೂರ್ಮೈಯಿಲ್ ಆಯ (கூர்மையில் ஆய) = ಕ್ರೌರ್ಯದಿಂದ ಕೂಡಿದ, ಪೇಯ್ (பேய்) = ರಾಕ್ಷಸಿಯ, ಮುಲೈ (முலை) = ಮೊಲೆಯನ್ನು, ಶುವೈತ್ತು (சுவைத்து) = ರುಚಿಯಿಂದ ಉಂಡವನಾಗಿ, ಕಡು ಶರಮ್ (கடு சரம்) = ತೀಕ್ಷ್ಣವಾದ ಬಾಣಗಳನ್ನು, ಅದು ಶಿಲೈ ಕರನ್ದು ಅಡಿಚಿ... ಪ್ರಯೋಗಿಸಿ, ನೀರ್ಮೈ ಇಲಾ ತುರನ್ದು (துரந்து) = ಮೋಸವಾದ, ಬಿಲ್ಲಿನ ಮೂಲಕ ಪ್ರಯೋಗಿಸಿ, ನೇರ್ಮೈ ಇಲಾದ (நேர்மை இலாத) = ಒಳ್ಳೆಯ ಸ್ವಭಾವವಿಲ್ಲದ, ತಾಡಗೈ (தாடகை) = ತಾಟಕಿಯು, ಮಾಳ (மாள) = ಮಡಿಯುವಂತೆ, ನಿನೈತ್ತವರ್ (நினைத்தவர்) = ಸಂಕಲ್ಪಿಸಿದವನು, ಮನಮ್ ಕೊಣ್ಡು ಮಣಮ್ ಕಮಳ (மணம் கமழ) ... ಕೋಯಿಲ್ (கோயில்) = ಸ್ಥಳವಾದ, ಆಶೆಯಿಂದ ನೆಲಸಿರುವ, ಕೋಯಿಲ್ ... ಮೇಘಮಂಡಲದವರೆಗೆ ತುಂಬಿರುವ, ವೇಙ್ಗೈ ಕಾರ್ ಮಲಿ (கார் மலி) = ಮೇಘ ಮಂಡಲದ ವರೆಗೆ ತುಂಬಿರುವ, ವೇಙ್ಗೈ ಕೋಙ್ಗು ವೆಙ್ಗೈ கோங்கு = ವಿಧವಿಧದ ಕಾಡು (ಬೆಟ್ಟದ) ಮರಗಳು, ಅಲರ್ ಅலர் = ಹೂಬಿಡುವ, ಪೊಳಿಲ್ ಪುಱಯಿಲ್ = ಅರಳುವ ಹೂಗಳ ಪ್ರದೇಶದಲ್ಲಿ, ಕುಡಿ ಮಲರ್ கடி மலர் = ಅರಳುವ ಹೂಗಳ, ಕುಱುಂಜಿಯಿನ್ குறுஞ்சியின் = ಬೆಟ್ಟದ ಹೂವಿನ ಮರಗಳಲ್ಲಿ, ಕುಱುಂಜಿಯಿನ್ ... ರುಚಿಕರವಾದ ಜೇನು ತುಂಬಿರುವ [illegible], ವಾರ್ ಪುನಲ್ ನಱುನ್ದೇನ್ நறு தேன் = ರುಚಿಕರವಾದ ಜೇನು, ಶೂಳ್ (சூழ்) = ವಾರ್ ಪುನಲ್ = ತುಂಬಿ ಹರಿಯುವ ಪ್ರವಾಹಗಳಿಂದ, ಶೂಳ್ (சூழ்) = ಸುತ್ತುವರಿದಿರುವ, ಕಣ್ ತಣ் = ತಂಪಾದ, ಮಾಲಿರುಂಜೋಲೈ மாலி ... = ತಿರುಮಾಲಿರುಂಜೋಲೈ ಎಂಬ ಕ್ಷೇತ್ರವನ್ನು, ವಣಙ್ಗುದುಮ್ வணங்குதும் = ಪೂಜಿಸೋಣ, ವಾ ಮಡ ನೆಂಜೇ ವಾ மட ...
ನೆಂಜೇ (நெஞ்சே) = ಬಾ, ತಿಳುವಳಿಕೆಯಿಲ್ಲದ ಮನಸ್ಸೇ.

ತಿಳುವಳಿಕೆಯಿಲ್ಲದ ಮನಸ್ಸೇ, ಕ್ರೌರ್ಯದಿಂದ ಕೂಡಿದ ರಾಕ್ಷಸಿಯ ಮೊಲೆಯನ್ನು ಚಪ್ಪರಿಸಿ ಉಂಡವನೂ, ತೀಕ್ಷ್ಣವಾದ ಬಾಣಗಳನ್ನು ಮೋಸವಾದ ಬಿಲ್ಲಿನ ಮೂಲಕ ಪ್ರಯೋಗಿಸಿ ಒಳ್ಳೆಯ ಸ್ವಭಾವವೇ ಇಲ್ಲದ ತಾಟಕಿಯು ಮಡಿಯುವಂತೆ ಸಂಕಲ್ಪಿಸಿದವನೂ ಆಶೆಯಿಂದ ನೆಲಸಿರುವ ಸ್ಥಳವಾದ, ಮೇಘಮಂಡಲದ ವರೆಗೆ ತುಂಬಿ ಅರಳುವ ವಿಧವಿಧದ ಕಾಡು (ಬೆಟ್ಟದ) ಮರಗಳು ಹೂಬಿಡುವ ಪ್ರದೇಶದಲ್ಲಿ ಅರಳುವ ಹೂಗಳ ಬೆಟ್ಟದ ಹೂವಿನ ಮರಗಳಲ್ಲಿ ರುಚಿಕರವಾದ ಜೇನು ತುಂಬಿರುವ, ತುಂಬಿ ಹರಿಯುವ ಪ್ರವಾಹಗಳಿಂದ ಸುತ್ತುವರಿದಿರುವ, ತಂಪಾದ ತಿರುಮಾಲಿರುಂಜೋಲೈ ಕ್ಷೇತ್ರವನ್ನು ಪೂಜಿಸೋಣ (ನಮಸ್ಕರಿಸೋಣ), ಬಾ. (4)

ಆಳ್ವಾರರು ಹೇಳುತ್ತಾರೆ: ಮೂಢ ಮನಸ್ಸೇ, ನಮ್ಮ ಸ್ವಾಮಿಯಾದ ಭಗವಂತನು ಆಶ್ಚರ್ಯಕಾರಕನೇ ಸರಿ. ಹಿಂದೆ, ಅವನು ಶ್ರೀಕೃಷ್ಣನಾಗಿ ಅವತರಿಸಿದಾಗ, ಅವನು ಇನ್ನೂ ಹಸುಗೂಸಾಗಿದ್ದಾಗಲೇ ಕ್ರೂರಿಯೂ ರಾಕ್ಷಸಿಯೂ ಆದ ಪೂತನಿಯ ವಿಷತುಂಬಿದ ಮೊಲೆಯನ್ನು ಚಪ್ಪರಿಸಿ ಉಣ್ಣುತ್ತಾ, ಅವಳನ್ನೇ

ಕೊಂದು ದಾಟಿದನು. ಮತ್ತೆ, ಅವನು ಶ್ರೀರಾಮನಾಗಿ ಅವತರಿಸಿದಾಗ, ಸ್ವಭಾವತಃ ಕಡು ಕ್ರೂರಳು ಆದ ತಾಟಕಿಯೆಂಬ ದುಷ್ಟ ರಾಕ್ಷಸಿಯನ್ನು ತನ್ನ ತೀಕ್ಷ್ಣವಾದ ಬಾಣಗಳಿಂದ ಕೊಂದು ದಾಟಿದನು. ಬೆಟ್ಟದ ಕೋನಗಳಿಂದ ತುಂಬಿರುವ ಗಿಡ ಮರಗಳಿಂದ ತುಂಬಿ ತಂಪಾದ ಪ್ರವಾಹಗಳಿಂದ ನಿತ್ಯ ಹರಿಯುತ್ತಿರುವ ಮನೋಹರವಾದ ಬೆಟ್ಟದ ತಪ್ಪಲಿನ ತಿರುಮಾಲಿರುಂ ಜೋಲೆ ಮಲೆ ಕ್ಷೇತ್ರದಲ್ಲಿ ಆಶ್ಚರ್ಯಮಯನಾದ ಭಕ್ತಜನೋದ್ಧಾರಕನಾಗಿ ನೆಲಸಿದ್ದಾನೆ. ಮನಸ್ಸೇ, ಬಾ, ನಾವು ಅಲ್ಲಿಗೆ ಹೋಗೋಣ. ಸ್ವಾಮಿಯನ್ನು ಪೂಜಿಸಿ, ಉದ್ಧಾರಗೊಳ್ಳೋಣ

5. வணங்கலிலரக்கன் செருக்களத்தவிய
மணிமுடியொருபதும் புரள,
அணங்கெழுந்தவன்றன் கவந்தம்நின்றாட
அமர்செய்தவடிகள்தம் கோயில்,
பிணங்கலில் நெடுவேய் நுதிமுகங்கிழிப்பப்
பிரசம்வந்திழிதரப் பெருந்தேன்,
மணங்கமழ் சாரல் மாலிருஞ்சோலை
வணங்குதும் வா மடநெஞ்சே.

ವಣಙ್ಗಲಿಲರಕ್ಕನ್ ಶೆರುಕ್ಕಳತ್ತವಿಯ
ಮಣಿಮುಡಿಯೊರುಪದುಮ್ ಪುರಳ,
ಅಣಙ್ಗೆೞುನ್ದವನ್ ತನ್ ಕವನ್ದಮ್ ನಿನ್ರಾಡ
ಅಮರ್ ಶೆಯ್ದ ಅಡಿಗಳ್ ತಮ್ ಕೋಯಿಲ್,
ಪಿಣಙ್ಗಲಿಲ್ ನೆಡುವೇಯ್ ನುದಿಮುಗಮ್ ಕಿೞಿಪ್ಪ
ಪ್ಪಿರಶಮ್ ವನ್ದಿೞಿ ತರಪ್ಪೆರುನ್ದೇನ್,
ಮಣಙ್ಗಮೞ್ ಶಾರಲ್ ಮಾಲಿರುಞ್ಜೋಲೈ
ವಣಙ್ಗುದುಮ್ ವಾ ಮಡ ನೆಞ್ಜೇ.

ವಣಙ್ಗಲ್ ಇಲ್ வணங்கல் இல் = ತಲೆಬಾಗದ, ಅರಕ್ಕನ್ அரக்கன் = ರಾಕ್ಷಸನು, ಶೆರುಕ್ಕಳತ್ತು செருக்களத்து = ಯುದ್ಧಭೂಮಿಯಲ್ಲಿ, ಅವಿಯ அவிய = ನಾಶಹೊಂದುವಂತೆ, ಮಣಿಮುಡಿ மணிமுடி = ರತ್ನಕಿರೀಟಗಳು, ಒರುಪದುಮ್ ஒருபதும் = ಹತ್ತೂ, ಪುರಳ புரள = ನೆಲದಲ್ಲಿ ಹೊರಳಾಡುವಂತೆ, ಅಣಙ್ಗು அணங்கு = ದುಷ್ಟಭೂತವು, ಎೞುನ್ದು எழுந்து = ಎದ್ದೆದ್ದು, ಅವನ್ ತನ್ அவன் தன் = ಅವನ, ಕವನ್ದಮ್ கவந்தம் = ಮುಂಡವು, ನಿನ್ರು நின்று = ನಿಂತು, ಆಡ ஆட = (ಮನಸ್ಸಿ) ಆಡುವಂತೆಯೂ (ನರ್ತಿಸುವಂತೆಯೂ), ಅಮರ್ ಶೆಯ್ದ அமர்செய்த = ಯುದ್ಧಮಾಡಿದ (ಹೋರಾಡಿದ), ಅಡಿಗಳ್ ತಮ್ அடிகள் தம் = ಭಗವಂತನ, ಕೋಯಿಲ್ கோயில் = (ನೆಲಸಿರುವ) ಸ್ಥಳವಾದ, ಪಿಣಙ್ಗಲಿಲ್ பிணங்கலில் = (ಒಂದಕ್ಕೊಂದು) ಹೆಣೆದುಕೊಂಡಿರುವ, ನೆಡು நெடு =

Garani Srinivasan

ಉದ್ದನಾದ, ವೇಯ್ வேய் = ಬಿದಿರಿನ, ನುದಿ நுதி = ತುದಿಗಳು,
ಮುಹಮಾ ಕಿಳಿಪ್ಪ முகம் கிழிப்ப = ಮುಖವನ್ನು ಹರಿಯಲು,
ಪಿರಶಮಾ ವನ್ದು பிரசம் வந்து = ಜೇನು ಹೊರಕ್ಕೆ ಬಂದು, ~~ಇಳಿತ~~
ಇಳಿತರ இழிதர = ಸ್ರವಿಸಲು, ಪೆರು ತೇನ್ பெருந்தேன் =
ದೊಡ್ಡ ಜೇನಿನ, ಮಣಮಾ மணம் = ಪರಿಮಳವು, ಕಮಳು கமழ்
= ಹರಡಿ ಬೀಸುತ್ತಿರುವ, ಶಾರಲ್ சாரல் = ತಪ್ಪಲಿನ, ಮಾಲಿರುಂಜೋಲೈ
மாலிருஞ்சோலை = ತಿರುಮಾಲಿರುಂಜೋಲೈ ಕ್ಷೇತ್ರವನ್ನು,
ವಣಾಙ್ಗುದುಮಾ வணங்குதும் = ಪೂಜಿಸೋಣ, ವಾ ಮಡನೆಂಜೇ
வா மட நெஞ்சே = ಬಾ ಮೂಢ ಮನಸ್ಸೇ.

ಕಲಿಬಾಣದ ರಾಕ್ಷಸನು ಯುದ್ಧಭೂಮಿಯಲ್ಲಿ ನಾಶಗೊಂಡುದಂತೆಯೂ, ರತ್ನಕಿರೀಟಗಳು ಹತ್ತು ನೆಲದಲ್ಲಿ ಹೊರಳಾಡುವಂತೆಯೂ, ಅವನ ಮುಂಡವನ್ನು ದುಷ್ಟಭೂತವೊಂದು ಎದ್ದು (ಆವೇಶಗೊಂಡು) ಮನಸ್ಸಿನಂತೆ ಕುಣಿಸುವಂತೆಯೂ ಹೋರಾಡಿದ ನಮ್ಮ ಸ್ವಾಮಿಯು ನಿತ್ಯವಾಸವಾದ, ಪರಸ್ಪರ ಹೆಣೆದುಕೊಂಡಿರುವ ಬಿದಿರಿನ ತುದಿಗಳು ಮುಖವನ್ನು ಹರಿಯಲು ಜೇನು ಹೊರಕ್ಕೆ ಬಂದು ಸ್ರವಿಸಲು, ದೊಡ್ಡ ಜೇನಿನ ಪರಿಮಳವು ಹರಡಿ ಬೀಸುತ್ತಿರುವ ತಪ್ಪಲಿನ ತಿರುಮಾಲಿರುಂಜೋಲೈ ಕ್ಷೇತ್ರವನ್ನು ಪೂಜಿಸೋಣ ಬಾ ಮೂಢ ಮನಸ್ಸೇ. (5)

ಆಳ್ವಾರರು ಹೇಳುತ್ತಾರೆ: ಮೂಢ ಮನಸ್ಸೇ, ನಮ್ಮ ಸ್ವಾಮಿಯ ಪರಾಕ್ರಮವನ್ನೇನೆಂದು ವಿವರಿಸುವುದು! ಹಿಂದೆ, ಅವನು ಶ್ರೀರಾಮನಾಗಿ ಅವತರಿಸಿ, ಯಾರಾಗಾ ಕಲಿಬಾಣದಂಥ ಮದಾಂಧನೂ ಮಹಾಪರಾಕ್ರಮಿಯೂ ರಾಕ್ಷಸರಾಜನೂ ಆದ ರಾವಣಾಸುರನನ್ನು ಯುದ್ಧಕಾಲದಲ್ಲಿ ಎದುರಿಸಿದನು. ತನ್ನ ಕೋದಂಡದ ಸಹಾಯದಿಂದಲೇ ಆ ರಾಕ್ಷಸನ ಹತ್ತು ತಲೆಗಳನ್ನು ಉರುಳಿಸಿದನು. ಅವುಗಳನ್ನು ~~ಅಲಂ~~ ಅಲಂಕರಿಸಿದ್ದ ರತ್ನಕಿರೀಟಗಳು ನೆಲದ ಧೂಳಿನಲ್ಲಿ ಬಿದ್ದು ಹೊರಳಾಡಿದವು. ಆ ರಾಕ್ಷಸನ ಮುಂಡವೇ ಆವೇಶಗೊಂಡು ಯುದ್ಧಭೂಮಿಯಲ್ಲಿ ಸ್ವೇಚ್ಛೆಯಾಗಿ ಕುಣಿಕುಣಿದಾಡುವಂತೆ ಮಾಡಿದನು. ಆ ಸ್ವಾಮಿಯೇ ಈಗ ತಿರುಮಾಲಿರುಂಜೋಲೈ ಕ್ಷೇತ್ರದಲ್ಲಿ ಭಕ್ತರ ಉದ್ಧಾರಕ್ಕಾಗಿಯೇ ನೆಲಸಿದ್ದಾನೆ. ಆ ಬೆಟ್ಟದ ತಪ್ಪಲಿನಲ್ಲಿ ದಟ್ಟವಾಗಿ ಬೆಳೆದಿರುವ ಬಿದಿರು ಮೆಳೆಗಳಲ್ಲಿ ದೊಡ್ಡ ಜೇನಿನ ಗೂಡುಗಳು ತುಂಬಿಕೊಂಡಿವೆ. ಪರಸ್ಪರ ಹೆಣೆದುಕೊಂಡು ಉದ್ದವಾಗಿ ಬೆಳೆದಿರುವ ಬಿದಿರಿನ ತುದಿಗಳು ಆಗಿಂದಾಗ್ಗೆ ಆ ಜೇನುಗೂಡಿನ ಹೊರಭಾಗವನ್ನು ಸವರುವುವು. ಕೆಲವುಸಲ ಅದನ್ನು ಸೀಳುವುವು. ಆ ಸೀಳುಗಳಿಂದ ಜೇನು ಸ್ರವಿಸಿ ಸುರಿಯತೊಡಗುವುದು. ಜೇನಿನ ಸುವಾಸನೆಯು ಭಗವಂತನ ಆಕರ್ಷಕವಾದ ಮಾಧುರ್ಯದಂತೆ ಎಲ್ಲೆಲ್ಲಿಯೂ ಹರಡಿ ಆಕರ್ಷಿಸುವುದು. ಮನಸ್ಸೇ, ಬಾ, ಅಲ್ಲಿಗೆ

Garani Srinivasan

ಹೋಗೋಣ. ಭಕ್ತವಂಶವನ್ನು ಅಲ್ಲಿ ಪೂಜಿಸೋಣ. ನಮ್ಮ ಆತ್ಮಸ್ಥಿತಿ ಯನ್ನು ವಿವರಿಸೋಣ

6. விடங்கலந்தமர்ந்தவரவணைத்துயின்று
விளாங்கனிக்கிளாங்கன்று விசிறி,
குடங்கலந்தாடிக்குரவைமுன் கோத்த
கூத்தவெம்மடிகள்தம் கோயில்,
கடங்கடல் முகந்து விசும்பிடைப்பிளிறக்
கடவரைக்களிறென்று முனிந்து,
மடங்கல் நின்றதிரும் மாலிருஞ்சோலை
வணங்குதும் வா மடநெஞ்சே.

ವಿಡಙ್ಗಲನ್ದಮರ್ನ್ದವರವಣೈತ್ತುಯಿನ್ಱು
ವಿಳಙ್ಗನಿಕ್ಕಿಳಙ್ಗನ್ಱು ವಿಶಿಱಿ,
ಕುಡಙ್ಗಲನ್ದಾಡಿಕ್ಕುರವೈಮುನ್ ಕೋತ್ತ
ಕೂತ್ತವೆಮ್ಮಡಿಗಳ್ತಮ್ ಕೋಯಿಲ್,
ಕಡಙ್ಗಡಲ್ ಮುಗನ್ದು ವಿಶುಮ್ಬಿಡೈಪ್ಪಿಳಿಱ
ಕ್ಕಡವರೈಕ್ಕಳಿಱೆನ್ಱು ಮುನಿನ್ದು,
ಮಡಙ್ಗಲ್ ನಿನ್ಱದಿರುಮ್ ಮಾಲಿರುಞ್ಜೋಲೈ
ವಣಙ್ಗುದುಮ್ ವಾ ಮಡನೆಞ್ಜೇ.

ವಿಡಮ್ ಕಲನ್ದು விடம் கலந்து = ವಿಷ ಕೂಡಿಕೊಂಡು, ಅಮರ್ನ್ದ அமர்ந்த = ಕುಳಿತುಕೊಂಡ, ಅರವು ಅಣೈ அரவு அணை = ಶೇಷನ ಹಾಸಿಗೆ ಯಲ್ಲಿ, ತುಯಿನ್ಱು துயின்று = ಪವಡಿಸಿದ್ದವನು, ವಿಳಮ್ ಕನಿಕ್ಕು விளாம் கனிக்கு = ಬೇಲದ ಹಣ್ಣಿಗೆ, ಇಳ ಕನ್ಱು இளங்கன்று = ಎಳೆಯ ಕರುವನ್ನು, ವಿಶಿಱಿ விசிறி = ಬೀಸಿದವನೂ, ಕುಡಮ್ ಕಲನ್ದು ಆಡಿ குடம் கலந்து ஆடி = ಕೊಡಗಳನ್ನು ಕೂಡಿಸಿಕೊಂಡು ಆಡಿದವನೂ, ಮುನ್ முன் = ಹಿಂದೆ, ಕುರವೈ ಕೋತ್ತ குரவை கோத்த = ರಾಸಕ್ರೀಡೆಯನ್ನಾಡಿದವನೂ, ಕೂತ್ತ கூத்த = ಆಶ್ಚರ್ಯಕರ ಚೇಷ್ಟೆಯಾದವನಾದ ಎಮ್ಮಡಿಗಳ್ ತಮ್ எம்மடிகள் தம் = ನಮ್ಮ ಸ್ವಾಮಿಯ, ಕೋಯಿಲ್ கோயில் = ಸ್ಥಳವಾದ, ಕಡ ಕಡಲ್ கட கடல் = ವಿಶಾಲವಾದ ಕಡಲಿನ, ಮುಗನ್ದು முகந்து = ತುಂಬಿಕೊಂಡು, ವಿಶುಮ್ಬು ಇಡೈ விசும்பு இடை = ಆಕಾಶದಲ್ಲಿ, ಪಿಳಿಱ பிளிற = ಘರ್ಜಿಸಲು, ಕಡ கட = ವಿಶಾಲವಾದ, ವರೈ வரை = ಬೆಟ್ಟದ (ಪ್ರದೇಶದ), ಕಳಿಱು களிறு = ಆನೆ (ಬಲಗ), ಎನ್ಱು என்று = ಎಂದು, ಮುನಿನ್ದು முனிந்து = ಕೋಪಿಸಿಕೊಂಡು, ಮಡಙ್ಗಲ್ மடங்கல் = ಸಿಂಹವು, ನಿನ್ಱು நின்று = ನಿಂತು, ಅದಿರುಮ

ಅಕ್ರೂರಂ = ಪೂಜಿಸಿದ, ಮೂರು ಜಗತ್ತಿನ ಮಾಲಿಗೃಹೇ =
ಕರು ಮೂರು ಜಗತ್ತಿನ ಮತ್ತೆ ಕ್ಷೇತ್ರವನ್ನು, ವನ ಕುಂದು ಮಾ ಬಂದು
ಕುಬ್ಜಾಂ = ಪೂಜಿಸಿದ, ಮಾ.ಮಡಿಸಲಾದ ಬಾಗ ಮಾಡಿರುವವಳೇ =
ಬಾ ಮುಕುಂದ ಮನಸ್ಸೇ.

ಮುಕುಂದ ಮನಸ್ಸೇ, ವಿಷವನ್ನು ತುಂಬಿಕೊಂಡಿರುವ ದಿವಸದ ದಾಮೋದರ ಮೇಲೆ ಮಲಗಿಸಿ, ಬಾಲದ ದನಗಳನ್ನೂ ಎಲ್ಲರನ್ನೂ ಬಿಟ್ಟ, ಕೋಟಿಗಳನ್ನು ಕೂಡಿಸಿಕೊಂಡು ಹೋದ, ರಾತ್ರಿಯಲ್ಲಿ ಹುಟ್ಟಿದ, ವಿಶಾಲವಾದ ಕಡಲಿನಿಂದ ಆಶ್ಚರ್ಯಕರವಾದ ನಮ್ಮ ಸ್ವಾಮಿಯನ್ನು, ವಿಶಾಲವಾದ ಕಡಲಿನಿಂದ (ನೀರನ್ನು) ತುಂಬಿಕೊಂಡು ಆಕಾಶದಲ್ಲಿ ಪೂಜಿಸಲು, ವಿಸ್ತಾರವಾದ ಬಟ್ಟಲಲ್ಲಿ ರುವ ಜಲವನ್ನೇ ಅದರಿಂದ ಕೋಲಿನಿಂದ ಸಿಂಧುವು ನಿಂತು ಪೂಜಿಸುವಂತೆ (6)
ಕರು ಮೂರು ಜಗತ್ತಿನ ಮತ್ತೆ ಕ್ಷೇತ್ರವನ್ನು ಪೂಜಿಸಿದ, ಬಾ.

ಈ ಶ್ಲೋಕದಲ್ಲಿ ಶ್ರೀಕೃಷ್ಣನ ಕಾಲದ ಕೆಲವು ಆಶ್ಚರ್ಯಕರವಾದ ವಿಷಯಗಳನ್ನು ಹೇಳಲಾಗಿದೆ. ಬಾಲಕನಾಗಿದ್ದಾಗ ಶ್ರೀಕೃಷ್ಣನು ಗೋವಳಬಾಲಕರೊಡನೆ ದನ ದನಕರುಗಳ ಹಿಂದೆ ಕಾಡಿಗೆ ಹೋಗುತ್ತಿದ್ದನು. ಒಂದು ದಿನ, ಅವನನ್ನು ಕೊಲ್ಲಬೇಕೆಂದು, ಕಂಸನಿಂದ ಪ್ರೇರಿತನಾದ, ವತ್ಸಾಸುರನೆಂಬುವನು ಕರುವಿನ ರೂಪದಲ್ಲಿ ಕರುಗಳ ಮಂದೆಯಲ್ಲಿ ಸೇರಿಕೊಂಡನು. ಇದನ್ನರಿತ ಕೃಷ್ಣನು ಕರುವನ್ನು ಹಿಡಿದು ಗರಗರನೆ ತಿರುಗಿಸಿ, ಅದನ್ನು ಬಲವಾಗಿ ಬೀಸಿ ಹಿಂಗಾಲುಗಳನ್ನು ಹಿಡಿದು ಎಸೆದನು. ಕರು ಬಿದ್ದ ರಭಸಕ್ಕೆ ಬೇಲದ ಹಣ್ಣುಗಳು ಉದುರಿದವು. ಕರುವೂ ಸತ್ತಿತು. ಇದು ಒಂದು ಪ್ರಸಂಗ. ಗೋವಳರಲ್ಲಿ ಕೌಶಲ್ಯಪೂರ್ಣವಾದ ಕುಣಿತವನ್ನು ಕಾಣುವುದು ಎಂದು ಗಾದೆಯಾಗಿತ್ತು. ಬಾಲಕೃಷ್ಣನು ಅನೇಕ ಕೋಟಿಗಳನ್ನು ಒಂದರ ಮೇಲೆ ಒಂದನ್ನು ಕೂಡಿಸಿ ಬಲು ಜೋರಾಗಿ ಕುಣಿದು ತೋರಿಸಿದನು. ಇದೊಂದು ಪ್ರಸಂಗ. ರಾತ್ರಿಯ ಸಮಯದಲ್ಲಿ ಒಬ್ಬೊಬ್ಬ ಗೋಪಿಯ ಬಳಿಯಲ್ಲಿ ಒಬ್ಬೊಬ್ಬ ಕೃಷ್ಣನಾಗಿ ನಿಂತು, ಸಂಭ್ರಮದಿಂದ ನಲಿದಾಡಿ, ಗೋಪಿಯರನ್ನೆಲ್ಲಾ ಏಕಕಾಲದಲ್ಲಿ ರಮಿಸಿದನು — ಎಂಬುದು ಮತ್ತೊಂದು ಪ್ರಸಂಗ.

ಆಳ್ವಾರರು ಹೇಳುತ್ತಾರೆ! ಮುಕುಂದ ಮನಸ್ಸೇ, ನಮ್ಮ ಸ್ವಾಮಿಯು ಪರಮಾಶ್ಚರ್ಯಕಾರಕ! ವಿಷ ತುಂಬಿಕೊಂಡಿರುವ ಹಾವನ್ನೇ ಕನ್ನ ದಾರಿಯಾಗಿ ಮಾಡಿಕೊಂಡು, ಭೋರ್ಗರೆಯುತ್ತಿರುವ ಸಾಗರದಲ್ಲಿ ದಾಸ್ಯರೂಪ ಯೋಗನಿದ್ರೆಯಲ್ಲಿರುವವನು. ಅವನೇ ಶ್ರೀಕೃಷ್ಣನಾಗಿ ಅವತರಿಸಿ ಬಗೆಬಗೆಯ ಆಶ್ಚರ್ಯಕಾರಕ ಪ್ರಸಂಗಗಳನ್ನು ನಡೆಸಿದನು. ಕರುವನ್ನು ಬೀಸಿ ಎಸೆದು ಬೇಲದ ಮರದಿಂದ ಬೇಲದ ಹಣ್ಣುಗಳನ್ನು ಉದುರಿಸಿದನು. ಚಿತ್ರವಿಚಿತ್ರವಾಗಿ ಕೌಶಲ್ಯಪೂರ್ಣವಾಗಿ ಕೋಪದ ಕುಣಿತವನ್ನು ಪ್ರದರ್ಶಿಸಿದನು. ರಾತ್ರಿಯಲ್ಲಿ ಒಬ್ಬೊಬ್ಬ ಗೋಪಿಗೂ ಒಬ್ಬ ಕೃಷ್ಣನಾಗಿ ಅವಳ ಜೊತೆಯಲ್ಲಿದ್ದು ಅವಳನ್ನು ಸಂತೋಷಪಡಿಸಿದನು. ಈಗ ಆ ಸ್ವಾಮಿಯು

Garani Srinivasan

ತಿರುಮಾಲಿರುಂಜೋಲೈ ಮಲೈ ಕ್ಷೇತ್ರದಲ್ಲಿ ಭಕ್ತೋದ್ಧಾರಕನಾಗಿ ನೆಲಸಿದ್ದಾನೆ. ಮನಸ್ಸೇ, ಅಲ್ಲಿಗೆ ಹೋಗೋಣ ಬಾ. ಆತನ ತಿರುವಡಿಗಳನ್ನು ಪೂಜಿಸೋಣ. ನಮ್ಮ ಆತ್ಮೋದ್ಧಾರವನ್ನು ಪಡೆಯೋಣ

ತಿರುಮಾಲಿರುಂಜೋಲೈಮಲೈಯ ವಿಷಯದಲ್ಲಿ ಒಂದು ಸುಂದರವಾದ ರೂಪಕವನ್ನು ಇಲ್ಲಿ ಹೇಳಲಾಗಿದೆ. ವಿಶಾಲವಾದ ಕಡಲಿನಿಂದ ನೀರು ಆವಿಯಾಗಿ ಕಾರ್ಮುಗಿಲುಗಳಾಗಿ ಬೆಟ್ಟದ ಮೇಲಕ್ಕೆ ಬಂದು ಸೇರುತ್ತವೆಯಂತೆ. ಆ ಕಾರ್ಮುಗಿಲುಗಳು ಆಗಾಗ ಗುಡುಗುತ್ತವೆ. ಈ ಗುಡುಗನ್ನು ಬೆಟ್ಟದ ತಪ್ಪಲಿನ ಕಾಡುಗಳಲ್ಲಿ ವಾಸವಾಗಿರುವ ಸಿಂಹಗಳು ತಮ್ಮ ಶತ್ರುಗಳಾದ ಮದ್ದಾನೆಗಳ ಘೀಂಕಾರವೆಂದು ಭ್ರಮಿಸುತ್ತವೆಯಂತೆ. ತಾವೂ ಅದಕ್ಕೆ ತಕ್ಕಂತೆ ತಮ್ಮ ಘರ್ಜನೆಯನ್ನು ತೋರಿಸುತ್ತವೆಯಂತೆ. ಕಾರ್ಮುಗಿಲಿನ ಗುಡುಗು, ಸಿಂಹದ ಗುಡುಗು ಒಂದರ ಪ್ರತಿಧ್ವನಿಯಾಗಿರುವಂತೆ ಭಯಂಕರ ಸುಂದರವಾಗಿರುವುದು

7. தேனுகனாவி போயுகவங்கோர்
செழுந்திரள் பனங்கனியுதிர,
தானுகந்தெறிந்த தடங்கடல்வண்ணர்
எண்ணி முன்னிடங்கொண்ட கோயில்,
வானகச்சோலை மரதகச்சாயல்
மாமணிக்கல்லதர் நிறைந்து,
மானுகர் சாரல் மாலிருஞ்சோலை
வணங்குதும் வா மடநெஞ்சே

ತೇನುಗನಾವಿ ಪೋಯುಗವಙ್ಗೋರ್
ಶೆಳುನ್ದಿರಳ್ ಪನಙ್ಗನಿಯುದಿರ,
ತಾನುಗನ್ದೆರಿನ್ದ ತಡಙ್ಗಡಲ್ ವಣ್ಣರ್
ಎಣ್ಣಿ ಮುನ್ನಿಡಙ್ಗೊಣ್ಡ ಕೋಯಿಲ್,
ವಾನಗಚ್ಚೋಲೈ ಮರದಗಚ್ಚಾಯಲ್
ಮಾಮಣಿಕ್ಕಲ್ಲದರ್ ನಿರೈನ್ದು,
ಮಾನುಗರ್ ಶಾರಲ್ ಮಾಲಿರುಞ್ಜೋಲೈ
ವಣಙ್ಗುದುಮ್ ವಾ ಮಡನೆಞ್ಜೇ.

ತೇನುಗನ್ தேனுகன் = ಧೇನುಕನ, ಆವಿ ஆவி = ಪ್ರಾಣವು, ಪೋಯ್ போய் = ಹೋಗಿ, ಉಗ உக = ಬಿದ್ದು ಬಿಡಂ ಹೋಗುವಂತೆ, ಅಙ್ಗು அங்கு = ಅಲ್ಲಿಯು, ಓರ್ ஓர் = ಒಂದು, ಶೆಳು செழு = ಸುಂದರವಾದ (ಮಧುರವಾದ) ತಿರಳ್ திரள் = ದಟ್ಟವಾದ, ಪನಙ್ಗನಿ பனங்கனி = ತಾಳೆಯ ಹಣ್ಣು,

Garani Srinivasan

ಉದಿರ உகிர = ಉದುರಿಬೀಳುವಂತೆಯೂ, ತಾನ್ ಉಹಸ್ತು தாண் உகந்
து = ತಾನೇ ಸಂತೋಷದಿಂದ, ಎತ್ತ நிந்த = ಎಸೆದ, ತಟ ತಡ್
தட கடம் = ವಿಶಾಲವಾದ ತಡಲನ, ವಣ್ಣರ್ வண்ணார் = ಬಣ್ಣದವರು,
ಎಣ್ಣ್ ನಣ்ணி = ಇಷ್ಟಪಟ್ಟು, ಮುನ್ ముண் = ಹಿಂದೆ ಒಂದು ದಿಲ, ಇಡಮ
ಕೊಣ್ಡ இடம் கொண்ட = ಸ್ಥಳವ ಮಾಡಿಕೊಂಡ, ಕೋಯಿಲ್ கோயில்
= ಸ್ಥಳವಾದ, ವಾನ ಅಹಮ ವாண் அகம் = ಆಕಾಶವನ್ನು ಮನೆಯಾಡಿಕೊಂ
ಡ, ಶೋಲೈ சோலை = ತೋಪುಗಳು, ಮರತಹಟ್ಟಾಯಲ್ மரதகச்சா
ಯಲ್ = ಮರಕತರತ್ನಗಳ ಬಣ್ಣದ, ಮಾ ಮಣಿ மாமணி = ಶ್ರೇಷ್ಠವಾದ
ರತ್ನಗಳ ಹಾರದ, ಕಲ್ கல் = ಬಂಡೆಗಳು, ಅದರ್ அதர் = ಮಾರ್ಗವಾ.
ಸಿಕ್ಕಿತ್ತು நிறைந்து = ತುಂಬಿಕೊಂಡು, ಮಾನ್ மாண் = ಜಿಂಕೆಗಳು,
ಸುಹರ್ ಗುಕರ் = ಬನ್ನು ಕತ್ತು ನೆಗೆದಾಡುತ್ತ ಇರುವ, ಶಾರಲ್ சாரல் = ತಪ್ಪ
ಲ, ಮಾಲಿರುಂಜೋಲೈ மாலிருஞ்சோலை = ತಿರುಮಾಲಿರುಂಜೋಲೈ
ಮಲೈ ಕ್ಷೇತ್ರವನ್ನು, ವಣಂಗುದುಮ್ ವಾ வணங்குதும் வா =
ಪೂಜಿಸೋಣ ಬಾ, ಮಡ ನೆಂಜೇ மட நெஞ்சே = ಮೂಢ ಮನಸ್ಸೇ.

ಧೇನುಕನ ಪ್ರಾಣಾಪಹೋಗಿ (ಅವನ ದೇಹವು) ಬಿದ್ದು ಚೆದರಿ ಹೋಗಿ
ವಂತೆ ಅಲ್ಲಿಯೂ ಒಂದು (ಕೆಂಪಗೆ) ಸುಂದರವಾದ (ಮಧುರವಾದ) ಇತ್ತಾದ
ತಾಳೆಯ ಹಣ್ಣುಗಳು ಉದುರಿಬೀಳುವಂತೆ ಎಸೆದು ತಾನೇ ಹರ್ಷಿಸಿ ಎಸೆದ
ವಿಶಾಲವಾದ ತಡಲ ಬಣ್ಣದವನು ಇಷ್ಟಪಟ್ಟು, ಹಿಂದೆ ಒಂದು ದಿಲ, ಮನೆ
ಮಾಡಿಕೊಂಡ ಸ್ಥಳವಾದ, ಆಕಾಶ ~~ವನ್ನು~~ ಮನೆಯಾಡಿಕೊಂಡಿರು ~~ವ~~ ವಂತೆ ಬೆಳೆದ
~~ತೋಪುಗಳನ್ನು~~ ~~ಮತ್ತು~~ ಮರಕತರತ್ನದ ಬಣ್ಣದ, ತೋಪುಗಳ ಮತ್ತು ಶ್ರೇಷ್ಠವಾದ
ರತ್ನಗಳ ಹಾರದ ಬಂಡೆಗಳ ಮಾರ್ಗವಾ ಜಿಂಕೆಗಳು ತುಂಬಿಕೊಂಡು
ಬನ್ನುಕತ್ತು ನೆಗೆದಾಡುತ್ತ ಇರುವ ಬೆಟ್ಟದ ತಪ್ಪಲಿನ ತಿರುಮಾಲಿರುಂಜೋ
ಲೈಮಲೈ ಕ್ಷೇತ್ರವನ್ನು ಪೂಜಿಸೋಣ ಬಾ ಮೂಢಮನಸ್ಸೇ. (7)

ಹಿಂದಿನ ಪಾಶುರದಲ್ಲಿ ಹೇಳಿದಂತೆ ಶ್ರೀಕೃಷ್ಣಾವತಾರದ ಲೀಲೆಯನ್ನೇ
ಇಲ್ಲಿಯೂ ಮುಂದುವರಿಸಲಾಗಿದೆ. ಕಂಸನಿಂದ ಧೇನುಕಾಸುರನು ಪ್ರೇರಿತನಾದನು. ಚೆನ್ನಾಗಿ ಬೆಳೆದ
ಬಾಲಕೃಷ್ಣನನ್ನು ಕೊಲ್ಲಲು ಕತ್ತೆಯ ರೂಪವನ್ನು ತಳೆದನು.
ಹಣ್ಣುಗಳಿಂದ ತುಂಬಿರುವ ತಾಳೆಯ ವನದಲ್ಲಿ ಸುಳಿದಾಡುತ್ತಿದ್ದನು. ಅಲ್ಲಿಗೆ
ಕೃಷ್ಣನೂ ಗೋವಳರೂ ಬಂದರು. ತಾಳೆಯ ಹಣ್ಣನ್ನು ತಿನ್ನಬೇಕೆಂದು ಆಶಿಸಿದರು.
ಧೇನುಕನು ತನ್ನ ಹಿಂಗಾಲುಗಳಿಂದ ಕೃಷ್ಣನನ್ನು ಒದೆಯಲು ಹತ್ತಿರಕ್ಕೆ ಬಂದನು. ಆ
ವೇಳೆ ಕೃಷ್ಣನು ಕತ್ತೆಯ ಹಿಂಗಾಲುಗಳನ್ನೇ ಹಿಡಿದು, ಗರಗರನೆ ತಿರುಗಿಸಿ, ಬೀಸಿ
ತಾಳೆಯ ~~ಮರ~~ ಮರಗಳ ಮೇಲಕ್ಕೆ ಎಸೆದನು. ಇದರಿಂದ ಧೇನುಕನೂ ಸತ್ತನು.
~~ತಾ~~ ತಾಳೆಯ ಹಣ್ಣುಗಳು ಯಥೇಚ್ಛವಾಗಿ ಉದುರಿದವು.

ತಿರುಮಾಲಿರುಂಜೋಲೈಮಲೈ ಬೆಟ್ಟದ ತಪ್ಪಲು ಬಹಳ ಆಕರ್ಷಕ
ಸುಂದರವಾದದ್ದು. ತೋಪುಗಳಲ್ಲಿ ಮರಗಳು ಮುಗಿಲು ಮುಟ್ಟುವಷ್ಟು

ಎತ್ತರವಾಗಿ ಬೆಳೆದಿವೆ. ಅವು ಮರಕತರತ್ನಗಳಂತೆ ಹಸುರಾಗಿ ಶೋಭಿಸುತ್ತವೆ. ಬೆಟ್ಟದ ಬಂಡೆಗಳು ಶ್ರೇಷ್ಠವಾದ ನೀಲಿಯ ರತ್ನಗಳೋ ಎಂಬಂತೆ ಶೋಭಿಸುತ್ತವೆ. ಅಲ್ಲಿ, ಜಿಂಕೆಗಳು ಹಿಂಡುಹಿಂಡಾಗಿ, ಬಂಡೆಗಳ ಮೇಲೆ ನಿರ್ಭಯವಾಗಿ ಓಡಾಡುತ್ತಾ, ಹುಲ್ಲು ಹೂವುಗಳನ್ನು ತಿನ್ನುತ್ತಾ, ನೆಗೆದಾಡುತ್ತಾ ಇರುತ್ತವೆ.

ಆಳ್ವಾರರು ಹೇಳುತ್ತಾರೆ ಮೂಢ ಮನಸ್ಸೇ, ನಮ್ಮ ಸ್ವಾಮಿಯು ಶ್ರೀಕೃಷ್ಣನಾಗಿದ್ದಾಗ, ಕೇಶಿ ಎಂಬ ರಾಕ್ಷಸನನ್ನು ಹಿಡಿದು, ಕೈಯಿಂದ ಮೂರಿದ ಆನೆ ಉದ್ದಂಡ ಹಲ್ಲುಗಳನ್ನು ಮೇಲಕ್ಕೆ ಎಸೆದು, ಅವನನ್ನು ಕೊಂದನು. ಅವನು ಕಡಲವಣ್ಣದವನು. ಈಗ ಆ ಗೋವಳರು ಆಶ್ರಯಿಂದ ಕಂಡರು. ಸ್ವಾಮಿಯೇ ತಿರುಮಾಲಿರುಂಜೋಲೈ ಮಲೆ ಕ್ಷೇತ್ರದಲ್ಲಿ ಭಕ್ತರುದ್ಧಾರಕ್ಕಾಗಿ ನೆಲೆಸಿದ್ದಾನೆ. ಮನಸ್ಸೇ, ಬಾ, ಆನಂದಕರವಾದ ಕ್ಷೇತ್ರಕ್ಕೆ ಹೋಗೋಣ. ಸ್ವಾಮಿಯನ್ನು ಪೂಜಿಸಿ, ಉದ್ಧಾರಹೊಂದೋಣ

8 புதமிகு விசும்பிற் புணரி சென்றணவப்
பொரு கடலரவணைத் துயின்று,
பதமிகு பரியின் மிகு சினம் தவிர்த்த
பனிமுகில் வண்ணர் தம் கோயில்,
கதமிகு சினத்த கட தடக்களிற்றின்
கவுள் வழி களிவண்டு பருக,
மதமிகு சாரல் மாலிருஞ்சோலை
வணங்குதும் வா மட நெஞ்சே.

ಪುದಮಿಕು ವಿಸುಮ್ಬಿಱ್ ಪುಣರಿ ಸೆನ್ರಣವ
ಪ್ಪೊರು ಕಡಲರವಣೈತ್ತುಯಿನ್ರು,
ಪದಮಿಕು ಪರಿಯಿನ್ ಮಿಕು ಸಿನಮ್ ತವಿರ್ತ್ತ
ಪನಿಮುಗಿಲ್ ವಣ್ಣರ್ ತಮ್ ಕೋಯಿಲ್,
ಕದಮಿಕು ಸಿನತ್ತ ಕಡ ತಡಕ್ಕಳಿಟ್ರಿನ್
ಕವುಳ್ ವಳಿ ಕಳಿವಣ್ಡು ಪರುಗ,
ಮದಮಿಕು ಸಾರಲ್ ಮಾಲಿರುಞ್ಜೋಲೈ
ವಣಙ್ಗುದುಮ್ ವಾ ಮಡನೆಞ್ಜೇ.

ಪುದಮ್ புதம் = ಮೋಡಗಳು, ಮಿಕು மிகு = ವಿಶೇಷವಾಗಿ, ವಿಸುಮ್ಬಿಲ್ விசும்பில் = ಆಕಾಶದಲ್ಲಿ, ಪುಣರಿ புணரி = ಅಲೆ ಅಲೆಯಾಗಿ, ಸೆನ್ರು சென்று = ಹೋಗಿ, ಅಣವ அணவ = ದಟ್ಟವಾಗಿ ಕೂಡಿಕೊಳ್ಳುವಹಾಗೆ, ಪೊರು ಕಡಲ್ பொரு கடல் = (ಅಲೆಗಳು) ಬಡಿಯುತ್ತಿರುವ ಕಡಲಲ್ಲಿ, ಅರವು ಅಣೈ அரவு அணை = ಹಾವಿನ ಹಾಸಿಗೆಯಮೇಲೆ, ತುಯಿನ್ರು துயின்று = ಮಲಗಿ, ಪದಮ್ ಮಿಕು பதம் மிகு = ಬಲ ವಿಶೇಷವಾದ, ಪರಿಯಿನ್ பரியின் = ಕುದುರೆಯ, ಮಿಕು ಸಿನಮ್ மிகு சினம் = ಹೆಚ್ಚು ಕೋಪವನ್ನು, ತವಿರ್ತ್ತ தவிர்த்த = ತಡೆಗಟ್ಟಿದ, ಪನಿಮುಗಿಲ್ ವಣ್ಣರ್ ತಮ್ பனிமுகில் வண்ணர் தம் = ಕಾರ್ಮುಗಿಲ

ಬಣ್ಣದವನ, ಶೋಲೈಯಿಲ್ ಕೋಯಿಲ್ = ಸ್ಥಳವಾದ, ಕರುಮಾ ಮುಗಿಲ್ ತ್ತಮ್ ಮಿಕು
= ಬಲವಾಗಿ ಹರಿಯುತ್ತಿರುವ (ಏರುತ್ತಿರುವ), ಕರುತ್ತ ಕಣ್ಣಕ್ಕು (ದೊಡ್ಡ) = ಕೋಪದ,
ಕರುಮಾ ಕಡಮ್ = ಕೆನ್ನೆಯ, ಕಡ ಕ್ಕಡ = ವಿಶಾಲವಾದ, ಕಳಿತ್ತಿನ್ ಕಣ್ಣಿ
ಱ್ಱಿಣ್ = (ಬಲುಸ) ಆನೆಯ, ಕವುಳ್ ಕವುಳ್ = ಕಪೋಲಗಳ, ಪಲಿ ವುಳ್ಳಿ =
ಮಾರ್ಗವಾಗಿ, ಕಳ್ ಕಣ್ಣಿ = ಮದಜಲವನ್ನು, ವಣ್ಡು ವುಣ್ಣು = ದುಂಬಿ
ಗಳು, ಪಿರುಹು ಪರುಹ = ಕುಡಿಯುವಂತೆ, ಮದಮಾ ಮುಗಿಲ್ ಮತ್ತಮ್ ಮಿಕು =
ಮದಜಲವು ಹೆಚ್ಚಾಗಿ (ಹರಿಯುವ), ಶಾರಲ್ ಶಾರಲ = ಶಖ್ಖಲಿನ, ಮಾಲಿರುಂ
ಜೋಲೈ ಮಾಲಿಗ್ಗು ಕೋಯಿಲ = ಶಿರುಮಾಲಿರುಂ ಜೋಲೈ ಮಲ್ಲೈ ಕ್ಷೇತ್ರವನ್ನು,
ವಣಂಗುದುಮಾ ವಾ ಇಣಾಂಗುಕ್ತುಮ್ ವಾ = ಪೂಜಿಸೋಣ ಬಾ, ಮಡನೆ
ನೆಂಜೇ ಮಡನೆಂಜೇ = ಮೂಢಮನಸ್ಸೇ.

ಆಕಾಶದಲ್ಲಿ ಮೋಡಗಳು ~~[illegible]~~ ಅಲೆ ಅಲೆಯಾಗಿ ಸಂಚರಿಸುತ್ತಾ ದಟ್ಟವಾಗಿ ಕೂಡಿಕೊಳ್ಳುವ ಹಾಗೆ, ಅಲೆಗಳು ಬಡಿಯುತ್ತಿರುವ ಕಡಲಲ್ಲಿ ಹಾವಿನ ಹಾಸಿಗೆಯಲ್ಲಿ ಪವಡಿಸಿದವನೂ, ಬಹಳ ಚುರುಕಾದ ಕುದುರೆಯ ದುಷ್ಟ ರೂಪವನ್ನು ಕಡೆಗಾಣಿಸಿದವನೂ ಆದ ~~[illegible]~~ ಕಾರ್ಮುಗಿಲ ಬಣ್ಣದವನ ಸ್ಥಳವಾದ, ದೊಡ್ಡ (ಮದ) ಆನೆಯ ಕೋಪದ ಕೆನ್ನೆಗಳ ಮೂಲಕವಾಗಿ ಹರಿಯುವ ಮದಜಲವನ್ನು ದುಂಬಿಗಳು ಕುಡಿಯುವ ಹಾಗೆ, ಆ ಮದಜಲವೇ ಹೆಚ್ಚಾಗಿ ಹರಿಯುವ ಶಖ್ಖಲಿನ ಶಿರುಮಾಲಿರುಂ ಜೋಲೈ ಮಲ್ಲೈ ಕ್ಷೇತ್ರವನ್ನು ಪೂಜಿಸೋಣ ಬಾ ಮೂಢಮನಸ್ಸೇ. (8)

ಆಳ್ವಾರರು ಹೇಳುತ್ತಾರೆ: ಮೂಢಮನಸ್ಸೇ, ನಮ್ಮ ಸ್ವಾಮಿಯು ಬಹಳ ದೊಡ್ಡ ದೊಡ್ಡ ಅಲೆಗಳಿಂದ ತುಂಬಿ ಕಲಕಿ ಹೋಗಿರುವ ಪಾಲ್ಗಡಲಲ್ಲಿ, ನಿಲುಪ್ಪಿನಾಗಿ, ಹಾವಿನ ಹಾಸಿಗೆಯಲ್ಲಿ ಪವಡಿಸಿರುವವನು. ಅವನೇ ಶ್ರೀಕೃಷ್ಣನಾಗಿ ಅವತರಿಸಿದಾಗ, ಕುದುರೆಯ ರೂಪವನ್ನು ತಳೆದು ಕೋಪದಿಂದ ಅವನನ್ನು ಕೊಲ್ಲಲು ಬಂದ ಕೇಶಿಯೆಂಬ ರಾಕ್ಷಸನನ್ನು ಕೊಂದುಹಾಕಿದನು. ಅವನೇ ಈಗ ಶಿರುಮಾಲಿರುಂ ಜೋಲೈ ಮಲ್ಲೈ ಕ್ಷೇತ್ರದಲ್ಲಿ ಭಕ್ತರ ಉದ್ಧಾರಕ್ಕಾಗಿಯೇ ನೆಲಸಿದ್ದಾನೆ. ಆ ಬೆಟ್ಟದ ಶಖ್ಖಲಿನಲ್ಲಿ ಹರಿಯುವ ನೀರು ಆನೆಗಳ ಮದಜಲದಿಂದ ಕಲೆತು ಹರಿಯುತ್ತಾ, ಅಲ್ಲಿನ ಕೊಳಗಳಲ್ಲಿರುವ ದುಂಬಿಗಳು ಕುಡಿಯಲು ಬಹಳ ಹಿತವಾಗಿದೆ. ಮನಸ್ಸೇ, ಬಾ, ನಾವು ಅಲ್ಲಿಗೆ ಹೋಗೋಣ. ಭಗವಂತನ ಸೇವೆಯಲ್ಲಿ ತೊಡಗಿ, ಉದ್ಧಾರವಾಗೋಣ.

9. புந்தியில் சமணர் புத்தரென்றிவர்கள்
ஒத்தன பேசவுமுகந்திட்டு,
எந்தைபெம்மானெனிமையவர்தொழுவர்
எண்ணிமுணிடங்கொண்ட கோயில்,

சந்தனப்பொழிலின் தாழ்சினை நீழல்
தாழ்வரை மகளிர்கள் நாளும்,
மந்திரத்திறைஞ்சும் மாலிருஞ்சோலை
வணங்குதும் வா மடநெஞ்சே.

ಪುನ್ದಿಯಿಲ್ ಶಮಣರ್ ಪುತ್ತರೆನ್ಱಿವರ್ಗಳ್
ಒತ್ತನ ಪೇಶವುಮುಗನ್ದಿಟ್ಟು,
ಎನ್ದೈ ಪೆಮ್ಮಾನಾರ್ ಇಮೈಯವರ್ ತಲೈವರ್
ಎಣ್ಣಿ ಮುನ್ ಇಡಂಗೊಣ್ಡ ಕೋಯಿಲ್,
ಶನ್ದನಪ್ಪೊೞಿಲಿನ್ ತಾೞ್ ಶಿನೈ ನೀೞಲ್
ತಾೞ್ವರೈ ಮಗಳಿರ್ಗಳ್ ನಾಳುಮ್,
ಮನ್ದಿರತ್ತಿಱೈಞ್ಜುಮ್ ಮಾಲಿರುಞ್ಜೋಲೈ
ವಣಙ್ಗುದುಮ್ ವಾ ಮಡನೆಞ್ಜೇ.

ಪುನ್ದಿ ಇಲ್ புந்தியில் = ಬುದ್ಧಿ ಇಲ್ಲದ (ವಿವೇಕವಿಲ್ಲದ), ಶಮಣರ್ சமணர் = ಜೈನರು, ಪುತ್ತರ್ புத்தர் = ಬುದ್ಧರು, ಎನ್ಱು என்று = ಎಂಬ, ಇವರ್ಗಳ್ இவர்கள் = ಇವರುಗಳು, ಒತ್ತನ ஒத்தன = (ತಮತಮಗೆ) ಒಪ್ಪುವಂತಹ, ಪೇಶವುಮ್ பேசவும் = ಮಾತನಾಡುವುದನ್ನು, ಉಗನ್ದಿಟ್ಟು உகந்திட்டு = ಮರೆತು (ತೊರೆದು) ಬಿಟ್ಟು, ಎನ್ದೈ எந்தை = ನಮ್ಮ, ಪೆಮ್ಮಾನಾರ್ பெம்மானார் = ಒಡೆಯನು, ಇಮೈಯವರ್ இமையவர் = ಪರಮಪದವಾಸಿಗಳ (ಅಮರರ), ತಲೈವರ್ தலைவர் = ಒಡೆಯನು, ಎಣ್ಣಿ எண்ணி = ಯೋಚಿಸಿ (ಬಯಸಿ), ಮುನ್ முன் = ಹಿಂದೆ, ಇಡಮ್ ಕೊಣ್ಡ இடம் கொண்ட = ನೆಲಸಿರುವ ಸ್ಥಳವಾದ, ಶನ್ದನಮ್ ಪೊೞಿಲಿನ್ சந்தனம் பொழிலின் = ಗಂಧದ ಮರಗಳ ತೋಪಿನಲ್ಲಿ, ತಾೞ್ தாழ் = ಎತ್ತರವಾದ, ಶಿನೈ சினை = ಕೊಂಬೆಗಳ, ನೀೞಲ್ நீழல் = ನೆರಳಲ್ಲಿ, ತಾೞ್ವರೈ தாழ்வரை = ಎತ್ತರವಾದ ಬೆಟ್ಟದ, ಮಗಳಿರ್ಗಳ್ மகளிர்கள் = ಹೆಂಗಳು ನಾಳುಮ್ நாளும் = ಯಾವಾಗಲೂ, ಮನ್ದಿರತ್ತು மந்திரத்து = ಮಂದಿರಗಳಲ್ಲಿ, ಇಱೈಞ್ಜುಮ್ இறைஞ்சும் = ಸ್ತುತಿಸುವ, ಮಾಲಿರುಞ್ಜೋಲೈ மாலிருஞ்சோலை = ತಿರುಮಾಲಿರುಂಜೋಲೈ ಮಲೈ ಕ್ಷೇತ್ರವನ್ನು, ವಣಙ್ಗುದುಮ್ வணங்குதும் = ಪೂಜಿಸೋಣ, ವಾ வா = ಬಾ, ಮಡನೆಞ್ಜೇ மடநெஞ்சே = ಮೂಢ ಮನಸ್ಸೇ

ವಿವೇಕವಿಲ್ಲದ ಜೈನರು, ಬೌದ್ಧರು ಎಂಬ ಇವರುಗಳು ತಮತಮಗೆ ಒಪ್ಪುವಂತಹ ಮಾತನಾಡುವುದನ್ನು ತೊರೆದುಬಿಟ್ಟು, ನಮ್ಮ ಒಡೆಯನೂ ಅಮರರ ಒಡೆಯನೂ ಯೋಚಿಸಿ (ಬಯಸಿ), ಹಿಂದೆ, ನೆಲಸಿರುವ ಸ್ಥಳವಾದ

Garani Srinivasan

ಗಂಧದ ಮರಗಳ ತೋಪಿನಲ್ಲಿ, ಎತ್ತರವಾದ ಕೊಂಬೆಗಳ ನೆರಳಲ್ಲಿ, ಎತ್ತರವಾದ ಬೆಟ್ಟದ ದೇವರುಗಳು ಯಾವಾಗಲೂ ಮಂದಿರಗಳಲ್ಲಿ ನಿತ್ಯ ಕರ್ಮವ ತಿರುಮಾಲಿರುಂಜೋಲೈಮಲೈ ಕ್ಷೇತ್ರವನ್ನು ಪೂಜಿಸೋಣ, ಬಾ, ಮೂಢ ಮನಸ್ಸೇ. (9)

ಆಳ್ವಾರರು ಹೇಳುತ್ತಾರೆ: ಮೂಢ ಮನಸ್ಸೇ, ಜೈನರು, ಬೌದ್ಧರು, ಎಂಬವರು ವಿವೇಕವಿಲ್ಲದವರು. ಅವರು ತಮ ತಮಗೆ ತೋಚಿದಂತೆ ಸ್ವಮತ್ಸರದ ಮಾತುಗಳನ್ನಾಡುತ್ತಾರೆ. ಅವರ ಪಾಲಿಗೆ ವೇದಗಳೇ ಸುಳ್ಳು. ನೀನು ಅವರ ಅವಿವೇಕದ ಮಾತುಗಳನ್ನು ಕೇಳಬೇಡ. ಅವಕ್ಕೆ ಕಿವಿಗೊಡಬೇಡ. ನಮ್ಮೆಲ್ಲರಿಗೂ ಸ್ವಾಮಿಯಾಗಿರುವವನೇ ಪರಮಪದವಾಸಿಯಾದ ಮಾಮಣಿವಣ್ಣನು. ಈಗ ತಿರುಮಾಲಿರುಂಜೋಲೈಮಲೈ ಕ್ಷೇತ್ರದಲ್ಲಿ ಅವನೇ ನೆಲೆಸಿರುವನು. ಎತ್ತರವಾದ್ದರಿಂದ ಸುಂದರವಾದ ಆ ಶಿಖರದಲ್ಲಿ ನೆಲೆಸಿದ್ದಾನೆ. ಆ ಬೆಟ್ಟದಲ್ಲಿ ಶ್ರೀಗಂಧದ ಮರಗಳ ತೋಪುಗಳುಂಟು. ಆ ತೋಪುಗಳಲ್ಲಿ, ಎತ್ತರವಾದ ಕೊಂಬೆಗಳ ನೆರಳಲ್ಲಿ ಮನೆಗಳನ್ನು ಕಟ್ಟಿಕೊಂಡು ವಾಸಿಸುವ ಬೆಟ್ಟದ ಜನಗಳು ನಮ್ಮ ಸ್ವಾಮಿಯನ್ನು ಕುರಿತು ಎಡೆಬಿಡದೆ ಸ್ತುತಿಸುತ್ತಾರೆ. ಮನಸ್ಸೇ, ನಾವು ಆ ಕ್ಷೇತ್ರಕ್ಕೆ ಹೋಗೋಣ ಬಾ. ಸ್ವಾಮಿಯನ್ನು ಪೂಜಿಸೋಣ ಉಜ್ಜೀವನಗೊಳ್ಳೋಣ.

10. வண்டமர் சாரல் மாலிருஞ்சோலை
மாமணி வண்ணனை வணங்கும்.,
தொண்டரைப் பரவும் சுடரொளி நெடுவேல்
சூழ்வயலாலி நன்னாடன்,
கண்டல் நல் வேலி மங்கையர் தலைவன்
கலியன் வாயொலி செய்த பனுவல்,
கொண்டிவை பாடும் தவமுடையார்கள்
ஆள்வரிக்குரை கடலுலகே

ವಣ್ಡಮರ್ ಶಾರಲ್ ಮಾಲಿರುಂಜೋಲೈ
ಮಾ ಮಣಿ ವಣ್ಣನೈ ವಣಙ್ಗುಮ್,
ತೊಣ್ಡರೈಪ್ ಪರವುಮ್ ಶುಡರೊಳಿ ನೆಡುವೇಲ್
ಶೂಳ್ವಯಲಾಲಿ ನನ್ನಾಡನ್,
ಕಣ್ಡಲ್ ನಲ್ ವೇಲಿ ಮಙ್ಗೈಯರ್ ತಲೈವನ್
ಕಲಿಯನ್ ವಾಯೊಲಿ ಶೆಯ್ದ ಪನುವಲ್,
ಕೊಣ್ಡಿವೈ ಪಾಡುಮ್ ತವಮುಡೈಯಾರ್ಗಳ್
ಆಳ್ವರಿಕ್ಕುರೈ ಕಡಲುಲಗೇ.

ವಣ್ಡು வண்டு = ದುಂಬಿಗಳು, ಅಮರ್ அமர் = ಮುತ್ತಿಕೊಂಡಿರುವ, ಶಾರಲ್ சாரல் = ಪರ್ವತದ ತಪ್ಪಲಿನ, ಮಾಲಿರುಂಜೋಲೈ மாலிருஞ்சோ

೭೦ = ಶಿರು ಮಾಲಿರುಂಜೋಲೈ ಮಲೈ ಷೇತ್ರದಲ್ಲಿ ನೆಲಸಿರುವ, ಮಾ ಮಣಿವಣ್ಣ
ನ್ನೈ ಮಾ ಮಣಿ ವಣ್ಣಣ್ಣಾರ = ಅಂದವಾದ ಇಂದ್ರನೀಲಮಣಿಯ ಬಣ್ಣ
ದವನನ್ನು (ಸ್ವಾಮಿಯನ್ನು), ವಣಙ್ಗು ಮಾ ವಣಂಗುಮ್ = ಪೂಜಿಸುವ,
ಕೊಣ್ಡಕ್ಕೈ ಕೊಣ್ಡಾರ = ಚಕ್ರವನ್ನು, ಪರವುಮಾ ಪಾಡುಮ್ = ಹೊ
ಗಳುವವನೂ, ಶುದರ್ ಒಳಿ ಸುಡರ್ ತಾಳಿ = ಬಹಳ ಹೊಳಪುಳ್ಳ,
ನೆಡುವೇಲ್ ನೆಡುವೇಲ್ = ಉದ್ದವಾದ ವೇಲಾಯುಧವುಳ್ಳವನೂ, ಶೂ
ಶೂಟ್ ಶೂಳ್ = ಸುತ್ತುವರಿದಿರುವ, ವಯಲ್ ವಯಲ್ = ಗದ್ದೆಬಯಲು
ಗಳುಳ್ಳ, ಆಲಿ ಆಲಿ = ಶಿರುವಾಲಿ ಎಂಬ, ನಲ್ ನಾಡನ್ ನಲ್ನಾಡನ್
= ಒಳ್ಳೆಯ ನಾಡಿನ ಒಡೆಯನೂ, ಕಣ್ಡಲ್ ಕಣ್ಡಲ್ = ತಾಳೆಯ ಮರಗಳ,
ನಲ್ ನಲ್ = ಅಂದವಾದ, ವೇಲಿ ವೇಲಿ = ಬೇಲಿಯುಳ್ಳ, ಮಙ್ಗೈಯ
ರ್ ಕಲ್ವನ್ ಮಙ್ಗೈಯರ್ ಕೋನ್ = ಶಿರುಮಂಗೈ ನಾಡಿನವರ
ವವರ ಒಡೆಯನೂ, ಆದ, ಕಲಿಯನ್ ಕಲಿಯನ್ = ಕಲಿಯನ (ಶಿರು
ಮಂಗೈ ಆಳ್ವಾರರ), ವಾಯ್ ಒಲಿ ಶೆಯ್ದ ವಾಯ್ ತಾಳಿ ಶೆಯ್ದ = ಬಾಯಿಂದ
ಹಾಡಿದ, ತಮಿಳ್ ಪಣುವಲ್ = ಕವಿತೆಯನ್ನು (ಪಾಶುರಗಳನ್ನು), ಕೇಟ್ಟು
ಕೇಟ್ಟು = ಶ್ರವಣಿಸಿ (ಕಲಿತುಕೊಂಡು), ಇವೈ ತಿರಾಮ್ = ಇವುಗಳ
ನ್ನು, ಪಾಡುಮ ಪಾಡುಮ್ = ಹಾಡುವ, ಶವಮ ಉಡೈಯಾರ್ ಹಲ್ ಭಾಗ್ಯ
ವನ್ನು ಪಡೆದವರು, ಆಳ್ವರ್ ಆಳ್ವಾರ
ಗಳ್ ಉಡೈಯಾರ್ ಕಳ್ = ಭಾಗ್ಯವನ್ನು ಪಡೆದವರು, ಆಳ್ವರ್ ಆಣ್ ಈ ಅಬ್ಬರಿಸುವ
ರ್ = ಆಳುತ್ತಾರೆ, ಇ-ಶುಕ್ಕಿ ಕಡಲ್ ತಿರೈಕಡಲ್ = ಈ ಅಬ್ಬರಿಸುವ
ಕಡಲಿನಿಂದ ಸುತ್ತುವರಿದಿರುವ, ಉಲಹೇ ಉಲಗು = ಲೋಕವನ್ನೇ.
ಕಡಲಿನಿಂದ ಸುತ್ತುವರಿದಿರುವ ಬೆಟ್ಟದ ತಪ್ಪಲಿನ ಶಿರುಮಾ-

ದುಂಬಿಗಳು ಮುತ್ತಿಕೊಂಡಿರುವ ಬೆಟ್ಟದ ತಪ್ಪಲಿನ ಶಿರುಮಾ-
ಲಿರುಂಜೋಲೈ ಮಲೈ ಷೇತ್ರದಲ್ಲಿ ನೆಲಸಿರುವ, ಅಂದವಾದ ಇಂದ್ರನೀಲ
ಮಣಿಯ ಬಣ್ಣದವನನ್ನು (ಭಗವಂತನನ್ನು) ಪೂಜಿಸುವ ಚಕ್ರವನ್ನು
ಸ್ತುತಿಸುವವನೂ, ಬಹಳ ಹೊಳಪುಳ್ಳ ಉದ್ದವಾದ ವೇಲಾಯುಧವನ್ನು
ಹಿಡಿದವನೂ, ಗದ್ದೆಬಯಲಿನಿಂದ ಸುತ್ತುವರಿದಿರುವ ಶಿರುವಾಲಿ
ನಾಡಿನ ಒಡೆಯನೂ, ತಾಳೆಯ ಮರಗಳ ಬೇಲಿಯುಳ್ಳ ಅಂದವಾದ
ಶಿರುಮಂಗೈ ನಾಡಿನ ಜನರ ನಿರ್ವಾಹಕನೂ ಆದ ಕಲಿಯನು ಬಾಯಿಂದ
ಹಾಡಿದ ಕವಿತೆಯನ್ನು (ಪಾಶುರಗಳನ್ನು) ಶ್ರವಣಿಸಿ (ಕಲಿತುಕೊಂಡು) ಇವನ್ನು ಹಾಡು
ವ ಭಾಗ್ಯವನ್ನುಳ್ಳವರು ಅಬ್ಬರಿಸುವ ಕಡಲಿನಿಂದ ಸುತ್ತುವರಿದಿರುವ ಈ
ಲೋಕವನ್ನೇ ಆಳುವವರಾಗುತ್ತಾರೆ. (10)

ಈ ಶಿರುಮೊಳಿಯ ಕಡೆಯ ಪಾಶುರವಿದು. ಇದನ್ನು 'ಕಲಿತು ಹಾಡುವ ಭಾಗ್ಯವರು' ಎಂದು ಪಾಶುರಗಳ ವೈಶಿಷ್ಟ್ಯವನ್ನು ಇಲ್ಲಿ ಹೇಳಲಾಗಿದೆ. ದೊಡ್ಡದೊಡ್ಡ ಅಲೆಗಳಿಂದ ತುಂಬಿ, ಅಬ್ಬರಿಸುತ್ತಿರುವ ಹಾಲ್ಗಡಲಲ್ಲಿ ಶೇಷಶಯನನಾಗಿ ಪವಡಿಸಿರುವ ಭಗವಂತನು ಅಪಾರ ಕರುಣಾಶಾಲಿ! ನಿಲ್ಲುತ್ತ ನಾನಾರ ಬೇಕೆಂದು ಬಯಸಿದರಾ ಅದು ಅವನಿಗೆ ಸಾಧ್ಯವಿಲ್ಲ. ಭೂಲೋಕದಲ್ಲಿ, ಆಶೆ ಪಾಶಗಳಿಗೆ ಆಕರವಾದ ಇಂದ್ರಿಯ ಚಾಪಲ್ಯಕ್ಕೆ ಸಿಕ್ಕಿಬಿದ್ದು, ಸಂಸಾರವೆಂಬ ಸಂಕೋಲೆಯಿಂದ ಬಾಧಿಸಿಕೊಂಡ

ಕೊನೆಯಿಲ್ಲದ ದುಃಖ-ದಾರಿದ್ರ್ಯಗಳ ಕೋಟಲೆಯನ್ನು ಅನುಭವಿಸುತ್ತಿರುವ ಚೇತನನ ವಿಷಯದಲ್ಲಿ ಸ್ವಾಮಿಗೆ ಮಿತಿಯಿಲ್ಲದ ಕನಿಕರ! ಹೇಗಾದರೂ ಅವನನ್ನು ಉದ್ಧರಿಸಬೇಕೆಂದು ಸ್ವಾಮಿಗೆ ತೀವ್ರವಾದ ಆಸಕ್ತಿ, ಆತುರ!

ಭಗವಂತನನ್ನು ಆಶ್ರಯಿಸಿ, ಅವನ ತಿರುವಡಿಗಳ ಸೇವೆಯನ್ನು ಮಾಡುತ್ತ ಬರುವುದರಿಂದ, ಚೇತನನು ಭಗವಂತನ ಕೃಪಾಕಟಾಕ್ಷಕ್ಕೆ ಪಾತ್ರನಾಗುತ್ತಾನೆ. ಇದನ್ನು ಹೇಗೆ ಸಾಧಿಸಿಕೊಳ್ಳುವುದು ಎಂಬುದನ್ನೇ ಈ ತಿರುಪ್ಪಾವೈಯ ಪಾಶುರಗಳು ಹೇಳುತ್ತಿರುವುದು. ಈ ಕಾರಣದಿಂದ ಅಲ್ಲವೇ ಈ ಪಾಶುರಗಳನ್ನು ಕಲಿತು ಹಾಡುತ್ತಿರುವುದು 'ಭಾಗ್ಯ'ವೆನ್ನುವುದು

ಪಾಶುರಗಳನ್ನು ರಚಿಸಿ ಹಾಡಿರುವವನು ಕಲಿಯನು. ಹೊಳೆಹೊಳೆಯುವ ಖಡ್ಗನಾದ ವೇಲಾಯುಧವನ್ನು ಗುರಿಯಿಟ್ಟು ಪ್ರಯೋಗಿಸುವುದರಲ್ಲಿ ಅವನು ನಿಪುಣನು. ~~ಹ~~ಸೊಂಪಾದ ಗದ್ದೆ ಬಯಲುಗಳಿಂದ ಸುತ್ತುವರಿದು ಅಲಂಕೃತವಾಗಿರುವ ತಿರುವಾಲಿ ನಾಡಿನ ಒಡೆಯನು. ತೋಪುವನಗಳಿಂದ ಶೋಭಿತವಾದ ತಿರುಮಂಗೈ ನಾಡಿನ ಜನರ ನಿರ್ವಾಹಕನು. ಹೀಗೆ, ರಾಜನಾಗಿ ಗೌರವ, ದರ್ಪ, ಪರಾಕ್ರಮಗಳಿಂದ ಮೆರೆಯುವವನಾದರೂ ಕಲಿಯನು ಸೌಜನ್ಯದ ಗಣಿಯೇ! ಭಗವದ್ಭಕ್ತರಲ್ಲಿ ಅಪಾರವಾದ ಪ್ರೀತ್ಯಾದರಗಳನ್ನುಳ್ಳವನು. ಅವರನ್ನು ಸತ್ಕರಿಸಿ, ಪೂಜಿಸುವವನು. ಭಗವದ್ಧ್ಯಾನಾನುಭವದಲ್ಲಿ ಆಳವಾಗಿ ಮುಳುಗಿದ್ದು, ಭಗವಂತನ ದಿವ್ಯ ಕಲ್ಯಾಣಗುಣಗಳನ್ನು, ಲೀಲಾವಿಭೂತಿಗಳನ್ನು, ಮನಮುಟ್ಟುವಂತೆ ಬಾಯಿತುಂಬ ಹೊಗಳಿ ಹಾಡಬಲ್ಲ ಅಪೂರ್ವ ಕವಿ!

ಕಲಿಯನು ರಚಿಸಿ ಹಾಡಿರುವ ಈ ಪಾಶುರಗಳನ್ನು ಕಲಿತು ಹಾಡುವವರು ಸದ್ಗುಣಗಳಿಂದಲೂ ~~ಈ ಭಾ~~ ಭಗವದ್ಭಕ್ತರಾಗಿ, ತಮ್ಮ ಆದರ್ಶಭಕ್ತಿಯಿಂದಲೂ ತಕ್ಕ ಮರ್ಯಾದೆಯನ್ನು ಗಳಿಸಿಕೊಂಡು ರಾಜಮಂಡಲದಲ್ಲಿ ರಾಜಾಧಿರಾಜರಂತೆ ಕಂಗೊಳಿಸಿ ಬಾಳುತ್ತಾರೆ. ಇದಲ್ಲದೆ ಜೀವನವು ಚೆನ್ನಾಗಿ ಸಾಗಿದ ಬಳಿಕ, ಅವರ ಮುಂದಿನ (ಮರಣಾನಂತರದ) ಜೀವನವು ಭಗವತ್ಕಟಾಕ್ಷದಿಂದ ಅಮರತ್ವವನ್ನು ಶಾಶ್ವತಾನಂದವನ್ನು ಅನುಭವಿಸುವುದರಲ್ಲಿ ಸಂದೇಹವೇ ಇಲ್ಲ ಎನಿಸುತ್ತದೆ.

ಅಡಿಯನದೆ: அடிவரவு :- ಮುನ್ನುಡಿ முந்துற, ಇನ್ನೈತ್ತ இண்டை, ~~ಪುಲ್ಲೈ வணங்க கலியில்~~, ಶೂರವೆಲ್ಲ சூர்மை, ವಣಪಿಣಿ பிணி, ಶೀಲ வணங்கலில், ವಿಡಮ விடம், ಶೇನುಡನ் சேனுகன், ವಿದಯಮು புகழிக, ಶುದ್ಧ புந்தி, ವನ್ನಮರ் வண்டமர், (ಮೂವರ் மூவர்)

ಪೆರಿಯ ತಿರುಮೊಳಿ - ಒಂಬತ್ತನೆಯ ದಶಕ - ಒಂಬತ್ತನೆಯ ತಿರುಮೊಳಿ.

பெரிய திருமொழி - ஒன்பதாம் பத்து - ஒன்பதாந்திருமொழி

9. ಮೂವರಿಲ್ ಮುನ್ - மூவரில்முன்

1. மூவரில்முன் முதல்வன் முழங்கார் கடலுட்கிடந்து,
பூவலருந்தி தன்னுள் புவனம்படைத்துண்டுமிழ்ந்த,
தேவர்கள் நாயகனைத் திருமாலிருஞ்சோலை நின்ற,
கோவலர் கோவிந்தனைக் கொடியேரிடை கூடுங்கொலோ?

ಮೂವರಿಲ್ ಮುನ್ ಮುದಲ್ವನ್ ಮುೞಙ್ಗಾರ್ ಕಡಲುಟ್ಕಿಡನ್ದು,
ಪೂವಲರುನ್ದಿ ತನ್ನುಳ್ ಪುವನಮ್ ಪಡೈತ್ತುಣ್ಡುಮಿೞ್ನ್ದ,
ತೇವರ್ಗಳ್ ನಾಯಗನೈತ್ ತಿರುಮಾಲಿರುಞ್ಜೋಲೈ ನಿನ್ಱ,
ಕೋವಲರ್ ಕೋವಿನ್ದನೈಕ್ ಕೊಡಿಯೇರಿಡೈ ಕೂಡುಮ್ ಕೊಲೋ?

ಮೂವರಿಲ್ மூவரில் = ತ್ರಿಮೂರ್ತಿಗಳಲ್ಲಿ, ಮುನ್ ಮುದಲ್ವನ್ முன் முதல்வன் = ಪ್ರಮುಖನಾದವನೂ (ಬಹಳ ಮುಖ್ಯನೂ), ಮುೞಙ್ಗು முழங்கு = ಘೋಷಣೆಯಿಂದ, ಆರ್ ஆர் = ತುಂಬಿರುವ, ಕಡಲುಳ್ கடலுள் = ಕಡಲಲ್ಲಿ, ಕಿಡನ್ದು கிடந்து = ಮಲಗಿ, ಪೂ ಅಲರ್ ಉನ್ದಿ ತನ್ನುಳ್ பூஅலர் உந்தி தன்னுள் = ಸುಂದರವಾಗಿ ಅರಳಿದ ನಾಭಿಯಲ್ಲಿ, ಪುವನಮ್ புவனம் = ಬ್ರಹ್ಮಾಂಡವನ್ನು (ಲೋಕವನ್ನು), ಪಡೈತ್ತು படைத்து = ಪಡೆದು, ಉಣ್ಡು உண்டு = ಕಬಳಿಸಿ, ಉಮಿೞ್ನ್ದ உமிழ்ந்த = ಹೊರಕ್ಕೆ ಹಾಕಿದ, ತೇವರ್ಗಳ್ தேவர்கள் = ದೇವತೆಗಳ (ಅಮರರ), ನಾಯಗನೈ நாயகனை = ಒಡೆಯನನ್ನು, ತಿರುಮಾಲಿರುಞ್ಜೋಲೈ திருமாலிருஞ்சோலை = ತಿರುಮಾಲಿರುಂಜೋಲೈಯಲ್ಲಿ, ನಿನ್ಱ நின்ற = ನಿಲ್ಲುವ, ಕೋವಲರ್ கோவலர் = ಗೋವಳರ, ಕೋವಿನ್ದನೈ கோவிந்தனை = ಗೋವಿಂದನನ್ನು, ಕೊಡಿ ಏರ್ கொடி ஏர் = ಬಳ್ಳಿಯ ಹಾಗೆ, ಇಡೈ இடை = ನಡುವುಳ್ಳವಳು, ಕೂಡುಮ್ ಕೊಲೋ கூடும் கொலோ = ಸೇರುವಳೋ ಏನೋ?

ತ್ರಿಮೂರ್ತಿಗಳಲ್ಲಿ ಬಹಳ ಮುಖ್ಯನಾದವನೂ, ಘೋಷಣೆಯಿಂದ ತುಂಬಿರುವ ಕಡಲಲ್ಲಿ ಮಲಗಿ, ಸುಂದರವಾದ ತನ್ನ ನಾಭಿ ಕಮಲದಲ್ಲಿ ಬ್ರಹ್ಮಾಂಡವನ್ನು (ಲೋಕವನ್ನು) ಪಡೆದು, ಉಂಡು, ಮತ್ತೆ ಅದನ್ನು ಹೊರಕ್ಕೆ ಹಾಕಿದವನೂ, ದೇವತೆಗಳಿಗೆ (ಅಮರರಿಗೆ) ಒಡೆಯನೂ, ತಿರುಮಾಲಿರುಂಜೋಲೈಯಲ್ಲಿ ನಿಲ್ಲುವವನೂ ಆದ ಗೋವಳರ ಗೋವಿಂದನನ್ನು ಬಳ್ಳಿಯ ಹಾಗೆ ನಡುವುಳ್ಳವಳು ಸೇರುತ್ತಾಳೋ ಏನೋ? (1)

ಬ್ರಹ್ಮ, ವಿಷ್ಣು, ಈಶ್ವರ ಎಂಬುವರು ತ್ರಿಮೂರ್ತಿಗಳು. ಸೃಷ್ಟಿ, ಸ್ಥಿತಿ, ಮತ್ತು

Garani Srinivasan

ಲಯ ಕಾರ್ಯಗಳ ನಿರ್ವಾಹಕರು. ~~ಒಬ್ಬನೇ ಆದ, ಎಲ್ಲಕ್ಕೂ ಆದಿಕಾರಣನಾದ~~ ~~ಭಗವಂತನು~~ ಒಂದೇ ಮೂವರಾಗಿ ಪ್ರಕಟವಾಗುವ ಮುಂಚೆ, ಭಗವಂತನು ಒಬ್ಬನೇ ಆಗಿ, ಎಲ್ಲಕ್ಕೂ ಮೂಲಕಾರಣನಾಗಿ, ಬಹುಮುಖ್ಯನಾಗಿದ್ದವನು. ದೊಡ್ಡ ದೊಡ್ಡ ಅಲೆಗಳಿಂದ ತುಂಬಿ ಅಬ್ಬರಿಸುತ್ತಿರುವ ಹಾಲ್ಗಡಲಲ್ಲಿ ಶೇಷಶಯನನಾಗಿ ಪವಡಿಸಿದ್ದವನೂ ಅವನೇ ಆದ, ಅವನ ಸುಂದರವಾದ ನಾಭಿಕಮಲದಲ್ಲಿ ಎಲ್ಲ ಲೋಕಸಾಧನಗಳನ್ನೂ ಚತುರ್ಮುಖ ಬ್ರಹ್ಮನನ್ನು ಅವನ ಮೂಲಕ ಇಡೀ ಬ್ರಹ್ಮಾಂಡವನ್ನು ಸೃಷ್ಟಿಸಿದನು. ಪ್ರಳಯಕಾಲ ಬರುವವರೆಗೆ ತನ್ನ ಸೃಷ್ಟಿಯನ್ನು ನಿರ್ವಹಿಸುತ್ತಾ ಬಂದು, ಪ್ರಳಯ ಕಾಲ ಬಂದಾಗ ಅದೆಲ್ಲವನ್ನು ಒಟ್ಟಾಗಿ ಕಬಳಿಸಿ ಬಿಟ್ಟು, ಮತ್ತೆ ಸೃಷ್ಟಿಗೆ ಅನುಕೂಲವಾದಂತೆ ತನ್ನ ಹೊಟ್ಟೆಯಲ್ಲೇ ಅದನ್ನು ಬೀಜರೂಪದಲ್ಲಿ ಅಡಗಿಸಿಟ್ಟುಕೊಂಡವನು. ಸೃಷ್ಟಿ ಸಮಯ ಬಂದಾಗ ಅದನ್ನು ಮತ್ತೆ ಹೊರ ~~ಹಾಕಿದ~~ ಹಾಕಿದ ಸಮರ್ಥನು. ದೇವತೆಗಳೆಲ್ಲ ಒಡೆಯನು, ಪರಮಪದ ವಾಸಿಗಳಾದ ಅಮರರ ನಿರ್ವಾಹಕನೂ ಅವನೇ. ಬಂದ ಶ್ರೀಕೃಷ್ಣನಾಗಿ ಅವನು ಅವತರಿಸಿ ನಾನಾ ದಿವ್ಯಾದ್ಭುತ ಲೀಲೆಗಳಿಂದ ಜಗತ್ತನ್ನು ಆಶ್ಚರ್ಯಗೊಳಿಸಿದನು. ಒಂದು ಸಲ, ಬಾಲಕೃಷ್ಣನು, ದೇವೇಂದ್ರನ ಕಡುಕೋಪದ ಫಲವಾದ ಬಿರುಸಿನ ಮಳೆಯಿಂದ ಪೀಡಿತನಾಗಿದ್ದ ನಂದಗೋಕುಲದ ~~ಗೋವಳರನ್ನೂ ಗೋವುಗಳನ್ನೂ~~ ಮಗ್ಗುಲಲ್ಲಿದ್ದ ಗೋವರ್ಧನಗಿರಿಯನ್ನೇ ~~ಎತ್ತಿ ಹಿಡಿದು~~ ಕೊಡೆಯಂತೆ ಎತ್ತಿ ಹಿಡಿದು, ಅದರಡಿಯಲ್ಲಿ ಗೋವಳರನ್ನೂ ಗೋವುಗಳನ್ನೂ ರಕ್ಷಿಸಿದನು. ದೇವೇಂದ್ರನು ಇದನ್ನು ಕಂಡು, ನಾಚಿ, ಧರೆಗೆ ಇಳಿದು ಬಂದು "ಆ ಗೋವಳರ ಗೋವಿಂದ"ನನ್ನು ಪೂಜಿಸಿ, ಹರ್ಷಗೊಳಿಸಿದನು.

ಆಳ್ವಾರರು ಹೇಳುತ್ತಾರೆ! ಮಹಾಮಹಿಮನಾದ ಆ ಸ್ವಾಮಿಯೇ ಈಗ ಭಕ್ತರನ್ನು ಉದ್ಧರಿಸುವುದಕ್ಕಾಗಿ ತಿರುಮಾಲಿರುಂಜೋಲೈಮಲೈ ಕ್ಷೇತ್ರದಲ್ಲಿ ನೆಲಸಿದ್ದಾನೆ. ಬೆಳ್ಳಿಯಂತೆ ಕೋಮಲವಾಗಿ ಬೆಳಗುತ್ತಿರುವ ನಡುವುಳ್ಳ ನನ್ನ ಮಗಳು, ಆ ಸ್ವಾಮಿಯೊಡನೆ ಕೂಡಿಕೊಂಡಳೇ ಹೇಗೋ?

ಆಳ್ವಾರರು ತಮ್ಮ ತಿರುವಾಯ್ಮೊಳಿಗಳಲ್ಲಿ "ನನ್ನ ಮಗಳು", "ಯುವತಿ", "ವಿರಹಿಯಾದನಾನು", ~~[illegible]~~ ಇತ್ಯಾದಿಯಾಗಿ ~~[illegible]~~ ಸಂಬೋಧಿಸಿ, ಹೇಳುತ್ತಾರೆ. ಇವೆಲ್ಲವೂ ತಮ್ಮ ಮನಸ್ಸನ್ನು, ತಮ್ಮನ್ನು ಕುರಿತು ಹೇಳಿಕೊಳ್ಳುವುದೇ ಆಗಿದೆ ಎನಿಸುತ್ತದೆ

2 புன்னை வளர் பூம்பொழிலார் பொன்னி சூழரங்க நகருள்
முனைவனை, மூவுலகும் படைத்த முதல் மூர்த்தி தன்னை,
சினை வளர் பூம்பொழில் சூழ் திருமாலிருஞ்சோலை நின்றான்,
கனைகழல் காணுங் கொலோ கயற்கண்ணி எம் காரிகையே.

ಪುನ್ನೈ ವಳರ್ ಪೂಮ್ಪೊಳಿಲಾರ್ ಪೊನ್ನಿ ಶೂಳರಙ್ಗನಗರುಳ್
ಮುನೈವನೈ, ಮೂವುಲಹುಮ್ ಪಡೈತ್ತ ಮುದಲ್ ಮೂರ್ತಿ ತನ್ನೈ,

ತೆನ್ನ ವಳರ್ ಪೂಂಪೊಳಿಲ್ ಶೂಳ್ ತಿರುಮಾಲಿರುಂಜೋಲೈ ನಿನ್ರಾನ್,
ಕನ್ನಕಟಲ್ ಕಾಣುಙ್ಗೊಲೋ ಕಯಲ್ ಕಣ್ಣಿ ಎನ್ ಮಗಳ್ ಕಾದೈಯೇ.

ಪುನ್ನೈ புனை = [redacted] ಸುರಹೊನ್ನೆ ಮರಗಳು, ವಳರ್ வளர = ಬೆಳೆಯುವ, ಪೂ பூ = ಸುಂದರವಾದ, ಪೊಳಿಲ್ பொழில் = ತೋಪುಗಳಿಂದ, ಆರ್ ஆர = ತುಂಬಿರುವ, ಪೊನ್ನಿ பொன்னி = ಕಾವೇರಿನದಿಯಿಂದ, ಶೂಳ್ சூழ் = ಸುತ್ತುವರಿದಿರುವ, ಅರಙ್ಗಮಾನಗರುಳ್ அரங்கமாநகருள் = ಶ್ರೀರಂಗನಗರದಲ್ಲಿ (ಶ್ರೀರಂಗದ ದೇವಾಲಯದಲ್ಲಿ), ಮುನ್ನೈವನ್ முன்னைவன் = ಪ್ರಧಾನನಾಗಿರುವವನನ್ನು (ಭಗವಂತನನ್ನು), ಮೂವುಲಗುಂ மூவுலகம் = ಮೂರು ಲೋಕಗಳನ್ನು, ಪಡೈತ್ತ படைத்த = ಪಡೆದ, ಮುದಲ್ ಮೂರ್ತಿ முதல் மூர்த்தி = ಮುಖ್ಯನಾದ ಮೂರ್ತಿಯನ್ನು. ತೆನ್ನ தென்ன = ಸುಂದರವಾದ, ಮುಗಿಲ್ ಮುகில் = ಮೋಡಗಳು, ವಳರ್ வளர = ಬೆಳೆಯುತ್ತಿರುವ, ಪೂ பூ = ಹೂವಿನ, ಪೊಳಿಲ್ பொழில் = ತೋಪುಗಳಿಂದ, ಶೂಳ್ சூழ் = ಸುತ್ತುವರಿದಿರುವ, ತಿರುಮಾಲಿರುಂಜೋಲೈ திருமாலிருஞ்சோலை = ತಿರುಮಾಲಿರುಂಜೋಲೆ ಕ್ಷೇತ್ರದಲ್ಲಿ, ನಿನ್ರಾನ್ நின்றான் = ನೆಲಸಿರುವವನನ್ನು, ಕನ್ನಲ್ = ಕಾಲಂದುಗೆಗಳನ್ನು ಧರಿಸಿರುವವನನ್ನು, ಕಡಲ್ கடல் = ದೊಡ್ಡ ಮಾಡುತ್ತಿರುವ, ಕಾಣುಂ ಕೊಲೋ காணும் கொலோ = ಕಾಣುವಳೋ ಕಾಣುವ ಕಾಲೋ, ಕಯಲ್ ಕಣ್ಣಿ கயல் கண்ணி = ಮೀನಿನಂತೆ ಕಣ್ಣುಳ್ಳ, ಎನ್ ಮಗಳೇ, ಕಯಲ್ ಕಣ್ಣಿ ಎಂ ಕಾರಿಗೈಯೇ = ನನ್ನ ಕೂಸಾದವಳು.

ಸುರಹೊನ್ನೆ ಮರಗಳು ಬೆಳೆಯುತ್ತಿರುವ ಸುಂದರವಾದ ತೋಪುಗಳಿಂದ ತುಂಬಿರುವ, ಕಾವೇರಿನದಿಯಿಂದ ಸುತ್ತುವರಿದಿರುವ ಶ್ರೀರಂಗದ ದೇವಾಲಯದಲ್ಲಿ ನೆಲಸಿರುವ ಪ್ರಧಾನನನ್ನು, ಮೂರು ಲೋಕಗಳನ್ನು ಪಡೆದ ಮುಖ್ಯನಾದ ಮೂರ್ತಿಯನ್ನು, ಮೋಡಗಳು ಬೆಳೆಯುತ್ತಿರುವ ಹೂವಿನ ತೋಪುಗಳಿಂದ ಸುತ್ತುವರಿದಿರುವ ತಿರುಮಾಲಿರುಂಜೋಲೆ ಕ್ಷೇತ್ರದಲ್ಲಿ ನೆಲಸಿರುವವನನ್ನು, ಕಾಲಂದುಗೆಯನ್ನು ಧರಿಸಿರುವವನನ್ನು, ದೊಡ್ಡ ಮಾಡುತ್ತಿರುವ ಕಾಲಿನವನನ್ನು, ಮೀನಿನಂತೆ ಕಣ್ಣುಳ್ಳ ನನ್ನ ಕೂಸಾದವಳು ಕಾಣುವಳೋ ಹೇಗೋ! (2)

"ಭೂಲೋಕ ವೈಕುಂಠವೆಂದು ಹೆಸರು ಪಡೆದಿರುವುದು ಶ್ರೀರಂಗ ಕ್ಷೇತ್ರ. ಸುಂದರ ಪವಿತ್ರವಾದ ಕಾವೇರಿನದಿಯಿಂದ ಸುತ್ತುವರಿದು, ತೋಪುಗಳಿಂದ ತುಂಬಿರುವ ಸುಂದರ ಸುರಹೊನ್ನೆ ಮರಗಳ ತೋಪುಗಳಿಂದ ತುಂಬಿ ಬಹಳ ರಮ್ಯವಾಗಿರುವ ಅಲ್ಲಿ ಭಗವಂತನು ಶ್ರೀರಂಗರಾಜನಾಗಿ (ಶ್ರೀರಂಗಮನ್ನಾರ್), ನೆಲಸಿದ್ದಾನೆ. ಆಳ್ವಾರರು ಶ್ರೀರಂಗ ಕ್ಷೇತ್ರವನ್ನು ಆ ಸ್ವಾಮಿಯನ್ನು ಸ್ಮರಿಸಿಕೊಳ್ಳುತ್ತಿದ್ದಾರೆ.

ಸ್ವರ್ಗ, ಮರ್ತ್ಯ, ಪಾತಾಳ – ಇವನ್ನು ಮೂರು ಲೋಕಗಳು ಎನ್ನುವುದು ವಾಡಿಕೆ. ಇದುವರೆಗೆ ಬಂದಿರುವ ವಿವರಣೆಯಲ್ಲಿ ನೋಡಿದರೆ, ಆಳ್ವಾರರ ಗಮನದಲ್ಲಿ "ಪಾತಾಳ" ಅಥವಾ "ಅಧೋಲೋಕಗಳು" ಎಂಬುವೇ ಇಲ್ಲವೆನಿಸುತ್ತದೆ. ಅವರಿಗೆ ಏನಿದ್ದರೂ ಭೂಲೋಕ ಸ್ವರ್ಗಾದಿ ಮೇಲಣ ಲೋಕ, ಪರಮಪದ – ಇವು ಮಾತ್ರವೇ ಮುಖ್ಯ. ಇವನ್ನೇ ಇಲ್ಲಿ ಅವರು ಮೂರು ಲೋಕಗಳು ಎಂದು ಕರೆಯುತ್ತಿದ್ದಾರೋ ಹೇಗೋ!

Calari Srinivasan

"ಶಿನೈ ವಳರ್ ಪೂಂಬೊೞಿಲ್ ಶೂೞ್ — சினைவளர் பூம்பொழில் சூழ்" - ಎಂಬುದನ್ನು "ದಟ್ಟವಾದ ಕೊಂಬೆಗಳು ಬೆಳೆದಿರುವ ಸುಂದರವಾದ ತೋಪುಗಳಿಂದ ಸುತ್ತುವರಿದಿರುವ" ಎಂದೂ ಅರ್ಥಮಾಡಬಹುದು.

ತಾಯಿ (ಆಳ್ವಾರರು) ಹಂಬಲಿಸುತ್ತಾಳೆ: ಮೂರು ಲೋಕಗಳನ್ನು ಸೃಷ್ಟಿಸಿದವನೂ, ಶ್ರೀರಂಗ ಕ್ಷೇತ್ರದಲ್ಲಿ ನೆಲಸಿದವನೂ, ಸದ್ದು ಮಾಡುವ ಕಾಲ್ಗಡಗಗಳನ್ನು ಧರಿಸಿರುವವನೂ, ~~ಈಗ~~ ತಿರುಮಾಲಿರುಂಜೋಲೈ ಮಲೈ ಕ್ಷೇತ್ರದಲ್ಲಿ ನೆಲಸಿರುವವನೂ ಆದ ಭಗವಂತನನ್ನು ಮಿಂಚಿನಂತೆ ಸುಂದರವಾದ ಕಣ್ಣುಗಳುಳ್ಳ ನನ್ನ ಹುಡುಗಿಯು ಕಂಡುಕೊಂಡಳೋ ಹೇಗೋ?

3. உண்டுலகேழினையும் ஒரு பாலகனாலிலைமேல்,
கண்டுயில் கொண்டுகந்த கருமாணிக்கமாமலையை,
திண்டிறல் மாகரிசேர் திருமாலிருஞ்சோலைநின்ற,
அண்டர்தங்கோவினையின்று அணுகுங்கொலென்னாயிழையே.

ಉಣ್ಡುಲಹೇೞಿನೈಯುಮ್ ಒರು ಪಾಲಹನಾಲಿಲೈಮೇಲ್,
ಕಣ್ದುಯಿಲ್ ಕೊಣ್ಡುಹಂದ ಕರುಮಾಣಿಕ್ಕಮಾಮಲೈಯೈ,
ತಿಣ್ದಿಱಲ್ ಮಾಕರಿಶೇರ್ ತಿರುಮಾಲಿರುಂಜೋಲೈನಿನ್ಱ,
ಅಣ್ಡರ್ತಂಗೋವಿನೈಯಿನ್ಱು ಅಣುಹುಂಗೊಲೆನ್ನಾಯಿೞೈಯೇ.

ಉಲಹೇೞಿನೈಯುಮ್ உலகேழினையும் = ಏಳು ಲೋಕಗಳನ್ನು, ಉಣ್ಡು உண்டு = ಉಂಡು, ಒರು ஒரு = ಅಪೂರ್ವವಾದ, ಪಾಲಹನ್ பாலகன் = ಬಾಲಕನಾಗಿ, ಆಲ್ ಇಲೈ ஆல் இலை = ಆಲದ ಎಲೆಯಮೇಲೆ, ಕಣ್ದುಯಿಲ್ ಕೊಣ್ಡು கண் துயில் கொண்டு = ಯೋಗನಿದ್ರೆಯಲ್ಲಿ ಪವಡಿಸಿ, ಉಹಂದ உகந்த = ಹರ್ಷಿಸಿದವನೂ, ಕರು கரு = ಕಪ್ಪಾಗಿರುವ, ಮಾಣಿಕ್ಕಮ್ மாணிக்கம் = ರತ್ನದ, ಮಾ மா = ದೊಡ್ಡ (ಶ್ರೇಷ್ಠವಾದ), ಮಲೈಯೈ மலையை = ಬೆಟ್ಟವನ್ನು, (ಬೆಟ್ಟದಂಥ ರೂಪವುಳ್ಳವನನ್ನು), ತಿಣ್ ತಿಱಲ್ திண் திறல் = ಬಹಳ ಬಲವುಳ್ಳ, ಮಾ மா = ಮದ, ಕರಿ ಶೇರ್ கரி சேர் = ಆನೆಗಳು ಸೇರಿರುವ, ತಿರುಮಾಲಿರುಂಜೋಲೈ திருமாலிருஞ்சோலை = ತಿರುಮಾಲಿರುಂಜೋಲೈ ಕ್ಷೇತ್ರದಲ್ಲಿ, ನಿನ್ಱ நின்ற = ನೆಲಸಿರುವವನೂ, ಅಣ್ಡರ್ ತಮ್ அண்டர் தம் = ದೇವತೆಗಳ, ಕೋವಿನೈ கோவினை = ಒಡೆಯನನ್ನು, ಇನ್ಱು இன்று = ಇಂದು, ಅಣುಹುಮ್ ಕೊಲೋ அணுகும் கொலோ = ಕೂಡಿಕೊಳ್ಳುವಳೋ ಹೇಗೋ, ಎನ್ என் = ನನ್ನ, ಆಯ್ ஆய் = ಆಯ್ದ, ಇೞೈಯೇ இழையே = ಆಭರಣವೇ.

ಏಳು ಲೋಕಗಳನ್ನು ಉಂಡು, ಅಪೂರ್ವವಾದ ಬಾಲಕನಾಗಿ ಆಲದೆಲೆಯಲ್ಲಿ ಯೋಗನಿದ್ರೆಯಲ್ಲಿ ಪವಡಿಸಿ ಹರ್ಷಿಸಿದವನೂ, ಕರಿಯ ರತ್ನದ ದೊಡ್ಡ ಬೆಟ್ಟದಂತೆ ರೂಪವುಳ್ಳವನೂ, ಬಹಳ ಬಲವುಳ್ಳ ಮದ್ದಾನೆಗಳು ಕೂಡಿಕೊಂಡಿರುವ ತಿರು-

Garani Srinivasan

ಮಾಲಿರುಂಜೋಲೈಮಲೈ ಕ್ಷೇತ್ರದಲ್ಲಿ ನೆಲಸಿರುವವನೂ, ದೇವತೆಗಳ ಒಡೆಯನೂ ಆದ ಸ್ವಾಮಿಯನ್ನಿಂದು ನನ್ನ ಆಯ್ದ ಆಭರಣವಾದವಳು ಕೂಡಿಕೊಳ್ಳುವಳೋ ದೇನೋ? (3)

ಪ್ರಳಯ ಕಾಲದಲ್ಲಿ ತನ್ನ ಇಡೀ ಸೃಷ್ಟಿಯನ್ನೇ ಕಬಳಿಸುವವನೂ ಅನಂತರ ಅಪಾರವಾದ ಆ ಕಡಲಲ್ಲಿ ಆಲದೆಲೆಯ ಮೇಲೆ ಪುಟ್ಟ ಶಿಶುವಾಗಿ ನಿದ್ರಿಸುತ್ತಾ ಕಲ್ಪಗಳನ್ನು ಕಳೆಯುವವನೂ ಭಗವಂತ. ಸೃಷ್ಟಿ, ಸ್ಥಿತಿಗಳಲ್ಲಿ ಹೇಗೋ ಹಾಗೆಯೇ ಲಯದಲ್ಲೂ ಅಪ್ರತಿಮ ಸಾಮರ್ಥ್ಯವುಳ್ಳವನು ಸ್ವಾಮಿ ಎಂಬುದನ್ನು ಇದು ಸೂಚಿಸುವುದು

'ಮಾಣಿಕ್ಯ' ಎಂಬುದು ನವರತ್ನಗಳಲ್ಲಿ ಒಂದು. ಅದು ಕೆಂಪು ಬಣ್ಣದ್ದು. ಕರಿಯ (ನೀಲಿಯ) ಬಣ್ಣದ ರತ್ನ ಇಂದ್ರನೀಲಮಣಿ ಎಂಬುದು. ಭಗವಂತನ ದೇಹಕಾಂತಿಯನ್ನು ಇಂದ್ರನೀಲ ಮಣಿಯ ಬಣ್ಣಕ್ಕೆ ಹೋಲಿಸುತ್ತಾರೆ.

ಎಲ್ಲ ದೇವತೆಗಳಿಗೂ ದೇವನಾಗಿ, ಒಡೆಯನಾಗಿ, ನಿರ್ವಾಹಕನಾಗಿ ಇರುವವನು ಸ್ವಾಮಿ – ದೇವದೇವನು. ತಿರುಮಾಲಿರುಂಜೋಲೈಮಲೈ ಕ್ಷೇತ್ರದಲ್ಲಿ ನೆಲಸಿರುವವನೂ ಅವನೇ

"ನನ್ನ ಆಯ್ದ ಆಭರಣ" — ಇದು ಉತ್ತಮವಾದ ರೂಪಕ. ಬಹಳ ಬೆಲೆಬಾಳುವ, ಧರಿಸಲು ಆಭರಣಗಳಲ್ಲಿ ಹುಡುಕಿ, ಹುಡುಕಿ, ಸುಂದರವಾದ, ತನಗೆ ಒಪ್ಪುವ ಒಡವೆಯನ್ನು ಆರಿಸಿಕೊಳ್ಳುವ ಹಾಗೆಯೇ (ಮಕ್ಕಳಲ್ಲಿ) ಬಹಳ ಯೋಗ್ಯಳಾದವಳೂ, ಆದರ್ಶ ಗುಣಸ್ವಭಾವಗಳನ್ನುಳ್ಳವಳೂ, ಅನುಪಮ ಲಾವಣ್ಯವತಿಯೂ ಆದವಳು 'ನನ್ನ ಹುಡುಗಿಯೇ' – ಭಗವಂತನನ್ನು ಆಶ್ರಯಿಸ ಬಯಸುವ, ಅವನನ್ನು ಸೇರಬಹುದಾದ, ಒಳ್ಳೆಯ ಚೇತನನ ಚಿತ್ರಣವಿದು

4. சிங்கமதாயவுணன் திறலாகம் முன் கீண்டுகந்த,
பங்கயமாமலர்க்கண் பரனை யெம்பரஞ்சுடரை,
திங்கள் நன்மாமுகில் சேர் திருமாலிருஞ்சோலை நின்ற,
நங்கள் பிரானையின்று நணுகுங்கொலென்னன்னுதலே.

ಶಿಙ್ಗಮದಾಯವುಣನ್ ತಿಱಲಾಗಮ್ ಮುನ್ ಕೀಣ್ಡುಗನ್ದ,
ಪಙ್ಗಯಮಾಮಲರ್ಕ್ಕಣ್ ಪರನೈಯೆಮ್ ಪರಞ್ಜುಡರೈ,
ತಿಙ್ಗಳ್ ನನ್ ಮಾಮುಗಿಲ್ ಶೇರ್ ತಿರುಮಾಲಿರುಞ್ಜೋಲೈ ನಿನ್ಱ,
ನಙ್ಗಳ್ ಪಿರಾನೈಯಿನ್ಱು ನಣುಗುಙ್ಗೊಲ್ ಎನ್ನನ್ನುದಲೇ.

Garani Srinivasan

ಶಿಙ್ಗಮ ಅದು ಆಯ್ சிங்கம் அது ஆய் = ಸಿಂಹದ ಅವತಾರವನ್ನು ತಳೆದು, ಅವ್ವುಣನ್ அவுணன் = ರಾಕ್ಷಸನ, ತಿಱಲ್ ಆಹಮ್ திறல் ஆகம் = ಬಲಿಷ್ಠವಾದ ಎದೆಯನ್ನು, ಮುನ್ முன் = ಹಿಂದೆ ಒಂದುದಿನ, ಕೀಣ್ಡು கீண்டு = ಸೀಳಿ, ಉಹನ್ದ உகந்த = ಹರ್ಷಿಸಿದ, ಪಙ್ಗಯಮಾಮಲರ್ ಕಣ್ பங்கயம் மலர் கண் = ಕಮಲದ ಹೂವಿನಂತೆ ಕಣ್ಣುಳ್ಳವನು, ಪರನೈ பரனை = ಎಲ್ಲರಿಗೂ ಅಧಿಕನಾಗಿ (ಮೇಲ್ಪಟ್ಟು) ಇರುವವನನ್ನು, ಎಮ್ எம் = ನಮ್ಮ, ಪರಂಜುಡರೈ பரஞ்சுடரை = ಪರಂಜ್ಯೋತಿಸ್ವರೂಪವನ್ನು. ಶಿಙ್ಗಳ್ திங்கள் = ಚಂದ್ರನೂ, ನಲ್ நல் = ಒಳ್ಳೆಯ, ಮಾಮುಕಿಲ್ மா முகில் = ದೊಡ್ಡ ಮುಗಿಲೂ, ಶೇರ್ சேர் = ಕೂಡಿಕೊಂಡಿರುವ, ತಿರುಮಾಲಿರುಂಜೋಲೈ ನಿನ್ಱ திருமாலிருஞ்சோலை நின்ற = ತಿರುಮಾಲಿರುಂಜೋಲೈ ಎಂಬ ಕ್ಷೇತ್ರದಲ್ಲಿ ನೆಲಸಿರುವ, ನಙ್ಗಳ್ நங்கள் = ನಮ್ಮ, ಪಿರಾನೈ பிரானை = ಸ್ವಾಮಿಯನ್ನು, ಇನ್ಱು இன்று = ಇಂದು, ನಣುಹುಮ್ ಕೊಲ್ நணுகும் கொல் = ಸಮೀಪಿಸುವಳೋ ಹೇಗೋ, ಎನ್ ನಲ್ ನುದಲೇ என் நல் நுதலே = ನನ್ನ ಅಂದವಾದ ಹಣೆಯನ್ನುಳ್ಳವಳು!

ಹಿಂದೆ, ಒಂದು ದಿನ, ಸಿಂಹದ ಅವತಾರವನ್ನು ತಳೆದು ಬಲಿಷ್ಠನಾದ ರಾಕ್ಷಸನ ಎದೆಯನ್ನು ಸೀಳಿ ಹರ್ಷಿಸಿದ ಕಮಲದ ಹೂವಿನಂತೆ ಕಣ್ಣುಳ್ಳವನೂ, ಎಲ್ಲರಿಗೂ ಮೇಲ್ಪಟ್ಟವನೂ, ನಮ್ಮ ಪರಂಜ್ಯೋತಿಸ್ವರೂಪನೂ, ಚಂದ್ರನೂ ಒಳ್ಳೆಯ ದೊಡ್ಡ ಮೋಡಗಳೂ ಕೂಡಿಕೊಂಡಿರುವ ತಿರುಮಾಲಿರುಂಜೋಲೈ ಕ್ಷೇತ್ರದಲ್ಲಿ ನೆಲಸಿರುವವನೂ ಆದ ನಮ್ಮ ಸ್ವಾಮಿಯನ್ನು ಇಂದು ನನ್ನ ಅಂದವಾದ ಹಣೆಯನ್ನುಳ್ಳವಳು ಸಮೀಪಿಸುವಳೋ ಹೇಗೋ? (4)

ತನ್ನ ಮಗನೇ ಆದರೂ, ಭಗವದ್ಭಕ್ತನಾದ್ದರಿಂದ, ಅವನಿಗೆ - ಪ್ರಹ್ಲಾದನಿಗೆ - ಚಿತ್ರಹಿಂಸೆಯನ್ನು ಕೊಡುತ್ತಿದ್ದ ದುಷ್ಟನೂ ಮಹಾಬಲಿಷ್ಠನೂ ಆದವನು ಹಿರಣ್ಯಕಶಿಪು. ಆಶ್ರಿತರಕ್ಷಕನಾದ ಭಗವಂತನು ನರ-ಹರಿ ರೂಪಿ ಅವತರಿಸಿ, ತನ್ನ ಕೈ ಉಗುರುಗಳಿಂದಲೇ ಹಿರಣ್ಯಕಶಿಪುವಿನ ಎದೆಯನ್ನು ಬಗೆದು ಸೀಳಿ ಬಿಸುಟನು.

ಕಮಲದ ಹೂವಿನಂತೆ ಸುಂದರವೂ ವಿಶಾಲವೂ ಆಕರ್ಷಕವೂ ಆದ ಕಣ್ಣುಳ್ಳವನು ಅವನು - ಆದ್ದರಿಂದ 'ಪಂಕಜಾಕ್ಷನು', 'ಪುಂಡರೀಕಾಕ್ಷನು' ಸ್ವಾಮಿ.

ಇಡೀ ಸೃಷ್ಟಿಗೇ ಮೇಲ್ಪಟ್ಟು, ಇರುವವನು - ಪರನು.

ಕೋಟಿ ಕೋಟಿ ಸೂರ್ಯರಷ್ಟು ತೇಜಸ್ಸಿನಿಂದ ಮೆರೆಯುವ ಪರಂಜ್ಯೋತಿಯೇ ಸ್ವಾಮಿ.

ಪೂರ್ಣಚಂದ್ರನೂ, ದೊಡ್ಡ ದೊಡ್ಡ ಬಿಳಿಯ ಮೋಡಗಳೂ ಗಗನದಲ್ಲಿ ಕೂಡಿಕೊಂಡು ತಿರುಮಾಲಿರುಂಜೋಲೈ ಕ್ಷೇತ್ರದ ಶೋಭೆಯನ್ನು ಹೆಚ್ಚಿಸುವರು. ಅಲ್ಲಿ, ಭಕ್ತರ ಉದ್ಧಾರಕ್ಕಾಗಿ ಭಗವಂತನು ದಿವ್ಯಸುಂದರನಾಗಿ ನೆಲಸಿದ್ದಾನೆ.

"ನನ್ನ ಅಂದವಾದ ಹಣೆಯನ್ನುಳ್ಳವಳು" — ಬಳ್ಳಿಯ ಹಣೆ, ಮುಖ-
ಇವು ದೇಹದ ಸೌಂದರ್ಯವನ್ನು ಹೇಳುವುವು. "ಹಣೆ- ನುದಲ್' ಎಂಬುದನ್ನು
'ಅದೃಷ್ಟ, ಭಾಗ್ಯ' ಎಂದು ಅರ್ಥಮಾಡಿದರೆ, ಭಗವಂತನನ್ನು ಪ್ರೀತಿಸುತ್ತಿ
ರುವವಳು 'ಸುಂದರಿಯೂ ಭಾಗ್ಯವತಿಯೂ' ಆಗಿದ್ದಾಳೆ ಎಂದು ವಿವರಿಸಬಹುದು.
ಭಗವಂತನ ಕಡೆಗೆ ವಾಲುವವರೂ, ಅವನನ್ನು ಪ್ರೀತಿಸುವವರೂ, ಅವನನ್ನು
ಸೇರುವವರೂ, ನಿಜವಾಗಿಯೂ ಭಾಗ್ಯಶಾಲಿಗಳೇ!

5. தானவன் வேள்வி தன்னில் தனியே குறளாய்நிமிர்ந்து,
வானமும் மண்ணகமுமளந்த திரிவிக்கிரமன்,
தேனமர் பூம்பொழில் சூழ் திருமாலிருஞ்சோலை நின்ற,
வானவர் கோனையின்று வணங்கித் தொழுவல்லள் கொலோ.

ತಾನವನ್ ವೇಳ್ವಿ ತನ್ನಿಲ್ ತನಿಯೇ ಕುಱಳಾಯ್ ನಿಮಿರ್ನ್ದು,
ವಾನಮುಮ್ ಮಣ್ಣಹಮುಮಳನ್ದ ತಿರಿವಿಕ್ಕಿರಮನ್,
ತೇನಮರ್ ಪೂಮ್ಪೊಳಿಲ್ ಶೂಳ್ ತಿರುಮಾಲಿರುಂಜೋಲೈ ನಿನ್ಱ,
ವಾನವರ್ ಕೋನೈಯಿನ್ಱು ವಣಙ್ಗಿ ತ್ತೊಳುವಲ್ಲಳ್ ಕೊಲೋ.

ತಾನವನ್ தானவன் = ದಾನವನ, ವೇಳ್ವಿ ತನ್ನಿಲ್ வேள்வி தன்
ணில் = ಯಜ್ಞದಲ್ಲಿ, ತನಿಯೇ தனியே = ಒಂಟಿಯಾಗಿ, ಕುಱಳ್ ಆಯ್
குறள் ஆய் = ಬ್ರಹ್ಮಚಾರಿಯಾಗಿ, ನಿಮಿರ್ನ್ದು நிமிர்ந்து = ಬೆಳೆದು,
ವಾನಮುಮ್ வானமும் = ಮೇಲಣಲೋಕಗಳನ್ನು, ಮಣ್ ಅಹಮುಮ್
மண் அகமும் = ಭೂಲೋಕವನ್ನೂ, ಅಳನ್ದ அளந்த = ಅಳೆದುಕೊಂಡ,
ತಿರಿವಿಕ್ಕಿರಮನ್ திரிவிக்கிரமன் = ತ್ರಿವಿಕ್ರಮನು, ತೇನ್ ಅಮರ್
தேன் அமர் = ದುಂಬಿಗಳು (ಜೇನು) ತುಂಬಿರುವ, ಪೂ பூ = ಸುಂದರವಾದ,
ಪೊಳಿಲ್ பொழில் = ತೋಟಗಳಿಂದ, ಶೂಳ್ சூழ் = ಸುತ್ತುವರಿದಿರುವ,
ತಿರುಮಾಲಿರುಂಜೋಲೈ ನಿನ್ಱ திருமாலிருஞ்சோலை நின்ற =
ತಿರುಮಾಲಿರುಂಜೋಲೈಯೆಂಬ ಕ್ಷೇತ್ರದಲ್ಲಿ ನೆಲಸಿರುವ, ವಾನವರ್ வான
வர் = ದೇವತೆಗಳ (ಅಮರರ), ಕೋನೈ கோனை = ಒಡೆಯನನ್ನು,
ವಣಙ್ಗಿ வணங்கி = ನಮಸ್ಕರಿಸಿ, ತೊಳುವಲ್ಲಳ್ ಕೊಲೋ தொழு
வல்லள் கொலோ = ಪೂಜಿಸಬಲ್ಲಳೋ ಏನೋ?

ದಾನವನ ಯಜ್ಞದಲ್ಲಿ ಒಂಟಿಯಾದ ಬ್ರಹ್ಮಚಾರಿಯಾಗಿ ಅವತರಿಸಿದವನು,
ಬೆಳೆದು ಮೇಲಣಲೋಕಗಳನ್ನೂ ಭೂಲೋಕವನ್ನೂ ಅಳೆದುಕೊಂಡ ತ್ರಿವಿಕ್ರಮ
ನು, ದುಂಬಿಗಳು ತುಂಬಿರುವ ಸುಂದರವಾದ ತೋಟಗಳಿಂದ ಸುತ್ತುವರಿದಿರುವ
ತಿರುಮಾಲಿರುಂಜೋಲೈಯೆಂಬ ಕ್ಷೇತ್ರದಲ್ಲಿ ನೆಲಸಿರುವವನೂ ಆದ ದೇವದೇವನನ್ನು
(ನನ್ನ ಹುಡುಗಿಯು) ಇಂದು ನಮಸ್ಕರಿಸಿ, ಪೂಜಿಸಬಲ್ಲಳೋ ಏನೋ? (5)

ಭಗವಂತನಿಗೆ ಅತ್ಯಂತ ಪ್ರಿಯನಾದ ಭಕ್ತನು ಪ್ರಹ್ಲಾದ. ಅವನ ಮೊಮ್ಮಗ
ನಾದ ದಾನವನೇ ಬಲಿಚಕ್ರವರ್ತಿ. ಮಹಾ ದಾನಿಯೆಂದು ಪ್ರಸಿದ್ಧನಾದವನು.
ಭಕ್ತನ ವಂಶವೆಲ್ಲ ಭಗವಂತನಿಗೆ ಪ್ರಿಯವಾದದ್ದೇ! ಬಲಿಚಕ್ರವರ್ತಿಯನ್ನು ಉದ್ಧರಿ

Garani Srinivasan

ಪ್ರದಕ್ಷಿಣ ಸ್ವಾಮಿಯು ಅಪೂರ್ವ ಸುಂದರನಾದ ಕುಳ್ಳ ಬ್ರಹ್ಮಚಾರಿಯಾಗಿ
ರೂಪಗೊಂಡು ಪ್ರವೇಶಿಸಿದನು. ತನ್ನ ಹೆಜ್ಜೆಗಳಲ್ಲಿ ಮೂರೇ ಮೂರು ಹೆಜ್ಜೆಗಳ
ನೆಲವನ್ನು ಬೇಡಿ, ಅವನಿಂದ ಪಡೆದು ಕೊಂಡನು. ಆ ಕೂಡಲೇ, ಅಲ್ಲಿಯೇ,
ಸ್ವಾಮಿಯು ಅದ್ಭುತಾಕಾರವಾಗಿ ಬೆಳೆದು, ಇಡಿಯ ಭೂಮಂಡಲವನ್ನು ತನ್ನ
ಒಂದು ಹೆಜ್ಜೆಯಿಂದ ಅಳೆದುಬಿಟ್ಟನು. ಮೇಲಣ ಎಲ್ಲ ಲೋಕಗಳನ್ನೂ ತನ್ನ
ಇನ್ನೊಂದು ಹೆಜ್ಜೆಯಿಂದ ಅಳೆದುಬಿಟ್ಟನು. ತನ್ನ ಮೂರನೆಯ ಹೆಜ್ಜೆಯನ್ನು
ಬಲಿಚಕ್ರವರ್ತಿಯ ತಲೆಯಮೇಲಿಟ್ಟು, ಅವನನ್ನು ತನ್ನ ಪೂರ್ಣಾನುಗ್ರಹಕ್ಕೆ
ಒಳಪಡಿಸಿಕೊಂಡನು. ಸ್ವಾಮಿಯು ತ್ರಿವಿಕ್ರಮನಾದದ್ದು ಹೀಗೆ.
ಬ್ರಹ್ಮಾದಿ ದೇವತೆಗಳಿಗೂ, ಪರಮಪದವಾಸಿಗಳಾದ ಅಮರರಿಗೂ
ಅವನು ದೇವನು - ಆದ್ದರಿಂದ, ದೇವಾಧಿದೇವನು

ಪಾಶುರದ ತಾಯಿ ಹಂಬಲಿಸುತ್ತಾಳೆ: ಸುಂದರಿಯಾದ ನನ್ನ ಹುಡುಗಿಯು ತಿರುಮಾಲಿರುಂಜೋಲೈ ಮಲೈ ಕ್ಷೇತ್ರದಲ್ಲಿ ನೆಲೆಸಿರುವ ನಮ್ಮ ದೇವದೇವನಿಗೆ, ಕೈಮುಗಿದು, ಎರಗಿ, ಆತನ ತಿರುವಡಿಗಳನ್ನು ಪೂಜಿಸಿ ಭಾಗ್ಯಶಾಲಿಯಾಗುತ್ತಾಳೋ, ಹೇಗೋ?

6. நேசமிலாதவர்க்கும் நினையாதவர்க்குமரியான்,
வாசமலர்ப்பொழில்சூழ் வடமாமதுரைப்பிறந்தான்,
தேசமெல்லாம் வணங்கும் திருமாலிருஞ்சோலைநின்ற,
கேசவநம்பிதன்னைக் கெண்டையொண்கண்ணி காணுங்கொலோ.

ನೇಶಮಿಲಾದವರ್ಕ್ಕುಮ್ ನಿನೈಯಾದವರ್ಕ್ಕು ಮರಿಯಾನ್,
ವಾಶಮಲರ್ಪ್ಪೊೞಿಲ್ ಶೂೞ್ ವಡಮಾಮದುರೈಪ್ಪಿಱನ್ದಾನ್,
ತೇಶಮೆಲ್ಲಾಮ್ ವಣಙ್ಗುಮ್ ತಿರುಮಾಲಿರುಞ್ಜೋಲೈ ನಿನ್ಱ,
ಕೇಶವನಮ್ಬಿ ತನ್ನೈಕ್ಕೆಣ್ಡೈಯೊಣ್ ಕಣ್ಣಿ ಕಾಣುಙ್ಗೊಲೋ.

ನೇಶಮ್ நேசம் = ಭಕ್ತಿ, ಆಸಕ್ತಿಗಳು, ಇಲಾದವರ್ಕ್ಕುಮ್ இலாதவர்க்கும் = ಇಲ್ಲದವರಿಗೂ, ನಿನೈಯಾದವರ್ಕ್ಕುಮ್ நினையாதவர்க்கும் = ನೆನೆಯದೆ ಇರುವವರಿಗೂ, ಅರಿಯಾನ್ அரியான் = ಸುಲಭನಲ್ಲ, (ದುರ್ಲಭನು), ವಾಶಮ್ வாசம் = ಪರಿಮಳವುಳ್ಳ, ಮಲರ್ மலர் = ಹೂಗಳಿಂದ ಕೂಡಿದ (ತುಂಬಿದ), ಪೊೞಿಲ್ பொழில் = ತೋಪುಗಳಿಂದ, ಶೂೞ್ சூழ் = ಸುತ್ತುವರಿದಿರುವ, ವಡಮಾಮದುರೈ வடமாமதுரை = ಮಧುರಾಪುರಿಯಲ್ಲಿ, ಪಿಱನ್ದಾನ್ பிறந்தான் = ಹುಟ್ಟಿದವನು, ತೇಶಮ್ ಎಲ್ಲಾಮ್ தேசம் எல்லாம் = ಎಲ್ಲಾ ದೇಶಗಳವರೂ, ವಣಙ್ಗುಮ್ வணங்கும் = ನಮಸ್ಕರಿಸುವ, ತಿರುಮಾಲಿರುಞ್ಜೋಲೈ திருமாலிருஞ்சோலை = ತಿರುಮಾಲಿರುಂಜೋಲೈ ಮಲೈ ಕ್ಷೇತ್ರದಲ್ಲಿ, ನಿನ್ಱ நின்ற = ನೆಲೆಸಿರುವ, ಕೇಶವನ್ கேசவன் = ಸುಂದರವಾದ ಕೇಶರಾಶಿಯನ್ನುಳ್ಳ (ಕೇಶವ ಎಂಬ), ನಮ್ಬಿ ತನ್ನೈ நம்பி தன்னை = ಸ್ವಾಮಿಯನ್ನು,

ಕೆಣ್ಡೈ கெண்டை = ಕೆಂಡೆ ಮೀನಿನಂತೆ, ಒಣ್ ஒண் = ಒಪ್ಪಾದ (ಸುಂದರವಾದ), ಕಣ್ ಕண்ணி = ಕಣ್ಣುಳ್ಳವಳು, ಕಾಣುಮ್ ಕೊಲೋ காணும் கொலோ = ಕಾಣುತ್ತಾಳೋ ಹೇಗೋ?

ಭಕ್ತಿ ಆಸಕ್ತಿಗಳು ಇಲ್ಲದವರಿಗೆ, ನೆನೆಯದವರಿಗೆ ದುರ್ಲಭನೂ, ಪರಿಮಳಿಸುವ ಹೂಗಳಿಂದ ತುಂಬಿದ ತೋಪುಗಳಿಂದ ಸುತ್ತುವರಿದಿರುವ ಮಧುರಾಪುರಿಯಲ್ಲಿ ಹುಟ್ಟಿದವನೂ, ಎಲ್ಲಾ ದೇಶದವರೂ ನಮಸ್ಕರಿಸುವ ತಿರುಮಾಲಿರುಂಜೋಲೆ ಎಂಬ ಕ್ಷೇತ್ರದಲ್ಲಿ ನೆಲಸಿರುವವನೂ, ಸುಂದರವಾದ ಕೇಶರಾಶಿಯುಳ್ಳ, 'ಕೇಶವ' ಎಂಬ ಸ್ವಾಮಿಯನ್ನು ಕೆಂಡೆ ಮೀನಿನಂತೆ ಒಪ್ಪಾದ ಕಣ್ಣುಳ್ಳವಳು ಕಾಣುತ್ತಾಳೋ ಹೇಗೋ? (6)

ಭಗವಂತನನ್ನು ಪಡೆಯಬೇಕೆಂದು ಅವನನ್ನು ಒಲಿಸಿಕೊಳ್ಳಬೇಕೆಂದು ಆದರವುಳ್ಳ ಆಸಕ್ತಿಯುಳ್ಳವರು ಅದಕ್ಕೆ ತಕ್ಕ ಕಾರ್ಯಗಳನ್ನು ಮಾಡುವುದರಲ್ಲಿ ವರಾಗಿ ಇರುವವರಿಗೆ ಭಕ್ತಿ ಹೆಚ್ಚುತ್ತಾ ಹೋಗುವುದು. ಭಗವಂತನ ದಿವ್ಯನಾಮಗಳನ್ನು ಜಪಿಸುವುದು, ಧ್ಯಾನಿಸುವುದು, ಕೀರ್ತಿಸುವುದು, ಸ್ವಾಮಿಯ ಕಲ್ಯಾಣಗುಣಗಳ ಎಡೆಬಿಡದೆ ಚಿಂತಿಸುವುದು – ಇವುಗಳಿಂದ ಭಗವಂತನಲ್ಲಿ ಭಕ್ತಿಯು ಬಲಶಾಲಿಯಾಗುವುದು. ಈ ಬಗೆಯ ಹಂಬಲವೇ ಇಲ್ಲದವರಿಗೆ ಭಗವಂತನು ಒಲಿಯುವುದಾದರೂ ಹೇಗೆ? ಅವರಿಗೆ ಸ್ವಾಮಿಯು ದುರ್ಲಭನು.

ತಾಯಿ ಹಂಬಲಿಸುತ್ತಾಳೆ: ಮಧುರಾನಗರಿಯಲ್ಲಿ ಶ್ರೀಕೃಷ್ಣನಾಗಿ ಅವತರಿಸಿದವನೂ, ಸುಂದರವಾದ ಕೇಶರಾಶಿಯುಳ್ಳವನೂ, 'ಕೇಶವ' ಎಂಬ ಹೆಸರಿನಿಂದ ಪ್ರಸಿದ್ಧನಾದವನೂ, ಎಲ್ಲ ದೇಶದ ಜನರಿಂದಲೂ ಕೊಂಡಾಡಿಸಿಕೊಳ್ಳುವವನೂ, ತಿರುಮಾಲಿರುಂಜೋಲೆ ಎಂಬ ಕ್ಷೇತ್ರದಲ್ಲಿ ನೆಲಸಿರುವವನಾಗಿ ಆದ ಭಗವಂತನನ್ನು ಮೀನಿನಂತೆ ಚಪಲ ಚಂಚಲವಾದ ಸುಂದರವಾದ ಕಣ್ಣುಳ್ಳವಳು ಹುಡುಗಿಯು ಕಾಣುತ್ತಾಳೋ ಹೇಗೋ!

7. புள்ளினை வாய்பிளந்து பொருமாகரி கொம்பொசித்து,
கள்ளச்சகடுதைத்த கருமாணிக்க மாமலையை,
தென்னருவி கொழிக்கும் திருமாலிருஞ்சோலை நின்ற,
வள்ளலை வாணுதலாள் வணங்கித் தொழ வல்லள் கொலோ.

ಪುಳ್ಳಿನೈ ವಾಯ್ ಪಿಳನ್ದು ಪೊರುಮಾ ಕರಿ ಕೊಮ್ಬೊಶಿತ್ತು,
ಕಳ್ಳಚ್ಚಗಡುದೈತ್ತ ಕರುಮಾಣಿಕ್ಕ ಮಾಮಲೈಯೈ,
ತೆಳ್ಳರುವಿ ಕೊೞಿಕ್ಕುಮ್ ತಿರುಮಾಲಿರುಂಜೋಲೈ ನಿನ್ಱ
ವಳ್ಳಲೈ ವಾಣುದಲಾಳ್ ವಣಙ್ಗಿತ್ತೊೞ ವಲ್ಲಳ್ ಕೊಲೋ.

ಪುಳ್ಳಿನೈ புள்ளினை = ಪಕ್ಷಿಯ, ವಾಯ್ வாய் = ಬಾಯನ್ನು, ಪಿಳನ್ದು பிளந்து = ಸೀಳಿದವನೂ, ಪೊರು பொரு = ಹೋರಾಡುವ, ಮಾಕರಿ மாகரி = ಸಲಗದ, ಕೊಮ್ಬು கொம்பு = ದಂತವನ್ನು, ಒಶಿತ್ತು ஒசித்து = ಮುರಿದು ಹಾಕಿದವನೂ, ಕಳ್ಳಮ್ கள்ளம் = ವಂಚನೆಯ, ಶಗಡು சகடு = ಶಕಟವನ್ನು,

ಉದೈತ್ತ உதைத்த = ಒದೆದವನೂ, ಕರು ಮಾಣಿಕ್ಕಮಾ கருமாணிக்கம் =
ಕರಿಯ ಮಾಣಿಕ್ಯದ, ಮಾ ಮಲೈಯೈ மாமலையை = ದೊಡ್ಡ ಬೆಟ್ಟವನ್ನು,
ಕೆಳ್ ஆர்ந் = ಕೆಳೆಯಾದ, ಅರುವಿ அருவி = ಬೆಟ್ಟದ ತೊರೆಗಳು,
ಕೊಳಿಕ್ಕುವ கொழிக்கும் = ಹರಿಯುತ್ತಿರುವ, ತಿರುಮಾಲಿರುಂಜೋಲೈ
திருமாலிருஞ்சோலை = ತಿರುಮಾಲಿರುಂಜೋಲೆ ಎಂಬ ಕ್ಷೇತ್ರದಲ್ಲಿ,
ನಿನ್ರ நின்ற = ನೆಲಸಿರುವ, ವಳ್ಳಲೈ வள்ளலை = ಪರಮಉದಾರ
ಯನ್ನು, ವಾಳ್ ನುದಲಾಳ್ வாள் நுதலாள் = ತೇಜಸ್ಸಿನಿಂದ ಕೂಡಿದ
ಹಣೆಯುಳ್ಳವಳು ವಣಂಗಿ வணங்கி = ನಮಸ್ಕರಿಸಿ, ತೊೞುವಲ್ಲಳ್
ಕೊಲೋ தொழ வல்லள் = ಪೂಜಿಸಬಲ್ಲಳೋ ಹೇಗೋ?

ಪಕ್ಷಿಯ ಬಾಯನ್ನು ಸೀಳಿದವನೂ, ಹೋರಾಡುವ ಮದಗಜದ ದಂತವನ್ನು ಮುರಿದವನೂ, ವಂಚನೆಯ ಶಕಟವನ್ನು ಒದೆದವನೂ, ಕರಿಯ ಮಾಣಿಕ್ಯದ ದೊಡ್ಡ ಬೆಟ್ಟದಂತವನೂ, ಕೆಳೆಯಾದ ಬೆಟ್ಟದ ತೊರೆಗಳು ಹರಿಯುವ ತಿರುಮಾಲಿರುಂಜೋಲೆ ಎಂಬ ಕ್ಷೇತ್ರದಲ್ಲಿ ನೆಲಸಿರುವವನೂ, ಆದ ಸ್ವಾಮಿಯನ್ನು ತೇಜಸ್ಸಿನಿಂದ ಕೂಡಿದ ನನ್ನ ಹುಡುಗಿಯು ನಮಸ್ಕರಿಸಿ (7)
ಪೂಜಿಸಬಲ್ಲಳೋ ಹೇಗೋ?

ಶ್ರೀ ಕೃಷ್ಣಾವತಾರದ ಕೆಲವು ಪ್ರಸಂಗಗಳ ಸೂಚನೆ ಇಲ್ಲಿದೆ: ಬಕಪಕ್ಷಿಯ ರೂಪದಲ್ಲಿ ಕೊಲ್ಲಲು ಬಂದ ಬಕಾಸುರನ ಕೊಕ್ಕನ್ನು ಹಿಡಿದು, ಅಗಲಿಸಿ, ಸೀಳಿ, ಕೃಷ್ಣನು ಅವನನ್ನು ಕೊಂದುಹಾಕಿದನು.

ಮಧುರೆಗೆ ಧನುರ್ಯಾಗಕ್ಕೆಂದು ಬಂದ ಕೃಷ್ಣನನ್ನು ಹೆಬ್ಬಾಗಿಲಲ್ಲೇ ಕೊಲ್ಲಲು ಸಿದ್ಧವಾಗಿ ನಿಂತಿದ್ದ, ಹೋರಾಟದಲ್ಲಿ ನುರಿತ, ಕುವಲಯಾಪೀಡವೆಂಬ ಮದ್ದಾನೆಯನ್ನು ಕೃಷ್ಣನು ದಿಟ್ಟತನದಿಂದ ಎದುರಿಸಿ, ಅದರ ದಂತವನ್ನೇ ಮುರಿದು, ಅದರಿಂದಲೇ ಆ ಆನೆಯನ್ನು ಕೊಂದುಹಾಕಿದನು.

ಕೃಷ್ಣನು ಇನ್ನೂ ಎಳೆಯ ಮಗು. ಆಗ ಶಕಟನೆಂಬ ರಾಕ್ಷಸನು ಬಂಡಿಯ ರೂಪದಲ್ಲಿ, ವಂಚನೆಯಿಂದ ಮಗುವಿನ ಮೇಲೆ ಹೊರಳಿ ಕೊಲ್ಲಲು ಬಂದಾಗ, ಮಗುವು ತನ್ನ ಪುಟ್ಟ ಕಾಲನ್ನು ಝಾಡಿಸಿ, ಶಕಟನನ್ನು ಪುಡಿಪುಡಿ ಮಾಡಿದನು.

ಇಂದ್ರನೀಲ ಮಣಿಯ ಬೆಟ್ಟವೋ ಎಂಬಂತೆ ಭ್ರಾಂತಿಸುವಂತ ಸುಂದರವಾದ ಆಕರ್ಷಕವಾದ ದೇಹಕಾಂತಿಯುಳ್ಳವನು ಸ್ವಾಮಿ.

ರಮ್ಯವೂ ಪರಿಶುದ್ಧವೂ ಆದ ತಿರುಮಾಲಿರುಂಜೋಲೆ ಎಂಬ ಕ್ಷೇತ್ರದಲ್ಲಿ ನೆಲಸಿರುವ ಪರಮ ಸಮರ್ಥನಾದ ಸ್ವಾಮಿಯನ್ನು ತೇಜಸ್ವಿನಿಯೂ ಮುಖವುಳ್ಳ ನನ್ನ ಹುಡುಗಿಯು ನಮಸ್ಕರಿಸಿ ಪೂಜಿಸಬಲ್ಲಳೋ ಹೇಗೋ — ಎಂದು ಹಂಬಲಿಸುತ್ತಾಳೆ ತಾಯಿ.

8. பார்த்தனுக்கன்றருளிப் பாரதத்தொரு தேர் முன் நின்று,
காத்தவன்றன்னை விண்டோர் கருமாணிக்க மாமலையை
தீர்த்தனைப் பூம்பொழில்சூழ் திருமாலிருஞ்சோலை நின்ற
மூர்த்தியை கைத்தொழவும் முடியுங்கொல் எண்மொய்குழற்கே.

ಪಾರ್ತ್ತನುಕ್ಕನ್ರರುಳಿ ಪ್ಪಾರದತ್ತೊರು ತೇರ್ ಮುನ್ ನಿನ್ರು,
ಕಾತ್ತವನ್ರನ್ನೈ ವಿಣ್ಡೋರ್ ಕರುಮಾಣಿಕ್ಕ ಮಾ ಮಲೈಯೈ,
ತೀರ್ತ್ತನೈಪ್ಪೂಮ್ಪೊಳಿಲ್ ಶೂಳ್ ತಿರುಮಾಲಿರುಂಜೋಲೈ ನಿನ್ರ,
ಮೂರ್ತ್ತಿಯೈ ಕೈತ್ತೊಳವುಮ್ ಮುಡಿಯುಙ್ಗೊಲ್? ಎನ್ ಮೊಯ್
ಕುಳಲ್ಕೇ.

ಪಾರ್ತ್ತನುಕ್ಕು பார்த்தனுக்கு = ಪಾರ್ಥನಿಗೆ, ಅನ್ರು அன்று = ಅಂದು, ಅರುಳಿ அருளி = ಕೃಪೆಮಾಡಿದವನನ್ನು, ಪ್ಪಾರದತ್ತು பாரதத்து = ಮಹಾಭಾರತ ಯುದ್ಧದಲ್ಲಿ, ಒರು ஒரு = ಸಾಟಿಯಿಲ್ಲದ, ತೇರ್ ಮುನ್ தேர்முன் = ರಥದ ಮುಂದುಗಡೆ, ನಿನ್ರು நின்று = ನಿಂತು, ಕಾತ್ತವನ್ ತನ್ನೈ காத்தவன் தன்னை = ರಕ್ಷಿಸಿದವನನ್ನು, ವಿಣ್ಡೋರ್ விண்டோர் = ನಿತ್ಯಸೂರಿಗಳ (ಅಮರರ), ಕರುಮಾಣಿಕ್ಕ ಮಾಮಲೈಯೈ கருமாணிக்க மாமலையை = ಕರಿಯ ಮಾಣಿಕ್ಯದ ದೊಡ್ಡ ಬೆಟ್ಟದಂತಿರುವವನನ್ನು, ತೀರ್ತ್ತನೈ தீர்த்தனை = ಪವಿತ್ರನನ್ನು, ಪ್ಪೂ பூ = ಸುಂದರವಾದ, ಪೊಳಿಲ್ பொழில் = ತೋಟಗಳಿಂದ, ಶೂಳ್ சூழ் = ಸುತ್ತುವರಿದಿರುವ, ತಿರುಮಾಲಿರುಂಜೋಲೈ ನಿನ್ರ திருமாலிருஞ்சோலை நின்ற = ತಿರುಮಾಲಿರುಂಜೋಲೈಯಲ್ಲಿರುವ, ಮೂರ್ತ್ತಿಯೈ மூர்த்தியை = ಅರ್ಚಾಸ್ವರೂಪಿಯನ್ನು, ಕೈತ್ತೊಳವುಮ್ கைத்தொழவும் = ಪೂಜಿಸುವುದಕ್ಕೆ, ಮುಡಿಯುಮ್ ಕೊಲ್ முடியும் கொல் = ಸಾಧ್ಯವಾಗುವುದೋ ಏನೋ? ಎನ್ ஏண் = ನನ್ನ, ಮೊಯ್ மொய் = ದಟ್ಟವಾಗಿ ಬೆಳೆದಿರುವ, ಕುಳಲ್ಕೇ குழற்கே = ತಲೆಗೂದಲುಳ್ಳವಳಿಗೆ.

ಅಂದು ಪಾರ್ಥನಿಗೆ ಕೃಪೆದೋರಿದವನನ್ನು, ಮಹಾಭಾರತ ಯುದ್ಧದಲ್ಲಿ ಸಾಟಿಯಿಲ್ಲದ ರಥದ ಮುಂದುಗಡೆ ನಿಂತು ರಕ್ಷಿಸಿದವನನ್ನು, ನಿತ್ಯಸೂರಿಗಳ (ಅಮರರ) ಕರಿಯ ಮಾಣಿಕ್ಯದ ದೊಡ್ಡ ಬೆಟ್ಟದಂತಿರುವವನನ್ನು, ಪರಮ ಪವಿತ್ರನನ್ನು, ಸುಂದರವಾದ ತೋಟಗಳಿಂದ ಸುತ್ತುವರಿದಿರುವ ತಿರುಮಾಲಿರುಂಜೋಲೈ ಮಲೆ ಕ್ಷೇತ್ರದಲ್ಲಿ ನೆಲಸಿರುವ ಅರ್ಚಾಸ್ವರೂಪಿಯನ್ನು, ~~[illegible]~~ ಪೂಜಿಸಲು ನನ್ನ ದಟ್ಟವಾದ ತಲೆಗೂದಲುಳ್ಳವಳಿಗೆ ಸಾಧ್ಯವಾಗುವುದೋ ಏನೋ? (8)

ಪಾರ್ಥನಿಗೆ ಕೃಪೆದೋರಿದವನನ್ನು — ಮಹಾಭಾರತ ಯುದ್ಧದ ಮೊದಲಲ್ಲಿ,

Garani Srinivasan

ತಾನು ಯಾರ ಯಾರ ಮೇಲೆ ಯುದ್ಧ ಮಾಡಬೇಕಾಗಿದೆಯೆಂದು ನೋಡಿದ ಅರ್ಜುನನಿಗೆ ವ್ಯಾಕುಲವಾಯಿತು. ಭ್ರಾಂತಿ ಬಂತು. ತಾನು ಮಾಡುವುದು ತಪ್ಪೆಂದು ತೋರಿತು ಕೂಡಲೇ ಅವನು ಗಾಂಡೀವವನ್ನು ಕೆಳಗಿಟ್ಟು 'ಇನ್ನು ಯುದ್ಧ ಮಾಡೆನು' ಎಂದು ನಿರ್ಧರಿಸಿದನು. ಆಗ ಶ್ರೀಕೃಷ್ಣನು ಅವನ ದಿವ್ಯರಥಕ್ಕೆ ಸಾರಥಿಯಾಗಿದ್ದನು. ಅರ್ಜುನನ ಮನಃಸ್ಥಿತಿಯನ್ನು ಅರಿತ ಕೃಷ್ಣನು, ಯುದ್ಧರಂಗದಲ್ಲಿಯೇ ಅರ್ಜುನನಿಗೆ ಗೀತೋಪದೇಶವನ್ನು ನೀಡಿದನು. ಕ್ಷತ್ರಿಯನಾಗಿ, ಮಾನವನಾಗಿ, ಅವನು ಮಾಡಬೇಕಾದ ಕರ್ತವ್ಯವನ್ನು ಮಾಡಿಯೇ ತೀರಬೇಕೆಂದೂ, ಅದಕ್ಕಾಗಿ ಬಂಧುಬಳಗವನ್ನು ನೋಡಬಾರದೆಂದೂ, ಅದರ ಫಲಾಫಲಗಳನ್ನು ಕುರಿತು ಚಿಂತಿಸಲೇ ಬಾರದೆಂದೂ ನಿಷ್ಕಾಮಕರ್ಮಯೋಗವನ್ನು ಉಪದೇಶಿಸಿ ಅವನಿಗೆ ಕೃಪೆಮಾಡಿದನು. ಅರ್ಜುನನು ಮತ್ತೆ ಯುದ್ಧ ಕೈಕೊಂಡನು, ವಿಜಯಿಯಾದನು ಇದೆಲ್ಲ ಸಾರಥಿಯಾದ ಶ್ರೀಕೃಷ್ಣನ ಕೃಪೆ ಮತ್ತು ರಕ್ಷಣೆಯಿಂದಲೇ ನಡೆದದ್ದು.

1. வலம்புரியாழியனை வரையார் திரடோளனை,
புலம்புரிநூலவனைப் பொழில்வேங்கட வேதியனை,
சிலம்பியலாறுடைய திருமாலிருஞ்சோலை நின்ற,
நலந்திகழ் நாரணனை நணுகுங்கொலென்னன்
ணுதலே.

ವಲಮ್ಬುರಿಯಾಳಿಯನೈ ವರೈಯಾರ್ ತಿರಡೋಳನೈ,
ಪುಲಮ್ಬುರಿ ನೂಲವನೈಪ್ ಪೊಳಿಲ್ ವೇಙ್ಗಡ ವೇದಿಯನೈ,
ಶಿಲಮ್ಬಿಯಲಾಱುಡೈಯ ತಿರುಮಾಲಿರುಞ್ಜೋಲೈ ನಿನ್ಱ,
ನಲನ್ದಿಗಳ್ ನಾರಣನೈ ನಣುಗುಙ್ಗೊಲೆನ್ನನ್ನುದಲೇ.

ವಲಮ್ಬುರಿ வலம்புரி = ಬಲಮುರಿ ಶಂಖವನ್ನೂ, ಆಳಿಯನೈ ஆழியனை = ಚಕ್ರವನ್ನು ಧರಿಸಿರುವವನನ್ನು, ವರೈ ಆರ್ வரை ஆர் = ಬೆಟ್ಟದಂತೆ, ತಿರಳ್ திரள் = ಬಲಿಷ್ಠವಾದ, ತೋಳನ್ ತನ್ನೈ தோளன் தன்னை = ತೋಳುಗಳುಳ್ಳವನನ್ನು, ಪುಲಮ್ ಪುಲಂ = ವೇದಗಳನ್ನು, ಪುರಿನೂಲವನೈ புரிநூலவனை = ಯಜ್ಞೋಪವೀತವುಳ್ಳವನನ್ನು, ಪೊಳಿಲ್ பொழில் = ತೋಟಗಳ, ವೇಙ್ಗಡಮ್ வேங்கடம் = ~~ತಿರುಪತಿ~~ ತಿರುಮಲೆಯಲ್ಲಿ ನೆಲಸಿರುವವನನ್ನು, ವೇದಿಯನೈ வேதியனை = ವೇದಗಳಿಂದ ತಿಳಿಯಲ್ಪಡುವವನನ್ನು, ಶಿಲಮ್ಬು சிலம்பு = ನಾದವೇ, ಇಯಲ್ இயல் = ಸಹಜಸ್ವಭಾವವಾಗಿರುವ, ಆಱು ஆறு = ನದಿಗಳ~~ನ್ನು~~, ಉಡೈಯ உடைய = ಕೂಡಿರುವ, ತಿರುಮಾಲಿರುಞ್ಜೋಲೈ திருமாலிருஞ்சோலை நின்ற = ತಿರುಮಾಲಿರುಂಜೋಲೈ ಮಲೈ ಕ್ಷೇತ್ರದಲ್ಲಿ ನೆಲಸಿರುವ, ನಲಮ್ நலம் = ತಿರುಕಲ್ಯಾಣಗುಣಗಳೆಲ್ಲವುಗಳಿಂದಲೂ ತಿಗಳ್ திகழ் = ಬೆಳಗುವ

Garani Srinivasan

ನಾರಣನೈ நாரணனை = ಶ್ರೀಮನ್ನಾರಾಯಣನನ್ನು, ನಾವು ಇನ್ನೂ
ಕೊಲ್ நண்ணுங்கொல் = ಸೇರಿಕೊಳ್ಳುವಳೋ ದೇವರೇ,
ಎನ್ ನಲ್ ನುದಲೇ என் நன்னுதலே = ನನ್ನ ಒಳ್ಳೆಯ ಹಣೆ
ಯುಳ್ಳವಳೇ (ನನ್ನ ಸುಂದರಿಯಾದ ಭಾಗ್ಯವತಿಯೇ)

ಬಲಮುರಿ ಶಂಖವನ್ನೂ ಚಕ್ರವನ್ನು ಧರಿಸಿದವನನ್ನು, ಬೆಟ್ಟದ ಹಾಗೆ ಬಲಿಷ್ಠವಾದ ತೋಳುಗಳುಳ್ಳವನನ್ನು, ವೇದಗಳನ್ನು ಯಜ್ಞೋಪವೀತವಾಗಿ ಉಳ್ಳವನನ್ನು, ತೋಪುಗಳ ತಿರುವೆಂಕಟದಲ್ಲಿ ನೆಲಸಿರುವವನನ್ನು, ವೇದಗಳಿಂದ ತಿಳಿಯತಕ್ಕವನನ್ನು, ನಾದವೇ ಸದಾ ಜಪಸ್ವಭಾವವಾಗಿರುವ ನದಿಗಳನ್ನುಳ್ಳ ತಿರುಮಾಲಿರುಂಜೋಲೈ ಮಲೈ ಕ್ಷೇತ್ರದಲ್ಲಿ ನೆಲಸಿರುವವನನ್ನು, ತಿರುಕಲ್ಯಾಣಗುಣಗಳಿಂದ ಶೋಭಿಸುವವನಾದ ಶ್ರೀಮನ್ನಾರಾಯಣನನ್ನು ನನ್ನ ಸುಂದರಿಯೂ ಭಾಗ್ಯವತಿಯು ಆದ ಹುಡುಗಿಯು ಸೇರಿಕೊಳ್ಳುವಳೋ ದೇವರೇ? (9)

ತಾಯಿ ಹಂಬಲಿಸುತ್ತಾಳೆ! ಸ್ವಾಮಿಯು ಬಲಮುರಿ ಶಂಖವನ್ನು ಪ್ರಜ್ವಲಿಸುವ ಚಕ್ರವನ್ನು ಧರಿಸಿದ್ದಾನೆ. ಅವನ ತೋಳುಗಳು ಅತ್ಯಂತ ದೃಢವೂ ಬಲಿಷ್ಠವೂ ಆದವು. ವೇದಗಳನ್ನು ಕೂಡಿಸಿ ಮಾಡಿದ ಯಜ್ಞೋಪವೀತವನ್ನು ಧರಿಸಿದ್ದಾನೆ. ವೇದಗಳ ವಿವರಣೆಯಿಂದಲೇ ಅವನು ತಿಳಿಯತಕ್ಕವನು. ಸಕಲ ಕಲ್ಯಾಣಗುಣಗಳಿಂದ ಶೋಭಿಸುತ್ತಿದ್ದಾನೆ. ಪ್ರಕೃತಿ ರಮ್ಯವಾದ ತಿರುವೆಂಕಟಗಿರಿಯಲ್ಲಿ ನೆಲಸಿರುವವನೂ, ಕಲಕಲನಾದವನ್ನು ಸದಾ ಜಪಸ್ವಭಾವವಾಗಿ ಉಳ್ಳ ವಿಶುದ್ಧವಾದ ನದಿಗಳು ಹರಿಯುವ ತಿರುಮಾಲಿರುಂಜೋಲೈ ಮಲೈ ಕ್ಷೇತ್ರದಲ್ಲಿ ನೆಲಸಿರುವವನೂ ಅವನೇ. ಸರ್ವೇಶ್ವರನಾದ ಶ್ರೀಮನ್ನಾರಾಯಣನನ್ನು ಸುಂದರಿಯೂ ಭಾಗ್ಯವತಿಯೂ ಆದ ನನ್ನ ಹುಡುಗಿಯು ಕೂಡಿಕೊಳ್ಳುವಳೋ ದೇವರೇ?

ಸರ್ವೇಶ್ವರನಾದ ಶ್ರೀಮನ್ನಾರಾಯಣನನ್ನೇ ಪೂಜಿಸಬೇಕೆಂದೂ ~~ಅವನ~~ ಅವನ ಕೃಪೆಯಿಂದ ಉದ್ಧಾರಹೊಂದಬೇಕೆಂದೂ ಆಳ್ವಾರರು ಇಲ್ಲಿ ಹೇಳುತ್ತಿದ್ದಾರೆ.

10. தேடற்கரியவனைத் திருமாலிருஞ்சோலை நின்றானை,
ஆடற்பறவையனை அணியாயிழை காணுமென்று,
மாடக்கொடி மதிள்சூழ் மங்கையர் கலிகன்றி சொன்ன,
பாடல் பனுவல் பத்தும் பயில்வார்க்கில்லை பாவங்களே.

ತೇಡಱ್ಕರಿಯವನೈತ್ ತಿರುಮಾಲಿರುಂಜೋಲೈ ನಿನ್ಱಾನೈ,
ಆಡಱ್ ಪಱವೈಯನೈ ಅಣಿಯಾಯಿೞೈ ಕಾಣುಮೆನ್ಱು,
ಮಾಡಕ್ಕೊಡಿ ಮದಿಳ್ ಶೂೞ್ ಮಙ್ಗೈಯಾರ್ ಕಲಿಕನ್ಱಿ ಶೊನ್ನ,
ಪಾಡಲ್ ಪನುವಲ್ ಪತ್ತುಮ್ ಪಯಿಲ್ವಾರ್ಕ್ಕಿಲ್ಲೈ ಪಾವಙ್ಗಳೇ.

ತೇಡಱ್ಕು தேடற்கு = ಹುಡುಕಿಕೊಂಡು ಹೋಗುವವರಿಗೆ, ಅರಿಯವನೈ அரியவனை = ದುರ್ಲಭವಾದವನನ್ನು, ತಿರುಮಾಲಿರುಂಜೋಲೈ ನಿನ್ಱಾನೈ திருமாலிருஞ்சோலை நின்றானை = ತಿರುಮಾಲಿರುಂಜೋಲೈ ಮಲೈ ಕ್ಷೇತ್ರದಲ್ಲಿ ನೆಲಸಿರುವವನನ್ನು, ಆಡಲ್ ஆடல் = ಜಯಗಳಿಸುವ, ಪಱವೈಯನೈ பறவை

Garani Srinivasan

ಯಿಲಾ = ವಿಷಯ ಒಡೆಯನನ್ನು (ವಿಷ್ಣುವನನ್ನು), அணி ಆಯ அணி ஆ
ಯ = ಸುಂದರರಾಗಿರುವವಳು, ಇಲ್ತ್ತ இழை = ಆಭರಣಗಳನ್ನು ಧರಿಸಿದವ
ಳು, ಕಾಣುಮಾ காணும் = ನೋಡುವವಳು, ಎನ್ನುಂ ಶಾಣ್ಣು = ಎಂದು,
ಮಾಡಮ್ மாடம் ಮಹಡಿ ಮನೆಗಳನ್ನು (ಗಳಿಂದಲೂ), ಕೊಡಿ கொடி = ಧ್ವಜಗಳನ್ನು (ಗಳಿಂದಲೂ),
ಮದಿಳ್ மதிள் = ಕೋಟೆಯಿಂದಲೂ, ಶೂಳ್ சூழ் = ಸುತ್ತುವರಿದಿರುವ,
ಮಙ್ಗೈಯರ್ மங்கையார் = ತಿರುಮಂಗೈನಾಡಿನವರ, ಕಲಿಕನ್ರಿ கலி
கன்றி = ಕಲಿಧ್ವಂಸಿಯು, ಶೊನ್ನ சொன்ன = ಹೇಳಿದ, ಪಾಡಲ್ பாடல் =
ಹಾಡಿನ, ಪನುವಲ್ பனுவல் = ಕವಿತೆಯ, ಪತ್ತುಮ್ பத்தும் = ಹತ್ತನ್ನೂ
(ಹತ್ತು ಪಾಶುರಗಳನ್ನು), ಪಯಿಲ್ವಾರ್ಕ್ಕು பயில்வார்க்கு = ಅಭ್ಯಾಸಿಸು
ವವರಿಗೆ, ಇಲ್ಲೈ ಪಾವಙ್ಗಳೇ இல்லை பாவங்களே = ಪಾಪಗಳೇ
ಇಲ್ಲವಾಗುತ್ತವೆ.

ಹುಡುಕಿಕೊಂಡು ಹೋಗುವವರಿಗೆ ದುರ್ಲಭನಾದವನನ್ನು, ತಿರುಮಾಲಿ ರುಂಜೋಲೈ ಮಲೈ ಕ್ಷೇತ್ರದಲ್ಲಿ ನೆಲೆಸಿರುವವನನ್ನು, ಜಯಗಳುಳ್ಳ ವಿಷಯ ಒಡೆಯನನ್ನು ಸುಂದರಿಯು ಆಭರಣಗಳನ್ನು ಧರಿಸಿರುವವಳೂ ಕಾಣುವಳು ಎಂದು ಮಹಡಿ ಮನೆಗಳಿಂದಲೂ, ಧ್ವಜಗಳಿಂದಲೂ, ಕೋಟೆಯಿಂದಲೂ ಸುತ್ತುವರಿದಿರುವ ತಿರುಮಂಗೈನಾಡಿನವರ ಕಲಿಧ್ವಂಸಿಯು ಹೇಳಿದ ಹಾಡಿನ (10)
ಕವಿತೆಯ ಹತ್ತನ್ನು ಅಭ್ಯಾಸ ಮಾಡುವವರಿಗೆ ಪಾಪಗಳೇ ಇಲ್ಲ.

ಇದು ಈ ತಿರುಮೊಳಿಯ ಕಡೆಯ ಪಾಶುರ. "ಸುಂದರಿಯೂ ಯೌವನ ವತಿಯೂ ಆಭರಣಭೂಷಿತಳೂ ಆದ ತನ್ನ ಮಗಳು ತ,ಅವಳ ಪ್ರಿಯತಮ ನನ್ನು ಹುಡುಕಿಕೊಂಡು, ಅವನನ್ನು ಹುಡುಕಿ ನಲ್ಲಿ (ಭಗವಂತನಲ್ಲಿ) ಅತೀವ ವ್ಯಾಮೋಹಗೊಂಡು, ಅವನನ್ನು ಹುಡುಕಿ ಕೊಂಡು ಹೊರಟು ಹೋದಳಲ್ಲ! ಅವಳು ತಿರುಮಾಲಿರುಂಜೋಲೈ ಮಲೈ ಕ್ಷೇತ್ರದಲ್ಲಿ ನೆಲೆಸಿರುವ ತನ್ನ ಪ್ರಿಯತಮನನ್ನು ಕಂಡಳೋ ಹೇಗೋ? ಅವ ನಿಗೆ ಎರಗಿದಳೋ ಹೇಗೋ? ಅವನನ್ನು ಪೂಜಿಸಿದಳೋ ಹೇಗೋ? ಅವನೊ ಡನೆ ಕೂಡಿಕೊಂಡಳೋ ಹೇಗೋ?" ಎಂದೆಲ್ಲ ಹಂಬಲಿಸುತ್ತಾ ತಿರುಮೊ ಳಿಯ ಮೊದಲ ಒಂಬತ್ತು ಪಾಶುರಗಳ ವಿಷಯ. ತಾಯಿಗೆ ತನ್ನ ಮಗಳ ಗಾಢಪ್ರೇಮದ ವಿಷಯ ಚೆನ್ನಾಗಿ ಅರಿವಾಗಿದೆ. ತನ್ನ ಪ್ರಿಯನನ್ನು ಅವಳು ಕೂಡಿ ಕೊಂಡರೆ ಸಾಕು. ಎಂದೆಂದಿಗೂ ಅದು ನಡೆಯಲಿ ಎಂಬ ಹಂಬಲ ಅವಳಿಗೆ.

ತಾಯಿಯ ಮನಸ್ಸಿಗೆ ನಿಜವಾಗಿ ಸಮಾಧಾನವನ್ನು ತರುವಂತಿದ್ದು ಹತ್ತನೆಯ ಪಾಶುರ (ಕಡೆಯ ಪಾಶುರ). "ಎಲ್ಲರ ಅರಿಯುವಂತೆ ಅಣಿಗೊಂಡು ತನಗೆ ಸಂ ಪನ್ನಳಾದ ಕನ್ಯೆಯು ತಿರುಮಾಲಿರುಂಜೋಲೈಯಲ್ಲಿ ನೆಲೆಸಿರುವ ತನ್ನ ಪ್ರಿಯನೊಡನೆ ಕೂಡಿಕೊಂಡಳು" ಎಂಬ ನಿರ್ಧಾರದ ಮಾತು! ಇದು ತಾಯಿಗೆ ಹರ್ಷವನ್ನೂ ಮಗಳಿಗೆ ಆನಂದವನ್ನೂ ತರುತ್ತದೆ.

ಪಾಶುರದ ತಾಯಿಯಂತೆ 'ಭಗವಂತನನ್ನು ಕೂಡಿಕೊಳ್ಳಬೇಕೆಂಬ ಬಿಡದ ಹಂಬಲವನ್ನೂ', ಮಗಳಂತೆ 'ಅದಕ್ಕೆ ಬೇಕಾದದ್ದನ್ನೆಲ್ಲಾ ಸಿದ್ಧಪಡಿಸಿ ಕೊಂಡು, ತನ್ನ ಪ್ರಿಯತಮನೊಡನೆ ಕೂಡಿಯೇ ತೀರುವೆನೆಂಬ ದೃಢನಿಶ್ಚಯ'

Garani Srinivasan

ವನ್ನು ಪಡೆದು, ಭಕ್ತನಾದವನು ತನ್ನ ಪ್ರಯತ್ನಗಳನ್ನು (ಮನಾಳಂತೆ) ಬಿಡದೆ ನಡಸಿದರೆ, ಹುಡುಕುತ್ತಾ ಹೋಗುವವರಿಗೆ ದುರ್ಲಭನಾಗಿರುವ ಭಗವಂತನನ್ನು ಸೇರುವುದರಲ್ಲಿ ಸಂದೇಹವಿಲ್ಲ — ಎಂಬುದನ್ನು ಈ ತಿರುವೆಂಬಾವೈಯ 'ಧ್ವನಿ' ಎನ್ನಬಹುದಲ್ಲವೇ?

ಭಕ್ತನು ಭಗವಂತನನ್ನು ದರ್ಶಿಸಬೇಕು. ಅವನಿಗೆ ನಮ್ರನಾಗಿ ಎರಗಬೇಕು. ಅವನ ತಿರುವಡಿಗಳನ್ನು ಆಶ್ರಯಿಸಬೇಕು. ಅವನನ್ನು ಪೂಜಿಸಬೇಕು ಅವನ ಗುಣಗಾನ ಮಾಡಬೇಕು — ಇವಿಷ್ಟನ್ನು ತಪ್ಪದೆ, ದೃಢಮನಸ್ಸಿನಿಂದ ನಡೆಸುವುದರಿಂದ, ಭಗವಂತನ ಕೃಪೆಗೆ ಪಾತ್ರನಾಗಿ ಅವನನ್ನು ಕೂಡಿಕೊಳ್ಳಬಹುದು — ಇಂತಹ 'ಕಾಯ-ಮನಃ' ವಿಷಯದ ಮೂಲಕ ಭಗವಂತನನ್ನು ಒಲಿಸಿಕೊಳ್ಳುವ ಬಗೆಯನ್ನು ಈ ಪಾಶುರಗಳಲ್ಲಿ ಬೋಧಿಸುತ್ತಿರುವನು, ತಿಳಿಯನು. ರಾಜಭಕ್ತಿ, ದೇಶಭಕ್ತಿ, ಭಗವದ್ಭಕ್ತಿಯನ್ನೆಲ್ಲ ತಿರುಮಂತ್ರನಾಡಿನ ಜನರ ಜಿಡೆಯನು. ಪಾಶುರಗಳು ಕವಿತಾಕೌಶಲ್ಯದಿಂದ ಕೂಡಿ ಮಧುರವಾಗಿ ಹಾಡಬಲ್ಲವುಗಳಾಗಿ, ರಚಿತವಾಗಿವೆ. ಈ ಪಾಶುರಗಳನ್ನು ಹೃದಯಂಗಮವಾಗಿ ಹಾಡುವುದನ್ನು, ಹೇಳಿದ ವಿಷಯವನ್ನು ಚೆನ್ನಾಗಿ ತಿಳಿದು, ಅಭ್ಯಾಸಮಾಡಿ, ಹಾಗೆ ನಡೆಯುವುದನ್ನು ಅಂತ ಭಕ್ತರ ಪಾಪಗಳೆಲ್ಲ ಪೂರ್ತಿಯಾಗಿ ಹೋಗುವುವು. ಅವರು ಕಾಯಾ ವಾಚಾ ಮನಸಾ ಪರಿಶುದ್ಧರಾಗಿ, ಭಗವಂತನ ಕೃಪೆಗೆ ಪಾತ್ರರಾಗುತ್ತಾರೆ. ಇಂತಹದೆ ಈ ತಿರುವೆಂಬಾವೈಗೆ ಫಲಶ್ರುತಿ!

ಅಡಿಯುನಡ್: ஆடிமாதம்: — ಮೂವರಿಲ್ ಉಯರ್ಗಿಸ, ಪಿನ್ನೈ புண, ಉಣ್ಡು உண்டு, ಕಿಳ್ಳ ಮರು ஈடுகமது, ಕಾನವನ್ ಕಾಣವನ್, ನೇಶಮಾ தேசம், ಪಿಳ್ಳೈ புளானிணா, ಪಾರ್ ಕ್ಷಾಣವಣ್, ... ತ್ತನಕ್ಕು பார்க்குணக்கு, ವಲಮ್ಬುರಿ ಮಲಂ புரி, ಕೇಡಯಾಕು ಕೇಡற்கு, (ಎಳ್ಳ್ ನಾங்கள்) 19/12

20/12/78

ಪೆರಿಯ ತಿರುಮೊೞಿ - ಒಂಬತ್ತನೆಯ ಪತ್ತು - ಪತ್ತನೆಯ ತಿರುಮೊೞಿ.

பெரிய திருமொழி - ஒன்பதாம்பத்து - பத்தாந்திருமொழி

10. ಎಙ್ಗಳೆಮ್ಮಿಱೈ - எங்களெம்மிறை

1. எங்களெம்மிறையெம்பிரான்
இமையோர்க்கு நாயகன், ஏத்தடியவர்
தங்கள் தம்மனத்துப்
பிரியாதருள் புரிவான்,
பொங்கு தண்ணருவி புதம் செய்யப்
பொன்களே சிதற இலங்கொளி,
செங்கமல மலரும்
திருக்கோட்டியூரானே.

ಎಙ್ಗಳೆಮ್ಮಿಱೈಯೆಮ್ಬಿರಾನ್ ಇಮೈಯೋರ್ಕ್ಕು ನಾಯಗನ್, ಏತ್ತಡಿಯವರ್
ತಙ್ಗಳ್ ತಮ್ಮನತ್ತುಪ್ಪಿರಿಯಾದರುಳ್ ಪುರಿವಾನ್,
ಪೊಙ್ಗು ತಣ್ಣರುವಿ ಪುದಮ್ ಶೆಯ್ಯಪ್ಪೊನ್ಗಳೇ ಶಿದಱ ಇಲಙ್ಗೊಳಿ,
ಶೆಙ್ಗಮಲ ಮಲರುಮ್ ತಿರುಕ್ಕೋಟ್ಟಿಯೂರಾನೇ.

ಎಙ್ಗಳ್ எங்கள் = ನಮ್ಮ, ಎಮ್ ಇಱೈ எம் இறை = ನಮ್ಮವನೇ ಆದ ಒಡೆಯನೂ; ಎಮ್ ಪಿರಾನ್ எம்பிரான் = ನಮ್ಮ ಸರ್ವೇಶ್ವರನೂ, ಇಮೈಯೋರ್ಕ್ಕು இமையோர்க்கு = ನಿತ್ಯಸೂರಿಗಳಿಗೆ, ನಾಯಗನ್ நாயகன் = ನಾಯಕನೂ; ಏತ್ತು ஏத்து = ಸ್ತುತಿಸಿ, (ಸ್ತುತಿಸುವ), ಅಡಿಯವರ್ அடியவர் = ಭಕ್ತರ, ತಙ್ಗಳ್ ತಮ್ தங்கள் தம் = ತಮ್ಮ ತಮ್ಮ (ಅವರವರ), ಮನತ್ತು மனத்து = ಮನದಲ್ಲಿ, ಪಿರಿಯಾದು பிரியாது = ಅಗಲದಂತೆ ಇರುವಂತೆ, ಅರುಳ್ ಪುರಿವಾನ್ அருள் புரிவான் = ಕೃಪೆ ಮಾಡುವವನೂ, ಪೊಙ್ಗು பொங்கு = ಉಕ್ಕಿ ಹರಿಯುವ, ತಣ್ தண் = ತಂಪಾದ, ಅರುವಿ அருவி = ಬೆಟ್ಟದ ಹೊಳೆಗಳು ಪುದಮ್ ಶೆಯ್ಯ புதம் செய்ய = ಅದ್ಭುತವನ್ನು ಮಾಡುವದಾಗಿ, ಪೊನ್ಗಳೇ பொன்களே = ಹೊನ್ನುಗಳನ್ನೇ (ಹೊನ್ನನ್ನೇ), ಶಿದಱ சிதற = ಎರಚಲು, ಇಲಙ್ಗು இலங்கு = ಹೊಳೆಯುವ, ಒಳಿ ஒளி = ತೇಜಸ್ಸುಳ್ಳ, ಶೆಮ್ செம் = ಕೆಂಪು, ಕಮಲಮ್ கமலம் = ಕಮಲವು, ಮಲರುಮ್ மலரும் = ಅರಳುವ, ತಿರುಕ್ಕೋಟ್ಟಿಯೂರಾನೇ திருக்கோட்டியூரானே = ತಿರುಕ್ಕೋಟ್ಟಿಯೂರಿನ ಸ್ವಾಮಿಯೇ.

ನಮ್ಮ ಆತ್ಮೀಯನಾದ ಒಡೆಯನೂ (ಸ್ವಾಮಿಯೂ), ನಮ್ಮ ಸರ್ವೇಶ್ವರನೂ, ನಿತ್ಯಸೂರಿಗಳ ನಾಯಕನೂ ಸ್ತುತಿಸುವ ಭಕ್ತರಿಗೆ ಅವರವರ ಮನದಲ್ಲಿ ಅಗಲದಂತೆ ಇರುವೆನೆಂದು ಕೃಪೆಮಾಡುವವನೂ, ಉಕ್ಕಿ ಹರಿಯುವ ತಂಪಾದ

Garani Srinivasan

ಬೆಟ್ಟದ ಹೊಳೆಗಳು ಅದ್ಭುತವನ್ನೇ ಮಾಡುವ ಹಾಗೆ ಹೊನ್ನನ್ನು ಎರಚುತ್ತಿರುವಾಗ, ಹೊಳೆಯುವ ಕೆಂಜನ್ನನ್ನೆಲ್ಲ ಕೆಂದಾವರೆಯು ಅರಳುತ್ತಿರುವಂಥ ತಿರುಕ್ಕೋಟ್ಟಿಯೂರಿನ ಸ್ವಾಮಿಯೇ (1).

ತಿರುಮಾಲಿರುಂಜೋಲೈ ಕ್ಷೇತ್ರದಿಂದ ಆಳ್ವಾರರು ತಿರುಕ್ಕೋಟ್ಟಿಯೂರು ಎಂಬ ಮತ್ತೊಂದು ಕ್ಷೇತ್ರಕ್ಕೆ ಬಂದಿದ್ದಾರೆ. ಅಲ್ಲಿ ನೆಲಸಿರುವ ಸೌಮ್ಯನಾರಾಯಣ ಸ್ವಾಮಿಯ ಸನ್ನಿಧಿಯನ್ನು ಕುರಿತ ಪಾಶುರಗಳಿವೆ:

ಆಳ್ವಾರರು ಹೇಳುತ್ತಾರೆ: ತಿರುಕ್ಕೋಟ್ಟಿಯೂರಿನಲ್ಲಿ ನೆಲಸಿರುವ ಸ್ವಾಮಿಯೇ, ನಮ್ಮೆಲ್ಲರಿಗೂ ಅತ್ಯಂತ ಪ್ರಿಯತಮನಾದವನು. ನಮ್ಮೆಲ್ಲರ ಒಡೆಯನು. ನಿತ್ಯಸೂರಿಗಳಿಗೂ ಒಡೆಯನು. ಅವನನ್ನು ಎಡೆಬಿಡದೆ ಸ್ತುತಿಸುವ ಭಕ್ತರ ಮನದಲ್ಲಿ ನೆಲೆನಿಂತಿರುವವನು. ಉಕ್ಕಿ ಹರಿಯುವ ಬೆಟ್ಟದ ಹೊಳೆಗಳಲ್ಲಿ ಚಿನ್ನವನ್ನೇ ಉಕ್ಕಿಸಿ, ಎರಚಿ, ಚೆಲ್ಲುತ್ತಿರುವುದೋ ಎಂಬಂತೆ ಕೆಂದಾವರೆಯ ಹೂಗಳು ಅರಳಿ ಪ್ರಕಾಶಮಾನವಾಗಿ ಕಾಣಿಸುತ್ತಿರುವ ತಿರುಕ್ಕೋಟ್ಟಿಯೂರಿನ ಸ್ವಾಮಿಯನ್ನು ನಾವು ಸ್ತುತಿಸಿ, ನಮಸ್ಕರಿಸೋಣ.

2. எவ்வநோய் தவிர்ப்பாண்
எமக்கிறையின்னகைத்துவர்வாய், நிலமகள்
செவ்விதோய வல்லான்
திருமாமகட்கினியான்,
மௌவல்மாலை வண்டாடும்
மல்லிகைமாலையொடுமணைந்துமாருதம்,
தெய்வநாறவரும்
திருக்கோட்டியூரானே.

ಎವ್ವನೋಯ್ ತವಿರ್ಪ್ಪಾನ್ ಎಮಕ್ಕಿಱೈಯಿನ್ನಹೈತ್ತುವರ್ ವಾಯ್, ನಿಲಮಹಳ್
ಶೆವ್ವಿತೋಯವಲ್ಲಾನ್ ತಿರುಮಾಮಹಟ್ಕಿನಿಯಾನ್,
ಮೌವಲ್ ಮಾಲೈ ವಣ್ಡಾಡುಮ್ ಮಲ್ಲಿಹೈಮಾಲೈಯೊಡುಮಣೈನ್ದ ಮಾರುದಮ್,
ದೆಯ್ವನಾಱವರುಮ್ ತಿರುಕ್ಕೋಟ್ಟಿಯೂರಾನೇ.

ಎವ್ವಮ್ எவ்வம் = ಅಧೋಗತಿಯನ್ನು, ನೋಯ್ நோய் = ದುಃಖ, ಸಂಕಟಗಳನ್ನು, ತವಿರ್ಪ್ಪಾನ್ தவிர்ப்பான் = ತಪ್ಪಿಸುವವನು, ಎಮಕ್ಕು எமக்கு = ನಮಗೆ, ಇಱೈ இறை = ಸ್ವಾಮಿಯಾದವನು, ಇನ್ இன் = ಇನಿದಾದ, ನಹೈ நகை ನಗೆಯನ್ನು, ತುವರ್ ವಾಯ್ துவர்வாய் = ಕೆಂದುಟಿಗಳನ್ನು ಉಳ್ಳ, ನಿಲಮಹಳ್ நிலமகள் = ಭೂದೇವಿಯ, ಶೆವ್ವಿ செவ்வி = ಸೊಬಗನ್ನು, ತೋಯ ವಲ್ಲಾನ್ தோயவல்லான் = ಅನುಭವಿಸಬಲ್ಲವನು, ತಿರುಮಾಮಹಟ್ಕು திருமாமகட்கு = ಶ್ರೀದೇವಿಗೆ, ಇನಿಯಾನ್ இனியான் = ಪ್ರಿಯತಮನು, ವಣ್ಡು ಆಡುಮ್ வண்டு ஆடும் = ದುಂಬಿಗಳು ಮುಸುರುವ, ಮೌವಲ್ ಮಾಲೈ ಮಲ್ಲಿಹೈ ಮಾಲೈ

Garani Srinivasan

ಯೋಡುಮಾ மணமுல மாலை, மல்லிகை மாலையோடும் = ಬಗೆಬಗೆಯ ಮಲ್ಲಿ
ಗೆಯ ಹಾರಗಳನ್ನು, ಅಣಿನ್ದ அணிந்து = ಧರಿಸಿದ, ಮೂಡುಮಾ மாருதம் = ತಂ
ಗಾಳಿಯು, ದೆಯ್ವಮಾ ஒதியும் = ದಿವ್ಯವಾದ, ನಾಱ நாற = ಪರಿಮಳಿಸುತ್ತ,
ವರುಮಾ வரும் = ಬರುವಂಥ, (~~[illegible]~~), ತಿರುಕ್ಕೋಟ್ಟಿಯೂರಾನೇ திருக்
கோட்டியூரானே = ತಿರುಕ್ಕೋಟ್ಟಿಯೂರಿನಲ್ಲಿ ನೆಲಸಿರುವವನೇ

ಅಧೋಗತಿಯನ್ನು, ಭಯ ಸಂಕಟಗಳನ್ನು ತಪ್ಪಿಸುವವನು, ನಮಗೆ ಸ್ವಾಮಿಯಾಗಿರುವವನು, ಇನಿದಾದ ನಗೆಯನ್ನು ತೋರುವ ತುಟಿಗಳನ್ನುಳ್ಳ ಭೂದೇವಿಯ ಸೊಬಗನ್ನು ಅನುಭವಿಸಬಲ್ಲವನೂ, ಶ್ರೀದೇವಿಗೆ ಪ್ರಿಯತಮನೂ, ದುಂಬಿಗಳು ಮುತ್ತುವಂಥ ಬಗೆಬಗೆಯ ಮಲ್ಲಿಗೆಯ ಹಾರಗಳನ್ನು ಧರಿಸಿ, ತಂಗಾಳಿಯು ಪರಿಮಳಿ (2)
ಸುತ್ತಾ, ಬರುವಂಥ ತಿರುಕ್ಕೋಟ್ಟಿಯೂರಿನಲ್ಲಿ ನೆಲಸಿರುವವನೇ.

'ಎವ್ವಮ್ - துயரம்' ಎಂಬುದಕ್ಕೆ ಸಂಕಟ, ಅಧಃಪತನ, ಅಪಾಯ, ತವ, ವಂಚನೆ' ಎಂದೆಲ್ಲ ಅರ್ಥ ಬರುತ್ತದೆ

'ನೋಯ್ - ரோகம்' - ಎಂಬುದಕ್ಕೆ 'ವ್ಯಾಧಿ ಸಂಕಟ, ಯಾತನೆ, ಭಯ, ಪಾಪ,' ಎಂದೆಲ್ಲ ಅರ್ಥ ಬರುತ್ತದೆ

" ಎವ್ವನೋಯ್ ತವಿರ್ಪ್ಪಾನ್ - துயர ரோகம் தவிர்ப்பாண்" – 'ಅಧೋಗತಿಯನ್ನು, ~~[illegible]~~ ಭಯ ಸಂಕಟಗಳನ್ನು ತಪ್ಪಿಸುವವನು" – ಚೇತನನಲ್ಲಿ ಇಂದ್ರಿಯಗಳು ಆಸೆಯನ್ನು ಹುಟ್ಟಿಸುತ್ತವೆ. ಅವನನ್ನು ವಂಚಿಸುತ್ತವೆ. ದುಃಖ, ಸಂಕಟಗಳಲ್ಲಿ ತೊಡಗಿಸುತ್ತವೆ. ಸಂಸಾರದ ಬಂಧನದಲ್ಲಿ ತೊಡಗಿಸುತ್ತವೆ. (ಅವನನ್ನು) ಪಾಪಕಾರ್ಯಗಳಲ್ಲಿ ತೊಡಗಿಸುತ್ತವೆ. ಸಂಸಾರವೆಂಬ ವ್ಯಾಧಿಯಿಂದ ನರಳುತ್ತಾ ಅವನು ಮರಣವನ್ನು, ನರಕ ಯಾತನೆಯ ಭಯವನ್ನು ಕಾಣುತ್ತಾನೆ. ಜೊತೆಗೆ ಲೆಕ್ಕವಿಲ್ಲದಷ್ಟು ದುಷ್ಟ ಪಾಪಗಳ ಸುಳಿಯಲ್ಲಿ ಬಿದ್ದು ತೊಳಲುತ್ತಾನೆ. ಈ ಅಧೋಗತಿಯನ್ನು, ಭಯ ಸಂಕಟಗಳನ್ನು ದೂರ ಮಾಡುವುದೆಂದರೆ ಸರ್ವೇಶ್ವರನಾದ ಭಗವಂತನ ಆಶ್ರಯ ಹೊಂದಲೇ. ಅವನ ಕೃಪೆಯಿಂದ ದುಷ್ಟ-ಪಾಪಗಳೂ, ನರಕ ಯಾತನೆಯೂ ತಪ್ಪುವುದು. ಅವನು ಅಮರನಾಗುವನು. ನಿತ್ಯಾನಂದ ಸುಖವನ್ನನುಭವಿಸುವನು.

ಭಗವಂತನಿಗೆ ಶ್ರೀದೇವಿ ಭೂದೇವಿಗಳು ನಿತ್ಯ ನಾಯಕಿಯರು. ಪರಿಪೂರ್ಣ ದಯಾಸ್ವರೂಪಳೇ ಶ್ರೀದೇವಿ. ಸಂಪೂರ್ಣ ಕ್ಷಮಾಸ್ವರೂಪಿಳು ಭೂದೇವಿ. ಇವರಿಬ್ಬರೂ ಕೂಡಿ ಆಶ್ರಿತನಾದ ಚೇತನನ ಪಾಪಗಳನ್ನೆಲ್ಲ ಕ್ಷಮಿಸಬೇಕೆಂದೂ, ಅವನಲ್ಲಿ ಕೃಪೆತೋರಿ ಅವನನ್ನು ರಕ್ಷಿಸಬೇಕೆಂದೂ ಚೇತನನ ಪರವಾಗಿ ಭಗವಂತನನ್ನು ಬೇಡಿಕೊಳ್ಳುತ್ತಾರೆ. ಅವರ ಬೇಡಿಕೆಯನ್ನು ಅಂಗೀಕರಿಸುತ್ತಾ, ಪರಮ ಕಾರುಣಿಕನಾದ ಸ್ವಾಮಿಯು ಚೇತನನನ್ನು ಉದ್ಧರಿಸುತ್ತಾನೆ.

ಆಳ್ವಾರರು ಹೇಳುತ್ತಾರೆ: ತಿರುಕ್ಕೋಟ್ಟಿಯೂರಿನಲ್ಲಿ ಶ್ರೀದೇವಿ ಭೂದೇವಿಗಳ ಸಹಿತನಾಗಿ ಸರ್ವೇಶ್ವರನಾದ ಭಗವಂತನು ನೆಲಸಿದ್ದಾನೆ. ದುಂಬಿಗಳು

Garani Srinivasan

ಮುಸುರುತ್ತಿರುವ, ನೀಂಮಲ್ಲವನ್ನು ನೋಡುವ ಬಗೆಬಗೆಯ ಮಲ್ಲಿಗೆಯ ಹೂಗಳನ್ನು ಧ್ಯಾನಿಯುದಯಿಸಿದ್ದಾನೆ. ಹೂಗಳ ಬಿಳ್ಳ ನೀಂಮಲ್ಲವನ್ನು ಕಂಗಾಳೆಯು ಎಲ್ಲ ಕಡೆಗಾ ಹರಡಿ, ಭಕ್ತರನ್ನೆಲ್ಲಾ ಆಕರ್ಷಿಸುತ್ತದೆ. ನಾವು ಭಗವಂತನ ತಿರುವಡಿಗಳನ್ನಾಶ್ರಯಿಸಿ, ಸಂಸಾರವೆಂಬ ರೋಗದ ಭಯದಿಂದ ಬಿಡುಗಡೆಯಿಂದ (2)
ಮುಕ್ತರಾಗೋಣ

3. வெள்ளியான் கரியான் மணிநிறவண்ணன்
விண்ணவர் தமக்கிறை, எமக்கு
ஒள்ளியானுயர்ந்தான்
உலகேழுமுண்டுமிழ்ந்தான்,
துள்ளுநீர் மொண்டு கொண்டு சாமரைக்கற்றை
சந்தனமுந்தி வந்தசை,
தெள்ளுநீர்ப்புறவில்
திருக்கோட்டியூரானே.

ವೆಳ್ಳಿಯಾನ್ ಕರಿಯಾನ್ ಮಣಿನಿಱವಣ್ಣನ್ ವಿಣ್ಣವರ್ ತಮಕ್ಕಿಱೈ, ಎಮಕ್ಕು
ಒಳ್ಳಿಯಾನುಯರ್ನ್ದಾನ್ ಉಲಗೇೞುಮುಣ್ಡುಮಿೞ್ನ್ದಾನ್,
ತುಳ್ಳುನೀರ್ ಮೊಣ್ಡುಕೊಣ್ಡು ಶಾಮರೈಕ್ಕಱ್ಱೈ ಶನ್ದನಮುನ್ದಿ ವನ್ದಶೈ,
ತೆಳ್ಳುನೀರ್ ಪ್ಪುಱವಿಲ್ ತಿರುಕ್ಕೋಟ್ಟಿಯೂರಾನೇ.

ವೆಳ್ಳಿಯಾನ್ வெள்ளியான் = ಶುದ್ಧವಾದ ಬಿಳಿಯ ಬಣ್ಣದವನು, ಮಣಿನಿಱಮ್ ವಣ್ಣನ್ ಕರಿಯಾನ್ கரியான் = ಕರಿಯ ಬಣ್ಣದವನು, மணிநிறம் வண்ணன் = ಇಂದ್ರನೀಲಮಣಿಯ ಬಣ್ಣದವನು, மணிநிறம் வண்ணன் விண்ணவர் தமக்கு = ನಿತ್ಯಸೂರಿಗಳಿಗೆ, ಇಱೈ ವಿಣ್ಣವರ್ ತಮಕ್ಕು இறை = ಒಡೆಯನು, ಎಮಕ್ಕು எமக்கு = ನಮಗೆಲ್ಲ, ಒಳ್ಳಿಯಾನ್ ஒள்ளியான் = ಒಳ್ಳೆಯವನು (ಉಪಕಾರಿಯು), ಉಯರ್ನ್ದಾನ್ உயர்ந்தான் = ಎಲ್ಲರಿಗಿಂತಲೂ ಹಿರಿಯವನು (ಶ್ರೇಷ್ಠನು), ಉಲಗು ಏೞುಮ್ உலகு ஏழும் = ಏೞು ಲೋಕಗಳನ್ನೂ, ಉಣ್ಡು உண்டு = ನುಂಗಿ, ಉಮಿೞ್ನ್ದಾನ್ உமிழ்ந்தான் = ಉಗುಳಿದವನು, ತುಳ್ಳುನೀರ್ துள்ளுநீர் = ಸೂಸಿಬರುವ ಅಲೆಗಳಿಂದ, ಮೊಣ್ಡು ಕೊಣ್ಡು மொண்டு கொண்டு = ತುಂಬಿಕೊಂಡು, ಶಾಮರೈ ಕಱ್ಱೈ சாமரை கற்றை = ಚಾಮರದ ಕಟ್ಟುಗಳನ್ನೂ, ಶನ್ದನಮ್ சந்தனம் = ಗಂಧದ ಮರಗಳನ್ನೂ, ಉನ್ದಿ உந்தி = ತಳ್ಳಿಕೊಂಡು, ವನ್ದು வந்து = ಬಂದು, ಅಶೈ அசை = ಹರಿಯುವ, ತೆಳ್ಳುನೀರ್ தெள்ளு நீர் = ತಿಳಿಯಾದ ನೀರಿನ, ಪುಱವಿಲ್ புறவில் = ಪ್ರದೇಶದಲ್ಲಿರುವ, ತಿರುಕ್ಕೋಟ್ಟಿಯೂರಾನೇ

Garani Srinivasan

திருக்கோட்டியூரானே = ತಿರುಕ್ಕೋಟ್ಟಿಯೂರಿನಲ್ಲಿರುವ ಸ್ವಾಮಿಯೇ

ಶುದ್ಧವಾದ ಬಿಳಿಯ ಬಣ್ಣದವನೂ, ಕೆಂಪು ಬಣ್ಣದವನೂ, ಇಂದ್ರನೀಲ ಮಣಿಯ ಬಣ್ಣದವನೂ, ನಿತ್ಯಸೂರಿಗಳಿಗೆ ಒಡೆಯನೂ, ನಮ್ಮೆಲ್ಲರ ಒಳ್ಳೆಯವನೂ (ಒಡೆಯನೂ), ಎಲ್ಲರಿಗಿಂತಲೂ ಹಿರಿಯನೂ (ಶ್ರೇಷ್ಠನೂ) ಏಳು ಲೋಕಗಳನ್ನು ಉಂಡು ಉಗುಳಿದವನೂ, ನುಗ್ಗಿ ಬರುವ ಅಲೆಗಳಿಂದ ಚಾಮರದ ಕಟ್ಟುಗಳನ್ನು ಶ್ರೀಗಂಧದ ಮರಗಳನ್ನು ತುಂಬಿಕೊಂಡು, ಕೊಚ್ಚಿಕೊಂಡು ಹರಿವ ಶೀತಲವಾದ ಪ್ರವಾಹಗಳ ಪ್ರದೇಶದಲ್ಲಿರುವ ತಿರುಕ್ಕೋಟ್ಟಿಯೂರಿನಲ್ಲಿ ನೆಲಸಿರುವ ಸ್ವಾಮಿಯೇ. (3)

ಒಂದೊಂದು ಯುಗದಲ್ಲಿಯೂ ಭಗವಂತನು ಆಯಾ ಯುಗಕ್ಕೆ ತಕ್ಕಂತೆ ಒಂದೊಂದು ಬಣ್ಣದಲ್ಲಿ ಕಾಣಿಸಿಕೊಳ್ಳುತ್ತಾನೆಂದು ಸ್ವಾಮಿಯನ್ನು ವರ್ಣಿಸುತ್ತಾರೆ. ಕೃತಯುಗದಲ್ಲಿ ಸ್ವಾಮಿಗೆ ಪರಿಶುದ್ಧವಾದ ಬಿಳಿಯ ಬಣ್ಣವಂತೆ. ತ್ರೇತಾಯುಗದಲ್ಲಿ ಸ್ವಲ್ಪ ದಳದ ಮಿಶ್ರಿತವಾದ ಬಿಳುಪಂತೆ. ದ್ವಾಪರದಲ್ಲಿ ಸ್ವಾಮಿಯು ಇಂದ್ರನೀಲ ಮಣಿಯ ಬಣ್ಣವನ್ನು ಹೊಂದುವನಂತೆ. ಕಲಿಯುಗದಲ್ಲಿ ಸ್ವಾಮಿಯ ಬಣ್ಣ ಅಚ್ಚ ಕಪ್ಪಂತೆ. ಆಳ್ವಾರರು ಇದನ್ನು ಮನದಲ್ಲಿಟ್ಟುಕೊಂಡು ಸ್ವಾಮಿಯನ್ನು ಇಲ್ಲಿ ವರ್ಣಿಸುತ್ತಾರೆ.

ಆಳ್ವಾರರು ಹೇಳುತ್ತಾರೆ: ಇಡೀ ಬ್ರಹ್ಮಾಂಡಕ್ಕೇ ನಾಯಕನಾಗಿರುವ ಸ್ವಾಮಿ ಪರಮಪದವಾಸಿಗಳಾದ ಅಮರರಿಗೂ ನಾಯಕನೇ. ಅವನು ಸರ್ವೇಶ್ವರನು. ಸ್ಥಿತಿಕರ್ತನಾಗಿರುವ ಅವನು ಲಯಕರ್ತನೂ ಸೃಷ್ಟಿಕರ್ತನೂ ಆಗುತ್ತಾನೆ. ಆಶ್ರಯಿಸಿರುವ ಭಕ್ತರಿಗೆ ಬಹಳ ಒಳ್ಳೆಯವನು ಸ್ವಾಮಿ. ಅವನೇ ಈಗ ತಿರುಕ್ಕೋಟ್ಟಿಯೂರಲ್ಲಿ ನೆಲಸಿದ್ದಾನೆ. ನಾವು ಅವನನ್ನು ಆಶ್ರಯಿಸಿ ಉದ್ಧಾರಗೊಳ್ಳೋಣ.

4. ஏறுமேறியிலங்குமொண் மழுப்பற்றும்
ஈசற்கிசைந்து, உடம்பிலோர்
கூறுதான் கொடுத்தான்
குலமாமகட்கினியான்,
நாறு சண்பகமல்லிகைமலர்புல்கி
இன்னிளவண்டு, நன்னறும்
தேறல்வாய்மடுக்கும்
திருக்கோட்டியூரானே.

ಏರುಮೇರಿ ಯಿಲಂಗುಮೊಣ್ ಮಳುಪ್ಪಟ್ರುಮ್ ಈಶರ್ಕಿಶೈಂದು, ಉಡಂಬಿಲೋರ್
ಕೂರುತಾನ್ ಕೊಡುತ್ತಾನ್ ಕುಲಮಾ ಮಗಟ್ಕಿನಿಯಾನ್,
ನಾರು ಶೆಂಬಗ ಮಲ್ಲಿಗೈ ಮಲರ್ ಪುಲ್ಗಿ ಇನ್ನಿಳವಣ್ಡು, ನನ್ನರುಮ್
ತೇರಲ್ ವಾಯ್ ಮಡುಕ್ಕುಮ್ ತಿರುಕ್ಕೋಟ್ಟಿಯೂರಾನೇ.

ಏರು ஏறு = ಎತ್ತನ್ನು, ಏರಿ ஏறி = ಹತ್ತಿಕೊಂಡು, ಇಲಂಗುಮ್ இலங்கும் = ಪ್ರಕಾಶಿಸುವ, ಒಣ್ ஒண் = ಅಪೂರ್ವವಾದ (ಸಾಟಿಯಿಲ್ಲದ), ಮಳುಪ್ಪಟ್ರುಮ್

Garani Srinivasan

மழுப்பற்றும் = ಗಂಡುಗೊಡಲಿಯನ್ನು ಹಿಡಿದಿರುವ, ~~ಈಶನ್ ஈசன் = ಈಶ್~~
~~ಈಶಟಾಕು~~ ஈசற்கு = ಈಶ್ವರನಿಗೆ, ಇಶೈನ್ದು இசைந்து = ಕರುಣಿಸಿ, ಒಡ
ಮ್ಬಿಲ್ உடம்பில் = (ತನ್ನ) ದೇಹದಲ್ಲಿ, ಓರ್ ஓர் = ಒಂದು, ಕೂಱು கூறு = ಭಾ
ಗವನ್ನು, ತಾನ್ தான் = ತಾನು, ಕೊಡುತ್ತಾನ್ கொடுத்தான் = ಕೊಟ್ಟವನೂ,
ಕುಲಮ್ குலம் = ಶ್ರೇಷ್ಠಳಾದ, ಮಾಮಗಟ್ಕು மாமகட்கு = ಲಕ್ಷ್ಮೀದೇವಿ
ಗೆ, ಇನಿಯಾನ್ இனியான் = ಪ್ರಿಯನಾದವನೂ, ನಾಱು நாறு = ಪರಿಮ
ಳಿಸುವ, ಶಣ್ಬಗಮ್ சம்பகம் = ಸಂಪಿಗೆ, ಮಲ್ಲಿಕೈ மல்லிகை = ಮಲ್ಲಿಗೆ,
ಮಲರ್ மலர் = ಹೂಗಳನ್ನು, ಪುಲ್ಗಿ புல்கி = ಸವರಿಕೊಂಡು, ಇನ್ இன் =
ಇನಿದಾದ, ಇಳವಣ್ಡು இளவண்டு = ಎಳೆಯ (ಯೌವನದ) ದುಂಬಿ, ನಲ್ நல்
= ಶ್ರೇಷ್ಠವಾದ, ನಱುಮ್ நறும் = ಸುವಾಸನೆಯ, ತೇಱಲ್ தேற
ல் = ಜೇನಿನಲ್ಲಿ ವಾಯ್ ಮಡುಕ್ಕುಮ್ வாய் மடுக்கும் = ಬಾಯಿಹಚ್ಚುವ,
ತಿರುಕ್ಕೋಟ್ಟಿಯೂರಾನೇ திருக்கோட்டியூரானே = ತಿರುಕ್ಕೋಟ್ಟಿಯೂ
ರಿನಲ್ಲಿ ನೆಲಸಿರುವವನೇ.

[illegible] ಪ್ರಕಾಶಿಸುವ ಅಪೂರ್ವವಾದ (ಸಾಟಿಯಿಲ್ಲದ) ಗಂಡುಗೊಡಲಿ
ಯನ್ನು ಹಿಡಿದಿರುವ ಈಶ್ವರ (ಶಿವ)ನಿಗೆ ಕರುಣಿಸಿ, ತನ್ನ ದೇಹದಲ್ಲಿ ಒಂದು ಭಾಗ
ವನ್ನು (ತಾನು) ಕೊಟ್ಟವನೂ, ಶ್ರೇಷ್ಠಳಾದ ಲಕ್ಷ್ಮೀದೇವಿಗೆ ಪ್ರಿಯನಾದವನೂ, ಪರಿ
ಮಳಿಸುವ ಸಂಪಿಗೆ ಮಲ್ಲಿಗೆ ಹೂಗಳನ್ನು ಸವರಿಕೊಂಡು ಇನಿದಾದ ಎಳೆಯ (ಯೌ
ವನದ) ದುಂಬಿಗಳು ಉತ್ತಮವಾದ ಸುವಾಸನೆಯ ಜೇನಿನಲ್ಲಿ ಬಾಯನ್ನು ಹಚ್ಚು (4)
ವ ತಿರುಕ್ಕೋಟ್ಟಿಯೂರಿನಲ್ಲಿ ನೆಲಸಿರುವವನೇ.

ಶಿವನಿಗೆ ಬ್ರಹ್ಮಹತ್ಯಾದೋಷ ಬಂತು. ಅವನು ಅದರ ಪರಿಹಾರಕ್ಕಾಗಿ ಮೂರು ಲೋಕಗಳಲ್ಲಿ ಅಲೆದು ಬೇಡಿದನು. ಕಡೆಗೆ ಶ್ರೀಮನ್ನಾರಾಯಣನು ಅವನಲ್ಲಿ ಕರುಣಿಸಿದನು. ತನ್ನ ದೇಹದಿಂದ ರಕ್ತವನ್ನು ಹರಿಸಿ, ಶಿವನನ್ನು ಆ ಬ್ರಹ್ಮಹತ್ಯಾದೋಷದಿಂದ ಪಾರು ಮಾಡಿದನು.

ಆಳ್ವಾರರು ಹೇಳುತ್ತಾರೆ ನಂದಿವಾಹನನಾದ ಶಿವನಿಗೆ ತನ್ನ ದೇಹದ ಒಂದುಭಾಗವನ್ನು ಕೊಟ್ಟು ಕರುಣಿಸಿದವನು, ದಯಾಸ್ವರೂಪಳೂ ಸೌಂದರ್ಯವತಿಯೂ ಆದ ಶ್ರೀದೇವಿಗೆ ಒಡೆಯನೂ ಈಗ ಸಂಪಿಗೆ ಮಲ್ಲಿಗೆ ಹೂಗಳ ಪರಿಮಳದಿಂದಲೂ ಅವುಗಳಿಂದ ಹೊರಡುವ ಜೇನಿಗೆ ಮುತ್ತಿಕೊಂಡಿರುವ ದುಂಬಿಗಳ ಸಂಗಾನದಿಂದಲೂ ಕೂಡಿರುವ ತಿರುಕ್ಕೋಟ್ಟಿಯೂರಿನಲ್ಲಿಯೇ ನೆಲಸಿದ್ದಾನೆ. ನಾವು ಅವನ ತಿರುವಡಿಗಳನ್ನಾಶ್ರಯಿಸಿ, ಉದ್ಧಾರಗೊಳ್ಳೋಣ

5. வங்கமா கடல் வண்ணன் மாமணி வண்ணன்
விண்ணவர் கோன், மது மலர்த்
தொங்கல் நீள்முடியான்
நெடியான் படி கடந்தான்,
மங்குல் தோய் மணிமாட வெண்கொடி
மாகமீதுயர்ந்தேறி, வானுயர்

Garani Srinivasan

திங்கள் தாணணாவும்
திருக்கோட்டியூரானே.

ವಙ್ಗಮಾ ಕಡಲ್ ವಣ್ಣನ್ ಮಾಮಣಿವಣ್ಣನ್ ವಿಣ್ಣವರ್ ಕೋನ್, ಮಧುಮಲರ್
ತೊಙ್ಗಲ್ ನೀಳ್ ಮುಡಿಯಾನ್ ನೆಡಿಯಾನ್ ಪಡಿಕಡನ್ದಾನ್,
ತುಙ್ಗಲ್ ಕೋಯಿಲ್ ಮಣಿಮಾಡ ವೆಣ್ಕೊಡಿ ಮಾಡುಮುಯರ್ನ್ದು ವಾನುಯರ್
ತಿಙ್ಗಳ್ ತಾನಣಾವುಮ್ ತಿರುಕ್ಕೋಟ್ಟಿಯೂರಾನೇ

ವಙ್ಗಮ್ ವங்கம் = ಅಲೆಗಳು ತುಂಬಿರುವ, ಮಾ ಕಡಲ್ மா கடல் = ಬಣ್ಣದವನು, ಮಾಮ = ವಿಸ್ತಾರವಾದ ಕಡಲಿನ, ವಣ್ಣನ್ வண்ணாண் = ಇಂದ್ರನೀಲಮಣಿಯ ಬಣ್ಣದ ಮಣಿವಣ್ಣನ್ மா மணி வண்ணாண் = ನಿತ್ಯಸೂರಿಗಳ ವನು, ವಿಣ್ಣವರ್ ಕೋನ್ விண்ணவர் கோண் = ನಿತ್ಯಸೂರಿಗಳ ಒಡೆಯನು, ಮಧು ಮது = ಜೇನು ತುಂಬಿರುವ, ಮಲರ್ மலர் = ಹೂಗಳ, ತೊಙ್ಗಲ್ தொங்கல் = ಹಾರವನ್ನು, ನೀಳ್ ನீள் = ಎತ್ತರವಾದ, ಮುಡಿಯಾನ್ முடியாண் = ಕಿರೀಟವುಳ್ಳವನು, ನೆಡಿಯಾನ್ நெடி யாண் = ಸರ್ವೋತ್ಕೃಷ್ಟನು, ಪಡಿಕಡನ್ದಾನ್ படி கடந்தாண் = ಭೂಮಿಯನ್ನು ಅಳೆದುಕೊಂಡವನು, ತುಙ್ಗಲ್ ಕೋಯಿಲ್ மங்குல் தோ ಮಣಿಮಾಡ மணி மாடம் = ರತ್ನಮಯವಾದ ಮಹಡಿಗಳನ್ನುಳ್ಳ, ಮಣಿ ಮಾಡ மணி மாடம் = ರತ್ನ ಬಿಳಿಯ ಉಪ್ಪರಿಗೆಗಳ, ವೆಣ್ ಕೊಡಿ வெண் கொடி = ಬಿಳಿಯ ಧ್ವಜಗಳು, ಮಾಡವ ಮೀದು மாகம் மீது = ಆಕಾಶದ ಮೇಲೆ, ಉಯ ರ್ನ್ದು உயர்ந்து = ಎತ್ತರವಾಗಿ, ವಾನ್ ವான் யாண் = ಎತ್ತರವಾಗಿ, ವಿಣ್ ஏறி = ವಿಂ, ವಾನ್ = ಆಕಾಶದಲ್ಲಿ, ಉಯರ್ உயர் = ಎತ್ತರದಲ್ಲಿರುವ ತಿಙ್ಗಳ್ ತಾನ್ திங் ಕಳ್ ತಾನ್ = ಚಂದ್ರನನ್ನು, ಅಣಾವುಮ್ அணாவும் = ಸ್ಪರ್ಶಿಸುವ, ತಿರುಕ್ಕೋಟ್ಟಿಯೂರಾನೇ திருக்கோட்டியூரானே = ತಿರುಕ್ಕೋಟ್ಟಿಯೂರಿನಲ್ಲಿರುವವನೇ.

ದೊಡ್ಡದೊಡ್ಡ ಅಲೆಗಳು ತುಂಬಿರುವ ವಿಸ್ತಾರವಾದ ಕಡಲಿನ ಬಣ್ಣದವನು, ಇಂದ್ರನೀಲಮಣಿಯ ಬಣ್ಣದವನು, ನಿತ್ಯಸೂರಿಗಳ ಒಡೆಯನು, ಜೇನು ತುಂಬಿರುವ ಹೂಗಳ ಹಾರವನ್ನು, ಎತ್ತರವಾದ ಕಿರೀಟವನ್ನು ಧರಿಸಿರುವವನು, ಮಹಡಿಗಳ ಸರ್ವೋತ್ಕೃಷ್ಟನು, ಭೂಮಿಯನ್ನು ಅಳೆದುಕೊಂಡವನು, ರತ್ನಮಯವಾದ ಉಪ್ಪರಿಗೆಗಳ ಮೇಲಣ ಬಿಳಿಯ ಧ್ವಜಗಳು ಮುಟ್ಟುವಂಥ ಆಕಾಶದಲ್ಲಿ ಎತ್ತರಕ್ಕೆ ಏರಿ, ಗಗನದಲ್ಲಿ ಬಹಳ ಎತ್ತರದಲ್ಲಿರುವ ಚಂದ್ರನನ್ನು ಸ್ಪರ್ಶಿಸುವಂಥ ತಿರುಕ್ಕೋಟ್ಟಿಯೂರಿನಲ್ಲಿ ನೆಲಸಿರುವವನೇ. (5)

ದೊಡ್ಡದೊಡ್ಡ ಅಲೆಗಳು ನಿರಂತರವಾಗಿ ತುಂಬಿರುವ ಬಲುದೊಡ್ಡ ಕಡಲಿನ ಬಣ್ಣವೆಂದರೆ, ಥಳಥಳಿಸುವ ಹೊಳಪು ಬಣ್ಣ. ಭಗವಂತನ ರೂಪದ ಹೊಳಪನ್ನು ಈ ಹೋಲಿಕೆ ನಿಜವಾಗಿಯೂ ಬಿಂಬಿಸುವುದೇ? ಎನಿಸುತ್ತದೆ.

ನೆಲಸಿರುವುದು ಇಲ್ಲಿಯೇ ಎನ್ನುವಂತೆ ಬ್ರಹ್ಮಾದಿ ದೇವತೆಗಳು ಬಂದು ಸ್ತುತಿಸುವ (6)
ತಿರುಕ್ಕೋಟ್ಟಿಯೂರಿನಲ್ಲಿ ನೆಲಸಿರುವವನೇ.

ಆಳ್ವಾರರು ಹೇಳುತ್ತಾರೆ: ಭಗವಂತನು ದುಷ್ಟ ಶಿಕ್ಷಕನೆಂದೂ ಶಿಷ್ಟರಕ್ಷಕನೆಂದೂ ಹೆಸರುಗೊಂಡವನು. ಅದಕ್ಕೆ ಒಂದು ನಿದರ್ಶನವನ್ನು ಕೊಡಬಹುದು. ತಂದೆ, ತಾನು ಆಜ್ಞೆಯನ್ನೆಂದೂ ದಾಟಿಯಿಲ್ಲದ ಪರಾಕ್ರಮಿಯೆಂದೂ ಮೂರುಲೋಕಗಳನ್ನೂ ಜಯಿಸಿ ಬೀಗುತ್ತಿದ್ದ ದುಷ್ಟ ರಾವಣಾಸುರನನ್ನು ಭಗವಂತನು ಶ್ರೀರಾಮನಾಗಿ (ಸಾಮಾನ್ಯ ಮಾನವನಾಗಿ) ಅವತರಿಸಿ ತನ್ನ ಬಿಲ್ಲುಬಾಣಗಳಿಂದಲೇ ಅವನನ್ನು ಕೊಂದುಹಾಕಿದನು. ಅವನ ತಮ್ಮನೂ ಅನುಚರನೂ ಆಗಿದ್ದ ವಿಭೀಷಣನನ್ನು ಅವನ ಸದ್ಗುಣಗಳಿಗಾಗಿ ಮನ್ನಿಸಿ, ಅವನಿಗೆ ಲಂಕೆಯ ರಾಜ್ಯವನ್ನು ಕಟ್ಟಿದನು. ಕರುಣಾಮೂರ್ತಿಯಾದ ಆ ಸ್ವಾಮಿಯೇ ಈಗ ತಿರುಕ್ಕೋಟ್ಟಿಯೂರಿನಲ್ಲಿ, ಭಕ್ತರ ಉದ್ಧಾರಕ್ಕಾಗಿಯೇ ಬಂದು ನೆಲಸಿದ್ದಾನೆ. ಭಾರತ ಖಂಡದ ರಾಜರು ಮಾತ್ರವಲ್ಲದೆ ಜಂಬೂದ್ವೀಪದ ರಾಜರೆಲ್ಲರೂ ಅಲ್ಲಿಗೆ ಬಂದು ಸ್ವಾಮಿಯ ಸೇವೆ ಮಾಡುತ್ತಾರೆ. ಇದನ್ನರಿತು ಬ್ರಹ್ಮಾದಿ ದೇವತೆಗಳೂ ಸಹ ಅಲ್ಲಿಗೆ ಬಂದು ಸ್ವಾಮಿಯನ್ನು ಸ್ತುತಿಸುತ್ತಾರೆ. ನಾವೂ ಸಹ ಅಲ್ಲಿಗೆ ಹೋಗೋಣ. ಸ್ವಾಮಿಯನ್ನು ಪ್ರಾರ್ಥಿಸೋಣ. ಉದ್ಧಾರವಾಗೋಣ.

7. கன்று கொண்டு விளங்கனி யெறிந்து
ஆநிரைக் கழிவன்று, மாமழை
நின்று காத்துகந்தான்
நிலமகட் கினியான்,
குன்றின் முல்லையின் வாசமும்
குளிர் மல்லிகை மணமு மளைந்து, இளந்
தென்றல் வந்துலவுந்
திருக்கோட்டியூரானே.

ಕನ್ರುಕೊಂಡು ವಿಳಂಗನಿಯೆರಿನ್ದು ಆನಿರೈಕ್ಕಳಿವನ್ರು, ಮಾಮಳೈ
ನಿನ್ರು ಕಾತ್ತುಗನ್ದಾನ್ ನಿಲಮಗಟ್ಕಿನಿಯಾನ್,
ಕುನ್ರಿನ್ ಮುಲ್ಲೈಯಿನ್ ವಾಸಮುಮ್ ಕುಳಿರ್ ಮಲ್ಲಿಗೈ ಮಣಮುಮಳೈನ್ದು, ಇಳನ್
ತೆನ್ರಲ್ ವನ್ದುಲವುನ್ದಿರುಕ್ಕೋಟ್ಟಿಯೂರಾನೇ.

ಕನ್ರುಕೊಂಡು கன்று கொண்டு = ಕರುವನ್ನಿಟ್ಟುಕೊಂಡು, ವಿಳಂಗನಿ விளங்கனி = ಬೇಲದ ಹಣ್ಣುಗಳಿಗೆ, ಎರಿನ್ದು எறிந்து = ಎಸೆದು (ಎಸೆದವನು), ಆನಿರೈಕ್ಕು ஆநிரைக்கு = ದನಕರುಗಳಿಗೆ (ಮಂದೆಗೆ), ಅಳಿವು ಎನ್ರು அழிவு என்று = ಅಳಿವು ಎಂದು, ಮಾಮಳೈಯಿನ್ மாமழைனின்று = ಭಾರಿ ಮಳೆಯಿಂದ, ಕಾತ್ತು காத்து = ರಕ್ಷಿಸಿ, ಉಗನ್ದಾನ್ உகந்தான் = ಹರ್ಷಿಸಿದವನೂ, ಕುನ್ರಿನ್ ಮುಲ್ಲೈಯಿನ್ குன்றின் முல்லையின் = ಬೆಟ್ಟದ ಮಲ್ಲಿಗೆಯ, ವಾಸಮುಮ್ வாசமும் = ಪರಿಮಳವನ್ನೂ, ಕುಳಿರ್ ಮಲ್ಲಿಗೈ குளிர் மல்லிகை = ತಂಪಾದ ಮಲ್ಲಿಗೆಯ, ಮಣಮುಮ್ மணமும் = ಸುವಾಸನೆಯನ್ನೂ, ಅಳೈನ್ದು அளைந்து = ಹೊತ್ತು, ಇಳಮ

ಕೆನ್ಬುಲ್ இளம் தென்றல் = ಮೃದುವಾದ ತಂಗಾಳಿಯು, ವನ್ದು
வந்து = ಬಂದು, ಉಲವುಮ್ உலவும் = ಸಂಚರಿಸುವ (ಅಲೆದಾಡುವ),
ತಿರುಕ್ಕೋಟ್ಟಿಯೂರಾನೇ திருக்கோட்டியூரானே = ತಿರುಕ್ಕೋಟ್ಟಿ
ಯೂರಿನ ಸ್ವಾಮಿಯೇ.

ಕರುವನ್ನೆತ್ತಿಕೊಂಡು ಬೇಲದ ಹಣ್ಣುಗಳಿಗೆ ಎಸೆದವನು, ದನಕರುಗಳ
ಮಂದೆಗೆ ಅಳಿವುಂಟಾಗುವುದಲ್ಲ ಎಂದು (ಅವುಗಳನ್ನು) ಬಿರುಸು ಮಳೆಯಿಂದ
ರಕ್ಷಿಸಿ ಪಾಲಿಸಿದವನು, ಬೆಟ್ಟದ ಮಲ್ಲಿಗೆಯ ಪರಿಮಳವನ್ನು ಕಂಪಾದ ಮಲ್ಲಿ
ಗೆಯ ಸುಗಂಧವನ್ನು ಹೊತ್ತು ಮೃದುವಾದ ತಂಗಾಳಿಯು ಬಂದು ಅಲೆದಾ (7)
ಡುವಂಥ ತಿರುಕ್ಕೋಟ್ಟಿಯೂರಿನಲ್ಲಿ ನೆಲಸಿರುವವನೇ.

ಆಳ್ವಾರರು ಹೇಳುತ್ತಾರೆ: ಬಾಲಕೃಷ್ಣನಾಗಿ ಭಗವಂತನು ದನಕರುಗಳ
ಮಂದೆ ಕಾಡಿಗೆ ಹೋಗುತ್ತಿದ್ದಾಗ, ಒಂದು ದಿನ, ಅವನನ್ನು ಕೊಲ್ಲಬೇಕೆಂದು
ಕರುವಾಗಿ ಬಂದ ವತ್ಸಾಸುರನನ್ನು, ಅದೇ ಕೆಲಸಕ್ಕಾಗಿ ಬೇಲದ ಮರವಾಗಿ
ಬೆಳೆದು ನಿಂತಿದ್ದ ಕಪಿತ್ಥಾಸುರನ ಮೇಲಕ್ಕೆ ಬೀಸಿ ಎಸೆದು ಇಬ್ಬರನ್ನೂ ಕೊಂದು
ಹಾಕಿದನು. ನಂದಗೋಕುಲದ ಮೇಲೆ ಕೋಪಗೊಂಡು ದೇವೇಂದ್ರನು
ಅದರ ಮೇಲೆ ಬಹಳ ಬಲವಾದ ಮಳೆಯನ್ನು ಸುರಿಸಿದಾಗ, ಬಾಲಕೃಷ್ಣನು
ದನಕರುಗಳ ಮೇಲಣ ಕರುಣೆಯಿಂದ, ಗೋವರ್ಧನಗಿರಿಯನ್ನೇ ಎತ್ತಿ, ಕೊಡೆಯಂ
ತೆ ಹಿಡಿದು, ಅದರಡಿಯಲ್ಲಿ ಗೋವಳರನ್ನು ಗೋವುಗಳನ್ನು ರಕ್ಷಿಸಿದನು. ಮೊಲ್ಲೆ
ಮಲ್ಲಿಗೆ ಹೂಗಳ ಸುಗಂಧವನ್ನು ಹೊತ್ತು ಹಿತವಾದ ತಂಗಾಳಿಯು ಸುಳಿ
ಸುತ್ತ ಆನಂದವನ್ನುಂಟುಮಾಡುವುದು ತಿರುಕ್ಕೋಟ್ಟಿಯೂರಿನಲ್ಲಿ. ಕರುಣಾ
ಮೂರ್ತಿಯಾದ ಆ ಸ್ವಾಮಿಯೇ ತಿರುಕ್ಕೋಟ್ಟಿಯೂರಿನಲ್ಲಿ ನೆಲಸಿದ್ದಾನೆ. ಅವನ
ತಿರುವಡಿಗಳನ್ನಾಶ್ರಯಿಸಿ, ನಾವು ಉದ್ಧಾರವಾಗೋಣ

8 பூங்குருந்தொசித்தானை காய்ந்து
அரிமாச் செகுத்து, அடியேனையாளுகந்து
ஈங்கென்னுள் புகுந்தான்
இமையோர்கள் தம் பெருமான்,
தூங்கு தண் பலவின் கனி தொகு
வாழையின் கனியொடு மாங்கனி,
தேங்கு தண் புனல் சூழ்
திருக்கோட்டியூரானே.

ಪೂಙ್ಗುರುನ್ದೊಶಿತ್ತಾನೈಕಾಯ್‌ನ್ದು ಅರಿಮಾಚ್ಚೆಗುತ್ತು, ಅಡಿಯೇನೈಯಾಳುಗನ್ದು
ಈಙ್ಗೆನ್ನುಳ್ ಪುಗುನ್ದಾನ್ ಇಮೈಯೋರ್‌ಗಳ್ ತಮ್ ಪೆರುಮಾನ್,
ತೂಙ್ಗು ತಣ್ ಪಲವಿನ್ ಕನಿ ತೊಗು ವಾೞೈಯಿನ್ ಕನಿಯೊಡು ಮಾಙ್ಗನಿ,
ತೇಙ್ಗು ತಣ್ ಪುನಲ್ ಶೂೞ್ ತಿರುಕ್ಕೋಟ್ಟಿಯೂರಾನೇ.

ಪೂ பூ = ಹೂ ಬಿಟ್ಟಿರುವ, ಕುರುನ್ದು குருந்து = ಕಾಡುನಿಂಬೆ ಮರ
ಗಳನ್ನು, ಒಶಿತ್ತು ஒசித்து = ಮುರಿದು ಹಾಕಿ, ಆನೈ ஆனை = ಅತ್ತಿಮರವನ್ನು,

Garani Srinivasan

ಕಾಯ್ಚ್ಚು காய்த்து = ನಾಶಪಡಿಸಿ, ಅಂ அரி = ಬಲಿಷ್ಠ, ಮಾ மா =
ಕುದುರೆಯನ್ನು, ಶೆಟ್ರು செகுத்து = ಕೊಂದುಹಾಕಿದವನು, ಅಡಿ
ಯೇನೈ அடியேனை = ಪಾದಸೇವಕನಾದ (ನನ್ನ), ಆಳ್ ஆள் =
ಸೇವೆಯಲ್ಲಿ, ಉಗನ್ದು உகந்து = ಹರ್ಷಿಸಿದವನು, ಈಙ್ಗು ஈங்கு
= ಈ ಜನ್ಮದಲ್ಲಿಯೇ (ಜೀವನದಲ್ಲಿಯೇ), ಎನ್ ನಣ್ = ನನ್ನ, ಉಳ್ಳ್ உள்
= ಅಂತರಂಗವನ್ನು, ಪುಗುನ್ದಾನ್ புகுந்தான் = ಪ್ರವೇಶಿಸಿದವನು,
ಇಮೈಯೋರ್ಗಳ್ ತಮ್ இமையோர்கள் தம் = ನಿತ್ಯಸೂರಿಗಳ,
ಪೆರುಮಾನ್ பெருமான் = ಸ್ವಾಮಿಯೂ, ತೂಙ್ಗು தூங்கு = ತೂಗಾ
ಡುವ, ತಣ್ தண் = ತಂಪಾದ, ಪಲವಿನ್ ಕನಿ பலவின் கனி =
ಹಲಸಿನ ಹಣ್ಣು, ತೊಕ್ಕು தொக்கு = ದಟ್ಟವಾದ, ವಾಳೈಯಿನ್ ಕನಿಯೊ
ಡುಮ್ வாழையின் கனியோடும் = ಬಾಳೆಯ ಹಣ್ಣು, ಮಾ
ಙ್ಗನಿ மாங்கனி = ಮಾವಿನ ಹಣ್ಣು, ತೇಙ್ಗು தேங்கு = ತೇಲುತ್ತಿರುವ,
ತಣ್ தண் = ತಂಪಾದ, ಪುನಲ್ புனல் = ನೀರ್ನಲೆಗಳಿಂದ, ಸೂಳ್ சூ
ழ் = ಸುತ್ತುವರಿದಿರುವ, ತಿರುಕ್ಕೋಟ್ಟಿಯೂರಾನೆ திருக்கோட்டி
யூரானே = ತಿರುಕ್ಕೋಟ್ಟಿಯೂರಿನ ಸ್ವಾಮಿಯೇ.

ಹೂಬಿಟ್ಟಿರುವ ಕಾಡುಸಂಪಿಗೆ ಮರಗಳನ್ನು ಮುರಿದುಹಾಕಿದವನು, ಅತ್ತಿ ಮರಗಳನ್ನು ನಾಶಪಡಿಸಿದವನು, ಬಲಿಷ್ಠವಾದ ಕುದುರೆಯನ್ನು ಕೊಂದುಹಾಕಿದವನು, ಪಾದಸೇವಕನಾದ ನನ್ನ ಸೇವೆಯಲ್ಲಿ ಹರ್ಷಿಸಿದವನು, ಈ ಜೀವನದಲ್ಲಿಯೇ (ಜನ್ಮದಲ್ಲಿಯೇ) ನನ್ನ ಅಂತರಂಗವನ್ನು ಪ್ರವೇಶಿಸಿದವನು, ನಿತ್ಯಸೂರಿಗಳ ಸ್ವಾಮಿಯೂ, ತೂಗಾಡುವ ತಂಪಾದ ಹಲಸಿನ ಹಣ್ಣು, ಒತ್ತಾಗಿರುವ ಬಾಳೆಯ ಹಣ್ಣು, ಮಾವಿನ ಹಣ್ಣು ತೇಲುತ್ತಿರುವ ತಂಪಾದ ನೀರ್ನಲೆಗಳಿಂದ ಸುತ್ತುವರಿದಿರುವ ತಿರುಕ್ಕೋಟ್ಟಿಯೂರಿನ ಸ್ವಾಮಿಯೇ (8)

ಭಗವಂತನು ಶ್ರೀಕೃಷ್ಣನಾಗಿ ಅವತರಿಸಿದಾಗ, ಕಂಸನಿಂದ ಪ್ರೇರಿತನಾಗಿ ಕೇಶಿಯೆಂಬ ರಾಕ್ಷಸನು ಕುದುರೆಯಾಕಾರದಲ್ಲಿ ಬಾಲಕೃಷ್ಣನನ್ನು ಕಚ್ಚಿ ಕೊಲ್ಲಲೆಂದು ತೆರೆದ ಬಾಯಿಂದ ಅವನ ಮೇಲೆ ನುಗ್ಗಿ ಬಂದನು. ಕೃಷ್ಣನು ತನ್ನ ತೋಳನ್ನು ಅದರ ಬಾಯೊಳಕ್ಕೆ ತೂರಿಸಿ, ತೋಳನ್ನು ಬೆಳೆಸಿ, ಕುದುರೆಯನ್ನು ಸೀಳಿ ಕೊಂದುಹಾಕಿದನು.

(ಮೂರು ಹಣ್ಣುಗಳು)

ದಕ್ಷಿಣಭಾರತದಲ್ಲಿ ಪ್ರಸಿದ್ಧವಾದ 'ಮುಕ್ಕನಿ - முக்கனி" - ಎಂದರೆ ಹಲಸು, ಮಾವು, ಬಾಳೆ ಹಣ್ಣುಗಳು. ಇವು ಈ ಪ್ರದೇಶದಲ್ಲಿ ಸಮೃದ್ಧವಾಗಿ ಬೆಳೆಯುತ್ತವೆ. ತಿರುಕ್ಕೋಟ್ಟಿಯೂರಲ್ಲಿಯೂ ಅವು ಹೇರಳವೇ.

9. கோவையின் தமிழ் பாடுவார்
குடமாடுவார் தடமாமலர் மிசை,
மேவு நான்முகனில்
விளங்கு புரிநூலர்,

மேவு நான்மறைவாணர் ஐவகைவேள்வி
ஆறங்கம் வல்லவர் தொழும்,

தேவதேவபிரான்
திருக்கோட்டியூரானே.

ಕೋವೈಯಿನ್ ತಮಿಳ್ ಪಾಡುವಾರ್ ಕುಡಮಾಡುವಾರ್ ತಡಮಾಮಲರ್ ಮಿಸೈ,
ಮೇವು ನಾನ್ಮುಗನಿಲ್ ವಿಳಂಗು ಪುರಿನೂಲರ್,
ಮೇವು ನಾನ್ಮಱೈವಾಣರ್ ಐವಗೈವೇಳ್ವಿ ಆಱಂಗಮ್ ವಲ್ಲವರ್ ತೊಳುಮ್,
ದೇವದೇವ ಪಿರಾನ್ ತಿರುಕ್ಕೋಟ್ಟಿಯೂರಾನೇ.

ಕೋವೈ கோவை = ಕ್ರಮವಾಗಿ, ಇನ್ இன் = ಇನಿದಾಗಿ, ತಮಿಳ್ தமிழ் = ತಮಿಳಿನ ಪಾಶುರ(ಹಾಡು)ಗಳನ್ನು, ಪಾಡುವಾರ್ பாடுவார் = ಹಾಡುವವರೂ, ಕುಡಮ್ ಆಡುವಾರ್ குடம் ஆடுவார் = ಕೊಡದ ಕುಣಿತವನ್ನು ಆಡುವವರೂ, ತಡ தட = ವಿಶಾಲವಾದ, ಮಾ மா = ಶ್ರೇಷ್ಠವಾದ, ಮಲರ್ மலர் = ಹೂವಿನ, ಮಿಸೈ மிசை = ಮೇಲುಗಡೆ, ಮೇವು மேவு = ವಾಸಿಸುವ(ಇರುವ), ನಾನ್ಮುಗನಿಲ್ நான்முகனில் = ಬ್ರಹ್ಮನಲ್ಲಿ (ಬ್ರಹ್ಮದೇವನಿಂದ), ವಿಳಂಗು விளங்கு = ಬೆಳಗುವ, ಪುರಿನೂಲರ್ புரிநூலர் = ಬ್ರಹ್ಮಸೂತ್ರವನ್ನು (ಯಜ್ಞೋಪವೀತವನ್ನು) ಳ್ಳವರೂ, ಮೇವು மேவு = ಅಭ್ಯಾಸ ಮಾಡಿರುವ, ನಾನ್ಮಱೈವಾಣರ್ நான்மறைவாணர் = ನಾಲ್ಕು ವೇದಗಳ ವಿದ್ವಾಂಸರೂ, ಐವಗೈ ஐவகை = ಐದು ಬಗೆಯ, ವೇಳ್ವಿ வேள்வி = ಯಜ್ಞಗಳನ್ನು, ಆಱಂಗಮ್ ஆறங்கம் = ಆರು ವೇದಾಂಗಗಳನ್ನು, ವಲ್ಲವರ್ வல்லவர் = ಬಲ್ಲವರೂ, ತೊಳುಮ್ தொழும் = ನಮಸ್ಕರಿಸುವ, ದೇವದೇವ ಪಿರಾನ್ தேவதேவபிரான் = ದೇವಾಧಿದೇವನು, ತಿರುಕ್ಕೋಟ್ಟಿಯೂರಾನೇ திருக்கோட்டியூரானே = ತಿರುಕ್ಕೋಟ್ಟಿಯೂರಿನ ಸ್ವಾಮಿಯೇ.

ಕ್ರಮವಾಗಿ ಇನಿದಾಗಿ ತಮಿಳಿನ ಪಾಶುರಗಳನ್ನು ಹಾಡುವವರೂ, ಕೊಡದ ಕುಣಿತವನ್ನಾಡುವವರೂ, ವಿಶಾಲವಾದ ಮತ್ತು ಶ್ರೇಷ್ಠವಾದ ಹೂವಿನ ಮೇಲೆ ವಾಸಿಸುವ ಬ್ರಹ್ಮನಲ್ಲಿ (ಬ್ರಹ್ಮದೇವನಿಂದ) ಬೆಳಗುವ ಬ್ರಹ್ಮಸೂತ್ರವನ್ನು (ಯಜ್ಞೋಪವೀತವನ್ನು) ಳ್ಳವರೂ, ನಾಲ್ಕು ವೇದಗಳನ್ನು ಚೆನ್ನಾಗಿ ಕಲಿತಿರುವವರೂ, ಐದು ಯಜ್ಞಗಳನ್ನು, ಆರು ವೇದಾಂಗಗಳನ್ನು ಬಲ್ಲವರೂ ನಮಸ್ಕರಿಸುವ ದೇವಾಧಿದೇವನೇ ತಿರುಕ್ಕೋಟ್ಟಿಯೂರಿನಲ್ಲಿ ನೆಲಸಿರುವ ಸ್ವಾಮಿ! (9)

ತಿರುಕ್ಕೋಟ್ಟಿಯೂರಿನಲ್ಲಿ ಉತ್ತಮ ದಾನಿಗಳು, ಕವಿಗಳು, ಗಾಯಕರು, ನೃತ್ಯಕಲಾನಿಪುಣರು, ವೇದವಿದ್ವಾಂಸರು, ಧರ್ಮವ್ಯವಹಾರರು, ಚತುರರು, ವಾಸಿಸುತ್ತಾರೆ.

ಕವಿಗಳು ಗಾಯಕರುಗಳು ತಮ್ಮ ತಮ್ಮ ಸಾಮರ್ಥ್ಯದಿಂದಲೂ, ಸಗುಣದ ವಿವರಣೆಗಳಿಂದಲೂ, ಭಗವಂತನನ್ನು ಸ್ತುತಿಸುತ್ತಾರೆ. ಗಾಯಕರು ಬಗೆಬಗೆಯ ರಾಗಗಳಿಂದ ಭಗವಂತನನ್ನು ಮನವಯುಬ್ಬುವಂತೆ, ಹಾಡುತ್ತಾನೆ. ನಾಟ್ಯಪಾರಂಗರು ತಮ್ಮ ವಿವಿಧ ಅಭಿನಯಗಳಿಂದ ಭಗವಂತನನ್ನು ತಣಿಸಲು ಯತ್ನಿಸುತ್ತಾರೆ. ವೇದವಿದ್ವಾಂಸರು ತಮ್ಮ ಪಾಂಡಿತ್ಯವನ್ನೆಲ್ಲ ಭಗವಂತನನ್ನು ಬಣ್ಣಿಸಲಾಗಿ ವರ್ಣಿಸಿ ಆನಂದಿಸಲು ಬಳಸುತ್ತಾರೆ. ದಿವ್ಯವಾದ ಪ್ರಬಂಧಗಳಲ್ಲಿ ವೇದ ಮಂತ್ರಗಳನ್ನು ಎಡೆಬಿಡದೆ ಘೋಷಿಸುತ್ತಾರೆ. ವೈದಿಕರು ಸಾಂಗವಾಗಿ ನಾಲ್ಕು ವೇದಗಳನ್ನು ಕಲಿತು, ಅವುಗಳನ್ನು ಅನುಷ್ಠಾನದಲ್ಲಿ ತಂದುಕೊಂಡಿದ್ದಾರೆ. ಬ್ರಹ್ಮತೇಜಸ್ಸಿನಿಂದ ಕೂಡಿದವರಾಗಿ, ಕೈಗೊಳ್ಳುವ ಯಜ್ಞೋಪವೀತಧಾರಿಗಳಾಗಿ, ಪಂಚ ಮಹಾಯಜ್ಞಗಳನ್ನು ನಡೆಸುತ್ತಾ, ಅಗ್ನಿಕಾರ್ಯಗಳನ್ನು ಬಿಡದೆ ಮಾಡುತ್ತಾ ಭಗವಂತನನ್ನು ಪೂಜಿಸುತ್ತಾರೆ. ಇದಲ್ಲದೆ, ಶುದ್ಧವಾದ ತಮಿಳುಭಾಷೆಯಲ್ಲಿ ಅಚ್ಚಕಟ್ಟಾಗಿ ಭಕ್ತಿಗೀತೆಗಳನ್ನು ಪಾಶುರಗಳನ್ನು (ದಿವ್ಯಪ್ರಬಂಧಗಳನ್ನು) ರಚಿಸಿ, ಭಗವಂತನನ್ನು ಹೊಗಳಿ ಹಾಡಿ ತಣಿಸಲು ಯತ್ನಿಸುತ್ತಾರೆ. ಇವರೆಲ್ಲರ ಸ್ತುತಿನುತಿಗಳೂ ಬೇರೆ ಬೇರೆಯಾಗಿ ತೋರಿದರೂ ಸಹ, ಎಲ್ಲರೂ ಒಬ್ಬನೇ ಆದ ಸರ್ವೇಶ್ವರನನ್ನೇ ಒಲಿಸಿಕೊಳ್ಳಲು ಯತ್ನಿಸುತ್ತಿರುವುದು. ಆ ದೇವದೇವನೇ ತಿರುಕ್ಕೋಟ್ಟಿಯೂರಿನಲ್ಲಿ ಭಕ್ತ ಜನೋದ್ಧಾರಕನಾಗಿ ನೆಲೆಸಿದ್ದಾನೆ. ತಿರುಕ್ಕೋಟ್ಟಿಯೂರು ಭಗವದ್ಭಾಗವತರಿಂದ ಕೂಡಿರುವ ಎಂಥ ಪುಣ್ಯಕ್ಷೇತ್ರ!

10. ஆலுமாவலவன் கலிகன்றி
மங்கையர் தலைவன், அணிபொழில்
சேல்கள்பாய் கழனித்
திருக்கோட்டியூரானை,
நீலமாமுகில் வண்ணனை நெடுமாலை
யின் தமிழால் நினைந்த, இந்
நாலுமாறும் வல்லார்க்கு
இடமாகும் வானுலகே.

ಆಲುಮಾವಲವನ್ ಕಲಿಕನ್ರಿ ಮಙ್ಗೈಯರ್ ತಲೈವನ್, ಅಣಿಪೊಳಿಲ್
ಶೇಲ್‌ಗಳ್ ಪಾಯ್ ಕಳನಿತ್ತಿರುಕ್ಕೋಟ್ಟಿಯೂರಾನೈ,
ನೀಲಮಾಮುಗಿಲ್ ವಣ್ಣನೈ ನೆಡುಮಾಲೈ ಯಿನ್ ತಮಿಳಾಲ್ ನಿನೈನ್ದ, ಇ
ನ್ನಾಲುಮಾರುಮ್ ವಲ್ಲಾರ್ಕ್ಕು ಇಡಮಾಗುಮ್ ವಾನುಲಗೇ.

ಆಲುಮ ஆலும் = (ತ್ರಿಪಾದದಂತೆ) ನರ್ತಿಸುವ, ಮಾ மா = ಕುದುರೆಯನ್ನು, ವಲವನ್ வலவன் = ಏರಬಲ್ಲವನೂ, ಕಲಿಕನ್ರಿ கலிகன்றி = ಕಲಿಧ್ವಂಸಿಯೂ, ಮಙ್ಗೈಯರ್ ತಲೈವನ್ மங்கையர் தலைவன் = ತಿರುಮಂಗೈನಾಡಿನ

Garani Srinivasan

ಜನಂಗೆ ಒಡೆಯನೂ, அணி அணி = ಸೊಬಗಿನ, ಪೊಂಟಾಲ್ பொழில் = ತೋಟಗಳಿಂದಲೂ, ಶೇಲ್‌ಕಳ್ சேல்கள் = ಶೇಲ್ ಮೀನುಗಳು, ಪಾಯ್ ಪாய் = ಜಿಮ್ಮುತ್ತಿರುವ, ಕಲನಿ கழனி = ಗದ್ದೆಗಳಿಂದಲೂ ಸುತ್ತುವರಿದಿರುವ, ತಿರುಕ್ಕೋಟ್ಟಿಯೂರಾನ್ನೈ திருக்கோட்டியூரா ನಿಲ = ತಿರುಕ್ಕೋಟ್ಟಿಯೂರಿನಲ್ಲಿ ನೆಲಸಿರುವವನನ್ನು, ನೀಲಮಾ நீலம் ಬಿಣ = ಕಪ್ಪನೆಯ, ಮಾಮುಹಿಲ್ ವಣ್ಣನೈ மாமுகில் வண்ணனை = ದೊಡ್ಡ ಮೋಡದ ಬಣ್ಣದವನನ್ನು, ನೆಡುಮಾಲೈ நெடுமாலை = ಸರ್ವೇಶ್ವರನನ್ನು ಕುರಿತು, ಇನ್ ஆன் = ಇನಿದಾದ, ಶಮಿಲೂಲ್ தமிழ் = ತಮಿಳಿನಲ್ಲಿ, ನಿನ್ನೆನ್ನ நிரைத்த = ಸ್ಮರಿಸಿದ, ಇನಾಲುಮಾ ஆய = ಈ ಹತ್ತು ಪಾಶುರಗಳನ್ನು, ವಲ್ಲಾರ್‌ಕ್ಕು ಮಾ ஆனாலும ஆறும் = ಈ ಹತ್ತು ಪಾಶುರಗಳನ್ನು, ವಲ್ಲಾರ್‌ಕ್ಕು ಮಾ இடம் = ಸ್ಥಳವು, ಆಕ್ಕುಮ ಬಲ್ಲಾರ್‌ಕ್ಕು = ಬಲ್ಲವರಿಗೆ, ಇದಮಾ இடம் = ಸ್ಥಳವು, ಆಕ್ಕುಮ ಉಲಗ = ಪರಮ ಆக்கும் = ಆಗುತ್ತದೆ, ವಾನ್ ಉಲಗೇ ವಾನ್ ಉಲಗ = ಪರಮ ಪದವೇ.

ಪ್ರವಾಹದಂತೆ ಮುನ್ನುಗ್ಗುವ ಕುದುರೆಯನ್ನು ಪರಬಲ್ಲವನೂ, ಕಲ್ಪಿಷ್ಟ ಜನಂಗೆ ಒಡೆಯನೂ ಆದವನು ಸೊಬಗಿನ ಸಿಯೂ, ತಿರುಮಂಗೈನಾಡಿನ ಜನರಿಗೆ ಒಡೆಯನೂ ಆದವನು ಸೊಬಗಿನ ತೋಟಗಳಿಂದಲೂ ಶೇಲ್ ಮೀನುಗಳು ಜಿಮ್ಮಿ ನೆಗೆಯುವ ಗದ್ದೆಗಳಿಂದ ಲೂ ಸುತ್ತುವರಿದಿರುವ ~~ಸ್ಥಲವಾದ~~ ತಿರುಕ್ಕೋಟ್ಟಿಯೂರಿನಲ್ಲಿ ನೆಲಸಿರುವನನ್ನು, ದೊಡ್ಡ ಕರಿಯ ಮೋಡದಂತೆ ಬಣ್ಣವುಳ್ಳವನನ್ನು, ಸರ್ವೇಶ್ವರನನ್ನು ಕುರಿತು ಇನಿದಾದ ತಮಿಳಿನಲ್ಲಿ ಸ್ಮರಿಸಿರುವ ಈ ಹತ್ತು ಪಾಶುರಗಳನ್ನು ಕುರಿತು ಇನಿದಾದ ತಮಿಳಿನಲ್ಲಿ ಸ್ಮರಿಸಿರುವ ಈ ಹತ್ತು ಪಾಶುರಗಳನ್ನು ಬಲ್ಲವರಿಗೆ ನಿತ್ಯಸೂರಿಗಳ ಲೋಕವಾದ ಪರಮ ಪದವೇ ವಾಸಸ್ಥಳವಾಗುತ್ತದೆ. (10)

ಇದು ಈ ತಿರುಮೊಳಿಯ ಕಡೆಯ ಪಾಶುರ. ಬ್ರಹ್ಮಾಂಡನಾಯಕನಾದ, ಜಗತ್ಪ್ರಷ್ಟನಾದ, ಸರ್ವೇಶ್ವರನಾದ, ಸರ್ವಶಕ್ತನಾದ ಭಗವಂತನ ಅತಿ ಶ್ರೇಷ್ಠವಾದ ಕಲ್ಯಾಣ ಗುಣಗಳನ್ನು ಈ ತಿರುಮೊಳಿಯಲ್ಲಿ ವಿವರಿಸಲಾಗಿದೆ. ಭಗವಂತನು ಆಶ್ರಿತವತ್ಸಲನು. ಪರಮ ಕರುಣಾಳು. ದುಷ್ಟರನ್ನು ನಿಗ್ರಹಿಸಿ ಶಿಷ್ಟರನ್ನು ಪಾಲಿಸುತ್ತಾನೆ. ಪಾಲ್ಗಡಲಲ್ಲಿ ಪ್ರಭುಯು ಆಲದೆಲೆಯ ಮೇಲೆ ಕಿಸುವಾಗಿ ಪವಡಿಸಿರುವ ಬದಲಾಗಿ, ~~ಆದಿ~~ ಶೇಷಶಯನನಾಗಿ ~~ಪ~~ ಬ್ರಹ್ಮಾದಿ ಶಿಷ್ಯ ಕಿಸುವಾಗಿ ಪವಡಿಸಿರುವ ಬದಲಾಗಿ, ಅಮರರ್ಗಳಿಂದ ಬದೇವತೆಗಳಿಂದ ಸ್ತುತಿಸಲ್ಪಡುತ್ತಾ ಇರುವುದರ ಬದಲಾಗಿ, ತಿರುಕ್ಕೋಟ್ಟಿಯನ್ನು ಸ್ವೀಕರಿಸುತ್ತಾ ಪರಮಪದದಲ್ಲಿ ಇರುವುದರ ಬದಲಾಗಿ ತಿರುಕ್ಕೋಟ್ಟಿಯೂರಿನಂಥ ಪುಣ್ಯಕ್ಷೇತ್ರಗಳಲ್ಲಿ ಬಂದು ನೆಲಸಿ, ಭಕ್ತಕೋಟಿಯನ್ನು ಉದ್ಧರಿಸುತ್ತಾನೆ. ಭಗವಂತನ ತಿರುವಡಿಗಳನ್ನು ಬಿಡದೆ ಆಶ್ರಯಿಸಿರುವ ಭಕ್ತರ ಮನದಲ್ಲಿ ಅವನು ನೆಲೆಸಿರುತ್ತಾನೆ. ಅಂತರ್ಯಾಮಿಯಾಗಿಯೂ ಸ್ವಾಮಿಯು ಭಕ್ತರ ಕಷ್ಟಗಳನ್ನು ಕಳೆಯುತ್ತಾ, ಕಾಪಾಡುತ್ತಾ, ಸಾಂತ್ವಾ

Garani Srinivasan

[illegible] ಭಯಸಂಕಟಗಳಿಂದ ಅವರನ್ನು ಪಾರುಮಾಡುತ್ತಾನೆ.

ಭಗವಂತನು ತಿರುಕ್ಕೋವಲೂರಿನಲ್ಲಿ ಸುಂದರವಾದ ತ್ರಿವಿಕ್ರಮನಾಗಿ ನೆಲಸಿದ್ದಾನೆ. ಅಲ್ಲಿ ವಾಸಿಸುವ ಜನರಾದರೋ ಕವಿಗಳು, ಶಾಂತಿಗಳು, ವೇದವಿದ್ವಾಂಸರು, ಕಲಾನಿಪುಣರು ವೈದಿಕ ಬ್ರಾಹ್ಮಣರು, ಭಗವದ್ಭಕ್ತರು. ಅವರೆಲ್ಲರಿಂದಲೂ ಬಗೆಬಗೆಯಾಗಿ, ಅವರವರ ಯೋಗ್ಯತಾನುಸಾರವಾಗಿ ಸ್ವಾಮಿಯು ಸೇವೆಯನ್ನು ಕೈಗೊಂಡು ಅವರಿಗೆ ಇಹಲೋಕದಲ್ಲಿ ಶಾಂತಿಯನ್ನು ಮರಣಾನಂತರ ಶಾಶ್ವತಾನಂದವನ್ನು ದಯಪಾಲಿಸುವವನು. ಆ ಕ್ಷೇತ್ರಕ್ಕೆ ಬಂದು ಅವನ ತಿರುವಡಿಗಳನ್ನು ಆಶ್ರಯಿಸಿದ ಭಕ್ತರನ್ನು ಸ್ವಾಮಿಯು ಉದ್ಧರಿಸುತ್ತಾನೆ. ಇದು ಆ ಪುಣ್ಯಕ್ಷೇತ್ರದ ಮಹಿಮೆ.

ಆದ್ದರಿಂದಲೇ, ಅಪ್ರತಿಮ ದಾಸಸಿಂಹ ತಿರುಮಂಗೈ ಜನರ ಒಡೆಯನೂ ಆದ ಕಲಿಯನು "ಮಧುರವಾದ ಕವಿತೆಗಳಿಂದಾದ ಈ ಹತ್ತು ಪಾಶುರಗಳನ್ನು ಚೆನ್ನಾಗಿ ಬಲ್ಲವರಿಗೆ ಪರಮಪದವೇ ಪ್ರಾಪ್ತಿಯಾಗುವುದು", (ಭಗವಂತನಲ್ಲಿ ಭಕ್ತಿಯು ನೆಲೆಗೊಳ್ಳುವುದು), ಅವನ ನಿತ್ಯ ಸೇವೆಯಲ್ಲಿ ತೊಡಗಲು ಅನುಕೂಲವಾಗುವುದು, ಎನ್ನುತ್ತಾರೆ. [illegible] ಈ ತಿರುಮೊಳಿಗೆ ಫಲಶ್ರುತಿ.

ಅಡಿಯನಡೆ: அடிவரவு:— ಎಙ್ಗಳ್ நாங்கள், ಎವ್ವ ளவ்வு, ವೆಳ್ಳ வெள்ளி, ಮಿಞ್ಚ ஆறு, ಮಞ್ಞ வங்கம், ಕಾವಲನ் காவலன், ಕನ್ನ கன்று, ಪೂವ பூம், ಕೋವೈ கோவை, ಕಲಿಯ ஆறுமா, (ಒರುನಲ್ ஒருநல்)

26/12/78

ಒಂಬತ್ತನೆಯ ದಶಕ ಮುಗಿಯಿತು